ವಿಶ್ವವಾಣಿ
ವಿಶ್ವಾಸವೇ ವಿಶ್ವ

ಟಿ20 ರ‍್ಯಾಂಕಿಂಗ್: ಅಭಿಷೇಕ್‌ಗೆ ಅಗ್ರಸ್ಥಾನ ಎರಡನೇ ಸ್ಥಾನಕ್ಕೇರಿದ ಇಶಾನ್ ಕಿಶನ್

ಐಸಿಸಿ ಟಿ20 ಶ್ರೇಯಾಂಕ ಪ್ರಕಟಗೊಂಡಿದ್ದು, ಅಗ್ರ ಹತ್ತರಲ್ಲಿ ಭಾರತದ ಐವರು ಸ್ಥಾನ ಪಡೆದಿದ್ದಾರೆ. ಆರಂಭಿಕ ಆಟಗಾರ ಅಭಿಷೇಕ್ ಶರ್ಮಾ ಅಗ್ರಸ್ಥಾನವನ್ನು ಕಾಯ್ದುಕೊಂಡಿದ್ದು, ಇಶಾನ್ ಕಿಶನ್ ಎರಡನೇ ಸ್ಥಾನಕ್ಕೇರಿದ್ದಾರೆ. ಬೌಲಿಂಗ್‌ನಲ್ಲಿ ವರುಣ್ ಚಕ್ರವರ್ತಿ ಎರಡನೇ ಸ್ಥಾನಕ್ಕೆ ಜಾರಿದ್ದಾರೆ.

ಭಾರತಕ್ಕೆ ಬರುತ್ತಿದ್ದ ಥಾಯ್ ಸರಕು ಹಡಗು ಮೇಲೆ ದಾಳಿ: 20 ಜನರ ರಕ್ಷಣೆ
ದುಬೈ ವಿಮಾನ ನಿಲ್ದಾಣದ ಮೇಲೆ ಡ್ರೋನ್ ದಾಳಿ: ಭಾರತೀಯನಿಗೆ ಗಾಯ
ಸೌದಿ ವಾಯುನೆಲೆಯ ಮೇಲೆ ಎರಗಿದ 6 ಕ್ಷಿಪಣಿ ಹೊಡೆದುರುಳಿಸಿದ ಸೇನೆ

ಮುಂದುವರಿದ ಸಮರಾಕ್ರೋಶ

ದೆಹಲಿ: ಯುದ್ಧ ಕೊನೆಗೊಳಿಸುವ ಅಮೆರಿಕದ ಇಂಗಿತದ ಹೊರತಾಗಿಯೂ ಇರಾನ್ ತನ್ನ ದಾಳಿ ಮುಂದುವರಿಸಿದೆ. ಹಾರ್ಮುಜ್ ಜಲಸಂಧಿಯ ಬಳಿ ಯುಎಇಯಿಂದ ಭಾರತದ ಕಾಂಡ್ಲಾ ಬಂದರಿಗೆ ಬರುತ್ತಿದ್ದ ಥಾಯ್ಲೆಂಡ್‌ನ ಸರಕು ಹಡಗು ಸೇರಿ ಮೂರು ಸರಕು ಹಡಗುಗಳ ಮೇಲೆ ಮೇಲೆ ದಾಳಿಯಾಗಿದ್ದು, ಇಬ್ಬರು ಭಾರತೀಯರು ಬಲಿಯಾಗಿದ್ದಾರೆ. ನೌಕೆಯಲ್ಲಿದ್ದ 23 ಸಿಬ್ಬಂದಿಗಳಲ್ಲಿ 20 ಜನರನ್ನು ಒಮಾನ್ ನೌಕಾಪಡೆ ರಕ್ಷಿಸಿದೆ.

ಇದೇ ವೇಳೆ ಇರಾನ್ ಅಮೆರಿಕ ಬೆಂಬಲಿಗ ರಾಷ್ಟ್ರಗಳ ಮೇಲೆ ಕ್ಷಿಪಣಿ ಮತ್ತು ಡ್ರೋನ್ ದಾಳಿ ಮುಂದುವರಿಸಿದೆ. ಸೌದಿ ಅರೇಬಿಯಾದ ಪ್ರಮುಖ ವಾಯುನೆಲೆ ಮೇಲೆ ನಡೆದ ಕ್ಷಿಪಣಿ ದಾಳಿ ನಡೆಸಿರುವ ಇರಾನ್ ದುಬೈ ವಿಮಾನನಿಲ್ದಾಣ ಮತ್ತು ಕತಾರ್ ಮೇಲೆ ಡ್ರೋನ್ ಮೂಲಕ ದಾಳಿ ನಡೆಸಿದೆ. ಈ ದಾಳಿ ವಿಫಲಗೊಂಡರೂ ದುಬೈ ವಿಮಾನ ನಿಲ್ದಾಣದ ಮೇಲೆ ನಡೆದ ದಾಳಿಯಲ್ಲಿ ಒಬ್ಬ ಭಾರತೀಯ ಗಾಯಗೊಂಡಿದ್ದಾನೆ.

ಹಾರ್ಮುಜ್ ಜಲಸಂಧಿಯಲ್ಲಿ ಹಡಗುಗಳ ಸಂಚಾರವನ್ನು ನಿರ್ಬಂಧಿಸಿರುವ ಇರಾನ್, ಬುಧವಾರ ಥಾಯ್ಲೆಂಡ್ ಧ್ವಜ ಹೊಂದಿದ್ದ 'ಮಯೂರಿ ನಾರಿ' ಸರಕು ಹಡಗಿನ ಮೇಲೆ ಸಮುದ್ರದಾಳದ ನೆಲಬಾಂಬ್‌ಗಳ ಮೂಲಕ ದಾಳಿ ನಡೆಸಿದೆ. ದಾಳಿ ನಡೆದ ತಕ್ಷಣ ಹಡಗಿನಲ್ಲಿ ಬೆಂಕಿ ಕಾಣಿಸಿಕೊಂಡಿತು. ಸಹಾಯಕ್ಕೆ ಧಾವಿಸಿದ ಒಮಾನ್ ನೌಕಾಪಡೆಯು 23 ಸಿಬ್ಬಂದಿಗಳಲ್ಲಿ 20 ಜನರನ್ನು ರಕ್ಷಿಸಿದೆ. ಆದರೆ ನೀರಲ್ಲಿ ಮುಳುಗಿದ ಮೂವರ ಪೈಕಿ ಇಬ್ಬರು ಭಾರತೀಯರು ಮೃತಪಟ್ಟಿದ್ದಾರೆ. ಇದೇ ವೇಳೆ ಜಪಾನಿನ ಹಡಗು ಸೇರಿದಂತೆ ಇನ್ನೂ ಎರಡು ಹಡಗುಗಳ ಮೇಲೂ ದಾಳಿ ನಡೆದಿದೆ.

ಗಲ್ಫ್ ರಾಷ್ಟ್ರಗಳ ಮೇಲೆ ದಾಳಿ: ಗಲ್ಫ್ ರಾಷ್ಟ್ರಗಳ ದಾಳಿ ಮುಂದುವರೆಸಿರುವ ಇರಾನ್, ದುಬೈ ವಿಮಾನ ನಿಲ್ದಾಣದ ಬಳಿ ಡ್ರೋನ್‌ಗಳನ್ನು ಸ್ಫೋಟಿಸಿದ್ದು, ಘಟನೆಯಲ್ಲಿ ಭಾರತೀಯ ಸೇರಿದಂತೆ ನಾಲ್ವರು ಗಾಯಗೊಂಡಿದ್ದಾರೆ. ಆದರೂ ವಿಮಾನ ಸಂಚಾರ ಎಂದಿನಂತೆ ಮುಂದುವರೆದಿದೆ ಎಂದು ದುಬೈ ಸರಕಾರ ತಿಳಿಸಿದೆ.

ಅಂತರಾಷ್ಟ್ರೀಯ ವಿಮಾನ ನಿಲ್ದಾಣದ ಸಮೀಪ ಎರಡು ಡ್ರೋನ್‌ಗಳು ಸ್ಫೋಟಿಸಿದಾಗ ಘಾನಾದ ಇಬ್ಬರು ಪ್ರಜೆಗಳು, ಒಬ್ಬ ಭಾರತೀಯ ಮತ್ತು ಒಬ್ಬ ಬಾಂಗ್ಲಾದೇಶಿ ಪ್ರಜೆಗೆ ಗಾಯಗಳಾಗಿವೆ ಎಂದು ಅಧಿಕಾರಿಗಳು ದೃಢಪಡಿಸಿದ್ದಾರೆ. ಇಷ್ಟಾದರೂ ವಿಮಾನ ಸಂಚಾರ ಎಂದಿನಂತೆ ಕಾರ್ಯನಿರ್ವಹಿಸುತ್ತಿದೆ ಎಂದು ದುಬೈ ಸರಕಾರ ತಿಳಿಸಿದೆ.

ಸೌದಿ ವಾಯುನೆಲೆ ಮೇಲೆ ದಾಳಿ: ಸೌದಿ ಅರೇಬಿಯಾದ ಪ್ರಮುಖ ಪ್ರಿನ್ಸ್ ಸುಲ್ತಾನ್ ವಾಯುನೆಲೆಯ ಮೇಲೆ ನಡೆದ ಕ್ಷಿಪಣಿ ದಾಳಿಯನ್ನು ಯಶಸ್ವಿಯಾಗಿ ಹಿಮ್ಮೆಟ್ಟಿಸಲಾಗಿದೆ. ಈ ಮೂಲಕ ಸಂಭವನೀಯ ದೊಡ್ಡ ಅನಾಹುತವನ್ನು ತಪ್ಪಿಸಲಾಗಿದೆ. ಆರು ಖಂಡಾಂತರ ಕ್ಷಿಪಣಿಗಳನ್ನು ಹೊಡೆದುರುಳಿಸಲಾಗಿದೆ ಎಂದು ಸೌದಿ ಸರಕಾರ ತಿಳಿಸಿದೆ. ಈ ವಾಯುನೆಲೆಯು ಸೌದಿ ಅರೇಬಿಯಾದ ಅತ್ಯಂತ ಪ್ರಮುಖ ಮಿಲಿಟರಿ ಕೇಂದ್ರಗಳಲ್ಲಿ ಒಂದಾಗಿದೆ. ಅಮೆರಿಕದ ಸೇನೆ ಸೇರಿದಂತೆ ಮಿತ್ರಪಕ್ಷಗಳಿಗೂ ಈ ವಾಯುನೆಲೆ ಆತಿಥ್ಯ ನೀಡಿತ್ತು. ಹೀಗಾಗಿ, ಪ್ರಾದೇಶಿಕ ಸಂಘರ್ಷದ ನಡುವೆ ಇದೊಂದು ಸೂಕ್ಷ್ಮ ಗುರಿಯಾಗಿದೆ.

ದುಬೈ ಮೇಲೆ ಕೆಂಗಣ್ಣು

ಗಲ್ಫ್ ರಾಷ್ಟ್ರಗಳಲ್ಲಿ ಬ್ಯಾಂಕುಗಳು ಮತ್ತು ಹಣಕಾಸು ಸಂಸ್ಥೆಗಳೇ ನಮ್ಮ ಗುರಿಗಳಾಗಿವೆ ಎಂದು ಇರಾನಿನ ಜಂಟಿ ಮಿಲಿಟರಿ ಕಮಾಂಡ್ ಬುಧವಾರ ಹೇಳಿದೆ.
ಇಸ್ರೇಲ್ ಮತ್ತು ಅಮೆರಿಕ ನಡೆಸಿದ ಜಂಟಿ ವೈಮಾನಿಕ ದಾಳಿಯಲ್ಲಿ ಟೆಹರಾನ್‌ನ ಬ್ಯಾಂಕಿನ ಸಿಬ್ಬಂದಿಯೊಬ್ಬರು ಸಾವನ್ನಪ್ಪಿದ ಬಳಿಕ ಇರಾನ್ ಕೂಡ ಗಲ್ಫ್ ರಾಷ್ಟ್ರಗಳ ಬ್ಯಾಂಕುಗಳು ಮತ್ತು ಹಣಕಾಸು ಸಂಸ್ಥೆಗಳನ್ನು ಟಾರ್ಗೆಟ್ ಮಾಡುತ್ತಿದೆ. ಇದು ದುಬೈ ಅನ್ನು ಅಪಾಯಕ್ಕೆ ಸಿಲುಕಿಸಿದೆ. ದುಬೈ ನೂರಾರು ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆಗಳಿಗೆ ನೆಲೆಯಾಗಿದೆ.

ಹಡಗುಗಳಿಗೇ ಬಾಂಬ್

ವಾಷಿಂಗ್ಟನ್: ಹಾರ್ಮುಜ್ ಜಲಸಂಧಿಯಲ್ಲಿ ಹಡಗುಗಳು ಸಂಚರಿಸದಂತೆ ಇರಾನ್ ಸಮುದ್ರದ ಒಳಗಡೆ ಸ್ಫೋಟಕವನ್ನು ಇರಿಸಿದ ವಿಚಾರ ಬೆಳಕಿಗೆ ಬಂದಿದೆ. ಥಾಯ್ ಸರಕು ಹಡಗು ಈ ಸ್ಫೋಟಕದ ಕಾರಣ ಬೆಂಕಿ ಹತ್ತಿಕೊಂಡು ಉರಿದಿದೆ ಎನ್ನಲಾಗಿದೆ. ಹಾರ್ಮುಜ್ ಜಲಸಂಧಿಯಲ್ಲಿ ನೌಕಾ ಸ್ಫೋಟಕಗಳನ್ನು ಹಾಕುತ್ತಿದ್ದ ಇರಾನಿನ 16 ಹಡಗುಗಳನ್ನು ತಾನು ನಾಶ ಮಾಡಿರುವುದಾಗಿ ಅಮೆರಿಕ ತಿಳಿಸಿದೆ. ಇದೇ ವೇಳೆ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಪ್ರತಿಕ್ರಿಯಿಸಿ, ಇರಾನ್ ಹಾರ್ಮುಜ್ ಜಲಸಂಧಿಯಲ್ಲಿ ಯಾವುದೇ ನೇವಲ್ ಮೈನ್ಸ್ ಹಾಕಿದ್ದರೆ ತಕ್ಷಣವೇ ತೆಗೆದು ಹಾಕಬೇಕು. ಇಲ್ಲದಿದ್ದರೆ ಹಿಂದೆಂದು ಕಾಣದ ರೀತಿಯಲ್ಲಿ ಇರಾನ್ ಮೇಲೆ ಮಿಲಿಟರಿ ದಾಳಿ ನಡೆಯಲಿದೆ ಎಂದು ಎಚ್ಚರಿಕೆ ನೀಡಿದ್ದಾರೆ.

ರಾಜ್ಯಾದ್ಯಂತ ವಾಣಿಜ್ಯ ಬಳಕೆ ಸಿಲಿಂಡರ್‌ಗೆ ಹಾಹಾಕಾರ
ಮನೆ ಸಿಲಿಂಡರ್‌ಗಿಲ್ಲ ಆತಂಕ: ಸಚಿವ ಮುನಿಯಪ್ಪ ಭರವಸೆ

ನಿಲ್ಲದ ಗ್ಯಾಸ್ ಟ್ರಬಲ್

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಇರಾನ್-ಅಮೆರಿಕ ನಡುವಿನ ಯುದ್ಧದ ಕಾವು ರಾಜ್ಯಾದ್ಯಂತ ಹಬ್ಬಿದ್ದು, ವಾಣಿಜ್ಯ ಬಳಕೆಯ ಸಿಲಿಂಡರ್ ಸರಬರಾಜಿನಲ್ಲಿ ತೀವ್ರ ವ್ಯತ್ಯಯವಾಗುತ್ತಿರುವುದನ್ನು ಸರಕಾರ ಒಪ್ಪಿಕೊಂಡಿದ್ದರೂ, ಗೃಹಪಯೋಗಿ ಸಿಲಿಂಡರ್‌ಗಳಿಗೆ ಸಮಸ್ಯೆಯಿಲ್ಲ ಎನ್ನುವ ಮೂಲಕ ರಾಜ್ಯದ ಜನರಿಗೆ ಕೊಂಚ ಸಮಾಧಾನ ನೀಡಿದೆ.

ನಿರೀಕ್ಷೆಯಂತೆ ಬುಧವಾರ ವಾಣಿಜ್ಯ ಬಳಕೆಯ ಸಿಲಿಂಡರ್ ಸಮಸ್ಯೆ ತೀವ್ರ ಪ್ರಮಾಣದಲ್ಲಿ ಕಾಣಿಸಿಕೊಂಡಿದ್ದು, ಬೆಂಗಳೂರು, ಯಾದಗಿರಿ, ಬಾಗಲಕೋಟೆ ಸೇರಿದಂತೆ ರಾಜ್ಯದ ಹಲವು ಜಿಲ್ಲೆಗಳಲ್ಲಿ ಕೆಲ ಹೋಟೆಲ್‌ಗಳು ಬಂದಾಗಿವೆ. ಮುಂದಿನ ದಿನದಲ್ಲಿ ಸಿಲಿಂಡರ್ ಸರಬರಾಜು ಪ್ರಮಾಣ ಹೆಚ್ಚಾಗಿದ್ದರೆ, ಇನ್ನಷ್ಟು ಹೋಟೆಲ್‌ಗಳು ಅನಿವಾರ್ಯವಾಗಿ ಮುಚ್ಚಬೇಕಾಗುತ್ತದೆ ಎನ್ನುವ ಸ್ಥಿತಿ ನಿರ್ಮಾಣವಾಗಿದೆ.

ಈ ನಡುವೆ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಕೆ.ಎಚ್. ಮುನಿಯಪ್ಪ ಅವರು, ಯುದ್ಧದಿಂದಾಗಿ ವಾಣಿಜ್ಯ ಬಳಕೆಯ ಸಿಲಿಂಡರ್ ಸರಬರಾಜಿನಲ್ಲಿ ಸಮಸ್ಯೆಯಿದೆ. ಆದರೆ ಮನೆಬಳಕೆ ಸಿಲಿಂಡರ್‌ಗೆ ಸಮಸ್ಯೆ ಇಲ್ಲ. 28 ದಿನದ ಉಪಯೋಗಕ್ಕೆ ಕೊಡುತ್ತೇವೆ. ಆಸ್ಪತ್ರೆ, ಹಾಸ್ಟೆಲ್‌ಗಳಿಗೆ ಆದ್ಯತೆ ಮೇರೆಗೆ ವಾಣಿಜ್ಯ ಬಳಕೆಯ ಸಿಲಿಂಡರ್ ನೀಡಲಾಗುತ್ತಿದೆ. ಇನ್ನುಳಿದಂತೆ ಕಲ್ಯಾಣ ಮಂಟಪ, ಹೋಟೆಲ್‌ನವರು ಸ್ವಲ್ಪ 'ಅಡ್ಜೆಸ್ಟ್' ಮಾಡಿಕೊಳ್ಳಬೇಕು ಎಂದು ವಿಧಾನಸಭೆಗೆ ಮಾಹಿತಿ ನೀಡಿದ್ದಾರೆ.

ತೈಲ ಮಾರುಕಟ್ಟೆ ಕಂಪನಿ ಅಧಿಕಾರಿಗಳೊಂದಿಗೆ ಸಭೆ

ಪಶ್ಚಿಮ ಏಷ್ಯಾದ ಯುದ್ಧದ ಕಾರಣ ಪೆಟ್ರೋಲ್, ಎಲ್‌ಪಿಜಿ ಗ್ಯಾಸ್ ಬರುತ್ತಿಲ್ಲ. ಮನೆಬಳಕೆ ಸಿಲಿಂಡರ್‌ಗೆ ಸಮಸ್ಯೆ ಇಲ್ಲ. 28 ದಿನದ ಉಪಯೋಗಕ್ಕೆ ಕೊಡುತ್ತೇವೆ. ವಾಣಿಜ್ಯ ಸಿಲಿಂಡರ್‌ಗಳನ್ನು ಸದ್ಯಕ್ಕೆ ನಿಲ್ಲಿಸುತ್ತೇವೆ. ಗ್ಯಾಸ್ ಹೆಚ್ಚು ಖರ್ಚು ಮಾಡುವುದು ಬೇಡ. ಸ್ಟೋರೇಜ್ ಮಾಡುವುದು ಬೇಡ. ಇಂತಹ ಸಂಕಷ್ಟ ಕಾಲದಲ್ಲಿ ಎಲ್ಲರೂ ಹೊಂದಾಣಿಕೆ ಮಾಡಿಕೊಳ್ಳಬೇಕು.
-ಕೆ.ಎಚ್. ಮುನಿಯಪ್ಪ, ಆಹಾರ ಸಚಿವ

ನಡೆಸಿದ್ದು, ಸರಬರಾಜು ಸಮಸ್ಯೆ ಇಲ್ಲ. ಶೇ.20ರಿಂದ 30ರಷ್ಟು ನಮ್ಮ ಸ್ವಂತ ಉತ್ಪಾದನೆ ಇದೆ. 70%ರಷ್ಟು ವಿದೇಶದಿಂದ ಬರಬೇಕು. ಕೊಲ್ಲಿಯಲ್ಲಿ ಸರಕು ತುಂಬಿರುವ ಹಡಗನ್ನು ಬಿಡುತ್ತಿಲ್ಲ. 14 ಕೆಜಿ ತೂಕದ ಸಿಲಿಂಡರ್ ನಾಲ್ಕು ಜನರ ಕುಟುಂಬಕ್ಕೆ ತಿಂಗಳಿಗೆ ಸಾಕಾಗುತ್ತದೆ.

→ 4

ಸೊಂಪಾದ ಪುಟಗಳು

ಯುದ್ಧದ ವಿಷಯ ಬಂದರೆ ಇಸ್ರೇಲ್ ಏಕೆ ಮುಂಗಾಲಪುಟಕಿ?
ನೂರೆಂಟು ವಿಶ್ವ
ವಿಶ್ವೇಶ್ವರ ಭಟ್
6



ಬೆಳಕು ಮತ್ತು ಬೆಂಕಿ: ಇದು ಪೆಟ್ರೋಲಿಯಂ ಕತೆ
ಕಾಡುದಾರಿ
ಹರೀಶ್ ಕೇರ
7

ದಾರಿದೀಪೋಕ್ತಿ

ಈಗಾಗಲೇ ಬೇರೆಯವರು ಮಾಡಿದ ದಾರಿಯಲ್ಲಿ ನಡೆಯುವುದು ಸುಲಭ. ಅದರಲ್ಲಿ ನಡೆಯುವಾಗ ಯಾವುದೇ ಸವಾಲೂ ಇರುವುದಿಲ್ಲ. ಆದರೆ ನಿಮ್ಮದೇ ಆದ ಹೊಸ ದಾರಿಯನ್ನು ನಿರ್ಮಿಸಿ ಅಲ್ಲಿ ಗುರುತು ಬಿಟ್ಟು ಹೋಗುವುದೇ ನಿಜವಾದ ಸಾಧನೆ.

ವಕ್ರತುಂಡೋಕ್ತಿ

ಬುದ್ಧಿವಂತರು ಮೌನವಾಗಿರುತ್ತಾರೆ ಅನ್ನೋದು ನಿಜ ಇರಬಹುದು. ಆದರೆ ಹೆಂಡತಿ ಮುಂದೆ ಮೌನವಾಗಿರುವವನೇ ನಿಜವಾದ 'ಮಹಾನ್ ಬುದ್ಧಿವಂತ'!

ಶಿರಹಟ್ಟಿ ಬಿಜೆಪಿ ಶಾಸಕ ಲಮಾಣಿಗೆ ಜಾಮೀನು

ಬೆಂಗಳೂರು: ಗುತ್ತಿಗೆದಾರನಿಂದ ಐದು ಲಕ್ಷ ರೂ. ಲಂಚ ಸ್ವೀಕರಿಸಿದ ಆರೋಪ ಪ್ರಕರಣದಲ್ಲಿ ಬಂಧನ ಕ್ಕೊಳಗಾಗಿದ್ದ ಗದಗ ಜಿಲ್ಲೆಯ ಶಿರಹಟ್ಟಿ ಕ್ಷೇತ್ರದ ಬಿಜೆಪಿ ಶಾಸಕ ಡಾ. ಚಂದ್ರು ಲಮಾಣಿಗೆ ಜಾಮೀನು ಮಂಜೂರಾಗಿದೆ.

ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ಕೋರ್ಟ್ ಷರತ್ತುಬದ್ಧ ಜಾಮೀನು ನೀಡಿದೆ. ಈ ಮೂಲಕ ಬಿಜೆಪಿ ಶಾಸಕನಿಗೆ ಬಿಗ್ ರಿಲೀಫ್ ಸಿಕ್ಕಿದೆ. ಐದು ಲಕ್ಷ ರು. ಲಂಚ ಸ್ವೀಕರಿಸಿದ ಆರೋಪದ ಹಿನ್ನೆಲೆ ಬಂಧನಕ್ಕೊಳಗಾಗಿದ್ದ ಲಮಾಣಿ, ಕಳೆದ 15 ದಿನಗಳಿಂದ ಪರಪ್ಪನ ಅಗ್ರಹಾರ ಜೈಲಿನಲ್ಲಿ ನ್ಯಾಯಾಂಗ ಬಂಧನದಲ್ಲಿದ್ದರು.

3 ತಿಂಗಳಲ್ಲಿ ಅಂಗನವಾಡಿ ಸಹಾಯಕಿಯರ ಹುದ್ದೆ ಭರ್ತಿ

ವಿಧಾನಸಭೆ: ರಾಜ್ಯದ ಅಂಗನವಾಡಿ ಕೇಂದ್ರಗಳಲ್ಲಿ ಖಾಲಿ ಇರುವ ಕಾರ್ಯಕರ್ತರು ಮತ್ತು ಸಹಾಯಕೀಯರ ಹುದ್ದೆಗಳನ್ನು 90 ದಿನಗಳ ಒಳಗಾಗಿ ಭರ್ತಿ ಮಾಡಲು ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ತಿಳಿಸಿದರು. ವಿಧಾನಸಭೆಯಲ್ಲಿ ಪ್ರಶ್ನೋತ್ತರದ ಅವಧಿಯಲ್ಲಿ ಗುರ್ಮೆ ಸುರೇಶ್ ಶೆಟ್ಟಿ ಅವರ ಪ್ರಶ್ನೆಗೆ ಉತ್ತರಿಸಿ, ಬಡವರ ಮಕ್ಕಳು ಓದುವ ಅಂಗನವಾಡಿ ಕೇಂದ್ರಗಳಲ್ಲಿ ಉತ್ತಮ ವಾತಾವರಣ ಇರಬೇಕು ಎಂಬುದು ಸರಕಾರದ ಬದ್ಧತೆ. ಈ ನಿಟ್ಟಿನಲ್ಲಿ ಹುದ್ದೆ ಭರ್ತಿ ಮಾಡಲಾಗುತ್ತಿದೆ ಎಂದರು.

ಫನ್‌ತರಂಗ

- ರಘುಪತಿ ಶೃಂಗೇರಿ -

ಯುದ್ಧದ ಭೀತಿ ಹೆಚ್ಚಾದ ಬೆನ್ನಲ್ಲೇ ಸಿಲಿಂಡರ್ ಪೂರೈಕೆ ವ್ಯತ್ಯಯ
ಸುದ್ದಿ



ಛತ್ತೀಸ್‌ಗಢದಲ್ಲಿ ಮುಖ್ಯವಾಹಿನಿಗೆ ಮರಳಿದ ಮಾವೋವಾದಿಗಳು

ಒಂದೇ ದಿನ 108 ನಕ್ಸಲರು ಶರಣು 3.61 ಕೋಟಿ ನಗದು ವಶಕ್ಕೆ

ಜಗದಲ್‌ಪುರ: ಮಾವೋವಾದಿಗಳ ವಿರುದ್ಧ ಕೇಂದ್ರ ಸರಕಾರ ನಡೆಸುತ್ತಿರುವ ಹೋರಾಟದಲ್ಲಿ ಮಹತ್ವದ ಯಶಸ್ಸು ದೊರೆತಿದ್ದು, ಛತ್ತೀಸ್‌ಗಢದ ಬಸ್ತಾರ್ ಜಿಲ್ಲೆಯಲ್ಲಿ ಒಂದೇ ದಿನ 108 ನಕ್ಸಲರು ಶರಣಾಗಿದ್ದಾರೆ.

3.95 ಕೋಟಿ ರೂ.ಗಳ ಸಾಮೂಹಿಕ ಇನಾಮು ಹೊಂದಿದ್ದ 108 ನಕ್ಸಲರ ಅಡಗುತಾಣ ಗಳಿಂದ ಬೃಹತ್ ಪ್ರಮಾಣದ ಶಸ್ತ್ರಾಸ್ತ್ರಗಳ ಜೊತೆಗೆ, ಸುಮಾರು 3.61 ಕೋಟಿ ರೂ. ನಗದು ಮತ್ತು 1.64 ಕೋಟಿ ರೂ. ಮೌಲ್ಯದ ಒಂದು ಕೆಜಿ ಚಿನ್ನವನ್ನು ವಶಪಡಿಸಿಕೊಳ್ಳಲಾಗಿದೆ. ಇದರ ಜತೆ ಶರಣಾದ ನಕ್ಸಲರಿಂದ ಎಕೆ-47 ರೈಫಲ್‌ಗಳು, ಲೈಟ್ ಮೆಷಿನ್ ಗನ್‌ಗಳು, .303 ರೈಫಲ್‌ಗಳು ಮತ್ತು ಬ್ಯಾರೆಲ್ ಗ್ರೆನೇಡ್ ಲಾಂಚರ್‌ಗಳು ಸೇರಿದಂತೆ ಒಟ್ಟು 101 ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಳ್ಳಲಾಗಿದೆ. ಇದು ದೇಶದಲ್ಲಿ ನಕ್ಸಲ್ ವಿರೋಧಿ ಕಾರ್ಯಾಚರಣೆಗಳ ಇತಿಹಾಸದಲ್ಲಿ ಒಂದೇ ಸ್ಥಳದಿಂದ ವಶಪಡಿಸಿಕೊಂಡ ಅತಿ ಹೆಚ್ಚು ಮೌಲ್ಯದ ನಗ-ನಗದು ಎಂದು ಬಸ್ತಾರ್ ವಲಯದ ಐಜಿಪಿ ಸುಂದರರಾಜ್ ಪಟ್ಟಿಲಿಂಗಮ್ ತಿಳಿಸಿದ್ದಾರೆ.

ನಕ್ಸಲಿಸಂ ನಿರ್ಮೂಲನೆಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಮಾರ್ಚ್ 31, 2026 ರ ಗಡುವು ವಿಧಿಸಿ ರುವ ನಡುವೆ ದೊಡ್ಡ ಸಂಖ್ಯೆಯಲ್ಲಿ ನಕ್ಸಲರುಶರ ಣಾಗಿದ್ದಾರೆ. ಶರಣಾದ ನಕ್ಸಲರಲ್ಲಿ 6 ಮಂದಿ ವಿಭಾ ಗೀಯ ಸಮಿತಿ ಸದಸ್ಯರಾಗಿದ್ದು, ಅವರ ತಲೆಗೆ ತಲಾ 8 ಲಕ್ಷ ರೂ ಬಹುಮಾನ ಘೋಷಿಸಲಾಗಿತ್ತು.

2714 ನಕ್ಸಲರು ಮುಖ್ಯವಾಹಿನಿಗೆ

ಕಳೆದ 26 ತಿಂಗಳುಗಳಲ್ಲಿ 2,714 ಮಾವೋವಾದಿ ಕಾರ್ಯಕರ್ತರು ಹಿಂಸಾಚಾರವನ್ನು ತ್ಯಜಿಸಿದ ನಂತರ ಮುಖ್ಯವಾಹಿನಿಗೆ ಮರಳಿದ್ದಾರೆ. ಬಸ್ತಾರ್ ವಿಭಾಗವೊಂದರಲ್ಲೇ, ಜನವರಿ 1, 2024 ರಿಂದ ಮಾರ್ಚ್ 9, 2026 ರವರೆಗೆ 2,625 ಮಾವೋವಾದಿಗಳು ಶರಣಾಗಿದ್ದಾರೆ.

→ 4

ಸರಕಾರದ ವಿರುದ್ಧ ವಿಪಕ್ಷ ನಾಯಕ ರಾಹುಲ್ ವಾಗ್ದಾಳಿ

ಓಂ ಬಿರ್ಲಾ ವಿರುದ್ಧದ ಪ್ರತಿಪಕ್ಷ ಅವಿಶ್ವಾಸ ನಿರ್ಣಯಕ್ಕೆ ಸೋಲು

ದೆಹಲಿ: ಲೋಕಸಭೆ ಸ್ಪೀಕರ್ ಓಂ ಬಿರ್ಲಾ ಅವರ ವಿರುದ್ಧ ಪ್ರತಿಪಕ್ಷಗಳು ಮಂಡಿಸಿದ್ದ ಅವಿಶ್ವಾಸ ನಿರ್ಣಯವನ್ನು ಬುಧವಾರ ಧ್ವನಿ ಮತದ ಮೂಲಕ ಸೋಲಿಸಲಾಯಿತು. ಇದರಿಂದ ಪ್ರತಿಪಕ್ಷಗಳಿಗೆ ತೀವ್ರ ಮುಖಭಂಗವಾಗಿದೆ.

ಕಳೆದ ಫೆಬ್ರವರಿಯಲ್ಲಿ ರಾಷ್ಟ್ರಪತಿಗಳ ಭಾಷಣದ ವಂದನಾ ನಿರ್ಣಯದ ಮೇಲಿನ ಚರ್ಚೆಯ ಸಮಯದಲ್ಲಿ ಪ್ರತಿಪಕ್ಷಗಳ ಸದಸ್ಯರಿಗೆ ಸಂಸತ್ತಿನ ಮಾತನಾಡಲು ಅವಕಾಶ ನೀಡಲಿಲ್ಲ ಮತ್ತು ಪಕ್ಷಪಾತಿಯಾಗಿ ವರ್ತಿಸುತ್ತಿದ್ದಾರೆ ಎಂದು ಆರೋಪಿಸಿ ಸ್ಪೀಕರ್ ಓಂ ಬಿರ್ಲಾ ಅವರ ವಿರುದ್ಧ ಕಾಂಗ್ರೆಸ್ ನೇತೃತ್ವದ ಪ್ರತಿಪಕ್ಷಗಳು ಅವಿಶ್ವಾಸ ನಿರ್ಣಯ ಮಂಡಿಸಿದ್ದವು.

ಬುಧವಾರ ಲೋಕಸಭೆಯಲ್ಲಿ ಸ್ಪೀಕರ್ ವಿರುದ್ಧದ ಅವಿಶ್ವಾಸ ನಿರ್ಣಯದ ಮೇಲೆ ಮಾತನಾಡಿದ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಸರಕಾರದ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು. ಸಂವಿಧಾನವನ್ನು ಉಳಿಸಲು ಮತ್ತು ಸದನದ ಗೌರವ ಕಾಪಾಡಲು ಸ್ಪೀಕರ್ ಓಂ ಬಿರ್ಲಾ ಅವರ ಪದಚ್ಯುತಿಗೆ ನಿರ್ಣಯ

ಮಂಡಿಸ ಬೇಕಾಯಿತು ಎಂದು ಹೇಳಿದರು.

ಎರಡು ದಿನಗಳ ಕಾಲ ನಡೆದ ಚರ್ಚೆಯ ನಂತರ ಪ್ರತಿಪಕ್ಷಗಳ ಪ್ರತಿಭಟನೆ ಮತ್ತು ಘೋಷಣೆಗಳ ನಡುವೆ, ಸ್ಪೀಕರ್ ಸ್ಥಾನದಲ್ಲಿದ್ದ ಜಗದಾಂಬಿಕಾ ಪಾಲ್ ಅವರು ಅವಿ ಶ್ವಾಸ ನಿರ್ಣಯವನ್ನು ಮತಕ್ಕೆ ಹಾಕಿದರು.

ವಿಪಕ್ಷಗಳು ತಮ್ಮ ಸ್ಥಾನಗಳಲ್ಲಿ ಕುಳಿತುಕೊಳ್ಳುವಂತೆ ಪಾಲ್ ಒತ್ತಾಯಿಸಿದರು. ಆದರೆ ಪ್ರತಿಭಟನೆಗಳು ಮುಂದುವರಿದಂತೆ, ಅವರು ಸದನದ ಮತವನ್ನು ಕೋರಿದರು. ಅವಿಶ್ವಾಸ ನಿರ್ಣಯವನ್ನು ಧ್ವನಿ ಮತದಿಂದ ತಿರಸ್ಕರಿಸಲಾಯಿತು ಎಂದು ಘೋಷಿಸಿದರು. ನಂತರ ಕಲಾಪವನ್ನು ಬುಧವಾರದ ದಿನದ ಮಟ್ಟಿಗೆ ಮುಂದೂಡಿದರು.

→ 4

ಉದ್ಘಾಟನಾ ಪಂದ್ಯದಲ್ಲಿ ಆರ್‌ಸಿಬಿಗೆ ಹೈದರಾಬಾದ್ ಎದುರಾಳಿ | ಮಾರ್ಚ್ 28-ಏ.12 ಮೊದಲ ಹಂತ

28ರಂದು ಬೆಂಗಳೂರಲ್ಲಿ ಐಪಿಎಲ್ ಮೊದಲ ಪಂದ್ಯ

ದೆಹಲಿ: ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಬುಧವಾರ ಐಪಿಎಲ್-19ನೇ ಆವೃತ್ತಿಯ ಮೊದಲ ಹಂತದ ವೇಳಾಪಟ್ಟಿಯನ್ನು ಪ್ರಕಟಿಸಿದ್ದು, ಬೆಂಗಳೂರಿನ ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ಉದ್ಘಾಟನಾ ಪಂದ್ಯ ನಡೆಯಲಿದೆ. ಮೊದಲ ಹಂತದ ಪಂದ್ಯಗಳು ಮಾರ್ಚ್ 28ರಿಂದ ಏಪ್ರಿಲ್ 12ರ ವರೆಗೆ ನಡೆಯಲಿವೆ. ಈ ಹಂತದಲ್ಲಿ ಆರ್‌ಸಿಬಿ 4 ಪಂದ್ಯಗಳನ್ನು ಆಡಲಿದೆ.

ಐಪಿಎಲ್ ಹಾಲಿ ಚಾಂಪಿಯನ್ ಆರ್‌ಸಿಬಿ-ಸನ್ ರೈಸರ್ಸ್ ಹೈದರಾಬಾದ್ ನಡುವೆ ಮಾರ್ಚ್ 18ರಂದು ಮೊದಲ ಪಂದ್ಯ ಬೆಂಗಳೂರಿನ ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ನಡೆಯಲಿದೆ. ಮರುದಿನ ಮುಂಬೈನಲ್ಲಿ ಮುಂಬೈ ಇಂಡಿಯನ್ಸ್ ಮತ್ತು ಕೋಲ್ಕತ್ತಾ ನೈಟ್ ರೈಡರ್ಸ್ ತಂಡಗಳು ಪರಸ್ಪರ ಮುಖಾಮುಖಿಯಾಗಲಿವೆ.

ಕೇಂದ್ರ ಚುನಾವಣಾ ಆಯೋಗವು ಐದು ರಾಜ್ಯಗಳ ವಿಧಾನಸಭೆ ಚುನಾವಣೆಯ ದಿನಾಂಕವನ್ನು ಪ್ರಕಟಿಸಿದ ನಂತರ ಪೂರ್ಣ ವೇಳಾಪಟ್ಟಿಯನ್ನು ಬಿಡುಗಡೆ ಮಾಡಲಿದೆ ಎಂದು ಬಿಸಿಸಿಐ

ಮೊದಲ ಹಂತದ

ಆರ್‌ಸಿಬಿ 4 ಪಂದ್ಯಗಳು
ಮಾ.28: ಆರ್‌ಸಿಬಿ-ಹೈದರಾಬಾದ್
ಏ.5: ಆರ್‌ಸಿಬಿ-ಚೆನ್ನೈ
ಏ.10: ಆರ್‌ಸಿಬಿ-ರಾಜಸ್ಥಾನ್
ಏ.12: ಆರ್‌ಸಿಬಿ-ಮುಂಬೈ

ತಿಳಿಸಿದೆ. ಐದು ಪಂದ್ಯಗಳನ್ನು ಆರ್‌ಸಿಬಿ ತಂಡವು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಆಡಲಿದ್ದು, ಎರಡು ಪಂದ್ಯಗಳನ್ನು ರಾಯ್‌ಪುರದ ಶಹೀದ್ ವೀರ್ ನಾರಾಯಣ್ ಸಿಂಗ್ ಅಂತಾರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣದಲ್ಲಿ ಆಡಲಿದೆ.

ಮದುವೆಗೆ ಕುಟುಂಬದ ವಿರೋಧ, ಇದು ಲವ್ ಜಿಹಾದ್: ನೆಟ್ಟಿಗರಿಂದ ಆಕ್ರೋಶ

ಮುಸ್ಲಿಂ ವ್ಯಕ್ತಿ ಜತೆ ಕುಂಭಮೇಳ ಸುಂದರಿ ಮೊನಾಲಿಸಾ ಮದುವೆ

ತಿರುವನಂತಪುರಂ: 2025ರ ಪ್ರಯಾಗ್‌ರಾಜ್ ಕುಂಭಮೇಳದಲ್ಲಿ ತಮ್ಮ ಮಿನುಗುವ ನೀಲಿಗಣ್ಣಿನ ಮೂಲಕ ಎಲ್ಲರ ಕಣ್ಣುಕುಕ್ಕಿದ್ದ ಮೊನಾಲಿಸಾ ಭೋಸಲೆ, ಮಾ.11ರಂದು ಕೇರಳದಲ್ಲಿ ಮುಸ್ಲಿಮ್ ವ್ಯಕ್ತಿಯೊಬ್ಬರನ್ನು ಹಿಂದೂ ಪದ್ಧತಿಯಂತೆ ಮದುವೆಯಾಗಿದ್ದಾರೆ. ಅಪ್ಪಅಮ್ಮನ ಭಾರೀ ವಿರೋಧದ ನಡುವೆಯೇ ಮಹಾರಾಷ್ಟ್ರದ ಫರ್ಮಾನ್ ಖಾನ್‌ರನ್ನು, ತಿರುವನಂತಪುರಂನ ಅರುಮಾನೂರು ನಾಯನಾರ್ ದೇವಸ್ಥಾನದಲ್ಲಿ ವರಿಸಿದ್ದಾರೆ. ಕೇರಳದ ಸಚಿವ ಶಿವನ್ ಕುಟ್ಟಿ, ಸಂಸದ ಎ.ಎಂ. ರಹೀಮ್ ಈ ಮದುವೆಗೆ ಸಾಕ್ಷಿಯಾದರು. ಇದು ಲವ್ ಜಿಹಾದ್ ಎಂದು ಸಾಮಾಜಿಕ ತಾಣಗಳಲ್ಲಿ ಭಾರೀ ವಿವಾದ ಎದ್ದಿದೆ.

ಪ್ರಯಾಗ್‌ರಾಜ್‌ನಲ್ಲಿ ರುದ್ರಾಕ್ಷಿ ಮಣಿಗಳನ್ನು ಮಾರಿಕೊಂಡಿದ್ದ ಮೊನಾಲಿಸಾರ ಚಿತ್ರ ಸಾಮಾಜಿಕ ತಾಣಗಳಲ್ಲಿ ವೈರಲ್ ಆಗಿತ್ತು. ಮಧ್ಯಪ್ರದೇಶದ ಇಂದೋರ್‌ನ ಈ ಸುಂದರಿ ಮತ್ತು ಫರ್ಮಾನ್‌ಗೂ 6 ತಿಂಗಳಿನಿಂದ ಫೇಸ್‌ಬುಕ್ ಮೂಲಕ ಪರಿಚಯವಾಗಿತ್ತು. ಸದ್ಯ ಕೇರಳದ ಪೂವರ್‌ನಲ್ಲಿ ಮಲಯಾಳಂ ಸಿನಿಮಾ ನಾಗಮ್ಮ ಶೂಟಿಂಗ್‌ನಲ್ಲಿ ಮೊನಾಲಿಸಾ ಬ್ಯುಸಿಯಾಗಿದ್ದಾರೆ. ಮಗಳು ಮೊನಾ ಲಿಸಾ ಇರುವ

ಜಾಗವನ್ನು ಪತ್ತೆ ಮಾಡಿದ ತಂದೆ ಜೈಸಿಂಗ್ ಭೋಸಲೆ ಮಗಳನ್ನು ವಾಪಸ್ ಒಯ್ಯಲು ಯತ್ನಿಸಿದ್ದಾರೆ. ಆಗ ಫರ್ಮಾನ್ ಮತ್ತು ಮೊನಾಲಿಸಾ ತಿರುವನಂತಪುರಂನ ಥಂಪನೂರು ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಈ ವೇಳೆ ಮಧ್ಯಪ್ರವೇಶಿಸಿದ ಪೊಲೀಸರು ಆಕೆಗೆ 18 ವರ್ಷವಾಗಿರುವುದರಿಂದ ಮದುವೆಯನ್ನು ತಡೆಯಲು ಸಾಧ್ಯವಿಲ್ಲ ಎಂದಿದ್ದಾರೆ.

ಈ ಮದುವೆಗೆ ಕೇರಳದ ಪ್ರಮುಖ ರಾಜಕಾರಣಿಗಳು ಬೆಂಬಲವಾಗಿ ನಿಂತಿದ್ದಾರೆ. ಮಾತ್ರವಲ್ಲ ಇದೇ ನಿಜವಾದ ಕೇರಳ ಸ್ಟೋರಿ ಎಂದಿದ್ದಾರೆ. ಮೊನಾಲಿಸಾ ಈಗ ಬಾಲಿವುಡ್‌ಗೂ ಪಾದಾರ್ಪಣೆ ಮಾಡುವ ಸಿದ್ಧತೆಯಲ್ಲಿದ್ದಾರೆ.

ಅದಮ್ಯ ಚೇತನ, ಇಸ್ಕಾನ್, ಸಿದ್ದಗಂಗಾ ಮಠಕ್ಕಿಲ್ಲ ಸಿಲಿಂಡರ್ ಆತಂಕ
2009ರಿಂದಲೂ ವಾಣಿಜ್ಯ ಸಿಲಿಂಡರ್ ಖರೀದಿಸದ ಅದಮ್ಯ ಚೇತನ

ಪರ್ಯಾಯ ಅನಿಲ; ನಿತ್ಯದಾಸೋಹಿಗಳಿಗಿಲ್ಲ ಟೆನ್ಷನ್

ವಿಶ್ವವಾಣಿ ವಿಶೇಷ ಬೆಂಗಳೂರು

ರಾಜ್ಯದ ಬಹುಪಾಲು ಹೋಟೆಲ್, ಕಲ್ಯಾಣ ಮಂಟಪ, ದೇವಾಲಯಗಳ ಆಡಳಿತ ಮಂಡಳಿ ಯುದ್ಧದಿಂದಾಗಿ ಕೊರತೆಯಾಗುತ್ತಿರುವ ವಾಣಿಜ್ಯ ಸಿಲಿಂಡರ್‌ಗಳ ಬಗ್ಗೆ ಚಿಂತಿಸುತ್ತಿದ್ದರೆ, ನಿತ್ಯ ಲಕ್ಷಾಂತರ ಮಂದಿಗೆ ಅನ್ನದಾಸೋಹ ನಡೆಸುವ ಈ ಕ್ಷೇತ್ರಗಳಿಗೆ ಮಾತ್ರ ಈ ಆತಂಕವಿಲ್ಲ. ಏಕೆಂದರೆ, ಇವರೆಲ್ಲ ಸಿಲಿಂಡರ್‌ಗಳನ್ನು ಮೀರಿದ 'ಆತ್ಮನಿರ್ಭರತೆ'ಯನ್ನು ಸಾಧಿಸಿದ್ದಾರೆ.

ಬೆಂಗಳೂರಿನ ಅದಮ್ಯ ಚೇತನ, ಇಸ್ಕಾನ್‌ನ ಅಕ್ಷಯಪಾತ್ರ, ಸಿದ್ದಗಂಗಾ ಮಠ, ಧರ್ಮಸ್ಥಳ ದಂತಹ ಕ್ಷೇತ್ರದಲ್ಲಿ ನಿತ್ಯ ಲಕ್ಷಾಂತರ ಜನರಿಗೆ ಅನ್ನಪ್ರಸಾದವನ್ನು ಸಿದ್ಧಪಡಿಸಲಾಗುತ್ತದೆ. ಆದರೆ ಈ ಎಲ್ಲ ಕಡೆ ಸೋಲಾರ್, ಹಬೆಯಾಧಾರಿತ ಆಹಾರ ತಯಾರಿಕಾ ಕ್ರಮ ಅಥವಾ ಸೋಲಾರ್ ಬಳಸುವುದರಿಂದ ವಾಣಿಜ್ಯ ಸಿಲಿಂಡರ್‌ಗಳ ಕೊರತೆ ಯಾದರೂ ಚಿಂತಿಸುತ್ತಿಲ್ಲ. ತೇಜಸ್ವಿನಿ ಅನಂತ ಕುಮಾರ್ ಅವರು ಮುನ್ನಡೆಸುತ್ತಿರುವ ಅದಮ್ಯ ಚೇತನದಲ್ಲಿ 2009ರಿಂದಲೇ ವಾಣಿಜ್ಯ ಸಿಲಿಂಡರ್‌ಗಳ ಬದಲು, ಪರ್ಯಾಯ ಇಂಧನದಲ್ಲಿ ನಿತ್ಯ ಆಹಾರ ಸಿದ್ಧಪಡಿಸಲಾಗುತ್ತಿದೆ.

ಅದಮ್ಯ ಚೇತನದ ಅಡುಗೆ ಮನೆಯಲ್ಲಿ 2009ರಿಂದ ಬಯೋ ಗ್ಯಾಸ್, ಸೋಲಾರ್ ಹಾಗೂ ಬ್ರಿಕೆಟ್(ಕಲ್ಲಿದ್ದಲು ಪುಡಿ, ಕೃಷಿ ತ್ಯಾಜ್ಯ)ವನ್ನು ಬಳಸಿಕೊಂಡು ನಿತ್ಯ ಲಕ್ಷಾಂತರ ಜನರಿಗೆ ಅಡುಗೆ ತಯಾರಿಸಲಾಗುತ್ತಿದೆ. ಮನೆಗಳಲ್ಲಿ ಬ್ರಿಕೆಟ್‌ಗಳ ಬಳಕೆ ಸಾಧ್ಯವಿಲ್ಲವಾದರೂ, ದೊಡ್ಡ ದೊಡ್ಡ ಹೋಟೆಲ್ ಸೇರಿದಂತೆ ಸಾಮೂಹಿಕ ಅಡುಗೆ ತಯಾರಿಸುವ ಜಾಗದಲ್ಲಿ ಬಳಸಿಕೊಳ್ಳಬಹುದಾಗಿದೆ. ಬ್ರಿಕೆಟ್, ಬಾಯ್ಲರ್‌ಗಳ ಬಳಕೆ ಆರಂಭದಲ್ಲಿ ಹೂಡಿಕೆ ಮಾಡಬೇಕಾಗುತ್ತದೆ ಹಾಗೂ ಇದಕ್ಕೆ ತಾಂತ್ರಿಕ ಸಿಬ್ಬಂದಿಗಳ ಅಗತ್ಯವಿರುತ್ತದೆ. ಆದರೆ ಬಯೋ ಗ್ಯಾಸ್‌ನಲ್ಲಿ ಈ ಸಮಸ್ಯೆಯಿಲ್ಲ. ಸದ್ಯ ಹೋಟೆಲ್, ಹಾಸ್ಟೆಲ್‌ಗಳು ಎದುರಿಸುತ್ತಿರುವ ಸಮಸ್ಯೆ ಹೋಲಿಸಿದರೆ ಈ ಪರ್ಯಾಯ ಮಾರ್ಗ ಸೂಕ್ತ ಹಾಗೂ ಅನಿವಾರ್ಯ ಎನ್ನುವ ಮಾತುಗಳನ್ನು ಅದಮ್ಯ ಚೇತನದ ಮುಖ್ಯಸ್ಥೆ ತೇಜಸ್ವಿನಿ ಅನಂತಕುಮಾರ್ ಹೇಳಿದ್ದಾರೆ.

2009ರಲ್ಲಿಯೇ ಅದಮ್ಯ ಚೇತನದಲ್ಲಿ ಬ್ರಿಕೆಟ್ ಹಾಗೂ ಬಯೋ ಇಂಧನದ ಬಳಕೆ ಮಾಡಲು ಶುರುಮಾಡಿದ್ದೇವೆ. ಆರಂಭದಲ್ಲಿ ಅನೇಕರು ನಮ್ಮ ನಡೆಗೆ ಅಚ್ಚರಿ ವ್ಯಕ್ತಪಡಿಸಿದ್ದರೂ, ಪರ್ಯಾಯ ಇಂಧನ ಅನಿವಾರ್ಯ ಎನ್ನುವುದು ಈಗ ತಿಳಿಯುತ್ತಿದೆ. ಸಣ್ಣ ಸ್ಥಳದಲ್ಲಿ ಬ್ರಿಕೆಟ್‌ಗಳ ಬಳಕೆ ಸವಾಲು. ಆದರೆ ಸಾಮೂಹಿಕ ಅಡುಗೆ ಮಾಡುವಲ್ಲಿ ಇದು ಉತ್ತಮ ಆಯ್ಕೆ.
-ತೇಜಸ್ವಿನಿ ಅನಂತಕುಮಾರ್, ಮುಖ್ಯಸ್ಥೆ, ಅದಮ್ಯ ಚೇತನ

ಸಿದ್ದಗಂಗಾ ಮಠದಲ್ಲಿ ಆರದ ಒಲೆಯ ಜ್ವಾಲೆ

ಸಿದ್ದಗಂಗಾ ಮಠದ ದಾಸೋಹ ಶ್ರೀ ಅಟವಿ ಸ್ವಾಮಿಗಳ ಕಾಲದಿಂದಲೂ ನಡೆದುಕೊಂಡು ಬಂದಿದೆ. ಶಿವಕುಮಾರ ಸ್ವಾಮೀಜಿಗಳ ಕಾಲಕ್ಕೆ ದಾಸೋಹ ಸೇವೆ ಲೋಕ ಸೋಜಿಗದ ಮಹಾಮನೆಯಾಗಿ ಬದಲಾಗಿದೆ. ದಾಸೋಹದ ಅಡುಗೆ ಮನೆಯ ಒಲೆಯು ಉಜ್ವಲವಾಗಿ ಉರಿಯುತ್ತಿದೆ. ಪ್ರತಿ ನಿತ್ಯ ದಾಸೋಹಕ್ಕೆ ಸುಮಾರು 50 ಕ್ವಿಂಟಾಲ್ ಅಕ್ಕಿ, 20 ಕ್ವಿಂಟಾಲ್ ರಾಗಿ, ಸುಮಾರು 10 ಕ್ವಿಂಟಾಲ್ ಕಾಳು ಬೇಳೆ, ಇವುಗಳ ಪ್ರಮಾಣಕ್ಕೆ ಅನುಗುಣವಾಗಿ ಸಾಂಬಾರುಪುಡಿ, ತೆಂಗಿನಕಾಯಿ, ಈರುಳ್ಳಿ, ಎಣ್ಣೆ ಹಾಲು, ಬೆಲ್ಲ ಸಕ್ಕರೆ, ಹೀಗೆ ನೂರಾರು ಕೆಜಿ ಲೆಕ್ಕದಲ್ಲಿ ಪದಾರ್ಥಗಳು ಬೇಕಾಗುತ್ತವೆ. ಸಿದ್ದಗಂಗಾ ಮಠದ ದಾಸೋಹ ಒಲೆ (ಅಡುಗೆಮನೆ) ತ್ರಿವಿಧ ದಾಸೋಹಕ್ಕೆ (ಅನ್ನ, ಅಕ್ಷರ, ಜ್ಞಾನ) ಪ್ರಸಿದ್ಧವಾಗಿದ್ದು, ಪ್ರತಿದಿನ ಸಾವಿರಾರು ಭಕ್ತರು ಮತ್ತು ವಿದ್ಯಾರ್ಥಿಗಳಿಗೆ ಉಚಿತ ಊಟವನ್ನು ನೀಡುತ್ತದೆ. 1966ರ ಭೀಕರ ಬರಗಾಲದ ಸಮಯದಲ್ಲಿ, ಶ್ರೀ ಶಿವಕುಮಾರ ಸ್ವಾಮೀಜಿ ಅವರು ಸ್ವತಃ ಅಡುಗೆಮನೆಯಲ್ಲಿ ನಿಂತು ಆಹಾರ ತಯಾರಿಸಿ, ಹಸಿದವರಿಗೆ ಹಂಚುವ ಮೂಲಕ ಈ ದಾಸೋಹ ಸೇವೆಯನ್ನು ನಿರಂತರವಾಗಿ ನಡೆಸಿಕೊಂಡು ಬಂದಿದ್ದಾರೆ. ವಾಣಿಜ್ಯ ಬಳಕೆಯ ಸಿಲಿಂಡರ್‌ಗಳನ್ನೇ ಬಳಸದ ಕಾರಣ, ಅನ್ನದಾಸೋಹಕ್ಕೆ ಯಾವುದೇ ಸಮಸ್ಯೆಯಿಲ್ಲ ಎಂದು ಸಿದ್ದಗಂಗಾ ಆಡಳಿತ ಮಂಡಳಿ ಸ್ಪಷ್ಟಪಡಿಸಿದೆ.



ರಿಯಲ್ ಎಸ್ಟೇಟ್ ಏಜೆಂಟ್‌ನ ಅಪಹರಿಸಿ ಹತ್ಯೆ ಪ್ರಕರಣ

ಅಪ್ರಾಪ್ತ ಸೇರಿ 8 ಆರೋಪಿಗಳ ಸೆರೆ

ಬೆಂಗಳೂರು: ಆನೇಕಲ್‌ನಲ್ಲಿ ಅಪಹರಣವಾಗಿದ್ದ ರಿಯಲ್ ಎಸ್ಟೇಟ್ ಏಜೆಂಟ್ ತಮಿಳುನಾಡಿನಲ್ಲಿ ಶವವಾಗಿ ಪತ್ತೆ ಪ್ರಕರಣಕ್ಕೆ ಬಂಧಿಸಿದಂತೆ ಬೆಂಗಳೂರು ನಗರ ಜಿಲ್ಲೆಯ ಆನೇಕಲ್ ಠಾಣೆ ಪೊಲೀಸರಿಂದ ಓರ್ವ ಅಪ್ರಾಪ್ತ ಸೇರಿದಂತೆ 8 ಆರೋಪಿಗಳನ್ನು ಬಂಧಿಸಲಾಗಿದೆ.

ಅಪರಾಧ ಸುದ್ದಿಗಳು

ಮೋಹನ್ ಬಾಬು, ತೇಜಸ್, ದರ್ಶನ್, ಲಿಖಿತ್, ನಿಖಿಲ್, ಆನಂದ್, ಪ್ರಶಾಂತ್ ಮತ್ತು ಓರ್ವ ಅಪ್ರಾಪ್ತ ಬಂಧಿತರು. ಆರೋಪಿಗಳು ಅಪಹರಣ ಮಾಡಲು ಬಳಸಿದ್ದ ಹುಂಡೈ ಕಾರನ್ನು ವಶಕ್ಕೆ ಪಡೆಯಲಾಗಿದೆ. ತಾಲೂಕು ಸರಕಾರಿ ಆಸ್ಪತ್ರೆಯಲ್ಲಿ ಆರೋಪಿಗಳಿಗೆ ವೈದ್ಯಕೀಯ ಪರೀಕ್ಷೆ ಮಾಡಿ ಕೋರ್ಟ್ ಗೆ ಹಾಜರುಪಡಿಸಲಾಯಿತು.

ನಡೆದದ್ದೇನು?: ಗೋಪಾಲ್ ಅಲಿಯಾಸ್ ಗೋಪಿ ಬೆಂಗಳೂರು ಹೊರವಲಯ ಆನೇಕಲ್ ತಾಲೂಕಿನ ಹೊನ್ನಕಳಶಾಪುರ ನಿವಾಸಿ. ಈತನ ಸಂಬಂಧಿ ಮೋಹನ್ ಬಾಬು ಆ್ಯಂಡ್ ಗ್ಯಾಂಗ್‌ನಿಂದ ಬರ್ಬರವಾಗಿ ಕೊಲೆಯಾಗಿದ್ದಾನೆ. ಸ್ನೇಹಿತನಿಗೆ ಹೆಣ್ಣು ನೋಡುವ ಕಾರ್ಯಕ್ರಮದಲ್ಲಿ ಭಾಗಿಯಾಗಿ ವಾಪಸ್ ಬರುತ್ತಿದ್ದ ವೇಳೆ ಅತ್ತಿಬೆಲೆ ಮತ್ತು ಆನೇಕಲ್ ಮಾರ್ಗ ಮಧ್ಯೆ ಕರ್ಪೂರು ಬಳಿ ಗೂಡ್ಸ್ ವಾಹನ ಗೋಪಾಲ್ ಪ್ರಯಾಣಿಸುತ್ತಿದ್ದ ಕಾರಿಗೆ ಡಿಕ್ಕಿ ಹೊಡೆದಿದೆ. ಕಾರು ನಿಲ್ಲಿಸಿ ಕೆಳಗಿಳಿಯುತ್ತಿದ್ದಂತೆ ಕಾರಿನಲ್ಲಿ ಹಿಂಬಾಲಿಸಿ ಬಂದ ಐದಾರು ಮಂದಿ ಗೋಪಾಲ್ ಮತ್ತು ಸ್ನೇಹಿತ ಸತೀಶ್ ಮುಖಕ್ಕೆ ಪೆಪ್ಪರ್ ಸ್ಪ್ರೇ ಹೊಡೆದಿದ್ದಾರೆ. ಕಿರುಚಾಡುತ್ತಿದ್ದಂತೆ ಕ್ಷಣಾರ್ಧದಲ್ಲಿ ಗೋಪಾಲ್‌ನನ್ನು ಕಾರಿನಲ್ಲಿ ಅಪಹರಿಸಿ ಪರಾರಿಯಾಗಿದ್ದರು. ಗೋಪಾಲ್ ಸ್ನೇಹಿತ ಸತೀಶ್ ಕೂಡಲೇ ಆನೇಕಲ್ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಇತ್ತ ಹಳೆ ದ್ವೇಷ ಹಿನ್ನೆಲೆ ಮೋಹನ್ ಬಾಬು ಅಪಹರಣ ಮಾಡಿಸಿದ್ದಾನೆ ಎಂದು ಕುಟುಂಬದವರು ಆರೋಪಿಸಿದ್ದರು. ಸೋಮವಾರ ಬೆಳಗ್ಗೆ ತಮಿಳುನಾಡಿನ ಡೆಂಕಣೀಕೋಟೆ ಬಳಿ ಬರ್ಬರವಾಗಿ ಕೊಲೆಯಾದ ಸ್ಥಿತಿಯಲ್ಲಿ ಗೋಪಾಲ್ ಶವ ಪತ್ತೆಯಾಗಿತ್ತು. ಇತ್ತ ಆಕ್ರೋಶಗೊಂಡ ಮೃತ ಗೋಪಾಲ್ ಕುಟುಂಬ ದವರು ಮತ್ತು ಸಂಬಂಧಿಗಳು ಆನೇಕಲ್ ಪೊಲೀಸ್ ಠಾಣೆಗೆ ಮುತ್ತಿಗೆ ಹಾಕಿದ್ದು ಮಾತ್ರವಲ್ಲದೆ ಆರೋಪಿ ಮೋಹನ್ ಬಾಬು ಮನೆ ಮೇಲೆ ಕಲ್ಲು ತೂರಾಟ ಕೂಡ ಮಾಡಿದ್ದರು.

ಆಸೆಪಟ್ಟ ಯುವತಿ ಸಿಗಲಿಲ್ಲವೆಂಬ ಕಾರಣಕ್ಕೆ ದ್ವೇಷ

ಮೃತ ಗೋಪಾಲ್ ಮತ್ತು ಆರೋಪಿ ಮೋಹನ್ ಬಾಬು ಮುಂಚೆ ಜತೆಯಾಗಿಯೇ ರಿಯಲ್ ಎಸ್ಟೇಟ್ ವ್ಯವಹಾರ ನಡೆಸುತ್ತಿದ್ದರು. ಆದರೆ ಹತ್ತು ವರ್ಷದ ಹಿಂದೆ ಗೋಪಾಲ್ ಸ್ವಾತಿ ಎಂಬ ಯುವತಿಯನ್ನು ವಿವಾಹವಾಗಿದ್ದು, ಆರೋಪಿ ಮೋಹನ್ ಬಾಬುಗೆ ದ್ವೇಷಕ್ಕೆ ಕಾರಣವಾಗಿತ್ತು. ಗೋಪಾಲ್ ಮದುವೆ ಆದ ಸ್ವಾತಿಯನ್ನು ಮದುವೆ ಆಗಲು ಆರೋಪಿ ಮೋಹನ್ ಬಾಬು ಆಸೆ ಪಟ್ಟಿದ್ದ. ಆದರೆ ಗೋಪಾಲ್ ಹಿರಿಯರ ಸಮ್ಮುಖದಲ್ಲಿ ಮದುವೆ ಆಗಿದ್ದ. ಮದುವೆ ಬಳಿಕ ಇಬ್ಬರ ನಡುವೆ ವೈಷಮ್ಯ ಮೂಡಿತ್ತು. ಜತೆಗೆ ವ್ಯವಹಾರದಲ್ಲೂ ಗೋಪಾಲ್ ಚೆನ್ನಾಗಿ ಬೆಳೆಯುವುದನ್ನು ಸಹಿಸದ ಮೋಹನ್ ಬಾಬು ಎರಡು ವರ್ಷದ ಹಿಂದೆ ಅಪಹರಿಸಿ ಹಲ್ಲೆ ನಡೆಸಿ ಬಿಟ್ಟು ಕಳುಹಿಸಿದ್ದ. ಅಲ್ಲದೆ ಪದೇ ಪದೇ ನನ್ನ ವ್ಯವಹಾರಗಳಿಗೆ ನೀನು ಕೈ ಹಾಕುತ್ತಿಯಾ ಎಂದು ಮೋಹನ್ ಬಾಬು ಕೊಲೆ ಬೆದರಿಕೆ ಹಾಕುತ್ತಿದ್ದರು. ಗೋಪಾಲ್ ಮಾತ್ರ ಪತ್ನಿ ಬಳಿ ಹೇಳಿಕೊಂಡು ರಾಜಿ ಮಾಡಿಕೊಳ್ಳುವ ಬಗ್ಗೆ ಮಾತನಾಡಿದ್ದ. ಆದರೂ ಮೋಹನ್ ಬಾಬು ದ್ವೇಷವನ್ನ ಬಿಡದೆ ಕಳೆದ ಭಾನುವಾರ 25 ಲಕ್ಷ ರು. ಸುಪಾರಿ ನೀಡಿ ಗೋಪಾಲ್‌ನನ್ನು ಅಪಹರಿಸಿ ಕೊಲೆ ಮಾಡಿಸಿದ್ದಾಗಿ ಆರೋಪಿ ಮೋಹನ್ ಬಾಬು ತಪ್ಪೊಪ್ಪಿಕೊಂಡಿದ್ದಾನೆ ಎಂದು ಹಿರಿಯ ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ರೌಡಿಗಳಿಬ್ಬರ ಸೆರೆ: ಪಿಸ್ತೂಲು ಜಪ್ತಿ

ಬೆಂಗಳೂರು: ಅಕ್ರಮವಾಗಿ 2 ಪಿಸ್ತೂಲ್ ಹಾಗೂ ಜೀವಂತ ಮದ್ದುಗುಂಡು ಇಟ್ಟುಕೊಂಡಿದ್ದ ಇಬ್ಬರು ರೌಡಿಗಳನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ. ಬಂಧಿತರಿಂದ 2ಪಿಸ್ತೂಲ್ ಹಾಗೂ 3 ಜೀವಂತ ಗುಂಡುಗಳನ್ನು ವಶಪಡಿಸಿಕೊಳ್ಳಲಾಗಿದೆ. ಎಚ್‌ಎಎಲ್ ಠಾಣೆಯ ವಿವಿಧ ಪ್ರಕರಣಗಳಲ್ಲಿ ಭಾಗಿಯಾಗಿ ನ್ಯಾಯಾಲಯದ ವಿಚಾರಣೆಗೆ ಹಾಜರಾಗದೇ ತಲೆಮರೆಸಿಕೊಂಡಿದ್ದ ರೌಡಿಯನ್ನು ಬನ್ನೇರುಘಟ್ಟ ರಸ್ತೆಯ ಅಪಾರ್ಟ್‌ಮೆಂಟ್‌ವೊಂದರಲ್ಲಿ ಪರವಾನಿಗೆ ಇಲ್ಲದೇ ಇಟ್ಟುಕೊಂಡಿದ್ದ 2 ಪಿಸ್ತೂಲ್‌ಗಳು ಮತ್ತು 3 ಜೀವಂತ ಗುಂಡುಗಳ ಸಮೇತ ವಶಕ್ಕೆ ಪಡೆದುಕೊಳ್ಳಲಾಯಿತು. ವಶಕ್ಕೆ ಪಡೆದ ರೌಡಿಶೀಟರ್‌ನನ್ನು ವಿಚಾರಣೆಗೊಳ ಪಡಿಸಲಾಗಿ, ಹೊರರಾಜ್ಯದ ಉದಯಗಿರಿ ರೌಡಿಶೀಟರ್ ಓರ್ವನು ಈತನಿಗೆ ಮಾರಾಟ ಮಾಡಿರುವುದಾಗಿ ತಿಳಿಸಿರುತ್ತಾನೆ. ಹೊರರಾಜ್ಯದ ರೌಡಿ ಶೀಟರ್‌ನನ್ನು ಸಹ ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದರು.

ಎನ್ವಿರಾನ್ಮೆಂಟಲ್ ಕ್ಲಿಯರೆನ್ಸ್

ಕರ್ನಾಟಕ ರಾಜ್ಯಮಟ್ಟದ ಪ್ರಧಾನ ಅಧ್ಯಯನ ಪ್ರಾಧಿಕಾರವು (ಭಾರತ ಸರ್ಕಾರದ ಪರಿಸರ ಮತ್ತು ಅರಣ್ಯ ಸಚಿವಾಲಯುದಿಂದ ರಚಿಸಲ್ಪಡಲಾಗಿದೆ) ಮೆ: ಆಕರ್ಷ ರಿಯಾಲ್ಟಿ ಪ್ರೈವೇಟ್ ಲಿಮಿಟೆಡ್ ಬೆಂಗಳೂರು ಅವರಿಗೆ ತಮ್ಮ ಪತ್ರ ಸಂಖ್ಯೆ No. SEIAA 46 CON 2025 ದಿನಾಂಕ: 25.02.2026 ಮೂಲಕ ಬೆಂಗಳೂರು ಜಿಲ್ಲೆ, ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರು ಹೋಬಳಿ, ಗುಂಜೂರು ಗ್ರಾಮದ, ಸರ್ವೆ ನಂಬರ್ 127/1, 127/4, 128/1, 128/2, 128/3, 128/5, 128/6 & 129/5 ರಲ್ಲಿ ವಸತಿ ಯೋಜನೆಗೆ ಪರಿಸರ ಅನುಮೋದನೆ ನೀಡಿದೆ. ಅನುಮತಿ ಪತ್ರದ ಪ್ರತಿಯು **MoEF&CC/SEIAA** ಕರ್ನಾಟಕ ವೆಬ್ ಸೈಟ್ **http://parivesh.nic.in. http://envrionmentclearance.nic.in. http://seiaa.karnataka.gov.in** ನಲ್ಲೂ ಲಭ್ಯವಿದೆ.

ಈ ಮೇಲಿನ ಪರಿಸರ ನಿರಾಕ್ಷೇಪಣಾ ಪತ್ರ ನಿಗದಿಸಿದ ಷರತ್ತಿಗೆ ಬದ್ದವಾಗಿ ಈ ಸಾರ್ವಜನಿಕ ಪ್ರಕಟಣೆಯನ್ನು ನೀಡಲಾಗಿದೆ.

ಸ್ವಾಧೀನ ಸೂಚನೆ
(ಸ್ಥಿರ ಆಸ್ತಿಗಾಗಿ)

ಈ ಕಾರಣದಿಂದ,

ಈಡೆಲ್‌ವಾಯಿಸ್ ಅಸೆಟ್ ರಿಕನ್‌ಸ್ಟ್ರಕ್ಷನ್ ಕಂಪೆನಿ ಲಿಮಿಟೆಡ್ (''ಇಎಆರ್‌ಸಿ'') (CIN:U67100MH2007PLC174759) ನ ಅಧಿಕಾರ ಕೊಟ್ಟಿರುವ ಅಧಿಕಾರಿಯ ಹಸ್ತಾಕ್ಷರವಿರುವ ಐಹಿಕತೆ ಮತ್ತು ಪುನರ್ ನಿರ್ಮಾಣ ಮತ್ತು ಫೈನಾನ್ಸ್ ನ ಸಾಲ ತೀರಿಸಲು ಇರುವ ಸ್ವತ್ತು ಮತ್ತು ಎನ್‌ಪೊರ್ಸ್‌ಮೆಂಟ್ ಆಫ್ ಸೆಕ್ಯೂರಿಟಿಸ್ ಆಕ್ಟ್ 2002 ಮತ್ತು ಅಧಿಕಾರದ ಪ್ರಯೋಗ ಮಾಡುವಿಕೆಯ ಸೆಕ್ಷನ್ 13 (12) ನಿಯಮ 3 ರ ಸೆಕ್ಯೂರಿಟಿಸ್ (ಎನ್‌ಪೊರ್ಸ್‌ಮೆಂಟ್) ನಿಯಮ, 2002 ದೊಂದಿಗೆ ಓದಿರಿ. ಬೇಡಿಕಯ ಸೂಚನೆ ಮುಲಕ ಪ್ರಕಟಿಸಿದ ತಾರೀಖು **28.02.2022** ರಂದು ಕರೆದು ಸಾಲಗಾರ **ವಂದನಾ ಕುಮಾರ್ ಥಾಕೂರ್ ಮತ್ತು ಬಿ.ರಾಜೇಶ್** ನೋಟಿಸಿನಲ್ಲಿ ಹೇಳಿರುವಂತೆ ಮರುಪಾವತಿಸಬೇಕಾದ ಸದರಿ ಸೌಲಭ್ಯಕ್ಕೆ ದಿನಾಂಕ **02.02.2022** ರ ವರೆಗೆ **ರೂ. 14,97,740.88 (ರೂಪಾಯಿ ಹದಿನಾಲ್ಕು ಲಕ್ಷದ, ತೊಂಬತ್ತ ಏಳು ಸಾವಿರದ ಏಳು ನೂರ ನಲ್ವತ್ತು ಮತ್ತು ಪೈಸೆ ಎಂಬತ್ತ ಎಂಟು ಮಾತ್ರ)** ಸಾಲ ಖಾತೆ ನಂ. **HHLBAG00233145** ಸದರಿ ನೋಟಿಸ್ ದೊರೆತ 60 ದಿನಗಳೊಳಗೆ, ಪೂರ್ಣ ಹಣಪಾವತಿ / ಚೆಕ್ ಪರಿವರ್ತಿತವಾಗಿ ನಗದು ಹಣ ಲಭ್ಯವಾಗುವ ತನಕ **03.02.2022** ರಿಂದ ಮುಂದಿನ ಬಡ್ಡಿ ಹಾಗೂ ದಂಡದ ಬಡ್ಡಿ ವಿಧಿಸಲಾಗುತ್ತದೆ.

ಮತ್ತು ತರುವಾಯ, **ಇಎಆರ್‌ಸಿ ಟ್ರಸ್ಟ್‌ನ ಟ್ರಸ್ಟಿ ಆಗಿ ಎಡೆಲ್‌ವೇಸ್ ಅಸೆಟ್ ರೀಕನ್‌ಸ್ಟ್ರಕ್ಷನ್ ಕಂಪನಿ ಲಿಮಿಟೆಡ್ ಸಂಸ್ಥೆಯು ಇಎಆರ್‌ಸಿ ಟ್ರಸ್ಟ್-ಎಸ್‌ಸಿ 439ರ ಟ್ರಸ್ಟಿ ಆಗಿ** ದಿನಾಂಕ **02.11.2023** ರ ನಿಯೋಜನೆ ಒಪ್ಪಂದದ ಮೂಲಕ **ಸಮ್ಮಾನ್ ಕ್ಯಾಪಿಟಲ್ ಲಿಮಿಟೆಡ್** (ಈಗಿನ ಹೆಸರು: **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್)** ನೀಡಿದ ಸೌಲಭ್ಯಗಳಿಂದ ಉಂಟಾಗುವ ಸಾಲಗಾರರು / ಖಾತರಿದಾರರು / ಅಡಮಾನದಾರರು ಬಾಕಿ ಇರುವ ಮತ್ತು ಪಾವತಿಸಬೇಕಾದ ಸಾಲಗಳಿಗೆ ಸಂಬಂಧಿಸಿದಂತೆ ಅದರ ಎಲ್ಲಾ ಹಕ್ಕುಗಳು, ಶೀರ್ಷಿಕೆ, ಬಡ್ಡಿ ಮತ್ತು ಪ್ರಯೋಜನಗಳನ್ನು ಸಾಲಗಾರರು / ಖಾತರಿದಾರರು / ಅಡಮಾನದಾರರು ಮತ್ತು ಆಧಾರವಾಗಿರುವ ಸೆಕ್ಯುರಿಟಿಗಳಿಗೆ ನಿಯೋಜಿಸಿದೆ. ಭದ್ರತಾ ರಸೀದಿಗಳನ್ನು ಹೊಂದಿರುವವರ ಪ್ರಯೋಜನಕ್ಕಾಗಿ **ಆರ್ಸಿಲ್- ಸಿ ಪಿ ಎಸ್-IV, ಟ್ರಸ್ಟ್ (''ಆರ್ಸಿಲ್'')** ನ ಟ್ರಸ್ಟಿಯಾಗಿ ಕಾರ್ಯನಿರ್ವಹಿಸುವ **ಅಸೆಟ್ ರೀಕನ್‌ಸ್ಟ್ರಕ್ಷನ್ ಕಂಪನಿ (ಇಂಡಿಯಾ) ಲಿಮಿಟೆಡ್** ಆದ್ದರಿಂದ, ಸದರಿ ನಿಯೋಜನೆಯ ದೃಷ್ಟಿಯಿಂದ, **ಆರ್ಸಿಲ್** ಈಗ **ಎಡೆಲ್‌ವೇಸ್ ಅಸೆಟ್ ರೀಕನ್‌ಸ್ಟ್ರಕ್ಷನ್ ಕಂಪನಿ ಲಿಮಿಟೆಡ್** ಸ್ಥಾನದಲ್ಲಿದೆ ಮತ್ತು ಸಾಲಗಾರ / ಖಾತರಿದಾರರು / ಅಡಮಾನದಾರರು ಪಡೆದಿರುವ ಸೌಲಭ್ಯಗಳಿಗಾಗಿ ಸಾಲಗಾರ/ಖಾತರಿದಾರರು/ಅಡಮಾನದಾರರು ಕಾರ್ಯಗತಗೊಳಿಸಿದ ಮತ್ತು ರಚಿಸಿದ ಭದ್ರತಾ ಹಿತಾಸಕ್ತಿಯ ಜಾರಿ ಸೇರಿದಂತೆ ಹಣಕಾಸು ದಾಖಲೆಗಳ ಅಡಿಯಲ್ಲಿ ಎಲ್ಲಾ ಮತ್ತು ಯಾವುದೇ ಕ್ರಮಗಳನ್ನು ಪ್ರಾರಂಭಿಸಲು/ಮುಂದುವರಿಯಲು ಆರ್ಸಿಲ್‌ಗೆ ಅರ್ಹತೆ ಇರುತ್ತದೆ.

ಸಾಲಗಾರ / ಗ್ಯಾರಂಟರ್(ಗಳು) / ಮಾರ್ಟ್‌ಗೆಜರ್(ಗಳು) ಆರ್ಸಿಲ್‌ಗೆ ಮೇಲೆ ಹೇಳಿರುವ ಮೊತ್ತವನ್ನುಈ ತನಕ ಮರುಪಾವತಿ ಮಾಡದೆ ಇರುವ ಕಾರಣ, ಕೆಳಗೆ ಸಹಿ ಮಾಡಿರುವ **ಸ್ವಾಧೀನ** ಅಧಿಕೃತ ಅಧಿಕಾರಿಯವರು, ಸದರಿ ಆ್ಯಕ್ಟ್‌ನ ಸೆಕ್ಷನ್ 13ರ ಸಬ್-ಸೆಕ್ಷನ್ (4)ರ ಜೊತೆಗೆ ಹೇಳಲಾಗಿರುವ ರೂಲ್‌ಗಳಲ್ಲಿನ ರೂಲ್ 8ರ ಅಡಿಯಲ್ಲಿ ಅವರಿಗೆ ಲಭ್ಯವಿರುವ ಪವರ್‌ಗಳನ್ನು ಚಲಾಯಿಸಿ, **07.03.2026** ರಂದು ಕೆಳಗೆ ವಿವರಿಸಿರುವ ಸೆಕ್ಯುರಿಟಿ ಅಸೆಟ್‌ಗಳನ್ನು ತಮ್ಮ ವಶಕ್ಕೆ ತೆಗೆದುಕೊಂಡಿದ್ದಾರೆ ಎಂದು ನಿರ್ದಿಷ್ಟವಾಗಿ ಸಾಲಗಾರರಿಗೆ / ಗ್ಯಾರಂಟರ್(ಗಳಿಗೆ) / ಮಾರ್ಟ್‌ಗೆಜರ್(ಗಳಿಗೆ) ಮತ್ತು ಸಾರ್ವಜನಿಕರಿಗೆ ಈ ಮೂಲಕ ನೋಟಿಸ್ ಕೊಡಲಾಗುತ್ತಿದೆ.

ಕೆಳಗೆ ಹೇಳಿರುವ ಸೆಕ್ಯುರಿಟಿಯ ಅಸೆಟ್‌ಗಳ ಬಗ್ಗೆ ಯಾವುದೇ ವ್ಯವಹಾರವನ್ನೂ ಮಾಡಕೂಡದು, ಮತ್ತು ಈ ಸೆಕ್ಯುರಿಟಿಯ ಅಸೆಟ್‌ಗಳಿಗೆ ಸಂಬಂಧಿಸಿದಂತೆ ಯಾವುದೇ ವ್ಯವಹಾರ ಮಾಡಿದರೂ, ಅದು ಮೇಲೆ ಹೇಳಿರುವ ಸಾಲ ಸೌಲಭ್ಯದ ಕಾರಣವಾಗಿ ದಿನಾಂಕ **03.06.2026** ರ ವರೆಗೆ **ರೂ. 27,16,388.75 (ಇಪ್ಪತ್ತೇಳು ಲಕ್ಷದ ಹದಿನಾರು ಸಾವಿರದ ಮೂರುನೂರ ಎಂಬತ್ತೆಂಟು ಮತ್ತು ಎಪ್ಪತ್ತೈದು ಪೈಸೆ ಮಾತ್ರ)** ಮೊತ್ತಕ್ಕೆ, ಮತ್ತು ನಂತರ ಪೂರ್ಣ ಹಣಪಾವತಿ / ಚೆಕ್ ಪರಿವರ್ತಿತವಾಗಿ ನಗದು ಹಣ ಲಭ್ಯವಾಗುವ ತನಕ **04.03.2026** ರಿಂದ ಕರಾರಿನ ದರದ ಪ್ರಕಾರ ಮುಂದಿನ ಬಡ್ಡಿ , ದಂಡ ಹಾಗೂ ಇತರ ಎಲ್ಲಾ ಖರ್ಚುವೆಚ್ಚಗಳು, ಶುಲ್ಕಗಳ ವಸೂಲಿ ಆರ್ಸಿಲ್‌ನ ಹಕ್ಕಿಗೆ ಒಳಪಟ್ಟಿರುತ್ತವೆ ಎಂದು ನಿರ್ದಿಷ್ಟವಾಗಿ ಸಾಲಗಾರರಿಗೆ / ಗ್ಯಾರಂಟರ್(ಗಳಿಗೆ) / ಮಾರ್ಟ್‌ಗೆಜರ್(ಗಳಿಗೆ) ಮತ್ತು ಸಾರ್ವಜನಿಕರಿಗೆ ಈ ಮೂಲಕ ಎಚ್ಚರಿಕೆ ಕೊಡಲಾಗುತ್ತಿದೆ

ಕೆಳಗೆ ಹೇಳಿರುವ ಸೆಕ್ಯುರಿಟಿ ಅಸೆಟ್‌ಗಳನ್ನು ರಿಡೀಮ್ ಮಾಡಿಕೊಳ್ಳಲು ಲಭ್ಯವಿರುವ ಸಮಯದ ಬಗ್ಗೆ ಸದರಿ ಆ್ಯಕ್ಟ್‌ನ ಸೆಕ್ಷನ್ 13ರ ಸಬ್-ಸೆಕ್ಷನ್ (8)ರ ಪ್ರಾವಧಾನಗಳ ಕಡೆಗೆ ಸಾಲಗಾರರ / ಗ್ಯಾರಂಟರ್‌ಗಳ / ಮಾರ್ಟ್‌ಗೆಜರ್‌ಗಳ ಗಮನವನ್ನು ಸೆಳೆಯಲಾಗುತ್ತಿದೆ.

ಸ್ಥಿರಾಸ್ತಿಯ ವರ್ಣನೆ

ವಂದನಾ ಕುಮಾರ್ ಥಾಕೂರ್ ಇವರ ಮಾಲಕತ್ವದಲ್ಲಿರುವ ಸ್ವತ್ತು

ಮಾರಸೂರು ಗ್ರಾಮ, ಕಸಾಬಾ ಹೋಬಳಿ, ಆನೆಕಲ್ ತಾಲೂಕು, ಬೆಂಗಳೂರು ಅರ್ಬನ್ ಜಿಲ್ಲೆ, ಬೆಂಗಳೂರು-562106, ಕರ್ನಾಟಕ ಇಲ್ಲಿ ಸರ್ವೆ ನಂ.128/3 ಹೊಂದಿರುವ ಪರಿವರ್ತಿತ ಜಮೀನಿನಿಂದ ತಯಾರಿಸಾಲದ ಸೈಟ್ ನಂ.543 ಅನ್ನು ಹೊಂದಿರುವ ಲೇಔಟ್‌ನಲ್ಲಿ ''ಜಿ.ಆರ್.ಕೊಕೊ ನೆಸ್ಟ್ ಫೇಸ್-III''ನಲ್ಲಿನ ಆ ಎಲ್ಲಾ ತುಂಡು ಮತ್ತು ಪಾರ್ಸೆಲ್, 28 ಗುಂಟೆಗಳಷ್ಟು ಮಾಪನ ಹೊಂದಿದೆ.

ಈ ಕೆಳಗಿನಂತೆ ಸುತ್ತುವರಿಯಲ್ಪಟ್ಟಿದೆ:

ಪೂರ್ವ : ಪ್ಲಾಟ್ ನಂ. 542 | ಪಶ್ಚಿಮ : ಪ್ಲಾಟ್ ನಂ. 544

ಉತ್ತರ : ರಸ್ತೆ | ದಕ್ಷಿಣ : ಪ್ಲಾಟ್ ನಂ. 560

ಅಧಿಕಾರವಿರುವ ಅಧಿಕಾರಿ
ಅಸೆಟ್ ರೀಕನ್‌ಸ್ಟ್ರಕ್ಷನ್ ಕಂಪನಿ (ಇಂಡಿಯ) ಲಿಮಿಟೆಡ್
(ಆರ್ಸಿಲ್-ಸಿಪಿಎಸ್- IV, ಟ್ರಸ್ಟ್‌ನ ಟ್ರಸ್ಟಿ)

ದಿನಾಂಕ : 07.03.2026
ಸ್ಥಳ : ಬೆಂಗಳೂರು

ಸಾಮೂಹಿಕ ಅತ್ಯಾಚಾರ ಪ್ರಕರಣ ಸಿಸಿ ಟಿವಿಯಿಂದ ರಹಸ್ಯ ಬಯಲು

ಬೆಂಗಳೂರು: ನಗರದ ಅಮೃತಹಳ್ಳಿಯ ವಿಲ್ಲಾದಲ್ಲಿ ಕಾಲೇಜು ಯುವತಿ ಮೇಲೆ ಗ್ಯಾಂಗ್ ರೇಪ್ ಪ್ರಕರಣ ಸಂಬಂಧ ಪೊಲೀಸ್ ತನಿಖೆ ವೇಳೆ ಬಗೆದಷ್ಟು ಸ್ಫೋಟಕ ವಿಚಾರಗಳು ಬಯಲಾಗುತ್ತಲೇ ಇವೆ. ಬೆಂಗಳೂರಿನ ಬೇರೆ ಬೇರೆ ಕಡೆ, ಗೋವಾ ಮತ್ತು ವಿದೇಶದಲ್ಲಿಯೂ ಆರೋಪಿಗಳು ಪಾರ್ಟಿ ನಡೆಸಿದ್ದು, ಈ ವೇಳೆ ಡ್ರಗ್ಸ್ ಬಳಸಿರೋದು ದೃಢಪಟ್ಟಿದೆ. ಆರೋಪಿಗಳ ಮೆಡಿಕಲ್ ಟೆಸ್ಟ್ ವರದಿಯೂ ಪಾಸಿಟಿವ್ ಬಂದಿದ್ದು, ಗೋವಾದಿಂದ ಇವರಿಗೆ ಮಾದಕ ವಸ್ತು ಸರಬರಾಜಾಗಿತ್ತು ಎಂಬ ವಿಷಯವೂ ಪೊಲೀಸರಿಗೆ ಗೊತ್ತಾಗಿದೆ.

ಗ್ಯಾಂಗ್‌ರೇಪ್ ನಡೆದಿರುವ ಅಮೃತಹಳ್ಳಿಯ ವಿಲ್ಲಾಕ್ಕೆ ಸಂಬಂಧಿಸಿದ ಸಿಸಿಟಿವಿ ದೃಶ್ಯಗಳನ್ನು ಪೊಲೀಸರು ಪತ್ತೆ ಮಾಡಿದ್ದು, ಡಿವಿಆರ್ ವಶಕ್ಕೆ ಪಡೆದಿದ್ದಾರೆ. ಆರೋಪಿಗಳು ಪಾರ್ಟಿಯಲ್ಲೇ ಇದ್ದರು ಎಂಬುದು ದೃಢಪಟ್ಟಿದ್ದು, ಸದ್ಯ ಆರೋಪಿಗಳ ಚಹರೆ ಮ್ಯಾಚ್ ಮಾಡಲು ಸಿಸಿಟಿವಿ ದೃಶ್ಯಾವಳಿಗಳನ್ನು ಎಫ್‌ಎಸ್‌ಎಲ್‌ಗೆ ರವಾನೆ ಮಾಡಲಾಗಿದೆ. ಇನ್ನು ಈ ವಿಲ್ಲಾದಲ್ಲಿ ಎಷ್ಟು ದಿನ ಪಾರ್ಟಿ ನಡೆದಿತ್ತು?. ಪಾರ್ಟಿಗೆ ಯಾರು ಯಾರು ಬಂದಿದ್ದರು?. ಎಂಬ ಬಗ್ಗೆಯೂ ತನಿಖೆ ನಡೆದಿದೆ. ಗುತ್ತಿಗೆದಾರನಾಗಿದ್ದ ಆರೋಪಿ ಅನಿರುದ್ ಪಾರ್ಟಿಗೆ ತಗಲುವ ವೆಚ್ಚವನ್ನು ಭರಿಸಿದ್ದ. ಆತನೇ ವಿಲ್ಲಾ ಬುಕ್ ಮಾಡಿದ್ದ ಎಂಬುದು ಪತ್ತೆಯಾಗಿರುವ ಹಿನ್ನೆಲೆ ಆತ ಈ ಹಿಂದೆ ಯಾವೆಲ್ಲ ವಿಲ್ಲಾಗಳನ್ನು ಬುಕ್ ಮಾಡಿದ್ದ ಎಂಬ ಪರಿಶೀಲನೆಗೆ ಖಾಕಿ ಮುಂದಾಗಿದೆ. ಆರೋಪಿಗಳನ್ನು ಮತ್ತೆ ಐದು ದಿನ ಪೊಲೀಸ್ ಕಸ್ಟಡಿಗೆ ಪಡೆದು ತನಿಖೆ ನಡೆಸುತ್ತಿದ್ದು, ಆರೋಪಿಗಳ ಆದಾಯದ ಮೂಲ ಪತ್ತೆಗೂ ಪೊಲೀಸರು ಮುಂದಾಗಿದ್ದಾರೆ. ಡಿಕ್ಸನ್ ಮತ್ತು ಶ್ರವಣ್ ಹುಡುಗಿಯರನ್ನು ಪಟಾಯಿಸಿ ಪಾರ್ಟಿಗೆ ಕರೆಸುತ್ತಿದ್ದರು. ಇವರಿಬ್ಬರಿಗೂ ಕಾಲೇಜು ಹುಡುಗಿಯರ ಪಟಾಯಿಸಲು ಖರ್ಚಾಗುವ ಹಣವನ್ನು ನಿಖಿಲ್ ಮತ್ತು ಅನಿರುದ್ ನೀಡುತ್ತಿದ್ದರು. ಬಳಿಕ ಯುವತಿಯರನ್ನು ವಿಲ್ಲಾಗೆ ಕರೆತಂದು ಡ್ರಗ್ಸ್ ಪಾರ್ಟಿ ಆಯೋಜಿಸುತ್ತಿದ್ದರು. ಗೋವಾದಿಂದ ಎಕ್ಸ್‌ಟಸಿ ಮಾತ್ರೆಗಳನ್ನು ತರಿಸಿಕೊಂಡು, ಅವುಗಳನ್ನು ಯುವತಿಯರಿಗೆ ನೀಡಿ ಮತ್ತು ಬರುವಂತೆ ಮಾಡುತ್ತಿದ್ದರು. ಅರೆ ಪ್ರಜ್ಞಾ ಸ್ಥಿತಿಯಲ್ಲಿದ್ದ ಯುವತಿಯರ ಮೇಲೆ ಈ ಗ್ಯಾಂಗ್ ಅತ್ಯಾಚಾರ ಎಸಗುತ್ತಿತ್ತು ಎಂದು ತಿಳಿದುಬಂದಿದೆ. ಹೀಗಾಗಿ ಹೆಚ್ಚಿನ ತನಿಖೆಗೆ ಪೊಲೀಸರು ಮುಂದಾಗಿದ್ದಾರೆ.

ಮಾರಕಾಸ್ತ್ರಗಳಿಂದ 68 ಬಾರಿ ಕೊಚ್ಚಿ ಕೊಲೆಗೈದ ಪುಂಡರು

ಬೆಂಗಳೂರು: ವ್ಯಕ್ತಿಯೋರ್ವನ ಮೇಲೆ ಹಾಡಹಗಲೇ ನಡುರಸ್ತೆಯಲ್ಲಿ ಯುವಕರು ಮಾರಕಾಸ್ತ್ರಗಳಿಂದ ದಾಳಿ ನಡೆಸಿರುವ ಆಘಾತಕಾರಿ ಘಟನೆ ಮಾಗಡಿ ರಸ್ತೆ ಪೊಲೀಸ್ ಠಾಣಾ ವ್ಯಾಪ್ತಿಯ ಅಗ್ರಹಾರ ದಾಸರಹಳ್ಳಿಯಲ್ಲಿ ನಡೆದಿದೆ.

ಮಾ. 9ರಂದು ನಡೆದಿರುವ ಘಟನೆ ತಡವಾಗಿ ಬೆಳಕಿಗೆ ಬಂದಿದ್ದು, ಪೊಲೀಸರ ಭಯವೇ ಇಲ್ಲದಂತೆ ದುಷ್ಕರ್ಮಿಗಳು ಅಟ್ಟಹಾಸ ಮೆರೆದಿದ್ದಾರೆ. ಸಂತೋಷ್ ಎಂಬಾತನ ಮೇಲೆ ಡೆಡ್ಲಿ ಅಟ್ಯಾಕ್ ನಡೆದಿದ್ದು, ಬರೋಬ್ಬರಿ 68 ಬಾರಿ ಮಾರಕಾಸ್ತ್ರಗಳಿಂದ ದಾಳಿ ನಡೆದಿದೆ. ದಾಳಿ ನಡೆಸಿರುವುದು ಶರತ್ ಮತ್ತು ಗ್ಯಾಂಗ್ ಎಂಬುದು ಗೊತ್ತಾಗಿದ್ದು, ಅಟ್ಯಾಕ್ ಬಳಿಕ ಆರೋಪಿಗಳು ಡ್ಯಾನ್ಸ್ ಮಾಡಿ ವಿಕೃತಿ ಮೆರೆದಿದ್ದಾರೆ.

ಇನ್ನು ಹಲ್ಲೆಗೊಳಗಾದ ಸಂತೋಷ್ ಮೇಲೆ ಕೊಲೆ ಆರೋಪವಿತ್ತು. ಕಾರು ಓಡಿಸುವ ವಿಚಾರಕ್ಕೆ ಸ್ನೇಹಿತ ಮೋಹನ್ ಎಂಬಾತನ ಜತೆಗೆ ಸಂತೋಷ್ ಬೆಂಗಳೂರಿನಲ್ಲಿ ಗಲಾಟೆ ಮಾಡಿಕೊಂಡಿದ್ದ. ಬಳಿಕ ಮಂಡ್ಯದಲ್ಲಿ ಕುಡಿದು ಕೊಳ್ಳೇಗಾಲಕ್ಕೆ ಹೋಗಿದ್ದ ವೇಳೆ ಮೋಹನ್ ಮೇಲೆ ದಾಳಿ ಮಾಡಿದ್ದ ಸಂತೋಷ್ ಆತನನ್ನು ಕೊಲೆ ಮಾಡಿದ್ದ. 2024ರಲ್ಲಿ ಈ ಘಟನೆ ನಡೆದಿದೆ ಎನ್ನಲಾಗಿದ್ದು, ಮೋಹನನ್ನು ಕಾರಿನಲ್ಲಿ ಕೂರಿಸಿ ಭಯಗೊಂಡ ಸಂತೋಷ್ ಪರಾರಿಯಾಗಿದ್ದ. ಕೊಳ್ಳೇಗಾಲ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಮೊದಲಿಗೆ ಈ ಬಗ್ಗೆ ಯುಡಿಆರ್ ಆಗಿತ್ತು. ನಂತರ ತನಿಖೆ ವೇಳೆ ಇದು ಕೊಲೆ ಎಂದು ಗೊತ್ತಾಗಿ ಪ್ರಕರಣ ದಾಖಲಿಸಿದ್ದ ಪೊಲೀಸರು ಆರೋಪಿಯನ್ನು ಬಂಧಿಸಿದ್ದರು. ಕೊಲೆ ಪ್ರಕರಣದಲ್ಲಿ ಜೈಲು ಸೇರಿದ್ದ ಸಂತೋಷ್ 4 ತಿಂಗಳ ಹಿಂದೆಯಷ್ಟೇ ಜಾಮೀನಿನ ಮೇಲೆ ಹೊರ ಬಂದಿದ್ದ. ಹೀಗಾಗಿ ಹಳೇ ದ್ವೇಷದ ಹಿನ್ನೆಲೆ ಈತನಿಂದ ಕೊಲೆಯಾಗಿದ್ದ ಮೋಹನ್‌ನ ಸಹೋದರ ಶರತ್ ತಂಡಕಟ್ಟಿಕೊಂಡು ಬಂದು ಸಂತೋಷ್ ಮೇಲೆ ದಾಳಿ ಮಾಡಿದ್ದಾನೆ.

ರೇಣುಕಾಸ್ವಾಮಿ ಕೊಲೆ: ವಿನಯ್ ವಿರುದ್ಧದ ವಾರೆಂಟ್ ವಾಪಸ್

ಬೆಂಗಳೂರು: ನಟ ದರ್ಶನ್ ಆರೋಪಿಯಾಗಿರುವ ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿನ 10ನೇ ಆರೋಪಿ ವಿನಯ್ ವಿರುದ್ಧ ಜಾರಿ ಮಾಡಲಾಗಿದ್ದ ಜಾಮೀನು ರಹಿತ ಬಂಧನ ವಾರೆಂಟ್ ಅನ್ನು ಬೆಂಗಳೂರಿನ ಸತ್ರ ನ್ಯಾಯಾಲಯ ಮಂಗಳವಾರ ಹಿಂಪಡೆದುಕೊಂಡಿದೆ.

ರೇಣುಕಾಸ್ವಾಮಿ ಕೊಲೆ ಪ್ರಕರಣ ವಿಚಾರಣೆಯನ್ನು ಬೆಂಗಳೂರಿನ 57ನೇ ಸಿಟಿ ಸಿವಿಲ್ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ಐ.ಜಿ.ನಾಯಕ್ ಅವರು ಮುಂದುವರಿಸಿದರು.

ವಿಚಾರಣೆಗೆ ವಿನಯ್ ಮತ್ತವರ ಪರ ವಕೀಲರು ಹಾಜರಾಗಿದ್ದರು. ವಕೀಲರು ಮೆಮೊ ಸಲ್ಲಿಸಿ ವಿನಯ್ ವಿರುದ್ಧದ ಜಾಮೀನು ರಹಿತ ಬಂಧನ ವಾರೆಂಟ್ ಅನ್ನು ಹಿಂಪಡೆದುಕೊಳ್ಳುವಂತೆ ಮನವಿ ಮಾಡಿದರು. ಈ ಮನವಿ ನ್ಯಾಯಾಲಯ ಪುರಸ್ಕರಿಸಿ ವಿಚಾರಣೆಯನ್ನು ಮಾರ್ಚ್ 16ಕ್ಕೆ ಮುಂದೂಡಿತು. ಜತೆಗೆ, ಮಾರ್ಚ್ 16ರವರೆಗೆ ದರ್ಶನ್, ನಟಿ ಪವಿತ್ರಾಗೌಡ ಸೇರಿದಂತೆ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿರುವ ಪ್ರಕರಣದ ಏಳು ಆರೋಪಿಗಳ ನ್ಯಾಯಾಂಗ ಬಂಧನ ಅವಧಿಯನ್ನು ನ್ಯಾಯಾಲಯ ವಿಸ್ತರಿಸಿತು. ಇನ್ನೂ ಪ್ರಕರಣ ಸಂಬಂಧ ದರ್ಶನ್ ಸೇರಿ ಇನ್ನಿತರ ಆರೋಪಿಗಳಿಂದ ವಶಪಡಿಸಿಕೊಂಡ ಹಣವನ್ನು ತೆರೆದ ನ್ಯಾಯಾಲಯದಲ್ಲಿ ಮಂಗಳವಾರ ಯಂತ್ರದ ನೆರವಿಂದ ಲೆಕ್ಕ ಹಾಕಲಾಯಿತು. ಒಂದು ಕಟ್ಟಿನಲ್ಲಿ ಆರು ಸಾವಿರ ನೋಟುಗಳಿದ್ದವು. ರೇಣುಕಾಸ್ವಾಮಿ ಕೊಲೆ ಪ್ರಕರಣವು ಸೋಮವಾರ ಬೆಳಗ್ಗೆ ವಿಚಾರಣೆಗೆ ಬಂದಾಗ ವಿನಯ್ ತಮ್ಮ ಪರ ವಕೀಲರಾಗಿದ್ದ ನಟರಾಜ್ ಅನ್ನು ಬದಲಿಸುವುದಾಗಿ ನ್ಯಾಯಾಲಯಕ್ಕೆ ತಿಳಿಸಿದ್ದರು. ಈ ವಿಚಾರದಲ್ಲಿ ಕೋರ್ಟ್ ಕಾರಿಡಾರ್‌ನಲ್ಲಿ ನಟರಾಜ್ ಮತ್ತು ವಿನಯ್ ನಡುವೆ ವಾಗ್ವಾದ ನಡೆದಿತ್ತು. ಮಧ್ಯಾಹ್ನದ ಕಲಾಪದಲ್ಲಿ ಪ್ರಕರಣವನ್ನು ವಿಚಾರಣೆಗೆ ಕರೆದಾಗ, ವಿನಯ್ ಗೈರಾಗಿದ್ದರು. ಇದರಿಂದ ಆತನ ವಿರುದ್ಧ ನ್ಯಾಯಾಲಯ ಜಾಮೀನು ರಹಿತ ಬಂಧನ ವಾರೆಂಟ್ ಜಾರಿ ಮಾಡಿತ್ತು.

ಕೆನರಾ ಬ್ಯಾಂಕ್ Canara Bank
SyndicateBank
(ಭಾರತ ಸರ್ಕಾರದ ಒಂದು ಉದ್ಯಮ)
ಪ್ರಧಾನ ಕಛೇರಿ: ಬೆಂಗಳೂರು

ಎಆರ್‌ಎಂ-1 ಶಾಖೆ
2ನೇ ಮಹಡಿ, ನಂ.86, ಸ್ಪೆನ್ಸರ್ ಟವರ್, ಎಂ.ಜಿ. ರಸ್ತೆ, ಬೆಂಗಳೂರು-560001. ದೂ: 080-25310066,
ಇ-ಮೇಲ್: cb2366@canarabank.com

ಇ-ಹರಾಜು ಮಾರಾಟ ಪ್ರಕಟಣೆ

ಸಾಮಾನ್ಯವಾಗಿ ಸಾರ್ವಜನಿಕರಿಗೆ, ಸಾಲಗಾರರು ಮತ್ತು ಜಾಮೀನುದಾರರಿಗೆ ಈ ಸೂಚನೆ ಮೂಲಕ ತಿಳಿಸುವುದೇನೆಂದರೆ ಭದ್ರತಾ ಸಾಲದಾತರಿಗೆ ಈ ಕೆಳಗೆ ವಿವರಿಸಿದ ಅಡಮಾನಾದ/ವಿಧಿಸಿದ ಸ್ಥಿರಾಸ್ತಿಯನ್ನು ಅಧಿಕೃತ ಅಧಿಕಾರಿ, **ಕೆನರಾ ಬ್ಯಾಂಕ್, ಎಆರ್‌ಎಂ- 1 ಶಾಖೆ, ಬೆಂಗಳೂರು** ರವರು **ಭೌತಿಕವಾಗಿ** ಸ್ವಾಧೀನಪಡಿಸಿಕೊಂಡಿರುತ್ತಾರೆ ಮತ್ತು ಸ್ವತ್ತನ್ನು **"ಎಲ್ಲಿ ಏನಿದೇಯೋ ಹಾಗೆ", "ಹೇಗಿದೆಯೋ ಹಾಗೆ", "ಏನೇ ಇದ್ದರೂ",** ಆಧಾರದಲ್ಲಿ ಸಾಲ ವಸೂಲಾತಿಗಾಗಿ ಪ್ರೊವಿಜೊ ನಿಯಮ 8(6)ರ ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002ರ ಸೆಕ್ಯೂರಿಟೈಜೇಷನ್ ಆಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸ್ಸೆಟ್ಸ್ ಆಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಆಕ್ಟ್ 2002ರ ಅಡಿಯಲ್ಲಿ ಇ-ಹರಾಜು ಮೂಲಕ ಮಾರಾಟ ಮಾಡಲಾಗುವುದು.

ಇ-ಹರಾಜು ಮತ್ತು ಡಿಜಿಟಲ್ ಸಿಗ್ನೇಚರ್‌ಗೆ ಸಂಬಂಧಪಟ್ಟ ವಿವರಗಳಿಗೆ ಸೇವಾ ಪೂರೈಕೆದಾರರಾದ **M/s PSB Alliance (https://baanknet.com/), E-mail: support.ebkray@psballiance.com, Helpdesk Number : 8291220220, Website: https://baanknet.com/** ಸಂಪರ್ಕಿಸಬಹುದು.

ಅರ್ನೆಸ್ಟ್ ಹಣವನ್ನು **M/s PSB Alliance Private Limited (https://baanknet.com/)** ಪೋರ್ಟಲ್‌ನ ಇ-ವ್ಯಾಲೆಟ್ ಮೂಲಕ ನೇರವಾಗಿ ಅಥವಾ ಚಲನ್ ಅನ್ನು ರಚಿಸುವ ಮುಖಾಂತರ RTGS/NEFT ಮೂಲಕ ಖಾತೆಯ ವಿವರಗಳಲ್ಲಿ ನಮೂದಿಸಿರುವ ಖಾತೆ ವಿವರಗಳ ಪ್ರಕಾರ ಠೇವಣಿ ಮಾಡಬೇಕು. (ರೂ. ಲಕ್ಷಗಳಲ್ಲಿ)

ಲಾಟ್ ನಂ.	ಸಾಲಗಾರರು / ಜಾಮೀನುದಾರರು / ಅಡಮಾನದಾರರ ಹೆಸರು ಮತ್ತು ವಿಳಾಸ	ಸ್ಥಿರಾಸ್ತಿಗಳ ವಿವರಣೆ	(1) ಒಟ್ಟು ಬಾಕಿ ಮೊತ್ತ (2) ಹರಾಜಿನ ದಿನಾಂಕ & ಸಮಯ	ಎ. ಮೀಸಲು ಬೆಲೆ ಬಿ. ಇಎಂಡಿ ಸಿ. ಬಿಡ್ ಹೆಚ್ಚಳ ಮೊತ್ತ	ಎ.ಆಸ್ತಿ ಪರಿಶೀಲನಾ ದಿನಾಂಕ ಮತ್ತು ಸ್ಥಳ ಬಿ.ಇಎಂಡಿ ಠೇವಣಿ ದಿನಾಂಕ
1	(1) **M/s Pebbalio Concrete Products** ಇದನ್ನು ಪ್ರತಿನಿಧಿಸುವ ಪಾಲುದಾರರು (1) ಶ್ರೀ ಶ್ರೀಧರ್ ಆರ್, (2) ಶ್ರೀ ಉಲಗನಾಥನ್ ಆರ್ ಮತ್ತು ಶ್ರೀ ವೆಂಕಟೇಶ್ ಆರ್, ಸರ್ವೆ ನಂ.10 ಮತ್ತು 11, ಗಿಡ್ಡೇನಹಳ್ಳಿ, ಗ್ರಾಮ ಅತ್ತಿಬೆಲೆ, ಆನೇಕಲ್ ತಾಲ್ಲೂಕು, ಆಪ್ಲಿಕಾಮ್ ಪಕ್ಕದಲ್ಲಿ, ಬೆಂಗಳೂರು-560068. (2) **M/s. Pippali Creative Solutions Pvt Ltd,** ಇದನ್ನು ಪ್ರತಿನಿಧಿಸುವವರು (1) ಶ್ರೀ ಶ್ರೀಧರ್ ಆರ್ ಮತ್ತು (2) ಶ್ರೀ ಉಲಗನಾಥನ್ ಆರ್, ನಂ.324/1, ಹೊಸೂರು ರಸ್ತೆ, ಮಡಿವಾಳ, ಬೆಂಗಳೂರು-560068. (3) ಶ್ರೀಧರ್ ಆರ್, ನಂ.2, 4ನೇ ಎ ಕ್ರಾಸ್, ಟ್ಯಾಂಕ್ ಶೋರ್ ರಸ್ತೆ, ಬಿಟಿಎಂ ಲಾಔಟ್, ಬೆಂಗಳೂರು-560076. (4) ಉಲಗನಾಥನ್ ಆರ್ ಬಿನ್ ಲೇಟ್ ರಂಗನಾಥ, (5) ವೆಂಕಟೇಶ್ ಆರ್ ಬಿನ್ ಲೇಟ್ ರಂಗನಾಥ, (6) ವಿಜಯ್ ಕುಮಾರ್ ಆರ್ (ಸಿಬಿಎಸ್ ಪ್ರಕಾರ) ಬಿನ್ ಲೇಟ್ ರಂಗನಾಥ, ಇವರೆಲ್ಲರ ವಿಳಾಸ: ನಂ.2, 4ನೇ ಎ ಕ್ರಾಸ್, ಟ್ಯಾಂಕ್ ಶೋರ್ ರಸ್ತೆ, ಬಿಟಿಎಂ ಲೇಔಟ್, 2ನೇ ಹಂತ, ಬೆಂಗಳೂರು-560076. (7) ಶ್ರೀ ಆರ್ ಪ್ರಭಾಕರ್, (8) ಶ್ರೀ ಆರ್ ಚಂದ್ರಶೇಖರ್ ಬಿನ್ ಲೇಟ್ ರಂಗನಾಥ (9) ಶ್ರೀಮತಿ ಆರ್ ಕೌಸಲ್ಯ D/o ಲೇಟ್ ರಂಗನಾಥ, ಇವರೆಲ್ಲರ ವಿಳಾಸ: ಯಶೋರಂಗ ನಿಲಯ, 4ನೇ ಎ ಕ್ರಾಸ್, ಟ್ಯಾಂಕ್ ಶೋರ್ ರಸ್ತೆ, ಬಿಟಿಎಂ ಲೇಔಟ್ 2ನೇ ಹಂತ, ಬೆಂಗಳೂರು-560076. (6ಎ) ವಿಜಯ್ ಕುಮಾರ್ ಆರ್ ಬಿನ್ ಲೇಟ್ ರಂಗನಾಥ, ಸರ್ವೆ ನಂ.10 & 11, ಗಿಡ್ಡೇನಹಳ್ಳಿ (ಗ್ರಾಮ), ಅತ್ತಿಬೆಲೆ ಕೈಗಾರಿಕಾ ಪ್ರದೇಶ, ಆನೇಕಲ್ ತಾಲ್ಲೂಕು, ಬೆಂಗಳೂರು-562107 (ಇಮೇಲ್ ದಿನಾಂಕ 05.03.2026 ರ ಪ್ರಕಾರ)	ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಆಸ್ತಿಯ ಹಳೆ ನಂ.324/2, ಹೊಸ ನಂ.132, ಪ್ರಸ್ತುತ ಬಿಬಿಎಂಪಿ ಪಿಐಡಿ ನಂ.66-1-132, ಈ ಆಸ್ತಿಯು ಹೊಸೂರು ರಸ್ತೆ, ಮಡಿವಾಳ 1ನೇ ಹಂತ, ಬಿಟಿಎಂ ಲೇಔಟ್, ಬೆಂಗಳೂರು-560068ರಲ್ಲಿದೆ. ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 70 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ: 25 ಅಡಿ (ಒಟ್ಟು ವಿಸ್ತೀರ್ಣ 1750 ಚದರ ಅಡಿ) ಜೊತೆಗೆ ನಿರ್ಮಿತ ಕಟ್ಟಡವನ್ನೊಳಗೊಂಡಿದೆ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ನಿವೇಶನ ನಂ.85, ಉತ್ತರಕ್ಕೆ: ನಿವೇಶನ ನಂ.111, ದಕ್ಷಿಣಕ್ಕೆ: ನಿವೇಶನ ನಂ.109.	ರೂ. 73,74,557.73 ಜೊತೆಗೆ ದಿನಾಂಕ: 09.03.2026 ರಿಂದ ಬಡ್ಡಿ ಮತ್ತು ಇತರೆ ಖರ್ಚು ವೆಚ್ಚಗಳು 27.03.2026 ಬೆಳಿಗ್ಗೆ 10.00 ರಿಂದ 11.00 ರವರೆಗೆ	ಎ) ರೂ. 450.00 ಬಿ) ರೂ. 45.00 ಸಿ) ರೂ. 5.00	ಎ) 20.03.2026 ಬೆಳಿಗ್ಗೆ 10.00 ರಿಂದ ಮಧ್ಯಾಹ್ನ 4.00 ರವರೆಗೆ ಬಿ) 26.03.2026 ಸಂಜೆ 5.00 ಗಂಟೆ
2	(1) ಶ್ರೀ ಸಂಜೇಶ್ ಪರಸ್ಮಲ್ ಶಾ ಬಿನ್ ಶ್ರೀ ಪರಸ್ಮಲ್ ಶಾ (2) ಶ್ರೀಮತಿ ಆಶಾ ಶಾ ಕೋಂ ಶ್ರೀ. ಸಂಜೇಶ್ ಪರಸ್ಮಲ್ ಶಾ, ಇವರಿಬ್ಬರ ವಿಳಾಸ: ನಂ.15, ಚಿಕ್ಕಣ್ಣಮ ದೇವಸ್ಥಾನದ ಬೀದಿ, ಕಬ್ಬನ್‌ಪೇಟೆ ಕ್ರಾಸ್, ಜೋರಿಪೇಟೆ, ಬೆಂಗಳೂರು-560002. (3) ಶ್ರೀಮತಿ ಇಂದಿರಾ ದೇವಿ ಶಾ ಕೋಂ ಪರಸ್ಮಲ್ ಶಾ, ನಂ.10, 9ನೇ ಕ್ರಾಸ್, ಕಬ್ಬನ್‌ಪೇಟೆ, ಬೆಂಗಳೂರು-560002.	ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ವಾಸಯೋಗ್ಯ ಆಸ್ತಿಯ ಭೂಮಿಯು ಸರ್ವೆ ನಂ. 31/1 ರಲ್ಲಿ ರೂಪುಗೊಂಡಿದ್ದು, ಹಿಂದಿನ ದೇವಟಿಗೆ ರಾಮನಹಳ್ಳಿ ಗ್ರಾಮ, ಕೆಂಗೇರಿ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಪ್ರಸ್ತುತ ಬಿಬಿಎಂಪಿ ವ್ಯಾಪ್ತಿಯಲ್ಲಿದ್ದು, ಮುನಿಸಿಪಲ್ ನಂ. 14, ಪಿಐಡಿ ನಂ. 41-22-14, ಹೊಸ ಪಿಐಡಿ ನಂ. 158-ಡಬ್ಲ್ಯೂ0046-3, ಈ ಆಸ್ತಿಯು ದೀಪಾಂಜಲಿ ನಗರ ಲೇಔಟ್, ಮುನಿಸಿಪಲ್ ವಾರ್ಡ್-41-ಗಾಳಿ ಆಂಜನೇಯಸ್ವಾಮಿ ದೇವಸ್ಥಾನ"ದ ವ್ಯಾಪ್ತಿಯಲ್ಲಿದೆ. ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 40 ಅಡಿ, ಉತ್ತರದಿಂದ ದಕ್ಷಿಣಕ್ಕೆ: 60 ಅಡಿ ಮತ್ತು ಚಕ್ಕುಬಂದಿ : ಪೂರ್ವಕ್ಕೆ :ನಿವೇಶನ ನಂ. 15, ಪಶ್ಚಿಮಕ್ಕೆ : ನಿವೇಶನ ನಂ. 13, ಉತ್ತರಕ್ಕೆ : ರೈಲ್ವೆ ಆಸ್ತಿ, ದಕ್ಷಿಣಕ್ಕೆ : ರಸ್ತೆ. **Google Co-ordinate: 12.951908, 77.531808**	ರೂ. 1,75,76,143.65 ಜೊತೆಗೆ ದಿನಾಂಕ: 08.03.2026 ರಿಂದ ಬಡ್ಡಿ ಮತ್ತು ಇತರೆ ಖರ್ಚು ವೆಚ್ಚಗಳು 27.03.2026 ಬೆಳಿಗ್ಗೆ 10.30 ರಿಂದ 11.00 ರವರೆಗೆ	ಎ) ₹.81.00 ಲಕ್ಷಗಳು ಬಿ) ₹.8.10 ಲಕ್ಷಗಳು ಸಿ) ₹.1.00 ಲಕ್ಷಗಳು	ಎ) 18.03.2026 ಬೆಳಿಗ್ಗೆ 10.00 ರಿಂದ ಸಂಜೆ 2.00 ರವರೆಗೆ ಬಿ) 26.03.2026 ಸಂಜೆ 5.00 ಗಂಟೆ

ಎನ್ಕಂಬರೆನ್ಸ್ ಯಾವುದಾದರೂ ಇದ್ದಲ್ಲಿ : ಬ್ಯಾಂಕಿನ ಗಮನಕ್ಕೆ ಬಂದಿಲ್ಲ.

ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ, 'ಇ-ಹರಾಜು'ಲಿಂಕ್ ಪ್ರೋವೈಡೆಡ್ ಕೆನರಾ ಬ್ಯಾಂಕ್‌ರವರ ವೆಬ್‌ಸೈಟ್: **(www.canarabank.com)** ಅಥವಾ **M/s PSB Alliance (https://baanknet.com/)**, ಅಥವಾ ಮುಖ್ಯ ಪ್ರಬಂಧಕರು, ಕೆನರಾ ಬ್ಯಾಂಕ್, ಎಆರ್‌ಎಂ-1 ಶಾಖೆ, ಬೆಂಗಳೂರು ದೂರವಾಣಿ ಸಂಖ್ಯೆ: 6301683293 ಮತ್ತು 9483544116 ಯಾವುದೇ ಕೆಲಸದ ದಿನದಂದು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು.

ದಿನಾಂಕ : 11.03.2026
ಸ್ಥಳ : ಬೆಂಗಳೂರು

ಸಹಿ/- ಅಧಿಕೃತ ಅಧಿಕಾರಿ,
ಕೆನರಾ ಬ್ಯಾಂಕ್

बैंक ऑफ़ बड़ौदा Bank of Baroda

ಬ್ಯಾಂಕ್ ಆಫ್ ಬರೋಡ, ಪ್ರಾದೇಶಿಕ ಕಛೇರಿ, ಬೆಂಗಳೂರು ದಕ್ಷಿಣ
4ನೇ ಮಹಡಿ, ವಿಜಯ ಟವರ್ಸ್, 41/2, ಎಂ.ಜಿ. ರಸ್ತೆ, ಬೆಂಗಳೂರು-560001,
ದೂರವಾಣಿ ಸಂಖ್ಯೆ: 080-25011710, ಇ-ಮೇಲ್: recovery.blrsouth@bankofbaroda.com

SCAN HERE For detailed terms & conditions.

ಇ-ಹರಾಜು ಮಾರಾಟ ಸೂಚನೆ "ಅನುಬಂಧ - IV-A [ನಿಯಮ 6(2) & 8 (6)]

ಇ-ಹರಾಜು ಮಾರಾಟ ಪ್ರಕಟಣೆ ನಿಯಮ 6(2) & 8(6) ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002 ರ ಸೆಕ್ಯೂರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಸ್ಟ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್ 2002 ರಲ್ಲಿ ಸ್ಥಿರಾಸ್ತಿಗಳ ಹರಾಜು ಮಾರಾಟ.

ನಿರ್ದಿಷ್ಟವಾಗಿ ಸಾಲಗಾರರಿಗೆ ಮತ್ತು ಅಡಮಾನುದಾರರಿಗೆ / ಜಾಮೀನುದಾರರಿಗೆ ಹಾಗೂ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ ಸೆಕ್ಯೂರ್ಡ್ ಕ್ರೆಡಿಟರ್‌ಗೆ ಅಡಮಾನ / ಚಾರ್ಜ್ ಮಾಡಿರುವ ಈ ಕೆಳಗೆ ಸೂಚಿಸಿರುವ ಆಸ್ತಿಗಳ ಅಧಿಕೃತ ಅಧಿಕಾರಿ, ಬ್ಯಾಂಕ್ ಆಫ್ ಬರೋಡ, ಬೆಂಗಳೂರು ಇವರು ಸ್ವಾಧೀನಕ್ಕೆ ಪಡೆದುಕೊಂಡಿದ್ದು, **" ಎಲ್ಲಿ ಹೇಗಿದೆಯೋ ಹಾಗೇ" ಎಲ್ಲಿ ಏನಿದೆಯೋ ಹಾಗೇ ಆಧಾರದ ಮೇಲೆ"** ಮಾರಾಟ ಮಾಡಲಾಗುವುದು. ಸಾಲಗಾರರ / ಜಾಮಿನುದಾರರ /ಅಡಮಾನದಾರರ ಆಸ್ತಿಯ ವಿವರ / ಬಾಕಿ ಮೊತ್ತ / ಮೀಸಲು ಬೆಲೆ / ಹರಾಜಿನ ದಿನಾಂಕ ಮತ್ತು ಸಮಯ, ಇಎಂಡಿ ಮತ್ತು ಬಿಡ್ ಗುಣಾಂಕಗಳನ್ನು ಕೆಳಗೆ ವಿವರಿಸಿದೆ.

ಕ್ರ. ಸಂ	ಸಾಲಗಾರರ / ಜಾಮೀನುದಾರರ / ಅಡಮಾನುದಾರ ಹೆಸರು & ವಿಳಾಸ	ತಿಳಿದಿರುವ ನಿರ್ಬಂಧಗಳೊಂದಿಗೆ ಸ್ಥಿರ ಆಸ್ತಿಯ ಸಂಕ್ಷಿಪ್ತ ವಿವರಣೆ, ಋಣಭಾರಗಳು ಯಾವುದಾದರೂ ಬ್ಯಾಂಕಿಗೆ ತಿಳಿದಿದ್ದಲ್ಲಿ	ಎ. ಶಾಖೆಯ ಹೆಸರು ಬಿ. ಖಾತೆ ಸಂಖ್ಯೆ ಸಿ. ಒಟ್ಟು ಬಾಕಿ ಮೊತ್ತ	ಇ-ಹರಾಜಿನ ದಿನಾಂಕ ಮತ್ತು ಸಮಯ	ಎ.ಮೀಸಲು ಬೆಲೆ, ಬಿ.ಇಎಂಡಿ, ಸಿ.ಬಿಡ್ ಗುಣಾಂಕ ಮೊತ್ತ, ಡಿ. ಸ್ವಾಧೀನದ ರೀತಿ	ಆಸ್ತಿ ಪರಿಶೀಲನೆ ದಿನಾಂಕ ಮತ್ತು ಸಮಯ.
1	**ಜಾವಿದ್ ಹುಸೇನ್, ನಂ. 1, 14ನೇ ಕ್ರಾಸ್, ಲಿಂಕ್ ರಸ್ತೆ, ಮಡಿವಾಳ ಹೊಸ ಎಕ್ಸ್‌ಟೆನ್ಷನ್, ಬೆಂಗಳೂರು-560068**	ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ವಾಸಯೋಗ್ಯ ಸ್ವತ್ತಿನ ಪ್ರಸ್ತುತ ಬಿಬಿಎಂಪಿ ಖಾತಾ ನಂ. 655/ಎಲ್-96, ದಿ ಬಿಡಿಎ ಯಿಂದ ರೂಪುಗೊಂಡಿದ್ದು, ಈ ಆಸ್ತಿಯು 3ನೇ ಎ ಮುಖ್ಯರಸ್ತೆ, ವಾರ್ಡ್ ನಂ. 221, 7ನೇ ಸೆಕ್ಟರ್ ಹೆಚ್‌ಎಸ್‌ಆರ್ ಲೇಔಟ್, ಬೆಂಗಳೂರಿನಲ್ಲಿದೆ. ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ : 24.98 ಚದರ ಮೀಟರ್‌ಗಳು, ಮತ್ತು ಉತ್ತರದಿಂದ ದಕ್ಷಿಣಕ್ಕೆ : 15.23 ಮೀಟರ್‌ಗಳು, ಒಟ್ಟು ವಿಸ್ತೀರ್ಣ 380.44 ಚದರ ಮೀಟರ್‌ಗಳು (4095 ಚದರ ಅಡಿ) **LOCATION CO-ORDINATES - 12.914750,77.630667 BAANKNET PROPERTY ID - BARBBTMBANJAWID** ಋಣಭಾರಗಳು ಯಾವುದು ತಿಳಿದಿರುವುದಿಲ್ಲ	ಎ. ಬಿಟಿಎಂ ಲೇಔಟ್ ಬಿ. 29600600001760 ಸಿ. ರೂ.3,59,79,153.90 ದಿನಾಂಕ: 08.03.2026 ರಂದು ಇದ್ದಂತೆ ಬಡ್ಡಿ ಮತ್ತು ಇತರೆ ಖರ್ಚುಗಳು ಇತ್ಯಾದಿ ಸಾಲಗಾರರಿಗೆ ಅನ್ವಯವಾಗುತ್ತದೆ.	15.04.2026 ಮಧ್ಯಾಹ್ನ 2.00 ಗಂಟೆಯಿಂದ ಸಂಜೆ 6.00 ಗಂಟೆಯೊಳಗೆ	ಎ) ರೂ.13,45,50,000.00 ಬಿ) ರೂ. 1,34,55,000.00 ಸಿ) ರೂ.10,00,000,.00 ಡಿ) ಸಾಂಕೇತಿಕ ಸ್ವಾಧೀನ	16.03.2026 ರ ನಂತರ
2	**ಸುಕುಮಾರ್ ಆರ್ ಮತ್ತು ಅಮೃತ ಜಿ ಕುಲಕರ್ಣಿ (ಸಾಲಗಾರರು), ವಿಳಾಸ : 36, 8ನೇ ಮುಖ್ಯ ರಸ್ತೆ, ಪಾಪಯ್ಯ ಗಾರ್ಡನ್ ಬನಶಂಕರಿ 3ನೇ ಹಂತ ಬೆಂಗಳೂರು-560085. ಪೃಥ್ವಿ ರಾಜ್ ಎಸ್ (ಜಾಮೀನುದಾರರು) ವಿಳಾಸ ಸಂಖ್ಯೆ 37, 2ನೇ ಕ್ರಾಸ್, ಜಂಬೂ ಸವಾರಿ ದಿನ್ನೆ ಜೆಪಿ ನಗರ, 8ನೇ ಹಂತ, ಬೆಂಗಳೂರು-560076**	ಹೌಸ್‌ಲಿಸ್ಟ್ ನಂ. 36, ಖಾತಾ ನಂ. 23, ಈ ಆಸ್ತಿಯು 8ನೇ ಮುಖ್ಯರಸ್ತೆ, ಕತ್ರಿಗುಪ್ಪೆ, ಉತ್ತರಹಳ್ಳಿ ಬನಶಂಕರಿ 3ನೇ ಹಂತ, ಬೆಂಗಳೂರಿನಲ್ಲಿದೆ. ಮತ್ತು ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ : 55 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ : 30 ಅಡಿ. **LOCATION CO -ORDINATES - 12.927670,77.559061 BAANKNET PROPERTY ID: BARBJAYANASUKUMAR** ಋಣಭಾರಗಳು ಯಾವುದು ತಿಳಿದಿರುವುದಿಲ್ಲ	ಎ. ಜಯನಗರ ಬಿ. 07640600002828 ಸಿ. ರೂ..1,67,42,783.70 ದಿನಾಂಕ: 08.03.2026 ರಂದು ಇದ್ದಂತೆ ಬಡ್ಡಿ ಮತ್ತು ಇತರೆ ಖರ್ಚುಗಳು ಇತ್ಯಾದಿ ಸಾಲಗಾರರಿಗೆ ಅನ್ವಯವಾಗುತ್ತದೆ.	15.04.2026 ಮಧ್ಯಾಹ್ನ 2.00 ಗಂಟೆಯಿಂದ ಸಂಜೆ 6.00 ಗಂಟೆಯೊಳಗೆ	ಎ) ರೂ.1,78,00,000.00 ಬಿ) ರೂ. 17,80,000.00 ಸಿ) ರೂ.2,00,000.00 ಡಿ) ಸಾಂಕೇತಿಕ ಸ್ವಾಧೀನ	16.03.2026 ರ ನಂತರ
3	**ಸಿ ವಿ ಕಾರ್ಟನ್ಸ್,** ವಿಳಾಸ: ಸಂ. 58/109/2, ರಾಮದೇವರಬೆಟ್ಟ ರಸ್ತೆ, ವಾರ್ಡ್ ನಂ.1, ಬ್ಲಾಕ್ 4, ಚಾಮುಂಡಿಯೂರ ವಿನಾಯಕನಗರ ರಾಮನಗರ ಕರ್ನಾಟಕ 562159 ಇದರ ಪ್ರತಿನಿಧಿಸುವ ಮಾಲೀಕರು ಶ್ರೀಮತಿ.ಶ್ರುತಿ ಕೆ.ಎಸ್. ಕೋಂ ಎ. ರಾಘವೇಂದ್ರ ನಗರ, ವಿನಾಯಕ ನಗರ, ವಾರ್ಡ್ ನಂ.2, ರಾಮನಗರ ಟೌನ್, ಕರ್ನಾಟಕ-562159 **ಕುಸುಮಾ** ಕೋಂ ಅಂಕು ಗೌಡ (ಜಾಮೀನುದಾರರು) ವಿಳಾಸ : 3ನೇ ಕ್ರಾಸ್, ವಿನಾಯಕ ನಗರ, ರಾಮನಗರ ಟೌನ್, ಕರ್ನಾಟಕ-562159.	ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ವಾಸಯೋಗ್ಯ ಸ್ಥಿರಾಸ್ತಿ ಜೊತೆಗೆ ನೆಲಮಹಡಿಯು ನ್ನೊಳಗೊಂಡಿರುವ ಕಟ್ಟಡದ ಹಳೆ ಖಾತಾ ನಂ. 27/281/109/5, ಈ ಆಸ್ತಿಯು ಬ್ಲಾಕ್ ನಂ.6, ವಾರ್ಡ್ ನಂ.1, ವಿನಾಯಕ ನಗರ, ರಾಮನಗರ ಟೌನ್, ರಾಮನಗರ ಜಿಲ್ಲೆಯಲ್ಲಿದೆ. ಸ್ವತ್ತಿನ ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ : 27.43 ಮೀಟರ್‌ಗಳು, ಉತ್ತರದಿಂದ ದಕ್ಷಿಣಕ್ಕೆ : 13.71 ಮೀಟರ್‌ಗಳು, ಒಟ್ಟು 376.25 ಚದರ ಮೀಟರ್‌ಗಳು, ಅಥವಾ ಎಸ್‌ಎಫ್ವೈ 4050.00 ಚದರ ಅಡಿ. **LOCATION CO-ORDINATES - 12.739259,77.295253 BAANKNET PROPERTY ID : BARBVJOXFOCVCARTON** ಋಣಭಾರಗಳು ಯಾವುದು ತಿಳಿದಿರುವುದಿಲ್ಲ	ಎ. ಆಕ್ಸ್‌ಫರ್ಡ್ ಸ್ಕೂಲ್ ಬಿ. 74360500000425 74360600002225 ಸಿ. ರೂ.93,40,758.50 ದಿನಾಂಕ: 08.03.2026 ರಂದು ಇದ್ದಂತೆ ಬಡ್ಡಿ ಮತ್ತು ಇತರೆ ಖರ್ಚುಗಳು ಇತ್ಯಾದಿ ಸಾಲಗಾರರಿಗೆ ಅನ್ವಯವಾಗುತ್ತದೆ.	15.04.2026 ಮಧ್ಯಾಹ್ನ 2.00 ಗಂಟೆಯಿಂದ ಸಂಜೆ 6.00 ಗಂಟೆಯೊಳಗೆ	ಎ) ರೂ.1,52,32,500.00 ಬಿ) ರೂ. 15,23,250.00 ಸಿ) ರೂ.2,00,000.00 ಡಿ) ಸಾಂಕೇತಿಕ ಸ್ವಾಧೀನ	16.03.2026 ರ ನಂತರ
4	**ಮುನಿರಾಜು ಎಂ ಬಿನ್ ಚಿಕ್ಕಮುನಿಯಲ್ಲಪ್ಪ ಮತ್ತು ವೈಶಾಲಿ ಕೆ ಇವರಿಬ್ಬರ ವಿಳಾಸ : ನಂ. 109/43 4ನೇ ಕ್ರಾಸ್ ಕೃಷ್ಣಾ ಲೇಔಟ್** ಬನ್ನೇರುಘಟ್ಟ ರಸ್ತೆ ಹುಳಿಮಾವು ಬೇಗೂರು ರಸ್ತೆ ಬನ್ನೇರುಘಟ್ಟ, ಬೆಂಗಳೂರು 560076.	ವಾಸಯೋಗ್ಯ ಫ್ಲಾಟ್ ನಂ. 14, 3ನೇ ಮಹಡಿ, ಕುಶಿ ಅಪಾರ್ಟ್‌ಮೆಂಟ್ಸ್, ಈ ಆಸ್ತಿಯು ಹೌಸ್‌ಲಿಸ್ಟ್ ನಂ. 46/1, ನಿವೇಶನ ನಂ. 6, ಈ ಆಸ್ತಿಯು ಪುಟ್ಟೇನಹಳ್ಳಿ ಉತ್ತರಹಳ್ಳಿ, ಬೆಂಗಳೂರು-560078 ರಲ್ಲಿದೆ. ಯುಡಿಎಸ್ 425 ಚದರ ಅಡಿ, ಎಸ್‌ಬಿಎ-1650 ಕಾರ್ಪೆಟ್ ಪ್ರದೇಶ – 1155. **LOCATION CO-ORDINATES - 12.896709,77.580283 BAANKNET PROPERTY ID - BARBVJKATHMUNIRAJU** ಋಣಭಾರಗಳು ಯಾವುದು ತಿಳಿದಿರುವುದಿಲ್ಲ	ಎ. ಕತ್ರಿಗುಪ್ಪೆ ಬಿ. .74670600003505 74670600003585 ಸಿ. ರೂ.64,57,295.40 ದಿನಾಂಕ: 08.03.2026 ರಂದು ಇದ್ದಂತೆ ಬಡ್ಡಿ ಮತ್ತು ಇತರೆ ಖರ್ಚುಗಳು ಇತ್ಯಾದಿ ಸಾಲಗಾರರಿಗೆ ಅನ್ವಯವಾಗುತ್ತದೆ.	15.04.2026 ಮಧ್ಯಾಹ್ನ 2.00 ಗಂಟೆಯಿಂದ ಸಂಜೆ 6.00 ಗಂಟೆಯೊಳಗೆ	ಎ) ರೂ.91,80,000.00 ಬಿ) ರೂ. 9,18,000.00 ಸಿ) ರೂ.50,000.00 ಡಿ) ಸಾಂಕೇತಿಕ ಸ್ವಾಧೀನ	16.03.2026 ರ ನಂತರ
5	**ಕಾವೇರಪ್ಪ ವಿಳಾಸ ನಂ. 42 2ನೇ ಕ್ರಾಸ್, ಪಾಂಡುರಂಗ ನಗರ ಅರೆಕೆರೆ ಬೆಂಗಳೂರು 560076, ಭುವನೇಶ್ವರಿ ಕೆ ಆರ್ ವಿಳಾಸ ನಂ. 120 2ನೇ ಕ್ರಾಸ್ ಬಿಳೇಕಹಳ್ಳಿ ಬೆಂಗಳೂರು 560076**	ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ವಾಸಯೋಗ್ಯ ಜೊತೆಗೆ ಕಮರ್ಷಿಯಲ್ ಕಟ್ಟಡವನ್ನು ಹೊಂದಿರುವ ಸ್ವತ್ತಿನ ಹೌಸ್‌ಲಿಸ್ಟ್ ನಂ. 122, ಸರ್ವೆ ನಂ. 185, ಕೆ. ನಂ. 759/688/568/546/122 122, 1ನೇ ಅಡ್ಡರಸ್ತೆ, ಸುಂದರ್ ರಾಮ್ ಶೆಟ್ಟಿ ನಗರ ಬಿಳೇಕಹಳ್ಳಿ, ಬೆಂಗಳೂರು-560076 ರಲ್ಲಿದೆ. ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ : 40 ಅಡಿ, ಉತ್ತರದಿಂದ ದಕ್ಷಿಣಕ್ಕೆ : 30 ಅಡಿ. **LOCATION CO -ORDINATES - 12.899559, 77.601544 BAANKNET PROPERTY ID - BARBDBJAYAKAVERAPPA** ಋಣಭಾರಗಳು ಯಾವುದು ತಿಳಿದಿರುವುದಿಲ್ಲ	ಎ. ಜಯನಗರ ಬಿ. .72710600000011 72710600001511 ಸಿ. ರೂ..4,36,358.44 ರೂ. 23,42,694.79 ಒಟ್ಟು ಮೊತ್ತ ರೂ. 27,79,053.23 ದಿನಾಂಕ: 08.03.2026 ರಂದು ಇದ್ದಂತೆ ಬಡ್ಡಿ ಮತ್ತು ಇತರೆ ಖರ್ಚುಗಳು ಇತ್ಯಾದಿ ಸಾಲಗಾರರಿಗೆ ಅನ್ವಯವಾಗುತ್ತದೆ.	15.04.2026 ಮಧ್ಯಾಹ್ನ 2.00 ಗಂಟೆಯಿಂದ ಸಂಜೆ 6.00 ಗಂಟೆಯೊಳಗೆ	ಎ) ರೂ..1,36,80,000.00 ಬಿ) ರೂ.13,68,000.00 ಸಿ) ರೂ.2,00,000.00 ಡಿ) ಸಾಂಕೇತಿಕ ಸ್ವಾಧೀನ	16.03.2026 ರ ನಂತರ
6	**ಮೆ॥ ಶ್ರೀ ರಾಮ್ ಗ್ರಾನೈಟ್ ಪ್ರತಿನಿಧಿಸುವ ಪಾಲುದಾರರು :** ಶಿವರಾಮ್ ಮತ್ತು ರಾಜು ದೇವಿ, ವಿಳಾಸ : ಎಸ್ ನಂ. 481/ಸಿ3 & 4878/1, ಹೆಲೆಕೊಟ್ಟ ಗ್ರಾಮ ಬೀರಜೆಪಲ್ಲಿ ಶೂಲಗಿರಿ ಹೊಸೂರು ತಾಲ್ಲೂಕು ಕೃಷ್ಣಗಿರಿ ತಮಿಳುನಾಡು-635109	ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಸ್ಥಿರಾಸ್ತಿಯು ಅಲ್ಲೇಕೊಟ್ಟ @ ಪಥಕೊಟ್ಟ ಗ್ರಾಮ, ಹೊಸೂರು ತಾಲ್ಲೂಕಿನಲ್ಲಿದ್ದು, ಶೂಲಗಿರಿ ಉಪ ನೋಂದಣಿ ಜಿಲ್ಲೆ, ಕೃಷ್ಣಗಿರಿ ನೋಂದಣಿ ಜಿಲ್ಲೆ, ಕೃಷ್ಣಗಿರಿ ಜಿಲ್ಲೆಯಲ್ಲಿದೆ. Sy. No.481/c Dry Ext Hc.1.66.0 Or Ac 4.1 Cents, Asset Rs.2.32 Np, In This Extant Of Ac 0.90 Cents Land. **LOCATION CO-ORDINATES - 12.636419,77.912616 BAANKNET PROPERTY ID - BARBHSRBANSHREERAM** ಋಣಭಾರಗಳು ಯಾವುದು ತಿಳಿದಿರುವುದಿಲ್ಲ	ಎ. ಹೆಚ್‌ಎಸ್‌ಆರ್ ಲೇಔಟ್ ಬಿ. 29590600003502 29590600003248 29590500000012 ಸಿ. ರೂ.887445.40 ರೂ. 3026865.33 ರೂ. 1693802.19 ಒಟ್ಟು ಮೊತ್ತ ರೂ. 5608112.91 ದಿನಾಂಕ: 08.03.2026 ರಂದು ಇದ್ದಂತೆ ಬಡ್ಡಿ ಮತ್ತು ಇತರೆ ಖರ್ಚುಗಳು ಇತ್ಯಾದಿ ಸಾಲಗಾರರಿಗೆ ಅನ್ವಯವಾಗುತ್ತದೆ.	15.04.2026 ಮಧ್ಯಾಹ್ನ 2.00 ಗಂಟೆಯಿಂದ ಸಂಜೆ 6.00 ಗಂಟೆಯೊಳಗೆ	ಎ) ರೂ.94,50,000.00 ಬಿ) ರೂ.9,45,000.00 ಸಿ) ರೂ.1,00,000.00 ಡಿ) ಸಾಂಕೇತಿಕ ಸ್ವಾಧೀನ	16.03.2026 ರ ನಂತರ

ವಿವರವಾದ ನಿಯಮಗಳು ಮತ್ತು ಮಾರಾಟದ ಷರತ್ತುಗಳಿಗಾಗಿ, ದಯವಿಟ್ಟು ವೆಬ್‌ಸೈಟ್ ಲಿಂಕ್ **https://www.bankofbaroda.bank.in/e-auction** ಮತ್ತು ಆನ್‌ಲೈನ್ ಹರಾಜು ಪೋರ್ಟಲ್ **Baanknet.com** ಅನ್ನು ಉಲ್ಲೇಖಿಸಿ/ಭೇಟಿ ನೀಡಿ ಅಲ್ಲದೆ, ನಿರೀಕ್ಷಿತ ಬಿಡ್‌ದಾರರು ಅಧಿಕೃತ ಅಧಿಕಾರಿಗಳನ್ನು ಸಂಪರ್ಕಿಸಬಹುದು, ದೂರವಾಣಿ ಸಂಖ್ಯೆ. 080-25011710.

ದಿನಾಂಕ : 10.03.2026
ಸ್ಥಳ : ಬೆಂಗಳೂರು

ಸಹಿ/ ಅಧಿಕೃತ ಅಧಿಕಾರಿ,
ಬ್ಯಾಂಕ್ ಆಫ್ ಬರೋಡ

ವಿದ್ಯುತ್ ಗುತ್ತಿಗೆದಾರರ ಸಂಘದ ವತಿಯಿಂದ ಫ್ರೀಡಂಪಾರ್ಕ್‌ನಲ್ಲಿ ಪ್ರತಿಭಟನೆ

ಲೂಟಿ ನಿಲ್ಲಿಸಿ, ವಿದ್ಯುತ್ ಸಂಪರ್ಕ ಕೊಡಿ

ರಾಜ್ಯ ಅನುಮತಿ ಪಡೆದ ವಿದ್ಯುತ್ ಗುತ್ತಿಗೆದಾರರ ಸಂಘವು ಫ್ರೀಡಂ ಪಾರ್ಕ್ ನಲ್ಲಿ ಪ್ರತಿಭಟನೆ ನಡೆಸಿತು.

ಬೆಂಗಳೂರು: ನಿರ್ಮಾಣ ಹಂತದಲ್ಲಿರುವ ಅಥವಾ ಪೂರ್ಣಗೊಂಡಿರುವ ಕಟ್ಟಡಗಳಿಗೆ ವಾಸಯೋಗ್ಯ ಪ್ರಮಾಣ ಪತ್ರದ ಬಗ್ಗೆ ಸ್ಪಷ್ಟತೆ ನೀಡುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ಅನುಮತಿ ಪಡೆದ ವಿದ್ಯುತ್ ಗುತ್ತಿಗೆದಾರರ ಸಂಘವು ಫ್ರೀಡಂ ಪಾರ್ಕ್ ನಲ್ಲಿ ಪ್ರತಿಭಟನೆ ನಡೆಸಿತು.

ಈ ವೇಳೆ ಮಾಜಿ ಡಿಸಿಎಂ ಡಾ.ಸಿ.ಎನ್.ಅಶ್ವತ್ಥ ನಾರಾಯಣ ಮಾತನಾಡಿ, ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದ ಮೇಲೆ ಜನರಿಗೆ ನೆಮ್ಮದಿಯೇ ಇಲ್ಲದಂತಾಗಿದೆ. ಪ್ರತಿಯೊಂದು ವಿಚಾರದಲ್ಲಿ ವಸೂಲಿಗೆ ನಿಂತಿದೆ. ಬಡವರು ಇಂದು ಜೀವನ ಮಾಡುವುದು ದುಸ್ತರವಾಗಿದೆ. ಬಡವರ ಪರ ಕೆಲಸ ಮಾಡಲು ಜನರು ಆಯ್ಕೆ ಮಾಡಿದ ಸರಕಾರ, ಜನರ ಮೇಲೆ ಸವಾರಿ ಮಾಡುತ್ತಿದೆ ಎಂದರು.

ಕಷ್ಟಪಟ್ಟು ಮನೆ ಕಟ್ಟಿಕೊಳ್ಳುವುದಕ್ಕೆ ಮುಂದಾಗಿರುವ ಜನರಿಗೆ ಕರೆಂಟ್ ಸಂಪರ್ಕ ನೀಡಲು ಸರಕಾರ ಈ ರೀತಿಯ ಷರತ್ತು, ನಿಯಮಗಳನ್ನು ಹೇರಿಕೆ ಮಾಡುವ ಮೂಲಕ ಜನರ ಜೀವ ಹಿಂಡುವ ಕೆಲಸ ಮಾಡು ತ್ತಿದೆ. ಸರಕಾರ ಸುಪ್ರೀಂ ಕೋರ್ಟ್ ನಿಯಮವನ್ನು ಪಾಲಿಸುವ ನೆಪದಲ್ಲಿ ಜನರ ಮೇಲೆ ದೌರ್ಜನ್ಯ ಎಸಗುತ್ತಿದೆ. ಮೊದಲು ಇದು ನಿಲ್ಲಬೇಕು. ಜನರ ಪರವಾಗಿ ಸರಕಾರ ನಿರ್ಧಾರ ತೆಗೆದುಕೊಳ್ಳಬೇಕೆಂದು ಒತ್ತಾಯಿಸಿದರು.

ಈ ವೇಳೆ ಕರ್ನಾಟಕ ರಾಜ್ಯ ಅನುಮತಿ ಪಡೆದ ವಿದ್ಯುತ್ ಗುತ್ತಿಗೆದಾರರ ಸಂಘದ ರಾಜ್ಯಾಧ್ಯಕ್ಷ ಸಿ. ರಮೇಶ್ ಮಾತನಾಡಿ, ಸುಪ್ರೀಂ ಕೋರ್ಟ್ ನ ಆದೇಶದ ಅನ್ವಯ 2025 ಏಪ್ರಿಲ್‌ನಲ್ಲಿ ತಾತ್ಕಾಲಿಕ ವಿದ್ಯುತ್ ಸಂಪರ್ಕ ಪಡೆದಿರುವ ಹಾಗೂ ವಿವಿಧ ಹಂತಗಳಲ್ಲಿ ನಿರ್ಮಾಣ ಹಂತದಲ್ಲಿರುವ, ಪೂರ್ಣಗೊಂಡಿರುವ ಕಟ್ಟಡಗಳಿಗೆ ಪೂರ್ಣ ಪ್ರಮಾಣ ಪತ್ರ ಅಥವಾ ವಾಸಯೋಗ್ಯ ಪ್ರಮಾಣ ಪತ್ರ ನೀಡುವ ಕುರಿತು ಸ್ಪಷ್ಟ ಮಾರ್ಗಸೂಚಿಗಳನ್ನು ನೀಡಬೇಕು ಎಂದು ಆಗ್ರಹಿಸಿದರು.

ಮಾಜಿ ಶಾಸಕ ಎಂ.ಪಿ. ರೇಣುಕಾ ಚಾರ್ಯ, ಶಾಸಕ ಸಿ.ಕೆ. ರಾಮಮೂರ್ತಿ, ಆಮ್ ಆದ್ಮಿ ಪಾರ್ಟಿ ಮುಖಂಡ ರವಿಕೃಷ್ಣಾ ರೆಡ್ಡಿ, ಸಂಘದ ಪ್ರಧಾನ ಕಾರ್ಯದರ್ಶಿ ಎಚ್.ವಿ.ಚಂದ್ರಬಾಬು ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

> ಪ್ರತಿಭಟನೆ ನಡೆಸುತ್ತಿರುವವರು ಯಾರು ನಮಗೆ ಬಸ್ ಉಚಿತವಾಗಿ ನೀಡಿ, ನಮ್ಮ ಖಾತೆಗೆ ಹಣ ಹಾಕಿ ಅಂತಾ ಕೇಳುತ್ತಿಲ್ಲ. ಬದಲಾಗಿ ನಮಗೆ ಕೆಲಸ ಮಾಡಲು ಅವಕಾಶ ನೀಡಿ ಎಂದು ಕೇಳುತ್ತಿದ್ದಾರೆ. ಆದರೆ, ಆಡಳಿತದಲ್ಲಿರುವ ಸರಕಾರ ಓಸಿ, ಸಿಸಿ ಹೆಸರಿನಲ್ಲಿ ವಿದ್ಯುತ್ ಸಂಪರ್ಕ ನೀಡಿದೆ, ಜನರನ್ನು ಸುಲಿಗೆ ಮಾಡುತ್ತಿದೆ. ಇದು ಯಾವ ನ್ಯಾಯ.? ಮೊದಲು ಇವರ ಕಷ್ಟ ಪರಿಹಾರ ಮಾಡಿ.
>
> – ಎನ್.ರವಿಕುಮಾರ್,
> ವಿಪ ವಿರೋಧ ಪಕ್ಷದ ಮುಖ್ಯ ಸಚೇತಕ

ಪ್ರಮುಖ ಬೇಡಿಕೆಗಳು

- ಅಸ್ತಿತ್ವದಲ್ಲಿರುವ ಕಟ್ಟಡಗಳಿಗೆ ವಿದ್ಯುತ್ ಸಂಪರ್ಕ ನೀಡಲು ಒಮ್ ಟೈಮ್ ವಿನಾಯಿತ ನೀಡಬೇಕು.
- ಸುಪ್ರೀಂ ಕೋರ್ಟ್ ಆದೇಶ ತೋರಿಸಿ ವಿದ್ಯುತ್ ಸಂಪರ್ಕ ನಿಲ್ಲಿಸುವುದು ನೀಡಬೇಕು
- ಗುತ್ತಿಗೆದಾರು ಹಾಗೂ ಕಟ್ಟಡ ಮಾಲೀಕರಿಗೆ ಅನುಕೂಲ ಮಾಡಿಕೊಡಬೇಕು.
- ಎಂ.ಎಸ್. ಎಂ. ಇ. ಕೈಗಾರಿಕೆಗಳಿಗೆ ಓಸಿಯಿಂದ ವಿನಾಯಿತಿ ನೀಡಬೇಕು

ಇಂದು ಜಲಮಂಡಳಿ ನೀರಿನ ಅದಾಲತ್

ಬೆಂಗಳೂರು: ಜಲ ಮಂಡಳಿಯ ವಿವಿಧ ಉಪ ವಿಭಾಗಗಳಲ್ಲಿ ನೀರಿನ ಬಿಲ್ಲು, ನೀರು ಮತ್ತು ಒಳಚರಂಡಿ ಸಂಪರ್ಕ ಕಲ್ಪಿಸುವಲ್ಲಿನ ವಿಳಂಬ, ಗೃಹ ಬಳಕೆಯಿಂದ ಗೃಹೇತರ ಬಳಕೆ ಪರಿವರ್ತನೆ ವಿಳಂಬ ಮತ್ತಿತರ ಕುಂದು ಕೊರತೆಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸಲು ಮಾ.12 ರಂದು ಬೆ. 9.30 ರಿಂದ 11 ಗಂಟೆಯವರೆಗೆ ನೀರಿನ ಅದಾಲತ್ ಆಯೋಜಿಸಲಾಗಿದೆ.

ಉಪ ವಿಭಾಗಗಳಾದ ಉತ್ತರ-2-1, ದಕ್ಷಿಣ-1-1, ದಕ್ಷಿಣ-2-1, ನೈರುತ್ಯ -1, ನೈರುತ್ಯ - 4, ಪೂರ್ವ -1-2, ಪೂರ್ವ -2-2, ಆಗ್ನೇಯ - 2, ಆಗ್ನೇಯ - 5, ಪಶ್ಚಿಮ-1-2 ಮತ್ತು ಪಶ್ಚಿಮ-2-2 ರಲ್ಲಿ ನೀರಿನ ಅದಾಲತ್ ನಡೆಯಲಿದೆ. ಸಾರ್ವಜನಿಕರು ಕುಂದು ಕೊರತೆಗಳಿಗೆ ಸಂಬಂಧಿಸಿದಂತೆ ಮಂಡಳಿಯ 24/7 ದೂರು ನಿರ್ವಹಣಾ ಕೇಂದ್ರದ ಸಹಾಯವಾಣಿ 1916ಗೆ ಕರೆ ಮಾಡಿ ದೂರುಗಳನ್ನು ದಾಖಲಿಸಬಹುದು. ಹಾಗೂ ವಾಟ್ಸ್ಆಫ್ ಸಂಖ್ಯೆ 8762228888 ಸಂದೇಶದ ಮೂಲಕ ದೂರನ್ನು ಸಲ್ಲಿಸಬಹುದಾಗಿದೆ ಎಂದು ಬೆಂಗಳೂರು ಜಲ ಮಂಡಳಿಯ ಸಾರ್ವಜನಿಕ ಸಂಪರ್ಕಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಫಿಕ್ಸೆಡ್ ಲಕ್ಷುರಿ ಡಿಪಾರ್ಚರ್ಸ್

01 ಅಸ್ಸಾಂ - ಮೇಘಾಲಯ
ಗುವಾಹತಿ, ಕಾಮಕ್ಯ, ಕಾಝಿರಂಗ, ನಾಗಾಂವ್ ಮಹಾ ಮೃತ್ಯುಂಜಯ, ಶಿಲ್ಲಾಂಗ್, ದಾವ್ಕಿ, ಮಾವ್ಲಿ ನಾಂಗ್, ಲಿವಿಂಗ್ ರೂಟ್ ಬ್ರಿಡ್ಜ್, ಚಿರಾಪುಂಜಿ, ಮಾಸ್ಮಿ ಕೇವ್ಸ್.
ದಿನಾಂಕ: MAR 18, 25. APR 12, 15, 22. NOV 4, 11, 18, 25. DEC 9, 16.
7 ದಿನಗಳು
7022259008

02 ಚಾರ್ ಧಾಮ್ ಯಾತ್ರಾ
ಹರಿದ್ವಾರ, ಋಷಿಕೇಶ, ಯಮುನೋತ್ರಿ, ಉತ್ತರಕಾಶಿ, ಗಂಗೋತ್ರಿ, ಗುಪ್ತಕಾಶಿ, ಕೇದಾರನಾಥ, ಬದರಿನಾಥ, ಮಾನ, ರುದ್ರಪ್ರಯಾಗ.
ದಿನಾಂಕ: APR 22, 29. MAY 6, 13, 20, 27. JUN 3, 10, 17, 24. JUL 8, 22. AUG 5, 19. SEP 2, 9, 16, 23. OCT 7.
12 ದಿನಗಳು
7022259003


03 ಎನ್ಚಾಂಟಿಂಗ್ ಕಾಶ್ಮೀರ
ಸೋನ್ಮಾರ್ಗ್, ಶ್ರೀನಗರ, ದಾಲ್ ಲೇಕ್, ಗುಲ್ಮಾರ್ಗ್, ಪಹಲ್ ಗಾಂವ್.
ದಿನಾಂಕ: MAR 18. APR 8, 22. MAY 6, 20. JUN 3, 17. JUL 8, 22. AUG 5, 19. SEP 2, 16. OCT 7, 21. NOV 4, 18. DEC 2, 16.
6 ದಿನಗಳು
7975001525

04 ಶಿಮ್ಲಾ - ಮನಾಲಿ – ಚಂಡೀಗಡ
ಶಿಮ್ಲಾ, ಕುಫ್ರಿ, ಕುಲು, ಮನಾಲಿ, ಸೋಲಾಂಗ್ ವ್ಯಾಲಿ, ಅಟಲ್ ಟನಲ್, ಚಂಡೀಗಡ
ದಿನಾಂಕ: MAR 18. APR 8, 22. MAY 6, 20. JUN 3, 17. JUL 8, 22. AUG 5, 19. SEP 2, 16. OCT 7, 21. NOV 4, 18. DEC 2, 16.
7 ದಿನಗಳು
9364104366

05 ಅಮೃತಸರ - ಡಾಲ್ಹೌಸಿ - ಧರ್ಮಶಾಲಾ
ಅಮೃತಸರ, ವಾಘಾ ಬಾರ್ಡರ್, ಡಾಲ್ಹೌಸಿ, ಖಜಿಯಾರ್, ಧರ್ಮಶಾಲಾ, ಕಾಂಗ್ರಾ, ವಜ್ರೇಶ್ವರಿ, ಚಾಮುಂಡಾ, ಜ್ವಾಲಾಮುಖಿ.
ದಿನಾಂಕ: MAR 18. APR 8, 22. MAY 6, 20. JUN 3, 17. JUL 8, 22. AUG 5, 19. SEP 2, 16. OCT 7, 21. NOV 4, 18. DEC 2, 16.
7 ದಿನಗಳು
9364104373

06 ಅಂಡಮಾನ್ ಐಲ್ಯಾಂಡ್ಸ್
ಹ್ಯಾವ್ ಲಾಕ್ (ಸ್ವರಾಜ್ ದ್ವೀಪ್) ಐಲ್ಯಾಂಡ್, ಪೋರ್ಟ್ ಬ್ಲೇರ್, ಸೆಲ್ಯೂಲ್ಲಾರ್ ಜೈಲ್, ರಾಸ್ (ನೇತಾಜಿ ಸುಭಾಷ್ ಚಂದ್ರ ಬೋಸ್)ಐಲ್ಯಾಂಡ್, ನಾರ್ತ್ ಬೇ ಐಲ್ಯಾಂಡ್
ದಿನಾಂಕ: MAR 18. APR 8, 22. MAY 6, 20. JUN 3, 17. JUL 8, 22. AUG 5, 19. SEP 2, 16. OCT 7, 21. NOV 4, 18. DEC 2, 16.
5 ದಿನಗಳು
7022259008


07 ಗೋಲ್ಡನ್ ಟ್ರಯಾಂಗಲ್ ಟೂರ್
ದೆಹಲಿ, ಮಥುರಾ, ಬೃಂದಾವನ, ಆಗ್ರಾ, ಫತೇಪುರ್ ಸಿಕ್ರಿ, ಜೈಪುರ್
ದಿನಾಂಕ: MAR 18. APR 8, 22. MAY 6, 20. JUN 3, 17. JUL 8, 22. AUG 5, 19. SEP 2, 16. OCT 7, 21. NOV 4, 18. DEC 2, 16.
6 ದಿನಗಳು
9364088424

08 ನೈನಿತಾಲ್ – ಕೌಸಾನಿ - ಜಿಮ್ ಕಾರ್ಬೆಟ್
ನೈನಿತಾಲ್, ಸತ್ತಾಲ್, ಭೀಮ್ ತಾಲ್, ನೌಕುಚಿಯಾತಾಲ್, ಕೌಸಾನಿ, ಭಾಗೇಶ್ವರ್, ಜಿಮ್ ಕಾರ್ಬೆಟ್ ನ್ಯಾಷನಲ್ ಪಾರ್ಕ್.
ದಿನಾಂಕ: MAR 18. APR 8, 22. MAY 6, 20. AUG 5, 19. SEP 2, 16. OCT 7, 21. NOV 4, 18. DEC 2, 16.
6 ದಿನಗಳು
7022259007

09 ಅರುಣಾಚಲ ಪ್ರದೇಶ
ಗುವಾಹತಿ, ಕಾಮಾಕ್ಯ, ಬಾಂಡಿಲ್ಲಾ, ಸೆಲಾ ಪಾಸ್, ತವಾಂಗ್, ಧಿರಂಗ್.
ದಿನಾಂಕ: MAR 25. APR 8, 15, 22, 29. MAY 6, 13, 27. AUG 5, 12, 19, 26. SEP 2, 9, 23. OCT 14, 21, 28. NOV 4, 11, 25.
7 ದಿನಗಳು
7022259003

10 ಸಿಕ್ಕಿಂ – ಡಾರ್ಜಿಲಿಂಗ್
ಕಾಲಿಮ್ ಪಾಂಗ್, ಗ್ಯಾಂಗ್ ಟಕ್, ತ್ಸಾಂಗೋ ಸರೋವರ, ಲಾಚುಂಗ್, ಯುಮ್ ತಾಂಗ್, ನಮ್ಚಿ ಚಾರ್ ಧಾಮ್, ಪೆಲ್ಲಿಂಗ್, ಡಾರ್ಜಿಲಿಂಗ್.
ದಿನಾಂಕ : MAR 25. APR 8, 15, 22, 29. MAY 6, 13, 20, 27. AUG 5, 12, 19, 26. SEP 2, 9, 23. OCT 14, 28. NOV 11, 25.
6/8/11 ದಿನಗಳು
7022259008

11 ಪುರಿ - ಕೊನಾರ್ಕ್ – ಭುವನೇಶ್ವರ
ಭುವನೇಶ್ವರ, ಖಂಡಗಿರಿ - ಉದಯಗಿರಿ, ಧೌಳಿ, ಪೀಪ್ಲಿ, ಕೊನಾರ್ಕ್, ಪುರಿ, ಚಿಲಿಕಾ ಲೇಕ್, ರಘು ರಾಜ್ ಪುರ.
ದಿನಾಂಕ : MAR 25. APR 15, 29. MAY 13, 27. JUN 10, 17. JUL 15, 22, 29. AUG 5, 12, 19, 26. SEP 2, 9, 23. OCT 14, 28. NOV 11, 25. DEC 9, 16.
4 ದಿನಗಳು
9364104373

12 ಕೇರಳ ಬ್ಯಾಕ್ ವಾಟರ್ಸ್
ಕೊಚ್ಚಿ, ಮುನ್ನಾರ್, ತೇಕಡಿ, ಅಲೆಪ್ಪಿ ಹೌಸ್ಬೋಟ್
ದಿನಾಂಕ: MAR 18. APR 8, 22. MAY 6, 20. JUN 3, 17. JUL 8, 22. AUG 5, 19. SEP 2, 16. OCT 7, 21. NOV 4, 18. DEC 2, 16.
5 ದಿನಗಳು
7022259007

13 ರಾಮೇಶ್ವರ - ಕನ್ಯಾಕುಮಾರಿ – ತಿರುವನಂತಪುರಂ
ಮದುರೈ, ರಾಮೇಶ್ವರಮ್, ಕನ್ಯಾಕುಮಾರಿ, ಸುಚೀಂದ್ರಮ್, ನಾಗರ ಕೋಯಿಲ್, ತಿರುವನಂತಪುರಂ.
ದಿನಾಂಕ: MAR 18. APR 8, 22. MAY 6, 20. JUN 3, 17. JUL 8, 22. AUG 5, 19. SEP 2, 16. OCT 7, 21. NOV 4, 18. DEC 2, 16.
4 ದಿನಗಳು
9364104366

14 ಕಾಶಿ - ಗಯಾ - ಅಯೋಧ್ಯಾ
ವಾರಣಾಸಿ, ಪ್ರಯಾಗ್ ರಾಜ್, ಗಯಾ, ಬೋಧಗಯಾ, ಸಾರಾನಾಥ, ಅಯೋಧ್ಯಾ
ದಿನಾಂಕ: MAR 18. APR 8, 22. MAY 6, 20. JUN 3, 17. JUL 8, 22. AUG 5, 19. SEP 2, 16. OCT 7, 21. NOV 4, 18. DEC 2, 16.
6/7 ದಿನಗಳು
7022259008

ಅಡಿಗಾಸ್ ಯಾತ್ರಾ
+91 94494 78944
www.adigasyatra.com
News Website : www.adigasyatranews.com
care@adigasyatra.com
Follows Us :
Facebook Instagram News Website Youtube

ಲೊಕೇಶನ್ ವಿಚಾರಕ್ಕೆ ಜಗಳ: ಡೆಲಿವರಿ ಪ್ರತಿನಿಧಿಯಿಂದ ಗ್ರಾಹಕನ ಮೇಲೆ ಹಲ್ಲೆ

ಬೆಂಗಳೂರು: ಲೊಕೇಶನ್ ವಿಚಾರವಾಗಿ ಗಲಾಟೆ ನಡೆದು ಇ-ಕಾಮರ್ಸ್ ಕಂಪನಿಯೊಂದರ ಡೆಲಿವರಿ ಪ್ರತಿನಿಧಿ, ಗ್ರಾಹಕನ ಮೇಲೆ ಹಲ್ಲೆಗೈದು ಗಾಯಗೊಳಿಸಿದ ಘಟನೆ ಮಾರ್ಚ್ 7ರಂದು ಕೋರಮಂಗಲ ಠಾಣಾ ವ್ಯಾಪ್ತಿಯ ಅಂಗಾಳಮ್ಮ ಲೇಔಟ್ ನಲ್ಲಿ ನಡೆದಿದೆ.

27 ವರ್ಷದ ಖಾಸಗಿ ಕಂಪನಿ ಉದ್ಯೋಗಿ ಮೇಲೆ ಡೆಲಿವರಿ ಏಜೆಂಟ್ ಹಲ್ಲೆ ನಡೆಸಿದ್ದಾನೆ ಎಂದು ಆರೋಪಿಸಲಾಗಿದೆ. ಹಲ್ಲೆಯಿಂದ ಗ್ರಾಹಕನ ಮೂಗಿನ ಮೂಳೆ ಮುರಿದಿದೆ. ಕೋರಮಂಗಲ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೋರಮಂಗಲದ 8ನೇ ಬ್ಲಾಕ್ ನಿವಾಸಿಯಾಗಿದ್ದ ದೂರುದಾರ ಕೇರಳ ಮೂಲದವರಾಗಿದ್ದು, ಆನ್‌ಲೈನ್ ಮೂಲಕ ಆಹಾರ ಆರ್ಡರ್ ಮಾಡಿದ್ದರು. ವಿತರಣಾ ಏಜೆಂಟ್ ಕರೆ ಮಾಡಿ ಮನೆಗೆ ಬರುತ್ತಿರುವುದಾಗಿ ಹೇಳಿದ್ದಾರೆ. ಆದರೆ, ಎರಡನೇ ಮಹಡಿಯ ಫ್ಯಾಟ್‌ಗೆ ಹೋಗುವ ಬದಲು, ವಿತರಣಾ ಏಜೆಂಟ್ ನಾಲ್ಕನೇ ಮಹಡಿಗೆ ಹೋಗಿದ್ದಾರೆ. ಬಳಿಕ ಗ್ರಾಹಕ ಕರೆ ಮಾಡಿ, ಸರಿಯಾದ ಮಹಡಿಗೆ ಬರಲು ಕೇಳಿದಾಗ, ವಿತರಣಾ ಏಜೆಂಟ್ ಫ್ಯಾಟ್ ಬಳಿ ಬಂದು ಜಗಳವಾಡಿದ್ದಾನೆ. ತಮಿಳಿನಲ್ಲಿ ಬೈದಿದ್ದಾನೆ. ಮಾತು ವಿಕೋಪಕ್ಕೆ ತಿರುಗಿದಾಗ ಹಲ್ಲೆ ನಡೆದಿದೆ. ಇದರಿಂದ ಗ್ರಾಹಕನ ಮೂಗು ಮತ್ತು ತುಟಿಗಳಿಗೆ ತೀವ್ರ ಗಾಯಗಳಾಗಿದ್ದು, ರಕ್ತಸ್ರಾವವಾಗಿದೆ.

ಗಾಯಾಳು ಗ್ರಾಹಕ ಸಂಬಂಧಿಸಿದ ಇ-ಕಾಮರ್ಸ್ ಕಂಪನಿಯನ್ನು ಟ್ಯಾಗ್ ಮಾಡಿ ಟ್ವಿಟ್ ಮೂಲಕ ದೂರಿದ್ದಾರೆ. ಇದಕ್ಕೆ ಪ್ರತಿಕ್ರಿಯಿಸಿರುವ ಕಂಪನಿ, ಇಂತಹ ನಡೆಗಳ ಬಗ್ಗೆ ನಾವು ಶೂನ್ಯ ಸಹಿಷ್ಣುತೆ ನೀತಿ ಹೊಂದಿದ್ದೇವೆ. ನಾವು ಇದನ್ನು ಆದ್ಯತೆಯ ಮೇಲೆ ತನಿಖೆ ಮಾಡುತ್ತೇವೆ. ಶೀಘ್ರದಲ್ಲೇ ಅಪ್‌ಡೇಟ್ ಹಂಚಿಕೊಳ್ಳಲಾಗುವುದು ಎಂದು ತಿಳಿಸಿದೆ. ಭಾರತೀಯ ನ್ಯಾಯಸಂಹಿತೆಯ 117, 126 ಮತ್ತಿತರ ಕಲಂಗಳಡಿ ಜೋಸೆಫ್ ಎಂಬ ಡೆಲಿವರಿ ಪ್ರತಿನಿಧಿ ವಿರುದ್ಧ ಕೋರಮಂಗಲ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಆರೋಪಿಯನ್ನು ಪತ್ತೆ ಹಚ್ಚಲು ಸಿಸಿಟಿವಿ ದೃಶ್ಯಾವಳಿಗಳನ್ನು ಪರಿಶೀಲಿಸುತ್ತಿರುವುದಾಗಿ ಪೊಲೀಸರು ತಿಳಿಸಿದ್ದಾರೆ.

ಮಹಿಳಾ ದಿನಾಚರಣೆ ವಿಶೇಷ ಸಂಭ್ರಮ

ಬೆಂಗಳೂರು: ನಗರದ ಶ್ರೀಚಂದ್ರ ಹ್ಯಾಪಿ ವುಮೆನ್ಸ್ ಕ್ಲಬ್ ವತಿಯಿಂದ ಅನ್ವುಲಾ ಮತ್ತು ಸುದಯ ಫೌಂಡೇಶನ್ ಸಹಯೋಗದೊಂದಿಗೆ ಬುಧವಾರ ಆಯೋಜಿಸಿದ್ದ ವುಮೆನ್ ಫಿಯೆಸ್ಟಾ ಕಾರ್ಯಕ್ರಮದಲ್ಲಿ ಮಹಿಳೆಯರು ತಮ್ಮ ಬಾಲ್ಯದ ಸವಿನೆನಪುಗಳನ್ನು ಮೆಲುಕು ಹಾಕುವ ಮೂಲಕ ವಿಶೇಷವಾಗಿ ಮಹಿಳಾ ದಿನಾಚರಣೆಯನ್ನು ಸಂಭ್ರಮಿಸಿದರು. ಅನ್ವುಲಾ ಮತ್ತು ಶ್ರೀಚಂದ್ರ ಹ್ಯಾಪಿ ವುಮೆನ್ಸ್ ಕ್ಲಬ್‌ನ ಅಧ್ಯಕ್ಷರಾದ ಅಂಶು ಹೆಗಡೆ ಅವರು ಕಾರ್ಯಕ್ರಮದ ಕುರಿತು ಮಾತನಾಡಿ, ಮಹಿಳೆಯರಲ್ಲಿ ಅಡಗಿರುವ ಕೌಶಲ್ಯವನ್ನು ಹೊರತರಲು ಮತ್ತು ಅವರ ಬಾಲ್ಯದ ಸುಂದರ ಕ್ಷಣಗಳನ್ನು ಮತ್ತೆ ಮೆಲುಕು ಹಾಕಲು ಈ ವೇದಿಕೆ ಕಲ್ಪಿಸಲಾಗಿದೆ. ಸಂಭ್ರಮದ ಜತೆಗೆ ಭಾರತದಾದ್ಯಂತ ಇರುವ ಧ್ಯಾನ ಕೇಂದ್ರಗಳಿಗೆ ದೇಣಿಗೆ ನೀಡುವ ಮೂಲಕ ಸಾಮಾಜಿಕ ಕಾರ್ಯಕ್ಕೂ ನಾವು ಕೈಜೋಡಿಸುತ್ತಿದ್ದೇವೆ ಎಂದು ತಿಳಿಸಿದರು.

ಕ್ಲಬ್ ಕಾರ್ಯದರ್ಶಿ ಲಕ್ಷ್ಮಿ ಮಾತನಾಡಿ, ಮಹಿಳೆಯರು ಒತ್ತಡದಿಂದ ಮುಕ್ತರಾಗಿ ಜನರೊಂದಿಗೆ ಬೆರೆಯಲು ಈ ಕಾರ್ಯಕ್ರಮ ಸಹಕಾರಿಯಾಗಿದೆ. ಕಾರ್ಯಕ್ರಮದ ಜತೆಗೆ ಅಡುಗೆ ಸ್ಪರ್ಧೆ ಮತ್ತು ಬಿಂದಾಸ್ ವಾಕ್‌ನಲ್ಲಿ ವಿಜೇತರಾದ ವರಿಗೆ ಬಹುಮಾನಗಳನ್ನು ಕೂಡ ವಿತರಿಸಲಾಯಿತು ಅವರು ಹೇಳಿದರು. ಈ ವೇಳೆ 200ಕ್ಕೂ ಹೆಚ್ಚು ಮಹಿಳೆಯರು ಪಾಲ್ಗೊಂಡಿದ್ದು, ಎಲ್ಲರೂ ಪಿಂಕ್ ಉಡುಪು ಧರಿಸಿ ಕಂಗೊಳಿಸುತ್ತಿದ್ದರು. ಸಮಾರಂಭದಲ್ಲಿ ಮೀಡಿಯಾ ಕನೆಕ್ಟ್ ಹಾಗೂ ಸುದಯ ಫೌಂಡೇಶನ್ ಸಂಸ್ಥಾಪಕಿ ಮತ್ತು ಸಿಇಒ ದಿವ್ಯಾ ರಂಗೇನಹಳ್ಳಿ, ಮಾಜಿ ಬಿಬಿಎಂಪಿ ಸದಸ್ಯೆ ಯಶೋದ ಲಕ್ಷ್ಮಿ ಕಾಂತ ಉಪಸ್ಥಿತರಿದ್ದರು.

ಕೃತಕ ತಾಯಿ ಗಿಳಿ ಮಾದರಿ ಯಶಸ್ವಿ

ಬೆಂಗಳೂರು: ತಾಯಿಯನ್ನು ಕಳೆದುಕೊಂಡು ಅನಾಥವಾಗಿದ್ದ 46 ಗಿಳಿಮರಿಗಳ ರಕ್ಷಣೆಗಾಗಿ ನಗರದ ಗೋಪಾಲನ್ ಕಾಲೇಜ್ ಆಫ್ ಎಂಜಿನಿಯರಿಂಗ್ ಮತ್ತು ಮ್ಯಾನೇಜ್‌ಮೆಂಟ್‌ನ ವಿದ್ಯಾರ್ಥಿಗಳು ವಿನೂತನ ತಂತ್ರಜ್ಞಾನದ ಮೂಲಕ ಕೃತಕ 'ತಾಯಿ ಗಿಳಿ'ಯ ಮಾದರಿಯೊಂದನ್ನು ಯಶಸ್ವಿಯಾಗಿ ನಿರ್ಮಿಸಿದ್ದಾರೆ.

3ಡಿ ಪ್ರಿಂಟಿಂಗ್ ತಂತ್ರಜ್ಞಾನ ಬಳಸಿ ಸಿದ್ಧಪಡಿಸಿರುವ ಈ ವಿಶೇಷ ಸಾಧನವು ವನ್ಯಜೀವಿ ಸಂರಕ್ಷಣಾ ಕಾರ್ಯಕ್ಕೆ ಬಹುದೊಡ್ಡ ವರದಾನವಾಗಿ ಪರಿಣಮಿಸಿದೆ. ಈ ವರ್ಷದ ಆರಂಭದಲ್ಲಿ ನಗರದ ವನ್ಯಜೀವಿ ರಕ್ಷಣಾ ಕೇಂದ್ರವೊಂದಕ್ಕೆ ಅತಿ ಸೂಕ್ಷ್ಮ ಸ್ಥಿತಿಯಲ್ಲಿದ್ದ 46 ಭಾರತೀಯ ಗಿಳಿಮರಿಗಳನ್ನು ರಕ್ಷಿಸಿ ತರಲಾಗಿತ್ತು. ತೀರಾ ಚಿಕ್ಕದಾಗಿದ್ದ ಈ ಮರಿಗಳಿಗೆ ನಿರಂತರವಾಗಿ ಆಹಾರ ನೀಡುವ ಅಗತ್ಯವಿತ್ತು. ಆದರೆ, ಸಾಂಪ್ರದಾಯಿಕವಾಗಿ ಸಿರಿಂಜ್ ಮೂಲಕ ಆಹಾರ ಉಣಿಸುವುದು ರಕ್ಷಕರಿಗೆ ದೊಡ್ಡ ಸವಾಲಾಗಿ ಪರಿಣಮಿಸಿತ್ತು. ನೇರವಾಗಿ ಸಿರಿಂಜ್ ಬಳಕೆ ಮಾಡುವುದರಿಂದ ಮರಿಗಳು ತೀವ್ರ ಒತ್ತಡಕ್ಕೆ ಸಿಲುಕುವುದಲ್ಲದೆ, ಅವುಗಳ ನೈಸರ್ಗಿಕ ಬೆಳವಣಿಗೆಯ ಮೇಲೂ ದುಷ್ಪರಿಣಾಮ ಬೀರುವ ಅಪಾಯವಿತ್ತು. ಇದರಿಂದ ಭವಿಷ್ಯದಲ್ಲಿ ಆ ಪಕ್ಷಿಗಳನ್ನು ಮರಳಿ ಕಾಡಿಗೆ ಬಿಡುವುದು ಕಷ್ಟಸಾಧ್ಯ ಎಂಬ ಆತಂಕ ಎದುರಾಗಿತ್ತು.

ವನ್ಯಜೀವಿ ರಕ್ಷಕರು ಎದುರಿಸುತ್ತಿದ್ದ ಈ ಸವಾಲಿಗೆ ಸ್ಪಂದಿಸಿದ ಜಿಸಿಇಎಮ್‌ನ ಅಂತಿಮ ವರ್ಷದ ಏರೋನಾಟಿಕಲ್ ಎಂಜಿನಿಯರಿಂಗ್ ವಿದ್ಯಾರ್ಥಿಗಳ ತಂಡ, ಕರುಣೆ ಹಾಗೂ ತಂತ್ರಜ್ಞಾನವನ್ನು ಮೇಳೈಸಿ ಈ ವಿಶೇಷ ಸಾಧನವನ್ನು ನಿರ್ಮಿಸಿದೆ. ತಮ್ಮ ತಾಂತ್ರಿಕ ಜ್ಞಾನವನ್ನು ಬಳಸಿಕೊಂಡ ವಿದ್ಯಾರ್ಥಿಗಳು 'ಬಯೋಮಿಮೆಟಿಕ್ ಮದರ್ ಪ್ಯಾರಾಕೀಟ್' (ತಾಯಿ ಗಿಳಿಯನ್ನು ಹೋಲುವ ಸಾಧನ) ಎಂಬ ವಿಶಿಷ್ಟ ಮಾದರಿಯನ್ನು ಅಭಿವೃದ್ಧಿಪಡಿಸಿ ಮರಿಗಳ ಆರೈಕೆಗೆ ನೀಡಿದ್ದಾರೆ.

ಚಾಲಿತ ನೀತಿ ಪ್ರಣಾಳಿಕೆ ಬಿಡುಗಡೆ

ಬೆಂಗಳೂರು: ಕರ್ನಾಟಕವು ತನ್ನ ಸ್ಟಾರ್ಟ್‌ಅಪ್ ಪರಿಸರ ವ್ಯವಸ್ಥೆಯನ್ನು ನೇರವಾಗಿ ತೊಡಗಿಸಿಕೊಳ್ಳುವ ಮೂಲಕ ವ್ಯವಸ್ಥಿತ, ಡೇಟಾ-ಬೆಂಬಲಿತ ನೀತಿ ಸೂತ್ರೀ ಕರಣವನ್ನು ನಿಯೋಜಿಸಿದ ಮೊದಲ ರಾಜ್ಯ ಸರಕಾರವಾಗಿದೆ. ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆಯು ಭಾರತದ ಏಜೆಂಟ್ ಗ್ರಾಹಕ ಗುಪ್ತಚರ ವೇದಿಕೆಯಾದ ಜುಪಿಟರ್ ಮೆಟಾ ಜತೆ ತಿಳುವಳಿಕೆ ಒಪ್ಪಂದಕ್ಕೆ ಸಹಿ ಹಾಕಿದ್ದು, ಜುಪಿಟರ್ ಮೆಟಾದ ಏಜೆಂಟ್ ಗುಪ್ತಚರ ವೇದಿಕೆಯಾದ ಹರ್ಕ್ಯುಲಸ್ ಅನ್ನು ಬಳಸಿ ಕೊಂಡು 2,000ಕ್ಕೂ ಹೆಚ್ಚು ಪಾಲುದಾರ ರಿಂದ ಡೇಟಾ ಸಂಗ್ರಹಿಸುವ ಗುರಿ ಹೊಂದಿದೆ.

ಐಐಐಟಿಯಲ್ಲಿ 25-ಕ್ಯುಯುಬಿಟ್ ಕ್ವಾಂಟಮ್ ಕಂಪ್ಯೂಟರ್

ವಿಧಾನಸೌದದಲ್ಲಿ ನಡೆದ ಸಭೆಯಲ್ಲಿ ಐಐಐಟಿ ಧಾರವಾಡದಲ್ಲಿ 25-ಕ್ಯುಯುಬಿಟ್ ಕ್ವಾಂಟಮ್ ಕಂಪ್ಯೂಟರ್ ಇಂಡಸ್ ಅಳವಡಿಸಿರುವ ಸರಕಾರ ಘೋಷಣಾ ಪತ್ರವನ್ನು ವಿತರಿಸಲಾಯಿತು. ಈ ವೇಳೆ ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ, ಕ್ಯುಪಿಐಎಐ ಸಿಇಒ ಡಾ. ನಾಗೇಂದ್ರ ನಾಗರಾಜ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಬೆಂಗಳೂರು: ಧಾರವಾಡದಲ್ಲಿನ ಭಾರತೀಯ ಮಾಹಿತಿ ತಂತ್ರಜ್ಞಾನ ಸಂಸ್ಥೆಯಲ್ಲಿರುವ ಕ್ವಾಂಟಮ್ ಕಂಪ್ಯೂಟಿಂಗ್ ಶ್ರೇಷ್ಠತಾ ಕೇಂದ್ರದಲ್ಲಿ 25-ಕ್ಯುಯುಬಿಟ್ ಕ್ವಾಂಟಮ್ ಕಂಪ್ಯೂಟಿಂಗ್ ಸಿಸ್ಟಮ್ ಆಗಿರುವ ಕ್ಯುಪಿಐಎಐ ಇಂಡಸ್ ಅಳವಡಿಸಿರುವುದಾಗಿ ಕರ್ನಾಟಕ ರಾಜ್ಯ ಸರಕಾರ ತಿಳಿಸಿದೆ ಎಂದು ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು.

ಈ ಕುರಿತು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿರುವ ಅವರು, ಕ್ಯುಪಿಐಎಐ ಇಂಡಸ್ ಅಳವಡಿಕೆಯು ಕರ್ನಾಟಕದಲ್ಲಿ ಕ್ಯುಪಿಐಎಐ-ನ ಎರಡನೇ ನಿಯೋಜನೆಯಾಗಿದ್ದು, ರಾಜ್ಯದಲ್ಲಿ ಬೆಳೆಯುತ್ತಿರುವ ಕ್ವಾಂಟಮ್ ವ್ಯವಸ್ಥೆಯನ್ನು ಬಲಪಡಿಸಲಿದೆ. ದೇಶದಲ್ಲಿ ಶೈಕ್ಷಣಿಕ ಉದ್ದೇಶಗಳಿಗೆ ಮತ್ತು ಉದ್ಯಮಗಳ ಬಳಕೆಗೆ ಕ್ವಾಂಟಮ್ ಕಂಪ್ಯೂಟಿಂಗ್ ಸಾಮರ್ಥ್ಯದ ಲಭ್ಯತೆಯನ್ನು ಹೆಚ್ಚಿಸಲಿದೆ. ಸ್ಥಳೀಯ ಆರ್ಥಿಕತೆಯ ವೇಗವರ್ಧಕ ಕಾರ್ಯಕ್ರಮದಲ್ಲಿ ಕಾರ್ಯಗತಗೊಳಿಸಿರುವ ಈ ಉಪಕ್ರಮವು, ಕರ್ನಾಟಕ ಕ್ವಾಂಟಮ್ ನೀಲನಕ್ಷೆಯ ಅಡಿಯಲ್ಲಿ ಮುಂದಿನ ಪೀಳಿಗೆಯ ತಂತ್ರಜ್ಞಾನ ಮೂಲಸೌಕರ್ಯ ಅಭಿವೃದ್ಧಿಪಡಿಸುವ ರಾಜ್ಯದ ಪ್ರಯತ್ನಗಳಿಗೆ ಪೂರಕವಾಗಿದೆ. ಪ್ರವರ್ಧಮಾನಕ್ಕೆ ಬರುತ್ತಿರುವ ತಂತ್ರಜ್ಞಾನಗಳಿಗೆ ಕರ್ನಾಟಕವು ಪ್ರಮುಖ ಕೇಂದ್ರವಾಗಿರುವುದನ್ನು ಇದು ಮತ್ತಷ್ಟು ಬಲಪಡಿಸಲಿದೆ ಎಂದರು.

ಐಐಐಟಿ-ಧಾರವಾಡದ ಬಳಕೆದಾರರಿಗೆ ಸಹಾಯ ಮಾಡಲು, ಅಪ್ಲಿಕೇಷನ್‌ಗಳನ್ನು ಅಭಿವೃದ್ಧಿಪಡಿಸಲು ಮತ್ತು ಸಂಶೋಧನೆ ಮತ್ತು ಕೈಗಾರಿಕೆಗಳ ಉದ್ದೇಶಗಳಿಗೆ ಅಗತ್ಯ ನೆರವು ಒದಗಿಸಲಿದೆ. ಕರ್ನಾಟಕವು ದೇಶದಲ್ಲಿ ಮಾತ್ರವಲ್ಲದೆ ಜಾಗತಿಕ ವೇದಿಕೆಯಲ್ಲಿಯೂ ಮುಂಚೂಣಿಯಲ್ಲಿದೆ. ಐಐಐಟಿ-ಧಾರವಾಡದ ಕ್ವಾಂಟಮ್ ಕಂಪ್ಯೂಟಿಂಗ್ ಶ್ರೇಷ್ಠತಾ ಕೇಂದ್ರದಲ್ಲಿ ಕ್ಯುಪಿಐಎಐ ಇಂಡಸ್ ಸ್ಥಾಪಿಸಿರುವುದು ರಾಜ್ಯ ಸರಕಾರದ ಕ್ವಾಂಟಮ್ ನೀಲನಕ್ಷೆಯ ನೇರ ಫಲಶ್ರುತಿಯಾಗಿದೆ ಎಂದರು.

ಈ ಕುರಿತು ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್. ಬೋಸರಾಜು ಪ್ರತಿಕ್ರಿಯಿಸಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ. ಕೆ. ಶಿವಕುಮಾರ್ ಅವರ ದೂರದರ್ಶಿತ್ವದ ಸಮರ್ಥ ನಾಯಕತ್ವದಡಿ ವಿಜ್ಞಾನ ಮತ್ತು ತಂತ್ರಜ್ಞಾನಗಳು ಯಾವಾಗಲೂ ಕರ್ನಾಟಕದ ಪ್ರಗತಿಯ ಪ್ರಬಲ ಸಾಧನಗಳಾಗಿವೆ. ಐಐಐಟಿ-ಧಾರವಾಡ ಹಾಗೂ ಐಐಐಟಿ ರಾಯಚೂರಿನಲ್ಲಿ 25-ಕ್ಯುಯುಬಿಟ್ ಕ್ವಾಂಟಮ್ ಕಂಪ್ಯೂಟರ್‌ಗಳ ನಿಯೋಜನೆಯು ರಾಜ್ಯದಲ್ಲಿ ಅನ್ವಯಿಕ ವಿಜ್ಞಾನಕ್ಕೆ ಸಂಬಂಧಿಸಿದಂತೆ ಮಹತ್ವದ ವಿದ್ಯಮಾನವಾಗಿದೆ. ಈ ದೂರದೃಷ್ಟಿ ಬೆಂಬಲಿಸಲು ಮತ್ತು ಮುನ್ನಡೆಸಲು ನಾವು ಹೆಮ್ಮೆಪಡುತ್ತೇವೆ ಎಂದಿದ್ದಾರೆ.

> ಐಐಐಟಿ-ಧಾರವಾಡದ ಕ್ವಾಂಟಮ್ ಕಂಪ್ಯೂಟಿಂಗ್ ಶ್ರೇಷ್ಠತಾ ಕೇಂದ್ರದಲ್ಲಿ ಕ್ಯುಪಿಐಎಐ ಇಂಡಸ್‌ನ 2ನೇ ಅಳವಡಿಕೆ ಮೂಲಕ, ನಾವು ಕ್ವಾಂಟಮ್ ಮೂಲಸೌಕರ್ಯಕ್ಕೆ ರಾಷ್ಟ್ರೀಯ ಪ್ರವೇಶವನ್ನು ವಿಸ್ತರಿಸುವುದರ ಜತೆಗೆ ಪ್ರಾದೇಶಿಕ ಸಾಮರ್ಥ್ಯ ಹೆಚ್ಚಿಸುತ್ತಿದ್ದೇವೆ. ಪ್ರಾಯೋಗಿಕ ಕಲಿಕೆ ಸಕ್ರಿಯಗೊಳಿಸಲು, ವಾಣಿಜ್ಯ ಬಳಕೆ ಮತ್ತು ಅಳವಡಿಕೆಗೆ ವೇಗ ನೀಡಲು ಐಐಐಟಿ-ಧಾರವಾಡ ಜತೆಗೆ ನಿಕಟವಾಗಿ ಕೆಲಸ ಮಾಡಲು ನಾವು ಎದುರು ನೋಡುತ್ತಿದ್ದೇವೆ.
>
> -ಡಾ. ನಾಗೇಂದ್ರ, ನಾಗರಾಜ
> ಸಿಇಒ ಕ್ಯುಪಿಐಎಐ

ಸಮಾಚಾರ ಸಣ್ಣದಲ್ಲ

ಮಕ್ಕಳ ಸುರಕ್ಷತೆಗೆ ನೀತಿ ಚೌಕಟ್ಟು ರೂಪಿಸಿ

ದೆಹಲಿ: ಶಾಲೆಗಳಲ್ಲಿ ಹಾಗೂ ಸಾಮಾಜಿಕ ಮಾಧ್ಯಮಗಳ ಮೂಲಕ ಮಕ್ಕಳನ್ನು ಛೇಡಿಸುವ, ಕಿರುಕುಳ ನೀಡುತ್ತಿರುವ ಪ್ರಕರಣಗಳು ಕಳವಳಕಾರಿಯಾಗಿದ್ದು, ಈ ಸಮಸ್ಯೆಯನ್ನು ಬಗೆಹರಿಸಲು ಸರ್ಕಾರವು ರಾಷ್ಟ್ರೀಯ ನೀತಿ ಚೌಕಟ್ಟನ್ನು ರೂಪಿಸಬೇಕು ಎಂದು ಸುಧಾಮೂರ್ತಿ ಆಗ್ರಹಿಸಿದ್ದಾರೆ.ರಾಜ್ಯಸಭೆಯಲ್ಲಿ ಬುಧವಾರ ವಿಷಯ ಪ್ರಸ್ತಾಪಿಸಿ ಮಾತನಾಡಿದ ಅವರು, ಎನ್‌ಸಿಇಆರ್‌ಟಿ ವರದಿಗಳ ಪ್ರಕಾರ, ಭಾರತದ ಶಾಲೆಗಳಲ್ಲಿ ಶೇ.32ರಷ್ಟು ವಿದ್ಯಾರ್ಥಿಗಳು ಕಿರುಕುಳ, ಛೇಡಿಸುವ ಘಟನೆಗಳನ್ನು ಎದುರಿಸುತ್ತಿದ್ದಾರೆ. ಶೇ.24ರಷ್ಟು ಮಕ್ಕಳು ಹೊಡೆದಾಟ ಹಾಗೂ ತಳ್ಳಾಟಕ್ಕೆ ಗುರಿಯಾಗಿದ್ದಾರೆ. ಶೇ.22ರಷ್ಟು ಮಕ್ಕಳು ತಮ್ಮ ಸಹಪಾಠಿಗಳಿಂದಲೇ ಬೆದರಿಕೆ ಎದುರಿಸುತ್ತಿದ್ದಾರೆ ಎಂದರು. ಅಲ್ಲದೇ, ಈ ಸಮಸ್ಯೆಗಳನ್ನು ಪರಿಹರಿಸಲು ಭಾವನಾತ್ಮಕ ಸೂಕ್ಷ್ಮತೆಯನ್ನು ತಿಳಿಸುವಂತ ತರಬೇತಿಯನ್ನು ಪಠ್ಯಕ್ರಮದಲ್ಲಿ ಸೇರಿಸಬೇಕು. ಪ್ರತೀ ಶಾಲೆಯು ಕಾನೂನಾತ್ಮಕವಾಗಿ ಮಕ್ಕಳಿಗೆ ಸುರಕ್ಷಿತ ಹಾಗೂ ಘನತೆಯ ವಾತಾವರಣವನ್ನು ಒದಗಿಸಬೇಕು ಎಂದು ಆಗ್ರಹಿಸಿದರು.

38.50 ಕೋಟಿ ರು. ವೆಚ್ಚದಲ್ಲಿ ನಿರ್ಮಾಣವಾದ ಬೃಹತ್ ಸೇತುವೆ ಉದ್ಘಾಟನೆ | ಸಿಎಂ ಆಗಮನದ ಹಿನ್ನೆಲೆ ಶಾಸಕರ ಅಧ್ಯಕ್ಷತೆಯಲ್ಲಿ ಅಧಿಕಾರಿಗಳ ಪೂರ್ವಭಾವಿ ಸಭೆ

ಮಾ.29ರಂದು ಎನ್.ಆರ್.ಪುರಕ್ಕೆ ಸಿಎಂ ಭೇಟಿ

ವಿಶ್ವವಾಣಿ ಸುದ್ದಿಮನೆ

ಎನ್.ಆರ್.ಪುರ: ಸಿಎಂ ಸಿದ್ದರಾಮಯ್ಯನವರು ಮೂರನೇ ಬಾರಿಗೆ ಎನ್.ಆರ್.ಪುರಕ್ಕೆ ಆಗಮಿಸುತ್ತಿರುವುದು ನಮ್ಮ ಸೌಭಾಗ್ಯ ಎಂದು ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಂ.ಶ್ರೀನಿವಾಸ್ ಹೇಳಿದರು.

ತಾಪಂ ಸಾಮರ್ಥ್ಯಸೌಧದಲ್ಲಿ ನಡೆದ ಶೃಂಗೇರಿ ಕ್ಷೇತ್ರ ಮಟ್ಟದ ಅಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, ಎನ್.ಆರ್.ಪುರಕ್ಕೆ ಈ ಹಿಂದೆ ಆಗಮಿಸಿದ್ದ ಸಿಎಂ ಸಿದ್ದರಾಮಯ್ಯನವರು ನನ್ನ ಹುಟ್ಟೂರಿಗೆ ಶಾಶ್ವತ ಕೊಡುಗೆಯಾಗಿ ಹೊನ್ನೇಕುಡಿಗೆ ಸಂಪರ್ಕ ಸೇತುವೆ ಕಾಮಗಾರಿಯನ್ನು ಮಂಜೂರು ಮಾಡಿಸಿದರು. ಅದರ ಭೂಮಿಪೂಜೆಯನ್ನೂ ಅವರೇ ನೆರವೇರಿಸಿದ್ದರು. ಇದೀಗ ಸುಮಾರು 38.50 ಕೋಟಿ ರುಪಾಯಿ ವೆಚ್ಚದಲ್ಲಿ ಸುಂದರವಾದ ಬೃಹತ್ ಸೇತುವೆ ನಿರ್ಮಾಣವಾಗಿದೆ. ಅಲ್ಲದೆ ಈ ಸೇತುವೆಗೆ ಹೋಗುವ ರಸ್ತೆಯನ್ನು ಸುಮಾರು 6 ಕೋಟಿ ರು. ವೆಚ್ಚದಲ್ಲಿ ಗುಣಮಟ್ಟದಲ್ಲಿ ನಿರ್ಮಾಣ ಮಾಡಲಾಗಿದೆ. ಸೇತುವೆ ಉದ್ಘಾಟನೆಗಾಗಿ ಸಿಎಂ ಸಿದ್ದರಾಮಯ್ಯನವರು ಮಾ.29ರಂದು ಆಗಮಿಸಲಿದ್ದಾರೆ ಎಂದು ತಿಳಿಸಿದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಶಾಸಕ ಟಿ.ಡಿ.ರಾಜೇಗೌಡ ಮಾತನಾಡಿ, ಸಿದ್ದರಾಮಯ್ಯನವರು ಮಾ.29ಕ್ಕೆ ಬಂದು ಎನ್.ಆರ್.ಪುರದಲ್ಲೇ ವಾಸ್ತವ್ಯ ಹೂಡಲಿದ್ದಾರೆ. ಮಾ.30ರಂದು ಸೇತುವೆ ಉದ್ಘಾಟನೆ ಹಾಗೂ ಪಟ್ಟಣದ ಮುಖ್ಯ ರಸ್ತೆ ಅಗಲೀಕರಣ ಕಾಮಗಾರಿಗೆ ಭೂಮಿಪೂಜೆ ಕೂಡ ನೆರವೇರಿಸಲಿದ್ದಾರೆ.

ಎನ್.ಆರ್.ಪುರ ತಾಪಂ ಸಾಮರ್ಥ್ಯಸೌಧದಲ್ಲಿ ಶಾಸಕ ಟಿ.ಡಿ.ರಾಜೇಗೌಡ ಅಧ್ಯಕ್ಷತೆಯಲ್ಲಿ ಪೂರ್ವ ಭಾವಿ ಸಭೆ ನಡೆಯಿತು. ಎಂ. ಶ್ರೀನಿವಾಸ್, ಡಾ.ಕೆ.ಪಿ.ಅಂಶುಮಂತ್, ನಾರಾಯಣರೆಡ್ಡಿ ಕನಕರೆಡ್ಡಿ, ಬಾಲಾಜಿ ಸಿಂಗ್, ಡಾ.ನೂರುಲ್ಲುದಾ, ಎಚ್.ಡಿ.ನವೀನ್‌ಕುಮಾರ್, ಸುದೀಪ್ ಇದ್ದರು.

ಮಾ.30 ರ ಸಂಜೆ ಬೆಂಗಳೂರಿಗೆ ಪ್ರಯಾಣ ಬೆಳೆಸಲಿದ್ದಾರೆ. ಈಗಾಗಲೇ ಜಿಲ್ಲಾಧಿಕಾರಿಗಳು, ಎಸ್‌ಪಿ, ಎಸಿ ಸೇರಿದಂತೆ ಜಿಲ್ಲಾಮಟ್ಟದ ಅಧಿಕಾರಿಗಳೊಂದಿಗೆ ಸೇತುವೆ ಕಾಮಗಾರಿಯನ್ನು ವೀಕ್ಷಿಸಲಾಗಿದೆ. ಸಿದ್ದರಾಮಯ್ಯನವರು ಆಗಮಿಸುತ್ತಿರುವ ಹಿನ್ನೆಲೆಯಲ್ಲಿ ಉದ್ಘಾಟನಾ ಕಾರ್ಯಕ್ರಮ ಯಾವುದೇ ಗೊಂದಲಗಳಿಲ್ಲದ ರೀತಿಯಲ್ಲಿ ಅತ್ಯಂತ ಯಶಸ್ವಿಯಾಗಿ ನೆರವೇರಬೇಕು. ಅದ್ಭುತವಾದ ಕಾರ್ಯಕ್ರಮವಾಗಬೇಕು. ಗ್ರಾಪಂ ಮಟ್ಟದಲ್ಲಿ ಪಿಡಿಒ ಹಾಗೂ ಆಶಾ ಕಾರ್ಯಕರ್ತೆಯರ ಸಭೆಯನ್ನು ನಡೆಸಬೇಕು ಎಂದು ತಾಪಂ ಇಒ ಎಚ್.ಡಿ.ನವೀನ್ ಕುಮಾರ್ ಅವರಿಗೆ ತಿಳಿಸಿದರು.

ಕ್ಷೇತ್ರದ ಎಲ್ಲ ತಾಲೂಕುಗಳಿಂದ ಗ್ಯಾರಂಟಿ ಯೋಜನೆಗಳ ಫಲಾನುಭವಿಗಳು ಈ ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಕ್ರಮವಹಿಸಬೇಕು. ಆದ್ದರಿಂದ 3 ತಾಲೂಕಿನ ಅಧಿಕಾರಿಗಳು ತಮ್ಮ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸಬೇಕು. ತಾಪಂ ಇಒಗಳು 3 ತಾಲೂಕಿನ ಪಿಡಿಒಗಳ ಸಭೆ ಕರೆದು ಅವರಿಗೆ ಕೆಲವು ಜವಾಬ್ದಾರಿ ನೀಡಬೇಕು. 10 ದಿನದ ಒಳಗೆ ಕೆಲವು ಪೂರ್ವಸಿದ್ಧತೆ ಆಗಬೇಕಾಗಿದೆ. ಪ್ರತಿ ತಾಲೂಕಿನ 5 ಫಲಾನುಭವಿಗಳಿಗೆ ಹಕ್ಕುಪತ್ರ ವಿತರಣೆಯಾಗಲಿದ್ದು, 3 ತಾಲೂಕಿನ ತಹಸೀಲ್ದಾರ್‌ರು ಇದನ್ನು ಸಿದ್ಧಪಡಿಸಬೇಕು ಎಂದು ಸೂಚಿಸಿದರು.

ಎನ್.ಆರ್.ಪುರ ಪಟ್ಟಣದ ಚಿತ್ರಣವೇ ಬದಲು

130 ವರ್ಷಗಳಿಂದ ಎನ್.ಆರ್.ಪುರ ಪಟ್ಟಣದ ರಸ್ತೆ ಅಗಲೀಕರಣವಾಗಿರಲಿಲ್ಲ. ರಸ್ತೆ ಕಿರಿದಾಗಿದ್ದು, ವಾಹನಗಳ ಓಡಾಟವೇ ಕಷ್ಟವಾಗಿತ್ತು. ನನ್ನ ಹುಟ್ಟೂರಿನ ಅಭಿಮಾನಕ್ಕಾಗಿ ರಸ್ತೆ ಅಗಲೀಕರಣ ಮಾಡಿ ಮನೆ ಮಾಲೀಕರಿಗೆ ಪರಿಹಾರ ಕೊಡಿಸಬೇಕು ಎಂದು 60 ಕೋಟಿ ರುಪಾಯಿ ಮಂಜೂರು ಮಾಡಿಸಿಕೊಂಡು ಬಂದಿದ್ದೇನೆ. ರಸ್ತೆ ಅಗಲೀಕರಣಕ್ಕೆ 20 ಕೋಟಿ ರುಪಾಯಿ ಸಾಕಾಗುತ್ತದೆ. ಉಳಿದ 40 ಕೋಟಿ ರುಪಾಯಿಯನ್ನು ನಿವೇಶನ, ಮನೆ ಕಳೆದುಕೊಂಡವರಿಗೆ ಪರಿಹಾರ ನೀಡಲಾಗುವುದು. ಅನೇಕ ಶಾಸಕರು, ಮಂತ್ರಿಗಳು ವಿರೋಧಿಸಿದರೂ ಮುಖ್ಯಮಂತ್ರಿ ಸಿದ್ದರಾಮಯ್ಯ ನನ್ನ ಒತ್ತಾಯಕ್ಕೆ, ವಿಶ್ವಾಸಕ್ಕೆ ಮಣಿದು 60 ಕೋಟಿ ರುಪಾಯಿ ಮಂಜೂರು ಮಾಡಿದ್ದಾರೆ. ಸರಕಾರದ ಮಾನದಂಡದ ಪ್ರಕಾರ ಪರಿಹಾರ ನೀಡುತ್ತೇವೆ. ರಸ್ತೆ ಅಗಲೀಕರಣದಿಂದ ಎನ್.ಆರ್.ಪುರ ಪಟ್ಟಣ ಅಭಿವೃದ್ಧಿ ಕಾಣಲಿದೆ. ಆಸ್ತಿ ಬೆಲೆ ಜಾಸ್ತಿಯಾಗಲಿದೆ. ಎನ್.ಆರ್.ಪುರ ಪಟ್ಟಣದ ಚಿತ್ರಣವೇ ಬದಲಾಗಲಿದೆ. ರಸ್ತೆ ಅಗಲೀಕರಣ ವ್ಯಾಪ್ತಿಯ 11 ಜನರು ನ್ಯಾಯಾಲಯಕ್ಕೆ ಹೋಗಿದ್ದಾರೆ. ಆದರೂ ರಸ್ತೆ ಅಗಲೀಕರಣ ನಿಲ್ಲುವುದಿಲ್ಲ. ಇದು ಸಾರ್ವಜನಿಕರ, ಸರಕಾರದ ಕೆಲಸವಾಗಿದೆ. ಪರಿಹಾರ ನೀಡಿ ರಸ್ತೆ ಅಗಲೀಕರಣ ಮಾಡುತ್ತಿರುವುದರಿಂದ ಎನ್.ಆರ್.ಪುರದ ಜನರು ಸಹಕಾರ ನೀಡಬೇಕು ಎಂದು ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಂ.ಶ್ರೀನಿವಾಸ್ ಮನವಿ ಮಾಡಿದರು.

ಶಿವಮೊಗ್ಗ ಭದ್ರಾ ಕಾಡಾ ಅಧ್ಯಕ್ಷ ಡಾ.ಕೆ.ಪಿ.ಅಂಶುಮಂತ್ ಮಾತನಾಡಿ, ಈ ಸಮಾರಂಭವು ಈ ಊರಿನ ಐತಿಹಾಸಿಕ ಸಮಾರಂಭವಾಗಲಿದೆ. ಊರಿನಲ್ಲಿ ಎಲ್ಲೆಡೆ ಹಬ್ಬದ ವಾತಾವರಣ ಸೃಷ್ಟಿ ಮಾಡಬೇಕು. ವಿದ್ಯುತ್ ಅಲಂಕಾರದಿಂದ ಊರು ಕಂಗೊಳಿಸಬೇಕು. ಈ ಸಮಾರಂಭಕ್ಕೆ ಊರಿನ ಪ್ರಮುಖರು, ಹಿರಿಯ ನಾಗರೀಕರು, ಎಲ್ಲ ಜನಪ್ರತಿನಿಧಿಗಳು, ಸಂಘ–ಸಂಸ್ಥೆಗಳ ಪದಾಧಿಕಾರಿಗಳನ್ನು ಕಡ್ಡಾಯವಾಗಿ ಆಹ್ವಾನಿಸಬೇಕು ಎಂದು ಹೇಳಿದರು.

ಚಿಕ್ಕಮಗಳೂರು ಜಿಲ್ಲೆಯ ಅಪರ ಜಿಲ್ಲಾಧಿಕಾರಿ ನಾರಾಯಣರೆಡ್ಡಿ ಮಾತನಾಡಿ, ಮುಂದೆ ಜಿಲ್ಲಾಮಟ್ಟದ ಅಧಿಕಾರಿಗಳ ಸಭೆ ಕರೆಯಲಾಗುವುದು. ಲೋಕೋಪಯೋಗಿ ಇಲಾಖೆಯವರು ರಾಜ್ಯಮಟ್ಟದ ಶಿಷ್ಟಾಚಾರದಂತೆ ಆಹ್ವಾನ ಪತ್ರಿಕೆ ಮಾಡಿಸಬೇಕು. ಅತಿಥಿಗಳಿಗೆ ಕಡ್ಡಾಯವಾಗಿ ಆಹ್ವಾನ ಪತ್ರಿಕೆ ನೀಡಬೇಕು ಎಂದರು.

ಸಭೆಯಲ್ಲಿ ಕೊಪ್ಪ ಡಿವೈಎಸ್‌ಪಿ ಬಾಲಾಜಿ ಸಿಂಗ್, ಕೆಎಸ್‌ಆರ್‌ಟಿಸಿ ಜಿಲ್ಲಾಧಿಕಾರಿ ಸತೀಶ್, ತಹಸೀಲ್ದಾರ್ ಡಾ.ನೂರುಲ್ಲುದಾ, ಎನ್.ಆರ್.ಪುರ ತಾಪಂ ಇಒ ಎಚ್.ಡಿ.ನವೀನ್‌ಕುಮಾರ್, ಶೃಂಗೇರಿ ತಾಪಂ ಇಒ ಸುದೀಪ್ ಇದ್ದರು.

ಹಿರಿಯ ಪತ್ರಕರ್ತ ಕೆ.ಜೆ.ಕುಮಾರ್ ನಿಧನ

ಮೈಸೂರು: ಮೈಸೂರಿನ ಹಿರಿಯ ಪತ್ರಕರ್ತ ಕೆ.ಜೆ.ಕುಮಾರ್ (74) ಬುಧವಾರ ಸಂಜೆ ಹೃದಯಾಘಾತದಿಂದ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಪತ್ನಿ ಉಷಾ, ಪುತ್ರಿ ಸುನಯ ಶೆಟ್ಟಿ, ಸೋದರಿ, ನಗರಪಾಲಿಕೆ ಮಾಜಿ ಸದಸ್ಯೆ ಪ್ರಮೀಳಾ ಪ್ರಕಾಶ್ ಸೇರಿದಂತೆ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ.

ಉಡುಪಿ ಜಿಲ್ಲೆಯ ಕೊರಂದರ ಪಾಳ್ಯದವರಾದ ಕೆ.ಜೆ.ಕುಮಾರ್ ಅವರು ಸುಮಾರು 56 ವರ್ಷಗಳಿಂದ ಮೈಸೂರಿನ ಪ್ರಮುಖ ಪತ್ರಿಕಾ ವಿತರಕರಾಗಿ ಹಾಗೂ ಪತ್ರಕರ್ತರಾಗಿ ಸೇವೆ ಸಲ್ಲಿಸಿದ್ದಾರೆ. 1969ರಲ್ಲಿ ಅವರ ಸೋದರ ಮಾವ ವಿಧಾನ ಪರಿಷತ್ ಮಾಜಿ ಸದಸ್ಯ ಹಾಗೂ ಸ್ವತಂತ್ರ ಹೋರಾಟಗಾರ ಎ.ರಾಮಣ್ಣ ಸಂಪಾದಕತ್ವದ ವಿಜಯ ದಿನಪತ್ರಿಕೆಯಲ್ಲಿ ಪತ್ರಕರ್ತರಾಗಿ ವೃತ್ತಿ ಬದುಕು ಆರಂಭಿಸಿದರು. ನಂತರ ವಿಜಯ ದಿನಪತ್ರಿಕೆ ಪ್ರಕಾಶಕ ಹಾಗೂ ಮುದ್ರಕರಾಗಿದ್ದರು. ಸಿನಿಮಾ ಪತ್ರಕರ್ತರಾಗಿ ಸುಧಾ ವಾರಪತ್ರಿಕೆ, ವಿಜಯ ಚಿತ್ರ ಸಿನಿಮಾ ಮಾಸ ಪತ್ರಿಕೆಗಳಲ್ಲಿ ಸೇವೆ ಸಲ್ಲಿಸಿದ ನಂತರ, 1978ರಿಂದ ರೂಪಾತಾರ ಸಿನಿಮಾ ಮಾಸ ಪತ್ರಿಕೆಗೆ ನಾಲ್ಕು ದಶಕಗಳ ಕಾಲ ಪತ್ರಕರ್ತರಾಗಿ ಸೇವೆ ಸಲ್ಲಿಸಿದರು. 1993ರಲ್ಲಿ ಉದಯವಾಣಿ ದಿನಪತ್ರಿಕೆಯ ಬೆಂಗಳೂರು ಆವೃತ್ತಿ ಆರಂಭವಾದಾಗ ಮೈಸೂರಿನ ಪ್ರತಿನಿಧಿಯಾಗಿ ಸುಮಾರು ಒಂದೂವರೆ ದಶಕಗಳ ಕಾಲ ಸೇವೆ ಸಲ್ಲಿಸಿದರು. ಕಳೆದ ಒಂದೂವರೆ ದಶಕಗಳಿಂದ ಹೊಸದಿಗಂತ ದಿನಪತ್ರಿಕೆ ಸಿನಿಮಾ ವಿಭಾಗ ನೋಡಿಕೊಳ್ಳುತ್ತಿದ್ದರು.

ಪತ್ರಿಕಾ ಕ್ಷೇತ್ರವಲ್ಲದೆ ಹೋಟೆಲ್ ಉದ್ಯಮದಲ್ಲೂ ತೊಡಗಿಸಿಕೊಂಡಿದ್ದ ಅವರು ಮೈಸೂರಿನ ಸರಸ್ವತಿ ಪುರಂನಲ್ಲಿ ಕುಠೀರ ಮನೆ ಎಂಬ ಹೋಟೆಲ್ ಸ್ಥಾಪಿಸಿದ್ದರು.

ಕನ್ನಡ ಚಿತ್ರೋದ್ಯಮದಲ್ಲಿ ಪತ್ರಕರ್ತರಾಗಿ ಹೆಸರಾಗಿದ್ದ ಕೆ.ಜೆ.ಕುಮಾರ್, ಕನ್ನಡ ಚಿತ್ರರಂಗದ ದಿಗ್ಗಜರಾದ ಡಾ.ರಾಜ್ ಕುಮಾರ್, ವಿಷ್ಣುವರ್ಧನ್, ಅಂಬರೀಷ್, ರಜನಿಕಾಂತ್, ಶಶಿಕುಮಾರ್, ನಿರ್ಮಾಪಕರಾದ ದ್ವಾರಕೀಶ್, ವೀರಸ್ವಾಮಿ, ನಿರ್ದೇಶಕರಾದ ಪುಟ್ಟಣ್ಣ ಕಣಗಾಲ್, ಸಿದ್ದಲಿಂಗಯ್ಯ, ಎಸ್.ವಿ.ರಾಜೇಂದ್ರ ಸಿಂಗ್ ಬಾಬು ಅವರೊಂದಿಗೆ ಆತ್ಮೀಯ ಒಡನಾಟ ಹೊಂದಿದ್ದರು.

ಗುರುವಾರ ಮಧ್ಯಾಹ್ನ ಮೈಸೂರಿನ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿರುವ ಹರಿಶ್ಚಂದ್ರ ರುದ್ರಭೂಮಿಯಲ್ಲಿ ಅಂತ್ಯಸಂಸ್ಕಾರ ನೆರವೇರಲಿದೆ ಎಂದು ಕುಟುಂಬದವರು ತಿಳಿಸಿದ್ದಾರೆ.

ಒಳ ಮೀಸಲಿನನ್ವಯ ನೇಮಕಕ್ಕೆ ಆಗ್ರಹ

ಚಿತ್ರದುರ್ಗ: 56,432 ಹುದ್ದೆಗಳನ್ನು ಒಳಮೀಸಲಾತಿ ಅನ್ವಯವೇ ನೇಮಕಾತಿ ನಡೆಸುವ ಸಂಬಂಧ ಮರು ಅಧಿಸೂಚನೆ ಹೊರಡಿಸಿ ಎಂದು ಒತ್ತಾಯಿಸಿ ಕೆಪಿಸಿಸಿ ಉಪಾಧ್ಯಕ್ಷ ಎಚ್. ಆಂಜನೇಯ ಸಿಎಂಗೆ ಪತ್ರ ಬರೆದಿದ್ದಾರೆ. ಆಂಧ್ರಪ್ರದೇಶ, ತೆಲಂಗಾಣದಲ್ಲಿ ಈಗಾಗಲೇ ಒಳಮೀಸಲಾತಿ ಅನುಷ್ಠಾನಗೊಂಡಿದೆ. ಹೆಚ್ಚು ಮೀಸಲಾತಿ ಸೌಲಭ್ಯವುಳ್ಳವರು ಸಂವಿಧಾನದ ವಿರುದ್ಧವಾಗಿ ನಡೆದುಕೊಳ್ಳುತ್ತಿರುವುದು ಆತಂಕಕ್ಕೆ ಕಾರಣವಾಗಿದೆ ಎಂದು ತಿಳಿಸಿದ್ದಾರೆ.

ಬಿಜೆಪಿ ರಾಜ್ಯ ಶಿಸ್ತು ಸಮಿತಿ ಅಧ್ಯಕ್ಷ ಸ್ಥಾನಕ್ಕೆ ಲಿಂಗರಾಜ ಪಾಟೀಲ ರಾಜೀನಾಮೆ

ಹುಬ್ಬಳ್ಳಿ: ಕರ್ನಾಟಕ ಪಶ್ಚಿಮ ಪದವೀಧರರ ಕ್ಷೇತ್ರದ ಚುನಾವಣೆಗೆ ಸ್ಪರ್ಧಿಸಲು ಟಿಕೆಟ್ ನೀಡದ ಕಾರಣ ಬೇಸರವಾಗಿದೆ. ಹೀಗಾಗಿ ಬಿಜೆಪಿ ರಾಜ್ಯ ಶಿಸ್ತು ಸಮಿತಿ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ್ದೇನೆ ಎಂದು ಲಿಂಗರಾಜ ಪಾಟೀಲ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕಳೆದ 37 ವರ್ಷಗಳಿಂದ ಪಕ್ಷದ ನಿಷ್ಠಾವಂತ ಕಾರ್ಯಕರ್ತನಾಗಿ ಕೆಲಸ ಮಾಡಿದ್ದೇನೆ. ಪಕ್ಷ ನೀಡಿದ ಹಲವು ಜವಾಬ್ದಾರಿಗಳನ್ನು ಸಮರ್ಥವಾಗಿ ನಿಭಾಯಿಸಿದ್ದೇನೆ. ಈಗ ಟಿಕೆಟ್ ನೀಡದ ಕಾರಣ ನೋವಾಗಿದೆ ಎಂದು ಭಾವುಕರಾದರು.ಎಸ್.ವಿ.ಸಂಕನೂರ ಅವರಿಗೆ ಟಿಕೆಟ್ ನೀಡಲಾಗಿದೆ. ಅದನ್ನು ಬದಲಿಸಿ ನನಗೆ ಟಿಕೆಟ್ ನೀಡಲು ಇನ್ನೂ ಸಮಯ ಇದೆ. ಎಂಟು ದಿನಗಳಲ್ಲಿ ವರಿಷ್ಠರು ಈ ಬಗ್ಗೆ ತೀರ್ಮಾನ ಮಾಡದಿದ್ದರೆ ನನ್ನ ಮುಂದಿನ ನಿರ್ಧಾರ ಪ್ರಕಟಿಸುತ್ತೇನೆ ಎಂದರು. ಬಿಜೆಪಿಯಲ್ಲಿ ನಿಷ್ಠಾವಂತ ಕಾರ್ಯಕರ್ತರಿಗೆ ಬೆಲೆ ಇಲ್ಲ. ರಾಜ್ಯದಲ್ಲಿ ಪಕ್ಷ ಬೆಳೆಯದಿರುವುದಕ್ಕೆ ಇದೇ ಕಾರಣ. ಹುಬ್ಬಳ್ಳಿ–ಧಾರವಾಡದಲ್ಲಿ ಪರ್ಯಾಯ ರಾಜಕೀಯ ಶಕ್ತಿ ಬೆಳೆಯಬಾರದು ಎಂದು ನನಗೆ ಟಿಕೆಟ್ ತಪ್ಪಿಸಿರುವ ಸಾಧ್ಯತೆ ಇದೆ. ನನ್ನ ವಿರುದ್ಧ ಪಿತೂರಿ ಮಾಡಿದ್ದಾರೆ. ಪಕ್ಷ ನನಗೆ ಮಾಡಿದ ಅನ್ಯಾಯ ಇಡೀ ಬಿಜೆಪಿ ಕಾರ್ಯಕರ್ತರಿಗೆ ಮಾಡಿದ ಅನ್ಯಾಯವಾಗಿದೆ. ಪಕ್ಷ ನನಗೆ ತಾಯಿ ಇದ್ದಂತೆ. ಪಕ್ಷ ಬಿಡುವುದಿಲ್ಲ. ಆದರೆ, ನನ್ನ ಕಾರ್ಯವೈಖರಿ ಬದಲಾಗಲಿದೆ ಎಂದು ಹೇಳಿದರು.

ಚಂದ್ರು ಲಮಾಣಿಗೆ ಜಾಮೀನು

ಬೆಂಗಳೂರು: ಗುತ್ತಿಗೆದಾರನಿಂದ ಐದು ಲಕ್ಷ ರು. ಲಂಚ ಸ್ವೀಕರಿಸಿದ ಆರೋಪ ಪ್ರಕರಣದಲ್ಲಿ ಬಂಧನಕ್ಕೊಳಗಾಗಿದ್ದ ಗದಗ ಜಿಲ್ಲೆಯ ಶಿರಹಟ್ಟಿ ಕ್ಷೇತ್ರದ ಬಿಜೆಪಿ ಶಾಸಕ ಡಾ. ಚಂದ್ರು ಲಮಾಣಿಗೆ ಜಾಮೀನು ಮಂಜೂರಾಗಿದೆ.

ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ಕೋರ್ಟ್‌ನಿಂದ ಷರತ್ತುಬದ್ಧ ಜಾಮೀನು ಮಂಜೂರು ಮಾಡಲಾಗಿದೆ. ಆ ಮೂಲಕ ಬಿಜೆಪಿ ಶಾಸಕನಿಗೆ ಬಿಗ್ ರಿಲೀಫ್ ಸಿಕ್ಕಿದೆ. ಲೋಕಾಯುಕ್ತ ಪೊಲೀಸರಿಂದ ಲಂಚ ಪ್ರಕರಣದಲ್ಲಿ ಬಂಧನಕ್ಕೊಳಗಾಗಿದ್ದ ಬಿಜೆಪಿ ಶಾಸಕ ಡಾ. ಚಂದ್ರು ಲಮಾಣಿಗೆ ಇದೀಗ ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ಕೋರ್ಟ್ ಜಾಮೀನು ನೀಡಿದೆ. ಐದು ಲಕ್ಷ ರು. ಲಂಚ ಸ್ವೀಕರಿಸಿದ ಆರೋಪದ ಹಿನ್ನೆಲೆ ಬಂಧಿಸಲಾಗಿದ್ದು, ಕಳೆದ 15 ದಿನಗಳಿಂದ ಪರಪ್ಪನ ಅಗ್ರಹಾರ ಜೈಲಿನಲ್ಲಿ ನ್ಯಾಯಾಂಗ ಬಂಧನದಲ್ಲಿದ್ದರು.ಈ ಮಧ್ಯೆ ಸಲ್ಲಿಸಲಾಗಿದ್ದ ಜಾಮೀನು ಅರ್ಜಿಯ ವಿಚಾರಣೆ ನಡೆಸಿದ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯವು ಶಾಸಕ ಡಾ. ಚಂದ್ರು ಲಮಾಣಿಗೆ ಷರತ್ತುಬದ್ಧ ಜಾಮೀನು ಮಂಜೂರು ಮಾಡಿದೆ. ಎರಡು ಲಕ್ಷ ರೂ ವೈಯಕ್ತಿಕ ಬಾಂಡ್ ಹಾಗೂ ಇಬ್ಬರು ಶ್ಯೂರಿಟಿ ಒದಗಿಸುವ ಷರತ್ತಿನೊಂದಿಗೆ ನ್ಯಾಯಾಲಯ ಜಾಮೀನು ನೀಡಿ ಆದೇಶಿಸಿದೆ. ಫೆ. 21ರಂದರು ಶಾಸಕ ಚಂದ್ರು ಲಮಾಣಿ ಲೋಕಾ ಬಲೆಗೆ ಬಿದ್ದಿದ್ದರು. ಗುತ್ತಿಗೆದಾರನಿಂದ 5 ಲಕ್ಷ ರು. ಲಂಚ ಪಡೀತಿದ್ದಾಗ ರೆಡ್ ಹ್ಯಾಂಡಾಗಿ ಲಾಕ್ ಆಗಿದ್ದರು. ಈ ಪ್ರಕರಣದಲ್ಲಿ ಲಮಾಣಿ ಜೈಲು ಸೇರಿದ್ದರು. ಘಟನೆ ಬೆನ್ನಲ್ಲೇ ಗದಗ ಜಿಲ್ಲೆಯ ಲಕ್ಷ್ಮೇಶ್ವರದಲ್ಲಿ ಚಂದ್ರು ಬೆಂಬಲಗರು ಹಾಗೂ ಬಂಜಾರದ ಸಮುದಾಯ ಸಿಡಿದೆದ್ದಿತ್ತು. ಚಂದ್ರು ಲಮಾಣಿ ವಿರುದ್ಧ ಷಡ್ಯಂತ್ರ ನಡೆದಿರೋದಾಗಿ ಸಮುದಾಯ ಆರೋಪಿಸಿತ್ತು.

ಒಂದೇ ದಿನ 108 ನಕ್ಸಲರು ಶರಣು

← ಮೊದಲಪುಟದಿಂದ

ನಕ್ಸಲರ ದಂಡಕಾರಣ್ಯ ವಿಶೇಷ ವಲಯ ಸಮಿತಿಗೆ ಸೇರಿದ ಈ ಕಾರ್ಯ ಕರ್ತರು ಬಸ್ತಾರ್ ಜಿಲ್ಲಾ ಕೇಂದ್ರವಾದ ಜಗದಲ್ಪುರದಲ್ಲಿ ಶರಣಾಗಿದ್ದಾರೆ ಎಂದು ಪಟ್ಟಿಲಿಂಗಮ್ ಹೇಳಿದರು.

ಈ ನಕ್ಸಲರು ಹಿಂದೆ ದಕ್ಷಿಣ ಬಸ್ತಾರ್‌ನಲ್ಲಿ ಹಲವಾರು ಮಾರಕ ದಾಳಿಗಳನ್ನು ಆಯೋಜಿಸಿದ್ದರು. ಶರಣಾದ ಕಾರ್ಯಕರ್ತರು ಒದಗಿಸಿದ ಮಾಹಿತಿ ಮಾವೋವಾದಿಗಳ ಅಡಗುತಾಣಗಳಿಂದ ಶಸ್ತ್ರಾಸ್ತ್ರಗಳು, ನಗದು ಮತ್ತು ಇತರ ವಸ್ತುಗಳನ್ನು ವಶಪಡಿಸಿಕೊಳ್ಳುವುದು ಸೇರಿದಂತೆ ಗಮನಾರ್ಹ ಯಶಸ್ಸನ್ನು ಸಾಧಿಸಲು ಸಹಾಯ ಮಾಡಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಪೀಪಲ್ಸ್ ಲಿಬರೇಶನ್ ಗೆರಿಲ್ಲಾ ಆರ್ಮಿ (ಪಿಎಲ್‌ಜಿಎ) ಬೆಟಾಲಿಯನ್‌ನ ಕಮಾಂಡರ್ ಮುಚಾಕಿ ಮತ್ತು ಮಾವೋವಾದಿಗಳ ಆಂಧ್ರ–ಒಡಿಶಾ ಗಡಿ ಪ್ರದೇಶದ ವಿಭಾಗೀಯ ಸಮಿತಿ ಸದಸ್ಯ ಕೋಸಾ ಮಾಂಡವಿ ಸೇರಿದಂತೆ ಇತರರನ್ನು ಶರಣಾದವರ ಪಟ್ಟಿಯಲ್ಲಿದ್ದಾರೆ.

ನಿಲ್ಲದ ಗ್ಯಾಸ್ ಟ್ರಬಲ್

← ಮೊದಲಪುಟದಿಂದ

ಆದ್ದರಿಂದ ಗೃಹಪಯೋಗಿ ಸಿಲಿಂಡರ್ ಅನ್ನು ತಿಂಗಳಿಗೊಂದು ನೀಡಲು ತೀರ್ಮಾನಿಸಲಾಗಿದೆ. ಸಿಲಿಂಡರ್ ಶೇಖರಿಸಿಟ್ಟುಕೊಳ್ಳುವ ಅಗತ್ಯವಿಲ್ಲ. ಒಂದು ವೇಳೆ ಮಾಡಿದರೆ ಕ್ರಮ ಜರುಗಿಸುತ್ತೇವೆ ಎಂದು ಎಚ್ಚರಿಸಿದರು.

ಹೋಟೆಲ್, ಪಿಜಿಗಳಲ್ಲಿ ಭಾರಿ ಸಮಸ್ಯೆ: ಬೆಂಗಳೂರು ಸೇರಿದಂತೆ ರಾಜ್ಯದ ಹಲವೆಡೆ ಗ್ಯಾಸ್ ಸಿಲಿಂಡರ್ ಕೊರತೆ ತೀವ್ರಗೊಂಡ ಹಿನ್ನೆಲೆಯಲ್ಲಿ, ಹೋಟೆಲ್ ಮತ್ತು ಪಿಜಿಯಲ್ಲಿ ಅಡುಗೆ ಸೇವೆಗೆ ಭಾರೀ ತೊಂದರೆ ಉಂಟಾಗಿದೆ. ವಾಣಿಜ್ಯ ಬಳಕೆಯ ಎಲ್‌ಪಿಜಿ ಸಿಲಿಂಡರ್ ಸರಬರಾಜು ಕಳೆದ ಮೂರು ದಿನಗಳಿಂದ ಸ್ಥಗಿತಗೊಂಡಿರುವುದರಿಂದ ನಗರದಲ್ಲಿ ಅನೇಕ ಹೋಟೆಲ್‌ಗಳು ಮಧ್ಯಾಹ್ನದ ವೇಳೆಗೆ ಬಂದ್ ಆಗುವ ಪರಿಸ್ಥಿತಿ ನಿರ್ಮಾಣವಾಗಿದೆ.

ಬೆಂಗಳೂರಿನ ಹಲವು ಪಿಜಿ ಹಾಗೂ ಹೋಟೆಲ್‌ಗಳು, ಗ್ಯಾಸ್ ಕೊರತೆಯಿಂದ ಮಧ್ಯಾಹ್ನದ ಊಟವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲು ನಿರ್ಧರಿಸಿದ್ದಾರೆ. ಗ್ಯಾಸ್ ಸಿಲಿಂಡರ್ ಪೂರೈಕೆ ಸರಿಯಾಗುವವರೆಗೆ ಮಧ್ಯಾಹ್ನದ ಊಟ ನೀಡಲು ಸಾಧ್ಯವಿಲ್ಲ ಎಂದು ಪಿಜಿ ಮಾಲೀಕರು ನೋಟಿಸ್ ನೀಡುತ್ತಿದ್ದಾರೆ. ಇದರಿಂದ ಪಿಜಿಗಳಲ್ಲಿ ವಾಸಿಸುವ ವಿದ್ಯಾರ್ಥಿಗಳು ಮತ್ತು ಐಟಿ ಉದ್ಯೋಗಿಗಳು ಮಧ್ಯಾಹ್ನದ ಊಟಕ್ಕಾಗಿ ಪರದಾಡುವ ಪರಿಸ್ಥಿತಿ ಎದುರಾಗಿದೆ.

ವಿದ್ಯಾರ್ಥಿ ಭವನ್ ಸೀಟು ಕಡಿತ: ನಗರದ ಪ್ರಸಿದ್ಧ ಹೋಟೆಲ್‌ಗಳಲ್ಲಿ ಒಂದಾಗಿರುವ ವಿದ್ಯಾರ್ಥಿ ಭವನದಲ್ಲಿ ಗ್ರಾಹಕರಿಗೆ ನೀಡುವ ಸೀಟುಗಳ ಸಂಖ್ಯೆಯನ್ನು ಕಡಿಮೆ ಮಾಡಲಾಗಿದೆ. ಸಾಮಾನ್ಯವಾಗಿ ಲಭ್ಯವಿದ್ದ ಸುಮಾರು 40 ಸೀಟುಗಳನ್ನು ತಾತ್ಕಾಲಿಕವಾಗಿ ಕಡಿತಗೊಳಿಸಲಾಗಿದೆ. ಗ್ಯಾಸ್ ಕೊರತೆಯಿಂದಾಗಿ ತಿಂಡಿ ಪೂರೈಕೆ ಸರಿಯಾಗಿ ಮಾಡಲು ಸಾಧ್ಯವಾಗುತ್ತಿಲ್ಲ. ಬೆಳಿಗ್ಗೆ ನಾಲ್ಕು ಹಂಚುಗಳಲ್ಲಿ ದೋಸೆ ತಯಾರಿಸುತ್ತಿದ್ದರೆ, ಈಗ ಕೇವಲ ಒಂದು ಹಂಚಿನಲ್ಲಿ ಮಾತ್ರ ದೋಸೆ ತಯಾರಿಸುವ ಪರಿಸ್ಥಿತಿ ಎದುರಾಗಿದೆ ಎಂದು ಹೋಟೆಲ್ ಸಿಬ್ಬಂದಿ ತಿಳಿಸಿದ್ದಾರೆ. ಇನ್ನು ನಾಯಂಡಹಳ್ಳಿ ಭಾಗದಲ್ಲಿರುವ ಖಾಸಗಿ ವಾಹನಗಳ ಎಲ್‌ಪಿಜಿ ಗ್ಯಾಸ್ ಬಂಕ್ ಗ್ಯಾಸ್ ಕೊರತೆಯ ಕಾರಣದಿಂದ ಬುಧವಾರ ಮುಚ್ಚಿದೆ. ಇದರಿಂದ ವಾಹನಗಳಿಗೆ ಎಲ್‌ಪಿಜಿ ಬಳಸುವ ಚಾಲಕರು ತೊಂದರೆಗೆ ಒಳಗಾಗಿದ್ದಾರೆ. ಹಲವು ಹೋಟೆಲ್‌ಗಳಲ್ಲಿ ಮೆನು ಕಡಿತಗೊಳಿಸಿ ಕೇವಲ ಮಸಾಲೆ ದೋಸೆ, ವಡೆ, ಟೀ ಮತ್ತು ಕಾಫಿ ಮಾತ್ರ ಪೂರೈಕೆ ಮಾಡಲಾಗುತ್ತಿದೆ.

ಅನ್ನ ಸಾಂಬಾರ್‌ಗೆ ಸೈ ದೋಸೆ, ಇಡ್ಲಿಗೆ ಕೊಕ್

ಪಿಜಿಗಳಲ್ಲಿ ಆಹಾರ ಪೂರೈಕೆಯನ್ನು ತಾತ್ಕಾಲಿಕವಾಗಿ ಕಡಿತಗೊಳಿಸಲಾಗುತ್ತದೆ ಎಂದು ಹೇಳಿರುವ ನೋಟಿಸ್ ತೀವ್ರ ವಿವಾದಕ್ಕೆ ಕಾರಣವಾಗಿದೆ. ಅನ್ನ, ದಾಲ್/ಸಾಂಬಾರ್, ಉಪ್ಪಿನಕಾಯಿ ಹಾಗೂ ಮಜ್ಜಿಗೆ ಮಾತ್ರ ನೀಡಲಾಗುತ್ತದೆ ಎಂದು ಹೇಳಲಾಗಿದೆ. ದೋಸೆ, ಇಡ್ಲಿ, ಪೂರಿ, ಚಪಾತಿ ಸೇರಿದಂತೆ ಹೆಚ್ಚು ಇಂಧನ ಅಗತ್ಯವಿರುವ ಆಹಾರ ಪದಾರ್ಥಗಳನ್ನು ತಾತ್ಕಾಲಿಕವಾಗಿ ನಿಲ್ಲಿಸಲಾಗುತ್ತದೆ ಎಂದು ತಿಳಿಸಲಾಗಿದೆ. ಇದರೊಂದಿಗೆ ಸ್ವಯಂ ಅಡುಗೆ ಸೌಲಭ್ಯವನ್ನೂ ಸ್ಥಗಿತಗೊಳಿಸಲಾಗುತ್ತದೆ ಎಂದು ಹೇಳಲಾಗಿದೆ. ಆದರೆ ಈ ನೋಟಿಸ್ ಕುರಿತು ಸರಕಾರದಿಂದ ಯಾವುದೇ ಅಧಿಕೃತ ಸ್ಪಷ್ಟನೆ ಸಿಕ್ಕಿಲ್ಲ.

ಬಿಸಿಯೂಟಕ್ಕೂ ಭಾರಿ ಸಮಸ್ಯೆ

ಸಿಲಿಂಡರ್ ಕೊರತೆಯಿಂದಾಗಿ ಸರಕಾರಿ ಶಾಲೆಗಳಲ್ಲಿ ಬಿಸಿಯೂಟ ತಯಾರಿಕೆಯ ಮೇಲೂ ಗಂಭೀರ ಪರಿಣಾಮ ಬೀರಿದೆ. ಮಕ್ಕಳಿಗೆ ಆಹಾರ ತಯಾರಿಸಲು ತಿಂಗಳಿಗೆ ಹಲವು ಸಿಲಿಂಡರ್‌ಗಳು ಬೇಕಾಗುತ್ತವೆ. ಆದರೆ, ಕೊರತೆಯಿಂದ ಕಡಿಮೆ ಸಂಖ್ಯೆಯಲ್ಲಿ ಸಿಲಿಂಡರ್ ಪೂರೈಕೆಯಾಗುತ್ತಿರುವುದು ಅಡುಗೆ ಸಿಬ್ಬಂದಿ ಮತ್ತು ಶಿಕ್ಷಕರ ಆತಂಕಕ್ಕೆ ಕಾರಣವಾಗಿದೆ. ಕಡಿಮೆ ಸಂಖ್ಯೆಯಲ್ಲಿ ಸಿಲಿಂಡರ್ ಕಳುಹಿಸುತ್ತಿರುವುದರಿಂದ ಅಡುಕೆ ಮಾಡುವುದು ಕಷ್ಟ ಎನ್ನಲಾಗುತ್ತಿದ್ದು, ಪರಿಸ್ಥಿತಿ ಬಗೆಹರಿಯದಿದ್ದರೆ ಸರಕಾರದ ಗಮನಕ್ಕೆ ತರಲಾಗುವುದು ಎನ್ನುವ ಮಾತನ್ನು ಶಿಕ್ಷಕರು ಹೇಳಿದ್ದಾರೆ.

ಕರ್ನಾಟಕ ಸರಕಾರ
ಜಿಲ್ಲಾ ಆರೋಗ್ಯ ಮತ್ತು ಕು.ಕ. ಸೊಸೈಟಿ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.
ಉತ್ತರ–ಕನ್ನಡ, ಕಾರವಾರ–581301
No: NHM/HWC/596/25-26. Date: 10.03.2026
ಇ–ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)
2025–26ನೇ ಆರ್ಥಿಕ ಸಾಲಿಗೆ ಸಾರ್ವತ್ರಿಕ ಆರೋಗ್ಯ ರಕ್ಷಣಾ ಕಾರ್ಯಕ್ರಮದಡಿಯಲ್ಲಿ ವೈದ್ಯಕೀಯ ಉಪಕರಣಗಳನ್ನು ಖರೀದಿಸಲು ಇ–ಟೆಂಡರ್ ಆಹ್ವಾನಿಸಲಾಗಿದೆ. ಈ ಕುರಿತು ಹೆಚ್ಚಿನ ಮಾಹಿತಿಗಳನ್ನು ವೆಬ್‌ಸೈಟ್ www.kppp.karnataka.gov.in ಪೋರ್ಟಲ್ ನಲ್ಲಿ ನೋಡಬಹುದಾಗಿದೆ.
(1) ಟೆಂಡರ್ ಪ್ರಾರಂಭದ ದಿನಾಂಕ: 10.03.2026, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 25.03.2026ರ ಸಾಯಂಕಾಲ 5.30 ರವರೆಗೆ, ಟೆಂಡರನ ಒಟ್ಟು ಮೊತ್ತ: 1,45,64,000/–, ಇ.ಎಂ.ಡಿ.: 2,91,280/–
ಸಹಿ/– ಜಿಲ್ಲಾ ಆರೋಗ್ಯ ಮತ್ತು ಕು.ಕ ಅಧಿಕಾರಿಗಳು, ಉತ್ತರ ಕನ್ನಡ, ಕಾರವಾರ.
DIPR/KWR/KSMCA/1196/25-26 Dt. 11.03.2026

ಕರ್ನಾಟಕ ಸರ್ಕಾರ
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ತಾಂತ್ರಿಕ ಸಹಾಯಕರು,
ಮೈಸೂರು ಉಪ ವಿಭಾಗ,
ಅರಣ್ಯ ಭವನ, ಅಶೋಕಪುರಂ ಮೈಸೂರು–570008
ಸಂಖ್ಯೆ:ಸಅಸಂ/ಬಿ1/ಬಿಯುಡಿ/ಟೆಂಡರ್/ಸಿಆರ್–19/2025–26 ದಿ: 07.03.2026
ಸಂಕ್ಷಿಪ್ತ ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರಕ್ಯೂರ್‌ಮೆಂಟ್ ವೇದಿಕೆ)
2026–27ನೇ ಸಾಲಿಗೆ ಮೈಸೂರು ವಿಭಾಗದ ವ್ಯಾಪ್ತಿಯಲ್ಲಿ ಹೊರಗುತ್ತಿಗೆ ನೌಕರರನ್ನು ಒದಗಿಸುವುದಕ್ಕಾಗಿ ಡಾಟಾ ಎಂಟ್ರಿ ಆಪರೇಟರ್, ವಾಹನ ಚಾಲಕರು, ಕಾವಲುಗಾರರು, ಕಛೇರಿ ಸೇವಕರು, ಹಾಗೂ ಕಳ್ಳಬೇಟೆ ತಡೆ ಶಿಬಿರಗಳಿಗೆ (ಎಪಿಸಿ) ಕಾವಲುಗಾರರ ಸೇವೆಯನ್ನು ಮಾಡುವುದಕ್ಕಾಗಿ ಈ ವಿಭಾಗದಲ್ಲಿ ನೊಂದಾಯಿಸಿರುವ ಅರ್ಹ ಅರಣ್ಯ ಗುತ್ತಿಗೆದಾರರಿಂದ ಹಾಗೂ ವಿವಿಧ ಸಂಸ್ಥೆಗಳ ಮೂಲಕ ಅನುಷ್ಠಾನಗೊಳಿಸಲು ಇ–ಪ್ರಕ್ಯೂರ್‌ಮೆಂಟ್ ವೇದಿಕೆಯಲ್ಲಿ ಟೆಂಡರ್ ಆಹ್ವಾನಿಸಿದ್ದು, ವಿವರ ಈ ಕೆಳಕಂಡಂತಿರುತ್ತದೆ. **1)** ಗುತ್ತಿಗೆದಾರರು https://kppp.karnataka.gov.in ಅಂತರ್ಜಾಲದ ಮೂಲಕ ಟೆಂಡರಿನಲ್ಲಿ ಭಾಗವಹಿಸಬಹುದು. **2)** ಒಟ್ಟು ಟೆಂಡೆರ್‌ಗಿಟ್ಟಿರುವ ಕಾಮಗಾರಿಗಳ ಸಂಖ್ಯೆ–52 **3)** ಟೆಂಡರ್ ಷರತ್ತುಗಳ ಕುರಿತಾದ ಸ್ಪಷ್ಟೀಕರಣ ಕೇಳಲು ಕೊನೆಯ ದಿ: 23.03.2026 ಅಪರಾಹ್ನ 11.00 ಘಂಟೆವರೆಗೆ. **4)** ಗುತ್ತಿಗೆದಾರರು ಅಂತರ್ಜಾಲದ ಮೂಲಕ ಇ–ಪ್ರಕ್ಯೂರ್‌ಮೆಂಟ್ ವೇದಿಕೆಯಲ್ಲಿ ತಾಂತ್ರಿಕ ಮತ್ತು ಆರ್ಥಿಕ ಬಿಡ್ಡುಗಳನ್ನು ಸಲ್ಲಿಸಲು ಕೊನೆಯ ದಿ: 23.03.2026 ಸಂಜೆ 16.00 ಘಂಟೆವರೆಗೆ. **5)** ತಾಂತ್ರಿಕ ಬಿಡ್ಡುಗಳನ್ನು ತೆರೆಯುವ ದಿ: 24.03.2026 ಸಂಜೆ 16.00 ಘಂಟೆ ನಂತರ. **6)** ಆರ್ಥಿಕ ಬಿಡ್ಡುಗಳನ್ನು ತೆರೆಯುವ ದಿ: 25.03.2026 ಮಧ್ಯಾಹ್ನ 16.00 ಘಂಟೆ. **7)** ಮೇಲ್ಕಂಡ ದಿನಾಂಕಗಳಂದು ಟೆಂಡರ್ ಬಾರದ ಕಾಮಗಾರಿಗಳಿಗೆ ಸದರಿ ಟೆಂಡರ್ ಪ್ರಕಟಣೆ ಷರತ್ತುಗಳಿಗೆ ಒಳಪಟ್ಟು **8)** ಮರುಟೆಂಡರ್ ಸಲ್ಲಿಸಲು ಕೊನೆಯ ದಿ: 30.03.2026 ಸಂಜೆ 16.00 ಘಂಟೆವರೆಗೆ. **9)** ತಾಂತ್ರಿಕ ಬಿಡ್ಡುಗಳನ್ನು ತೆರೆಯುವ ದಿ: 01.04.2026 ಸಂಜೆ 16.00 ಘಂಟೆ ನಂತರ. **10)** ಆರ್ಥಿಕ ಬಿಡ್ಡುಗಳನ್ನು ತೆರೆಯುವ ದಿ: 02.04.2026 ಸಂಜೆ 16.00 ಘಂಟೆ. **11)** ಹೆಚ್ಚಿನ ವಿವರಗಳಿಗಾಗಿ https://kppp.karnataka.gov.in ಅಂತರ್ಜಾಲ ಅಥವಾ ಈ ಕಛೇರಿಯ ದೂರವಾಣಿ ಸಂಖ್ಯೆ: 0821–2483853ನ್ನು ಕೆಲಸದ ದಿನಗಳಲ್ಲಿ ಸಂಪರ್ಕಿಸುವುದು. **12)** ಟೆಂಡರ್ ಪ್ರಕಟಣೆಯಲ್ಲಿ ಯಾವುದೇ ತಿದ್ದುಪಡಿ, ಮಾರ್ಪಾಡು ಅಥವಾ ಇತರ ಬದಲಾವಣೆಗಳಿದ್ದಲ್ಲಿ https://kppp.karnataka.gov.in ವೆಬ್‌ಸೈಟ್‌ನಲ್ಲಿ ಪ್ರಚಾರಪಡಿಸಲಾಗುವುದು.
ಸಹಿ/– ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ತಾಂತ್ರಿಕ ಸಹಾಯಕರು, ಮೈಸೂರು ಉಪ ವಿಭಾಗ, ಮೈಸೂರು
DIPR/DDMYS/1817/KSMCA/1023/2025-26

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ,
ಕಂಟೋನ್‌ಮೆಂಟ್, ಬಳ್ಳಾರಿ ದೂರವಾಣಿ: 08392–200293
ಸಂ: ಕಾನಿಇಂ/ಸನೀ&ಅಂ.ಅ.ವಿ/ಬ/ಸ.ಇಂ–2/2025–26/2244 ದಿ:04.03.2026
ಅಲ್ಪಾವಧಿ ಟೆಂಡರ್ ಪ್ರಕಟಣೆ
("KPPP" ಪೋರ್ಟಲ್ ಕೆ.ಡಬ್ಲ್ಯೂ–3&4 ಮುಖಾಂತರ)
ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಲೆಕ್ಕಶೀರ್ಷಿಕೆ 4702–ಪ್ಲಾನ್ ಏನೀಯೋ (ಸಿ.ಎಂ.ಐ.ಡಿ.ಪಿ) ಯೋಜನೆಯಡಿ ಬಳ್ಳಾರಿ ಜಿಲ್ಲೆಯ ಸಿರುಗುಪ್ಪ ತಾಲ್ಲೂಕಿನ ಕಾಮಗಾರಿಗಾಗಿ ದ್ವಿಲಕೋಟೆ ಪದ್ಧತಿಯಲ್ಲಿ ಕಾರ್ಯನಿರ್ವಾಹಕ ಇಂಜಿನೀಯರವರಿಂದ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಯ ಟೆಂಡರಿಗಿಟ್ಟ ಮೊತ್ತ ರೂ. 71.24 ಲಕ್ಷಗಳಿರುತ್ತದೆ ಕಾಮಗಾರಿಯನ್ನು **ದಿನಾಂಕ: 03.03.2026 ರಿಂದ ದಿನಾಂಕ: 10.03.2026 ರ ಸಂಜೆ 5.30** ಗಂಟೆಯವರಗೆ ಸಲ್ಲಿಸಬಹುದು. ಕಾಮಗಾರಿಗಳ ತಾಂತ್ರಿಕ ಬಿಡ್ಡನ್ನು **ದಿನಾಂಕ: 12.03.2026 ರ ಬೆಳಿಗ್ಗೆ 11.00** ಗಂಟೆಗೆ ತೆರೆಯಲಾಗುವುದು ಕಾಮಗಾರಿಗಳ ಆರ್ಥಿಕ ಬಿಡ್ಡನ್ನು **ದಿನಾಂಕ: 16.03.2026 ರ ಬೆಳಿಗ್ಗೆ 11.00** ಗಂಟೆಗೆ ತೆರೆಯಲಾಗುವುದು ಹಾಗೂ ವಿಜಯನಗರ ಜಿಲ್ಲೆಯ ಹೊಸಪೇಟೆ ತಾಲ್ಲೂಕಿನ ಕಾಮಗಾರಿಯ ಟೆಂಡರಿಗಿಟ್ಟ ಮೊತ್ತ **ರೂ. 119.72** ಲಕ್ಷಗಳಿರುತ್ತದೆ ಕಾಮಗಾರಿಯನ್ನು **ದಿನಾಂಕ: 06.03.2026 ರಿಂದ ದಿನಾಂಕ: 13.03.2026 ರ ಸಂಜೆ 5.30** ಗಂಟೆಯವರಗೆ ಸಲ್ಲಿಸಬಹುದು. ಕಾಮಗಾರಿಗಳ ತಾಂತ್ರಿಕ ಬಿಡ್ಡನ್ನು **ದಿನಾಂಕ: 16.03.2026 ರ ಬೆಳಿಗ್ಗೆ 11.00 ಗಂಟೆಗೆ** ತೆರೆಯಲಾಗುವುದು ಕಾಮಗಾರಿಗಳ ಆರ್ಥಿಕ ಬಿಡ್ಡನ್ನು **ದಿನಾಂಕ: 18.03.2026 ರ ಬೆಳಿಗ್ಗೆ 11.00** ಗಂಟೆಗೆ ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಳನ್ನು **"KPPP"** ವೆಬ್‌ಸೈಟ್ **http://kppp.karnataka.gov.in** ನಲ್ಲಿ ಪಡೆಯಬಹುದು.
ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ. ಬಳ್ಳಾರಿ
ಡಿಐಪಿಆರ್/ಬಳ್ಳಾರಿ/1116/ಕೆಎಸ್‌ಎಂಸಿಎ/2025–26

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ
"ಜ್ಞಾನ ಸಂಗಮ",
ಬೆಳಗಾವಿ–590018, ಕರ್ನಾಟಕ, ಭಾರತ
Ref. No. VTU/BGM/SAP/CW1/19/T-717/2025-26/6421 Date: 11-03-2026
ಟೆಂಡರ್ ಪ್ರಕಟಣೆ
ಕುಲಸಚಿವರು, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ ಇವರಿಂದ ಕೆಳಕಂಡ ಕೆಲಸಕ್ಕೆ (ದ್ವಿ–ಲಕೋಟೆ ಪದ್ಧತಿಯಲ್ಲಿ) ಇ–ಟೆಂಡರ್ ಮೂಲಕ ಮೊಹರ ಬಂದ ದರಖಾಸ್ತುಗಳನ್ನು ಅರ್ಹ ತಯಾರಕರು/ಪೂರೈಕೆದಾರರಿಂದ ಆಹ್ವಾನಿಸಲಾಗಿದೆ. ಕೆಲಸದ ಹೆಸರು **Tender for Procurement of Desktop Computers, Laptops & Printers to Various Section/Centers of VTU Belagavi and UBDTCE, Davangere,** ಟೆಂಡರಿಗಿಟ್ಟ ಮೊತ್ತ: **ರೂ. 4,89,45,000/–** ಮುಂಗಡ ಠೇವಣಿ: **ರೂ. 7,35,000/–.** ಟೆಂಡರ ಪ್ರಿ ಬಿಡ್ ಮಿಟಿಂಗ **ದಿನಾಂಕ: 17–03–2026 ರಂದು 11.00 ಗಂಟೆಗೆ** ಆನ್‌ಲೈನ್ ಮೂಲಕ. ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 10–04–2026 ರ 2.30 ರವರೆಗೆ,** ಟೆಂಡರ್ ತೆರೆಯುವ **ದಿನಾಂಕ: 11–04–2026 ರ 4.00 ಗಂಟೆಗೆ.** ಹೆಚ್ಚಿನ ಮಾಹಿತಿಗಾಗಿ **www.kppp.karnataka.gov.in.** ಮತ್ತು ವೆಬ್‌ಸೈಟ್ **www.vtu.ac.in** ನೋಡಬಹುದು.
ಸಹಿ/–
ಕುಲಸಚಿವರು
ವಾ.ಸಾ.ಇ./ಬೆಳಗಾವಿ/2051/2025–26/ದೇಶಪಾಂಡೆಪಬ್ಲಿಸಿಟಿ

ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ, ಕೇಂದ್ರ ಕಚೇರಿ ಕಲಬುರಗಿ
(ಉಗ್ರಾಣ ಇಲಾಖೆ)
Mobile No. 77606 86172 (COSP), 77609 92029 (S.O).
ಸಂ. ಕಕರಸಾ/ಕೇಕ/ಉ&ಮಖನಿ/13/2025–26 ದಿನಾಂಕ: 11.03.2026
ಟೆಂಡರ್ ಪ್ರಕಟಣೆ. (ಇ–ಪ್ರೊಕ್ಯೂರ್‌ಮೆಂಟ್ ಮೋಡ್‌ನಲ್ಲಿ ಮಾತ್ರ)
ಈ ಕೆಳಗಿನ ವಸ್ತುಗಳನ್ನು ಪೂರೈಸಲು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (ಪ್ರಿ ಕ್ವಾಲಿಫಿಕೇಶನ್ ಮತ್ತು ಕಮರ್ಷಿಯಲ್) ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

Sl. No.	Tender No.	Tender Nomenclature	Value	Last date for submission of tender
1	KKRTC/2024-25/IND0125/CALL-6	Procurement of Oil Seals.	0.90 Crores	15.04.2026 at 15.00 hrs
2	KKRTC/2025-26/IND0168/CALL-3	Procurement of Water pump and parts.	1.10 Crores	15.04.2026 at 15.00 hrs
3	KKRTC/2025-26/IND0180/CALL-2	Procurement of Brake Linings and Clutch facings.	3.51 Crores	15.04.2026 at 15.00 hrs
4	KKRTC/2025-26/IND0192	Procurement of Thin walled Bearings.	0.70 Crores	15.04.2026 at 15.00 hrs
5	KKRTC/2025-26/IND0189	Procurement of Plywood Sheets.	0.58 Crores	15.04.2026 at 15.00 hrs
6	KKRTC/2025-26/IND0190	Procurement of Curing Envel-ops and Curing Bags	0.58 Crores	15.04.2026 at 15.00 hrs
7	KKRTC/2025-26/IND0187	Procurement of Vinyl Coated Fabric.	2.96 Crores	15.04.2026 at 15.00 hrs
8	KKRTC/2025-26/IND0191/CALL-2	Procurement of Thermal paper Rolls of 15 mtr Length for ETMs, With or without printing advertisement on the backside with single color.	3.50 Crores	15.04.2026 at 15.00 hrs
9	KKRTC/2025-26/IND0185	Retro Reflective tape without QR code.	0.30 Crores	15.04.2026 at 15.00 hrs

ಟೆಂಡರ್, ನೊಂದಣೆ, ಟೆಂಡರ್ ಫಾರ್ಮ ದಾಖಲಾತಿಗಳ ಎಲ್ಲಾ ವಿವರಗಳು https://kppp.karnataka.gov.in/#/portal/portal-home ನಲ್ಲಿ ಲಭ್ಯವಿರುತ್ತವೆ. ಅಗತ್ಯವಿದ್ದರೆ ಹೆಚ್ಚಿನ ಮಾಹಿತಿಗಾಗಿ cospnekrtc@gmail.com ಅಥವಾ support@eprochelpdesk.com ಗೆ–ಮೇಲ್ ಮುಖಾಂತರ ಸಂಪರ್ಕಿಸಬಹುದಾಗಿದೆ. ಪರಿಭಾಷೆಯಲ್ಲಿನ ಬದಲಾವಣೆಗಳಿಗೆ ಸಂಬಂಧಿಸಿದಂತೆ ಯಾವುದೇ ಅಡೆಂಡಮ್ /ಕೊರಿಜೆಂಡಮ್ ಮತ್ತು ಟೆಂಡರ್ ಷರತ್ತು ಮತ್ತು ನಿಭಂಧನೆಗಳು, ಸ್ಪೆಸಿಫಿಕೇಶನ್ ಮತ್ತು ಘಟನೆಗಳ ಕ್ಯಾಲೆಂಡರ್ ಇತ್ಯಾದಿಗಳನ್ನು ಇ–ಪ್ರಕ್ಯೂರಮೆಂಟ್ ಪೋರ್ಟಲ್ ಮೂಲಕ ಮಾತ್ರ ಅಪ್ಲೋಡ್ ಮಾಡಲಾಗುತ್ತದೆ.
ಸಹಿ/– ಉಗ್ರಾಣ ಮತ್ತು ಖರೀದಿ ನಿಯಂತ್ರಕರು.
(ಟೆಂಡರ್ ಆಹ್ವಾನಿಸುವ ಪ್ರಾಧಿಕಾರಸ್ಥರು)
ವಾ.ಸಾ.ಸಂ.ಇ/ಕಲಬುರಗಿ/1160/ಕೆ.ಎಸ್.ಎಂ.ಸಿ.&ಎ/2025–26

3 ತಿಂಗಳಲ್ಲಿ ಅಂಗನವಾಡಿ ಸಹಾಯಕಿಯರ ಭರ್ತಿ

ವಿಧಾನಸಭೆ: ಅಂಗನವಾಡಿ ಕೇಂದ್ರಗಳಲ್ಲಿ ಖಾಲಿ ಇರುವ ಕಾರ್ಯಕರ್ತರು ಮತ್ತು ಸಹಾಯಕಿಯರ ಹುದ್ದೆಗಳನ್ನು 90 ದಿನಗಳ ಒಳಗಾಗಿ ಭರ್ತಿ ಮಾಡಲು ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ತಿಳಿಸಿದರು.

ಗುರುಮೆ ಸುರೇಶ್ ಶೆಟ್ಟಿ ಅವರ ಪ್ರಶ್ನೆಗೆ ಉತ್ತರಿಸಿ, ಬಡವರ ಮಕ್ಕಳು ಓದುವ ಅಂಗನವಾಡಿ ಕೇಂದ್ರಗಳಲ್ಲಿ ಉತ್ತಮ ವಾತಾವರಣ ಇರಬೇಕು ಎಂಬುದು ಸರಕಾರದ ಬದ್ಧತೆ. ಈ ನಿಟ್ಟಿನಲ್ಲಿ ಎಲ್ಲಿಯೂ ಹುದ್ದೆಗಳನ್ನು ಖಾಲಿ ಬಿಡಲು ಅವಕಾಶ ನೀಡುತ್ತಿಲ್ಲ ಎಂದರು. ತೆರವಾದ ಹುದ್ದೆಗಳಿಗೆ ಸ್ಥಳೀಯವಾಗಿಯೇ 12 ಜನ ಸದಸ್ಯರು ಇರುವ ಜಿಲ್ಲಾಧಿಕಾರಿಗಳ ನೇತೃತ್ವದ ಸಮಿತಿ ನೇಮಕಾತಿ ಪ್ರಕ್ರಿಯೆ ಕೈಗೊಳ್ಳಲಿದೆ. 90 ದಿನದಲ್ಲಿ ಅದು ಮುಗಿಯಬೇಕು. ಅಂಗನವಾಡಿ ಕಾರ್ಯಕರ್ತರು ಆಯಾ ಗ್ರಾಮಗಳಲ್ಲೇ ವಾಸವಿರಬೇಕು ಎಂಬುದನ್ನು ಕಡ್ಡಾಯವಾಗಿ ಜಾರಿಗೊಳಿಸುತ್ತಿರುವುದಾಗಿ ತಿಳಿಸಿದರು. ಉದ್ಯೋಗಿನಿ ಯೋಜನೆಗೆ ಫಲಾನುಭವಿಗಳನ್ನು ಆಯ್ಕೆ ಮಾಡಲು ಶಾಸಕರ ನೇತೃತ್ವದಲ್ಲಿ ಸಮಿತಿಗಳಿರುತ್ತವೆ. ಶಾಸಕರು ಫಲಾನುಭವಿಗಳ ಆಯ್ಕೆ ಪಟ್ಟಿ ನೀಡುವಲ್ಲಿ ವಿಳಂಬ ಮಾಡುತ್ತಿದ್ದಾರೆ. ಅನಂತರ ಅದನ್ನು ಬ್ಯಾಂಕುಗಳಿಗೆ ಕಳುಹಿಸಿದರೆ ಅಲ್ಲಿ ಎಂಟರಿಂದ ಒಂಬತ್ತು ತಿಂಗಳು ವಿಳಂಬವಾಗುತ್ತಿದೆ. ಸಿಬಿಲ್ ಸ್ಕೋರ್ ಆಧರಿಸಿ ಬ್ಯಾಂಕುಗಳು ಸಾಲ ನೀಡುವ ಪರಿಪಾಠ ಅನುಸರಿಸಿವೆ. ಗ್ರಾಮೀಣ ಭಾಗದಲ್ಲಿ ಮಹಿಳೆಯರಿಗೆ ಸಿಬಿಲ್ ಸ್ಕೋರ್ ಲೆಕ್ಕ ಹಾಕುವುದು ಕಷ್ಟ ಸಾಧ್ಯ ಗಳನ್ನು ಸರಲೀಕರಣ ಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದರು.

ನಿಗಮಕ್ಕೆ ಹೆಚ್ಚಿನ ಅನುದಾನ ಮಂಜೂರು

ವಿಧಾನಸಭೆ: ನಾರಾಯಣಗುರು ಅಭಿವೃದ್ಧಿ ನಿಗಮಕ್ಕೆ ಹೆಚ್ಚಿನ ಅನುದಾನ ನೀಡಿ ಸಮುದಾಯದ ಅಭಿವೃದ್ಧಿಗೆ ಸರಕಾರ ನೆರವಾಗಲಿದೆ ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವ ರಾಜ್ ತಂಗಡಗಿ ಹೇಳಿದರು.

ಶ್ರೀ ನಾರಾಯಣಗುರು ಅಭಿ ವೃದ್ಧಿ ನಿಗಮವನ್ನು ಕಳೆದ ಜನವರಿಯಲ್ಲಿ ಕಂಪನಿ ಕಾಯಿದೆ ಪ್ರಕಾರ ನೋಂದಣಿ ಮಾಡಲಾಗಿದೆ. ಈ ನಿಗಮದಡಿ ಜಾತಿ ಪಟ್ಟಿಯಲ್ಲಿ ಪ್ರವರ್ಗ- 2ಎ ನಲ್ಲಿ ಕ್ರಮ ಸಂಖ್ಯೆ 4ಎ ಯಿಂದ ಝುಡ್‌ವರೆಗೆ ಈಡಿಗ, ಬಿಲ್ಲವನಾಡರ್ ಸೇರಿದಂತೆ ಎಲ್ಲ 26 ಸಮುದಾ ಯಗಳು ಬರುತ್ತವೆ. ಈ ನಿಗಮದಿಂದ ಈ ಸಮುದಾಯಗಳು ಪ್ರಯೋಜನ ಪಡೆಯುತ್ತವೆ ಎಂದರು. ಈ ಹಿಂದೆ ಬಿಜೆಪಿ ಸರಕಾರ ಅಧಿಕಾರದಲ್ಲಿದ್ದಾಗ ಶ್ರೀನಾರಾಯಣ ಅಭಿವೃದ್ಧಿ ಕೋಶವನ್ನು ರಚಿಸಿ ಹತ್ತು ಕೋಟಿ ರು. ಅನುದಾನ ನಿಗದಿ ಮಾಡಿದ್ದರು. ಆದರೆ ಅನುದಾನ ಬಿಡುಗಡೆಯಾಗಿರಲಿಲ್ಲ. ಈಗ ಕಾಂಗ್ರೆಸ್ ಅಧಿಕಾರಕ್ಕೆ ಬಂದ ಮೇಲೆ ಅಭಿವೃದ್ಧಿ ಕೋಶದ ಬದಲು ಅಭಿವೃದ್ಧಿ ನಿಗಮವನ್ನೇ ಸ್ಥಾಪಿಸಿದ್ದೇವೆ. ಈ ಹಿಂದೆ ಅಭಿವೃದ್ಧಿ ಕೋಶಕ್ಕೆ ನೀಡಲಾಗಿದ್ದ ಹತ್ತು ಕೋಟಿ ರು. ಗಳ ಜತೆಗೆ ಇನ್ನು ಹೆಚ್ಚಿನ ಅನುದಾ ನವನ್ನು ನಿಗಮಕ್ಕೆ ಒದಗಿಸುತ್ತೇವೆ. ನಿಗಮದಡಿ ಬರುವ ಸಮುದಾಯಕ್ಕೆ ಉಳಿದ 11 ಜಾತಿ ಸಮು ದಾಯಗಳ ಅಭಿವೃದ್ಧಿ ನಿಗಮದ ಮಾದರಿಯಲ್ಲೇ ಯೋಜನೆಗಳನ್ನು ರೂಪಿಸಲಾಗುವುದು. ಈ ಬಜೆಟ್‌ನಲ್ಲಿ ವಿವಿಧ ನಿಗಮಗಳಿಗೆ ಅನುದಾನವನ್ನು ಮುಖ್ಯಮಂತ್ರಿಗಳು ಘೋಷಣೆ ಮಾಡಿದ್ದಾರೆ. ಯಾವ ನಿಗಮಗಳಿಗೆ ಎಷ್ಟು ಹಣ ಬಿಡುಗಡೆ ಮಾಡಬೇಕು ಎಂಬ ಮಾಹಿತಿ ಮುಂದೆ ನೀಡುತ್ತೇನೆ. ಶ್ರೀ ನಾರಾಯಣ ಗುರು ಅಭಿವೃದ್ಧಿ ನಿಗಮಕ್ಕೆ ಹೆಚ್ಚಿನ ಅನುದಾನ ನೀಡಿ ಆ ಸಮುದಾಯಗಳ ಅಭಿವೃದ್ಧಿಗೆ ನಾವು ಬದ್ಧರಿದ್ದೇವೆ ಎಂದು ಸಚಿವ ಶಿವರಾಜ್ ತಂಗಡಗಿ ಹೇಳಿದರು.

ನೀರಿನ ನಿರ್ವಹಣೆಗೆ ಟಾಸ್ಕ್‌ಫೋರ್ಸ್ ರಚನೆ

ವಿಧಾನಸಭೆ: ಕುಡಿಯುವ ನೀರಿನ ಸಮಸ್ಯೆ ನಿರ್ವಹಣೆಗೆ ಮುಂದಿನ ವಾರ ಟಾಸ್ಕ್‌ಫೋರ್ಸ್ ರಚನೆ ಮಾಡಲಾಗುವುದು ಎಂದು ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ. ರಾಯಬಾಗ ಕ್ಷೇತ್ರದ ಸದಸ್ಯ ದುರ್ಯೋಧನ ಐಹೊಳೆ ಪ್ರಶ್ನೆ ಕೇಳಿ ಜಲ ಜೀವನ್ ಮಿಷನ್ ಯೋಜನೆಯಡಿ ಪ್ರತಿ ಗ್ರಾಮಕ್ಕೆ ಎಷ್ಟು ಕೊಳವೆ ಬಾವಿ ಕೊರೆಯಲು ಅವಕಾಶ ಕಲ್ಪಿಸಲಾಗಿದೆ ಎಂದು ಪ್ರಶ್ನಿಸಿದರು. ಬಿಜೆಪಿಯ ಸದಸ್ಯ ಸಿ.ಸಿ.ಪಾಟೀಲ್ ಬಹಳಷ್ಟು ಕಡೆ ನೀರಿನ ಮೂಲವೇ ಇರುವುದಿಲ್ಲ. ಅಂತಹ ಗ್ರಾಮಗಳಿಗೆ ಓವರ್ ಹೆಡ್ ಟ್ಯಾಂಕ್ ನಿರ್ಮಿಸಲಾಗಿದೆ. ಸಾರ್ವಜನಿಕ ಲೆಕ್ಕಪತ್ರ ಸಮಿತಿಯಲ್ಲಿ ಈ ಬಗ್ಗೆ ಪರಿಶೀಲನೆ ನಡೆಸಿದ್ದೇವೆ ಎಂದು ಹೇಳಿದರು. ಉತ್ತರ ನೀಡಿದ ಸಚಿವ ಪ್ರಿಯಾಂಕ ಖರ್ಗೆ, ನೀರಿನ ಮೂಲಗಳು ಇಲ್ಲದ ಕಡೆಗೆ ಓವರ್ ಹೆಡ್ ಟ್ಯಾಂಕ್ ಮಾಡಲು ಅವಕಾಶ ವಿಲ್ಲ. ಅಂತಹ ಪ್ರಕರಣಗಳಿದ್ದರೆ ತಮಗೆ ಮಾಹಿತಿ ನೀಡಿ ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಗುತ್ತಿಗೆ ದಾರ ವಿರುದ್ಧ ಕ್ರಮ ಕೈಗೊಳ್ಳುತ್ತೇವೆ. ಜಲಜೀವನ್ ಮಿಷನ್ ಯೋಜನೆಯ ಕಾಮಗಾರಿ ಪೂರ್ಣಗೊಂಡ ಬಳಿಕ ಗ್ರಾಮ ಪಂಚಾಯಿತಿಗೆ ಹಸ್ತಾಂತರಗೊಂಡಿರುವ ಕಡೆ ನಿರ್ವಹಣೆ ಕೂಡ ಮುಖ್ಯವಾಗಿದೆ. ಓವರ್ ಹೆಡ್ ಟ್ಯಾಂಕ್ ನಿರ್ಮಾಣಕ್ಕಾಗಿ 1 ಸಾವಿರ ಕೋಟಿ ರು. ಈ ವರ್ಷದ ಬಜೆಟ್‌ನಲ್ಲಿ ಮೀಸಲಿರಿಸಲಾಗಿದೆ. ವಿದ್ಯುತ್ ಸಂಪರ್ಕಕ್ಕೆ ಸಮು ದಾಯ ಆಧಾರಿತಾಗಿ ವೆಚ್ಚ ಭರಿಸಬೇಕು. ಆದರೆ ದೇಶದ ಎಲ್ಲಿಯೂ ಜನರು ಮುಂದೆ ಬರುತ್ತಿಲ್ಲ. ಕರ್ನಾಟಕದಲ್ಲಿ ರಾಜ್ಯ ಸರಕಾರವೇ ತನ್ನ ಬೊಕ್ಕಸ ದಿಂದ ವಿದ್ಯುತ್ ಸಂಪರ್ಕ ಕಲ್ಪಿಸುತ್ತಿದೆ. ಇದಕ್ಕಾಗಿ ನಿನ್ನೆಯಷ್ಟೇ 16 ಕೋಟಿ ರು. ಬಿಡುಗಡೆ ಮಾಡಲಾ ಗಿದೆ. ಬೇಸಿಗೆ ಆರಂಭವಾಗುತ್ತಿರುವ ಹಿನ್ನೆಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಉದ್ಭವಿಸುವ ಬಹುದು ಎಂಬ ಮುಂಜಾಗ್ರತೆಯಿಂದ ಮುಂದಿನ ವಾರವೇ ಟಾಸ್ಕ್‌ಫೋರ್ಸ್ ರಚನೆ ಮಾಡಲಾಗುತ್ತಿದೆ ಎಂದು ತಿಳಿಸಿದರು.

ಡೆಟಾ ಸೆಂಟರ್‌ಗೆ 1 ಮೆಗಾ ವ್ಯಾಟ್ ವಿದ್ಯುತ್ ಬಳಸಿದರೆ 70 ಕೋಟಿ ರು., 25 ಮಿ. ಲೀಟರ್ ನೀರು ಅಗತ್ಯ

ಚಾಟ್ ಜಿಪಿಟಿಯ 5 ಪ್ರಶ್ನೆಗೆ ಅರ್ಧ ಲೀಟರ್ ನೀರು ಬಳಕೆ

ವಿಶ್ವವಾಣಿ ಸುದ್ದಿಮನೆ ವಿಧಾನಸಭೆ

ಇಂದಿನ ಟ್ರೆಂಡ್ ಆಗಿರುವ ಚಾಟ್ ಜಿಪಿಟಿಯಲ್ಲಿ ನಾವು ಕೇಳುವ ಪ್ರಶ್ನೆಗೆ ಫಟಾಫಟ್ ಎಂದು ಉತ್ತರ ಬರುತ್ತದೆ. ಆದರೆ ಈ ರೀತಿಯ ಉತ್ತರ ಬರಲು ಅದೆಷ್ಟು ನೀರು ಬಳಕೆಯಾಗುತ್ತದೆ ಎನ್ನುವುದು ಕೇಳಿದರೆ ಗಾಬರಿ ಹುಟ್ಟಿಸುವಂತಿದೆ.

ವಿಧಾನಸಭೆಯ ಪ್ರಶ್ನೋತ್ತರ ಅವಧಿಯಲ್ಲಿ ಡೇಟಾ ಸೆಂಟರ್‌ಗೆ ಸಂಬಂಧಿಸಿದಂತೆ ಕೇಳಿದ ಪ್ರಶ್ನೆಗೆ ಐಟಿ-ಬಿಟಿ ಸಚಿವ ಪ್ರಿಯಾಂಕ್ ಖರ್ಗೆ ಉತ್ತರಿಸಿದ್ದು, ಚಾಟ್ ಜಿಟಿಪಿಯಲ್ಲಿ ಐದು ಪ್ರಶ್ನೆಗಳನ್ನು ಕೇಳಿದರೆ 500 ಮಿಲಿ ಲೀಟರ್ ನೀರು ಬಳಕೆಯಾಗುತ್ತದೆ. ಒಂದು ಮೆಗಾ ಬೈಟ್ ಡೇಟಾ ಸೆಂಟರ್‌ಗೆ ವರ್ಷಕ್ಕೆ 25 ಮಿಲಿಯನ್ ಲೀಟರ್ ನೀರಿನ ಅಗತ್ಯ ಇದೆ. ಒಂದು ಮೆಗಾ ಬೈಟ್ ಡಾಟಾ ಸೆಂಟರ್‌ಗೆ 70 ಕೋಟಿ ರು. ಹಣದ ಅಗತ್ಯ ಇದೆ ಮತ್ತು ಒಂದು ಎಕರೆ ಜಾಗ ಬೇಕಿದೆ. ಭಾರಿ ಪ್ರಮಾಣದ ವಿದ್ಯುತ್ ಕೂಡ ಖರ್ಚಾಗುತ್ತದೆ ಎಂದರು.

ಕರ್ನಾಟಕದಲ್ಲಿ ನೀರಿನ ಲಭ್ಯತೆ ಇರುವ ಕರಾವಳಿ ಭಾಗದಲ್ಲಿ ಡಾಟಾ ಸೆಂಟರ್ ಆರಂಭಿಸುವ ಚಿಂತನೆ ಇದೆ. ಸಮುದ್ರ ಭಾಗದಲ್ಲಿ ಸಮುದ್ರ ಸಬ್ ಸಿ ಕೇಬಲ್ ಅಳವಡಿಸಲು ಕೇಂದ್ರ ಟೆಲಿಕಾಂ ಸಚಿವರಿಗೆ ಮನವಿ ಮಾಡಲಾಗಿತ್ತು. ಅವರು ಸರಕಾರದಿಂದ ಯೋಜನೆ ಕೈಗೊಳ್ಳಲು ಸಾಧ್ಯವಿಲ್ಲ. ಆದರೆ ಖಾಸಗಿಯವರು ಮುಂದೆ ಬಂದರೆ ನೆರವು ನೀಡುವುದಾಗಿ ಹೇಳಿದ್ದಾರೆ ಎಂದು ತಿಳಿಸಿದರು. ಡಾಟಾ ಸೆಂಟರ್‌ಗೆ ದೊಡ್ಡಬಳ್ಳಾ

ಪುರ ಮತ್ತು ತುಮಕೂರಿನಲ್ಲಿ ಜಮೀನಿನ ಲಭ್ಯತೆ ಇದೆ. ಆದರೆ ಯೋಜನೆಯ ಸಾಧುತ್ವವನ್ನು ಆಧರಿಸಿ ನಿರ್ಧಾರ ತೆಗೆದುಕೊಳ್ಳುತ್ತೇವೆ. 10 ಮೆಗಾ ಬೈಟ್ ಮತ್ತು 40 ಮೆಗಾ ಬೈಟ್ ಸೆಂಟರ್‌ಗಳ ಸ್ಥಾಪನೆಯ ಬಗ್ಗೆ ಚರ್ಚೆ ನಡೆಯುತ್ತಿದೆ ಎಂದರು.

ಡಾಟಾ ಸೆಂಟರ್ ನೀತಿ ಪರಿಷ್ಕರಣೆ: ಮಾಹಿತಿ ತಂತ್ರಜ್ಞಾನ ಉದ್ಯಮಕ್ಕೆ ಪೂರಕವಾಗಿರುವ ಡಾಟಾ ಸೆಂಟರ್‌ಗಳನ್ನು ಆರಂಭಿಸಲು ಸಹಾಯವಾಗುವಂತೆ ರಾಜ್ಯ ಸರಕಾರ ತನ್ನ ನೀತಿ ಪರಿಷ್ಕರಣೆ ಮಾಡಲಾಗುವುದು. ಮಾಹಿತಿ ತಂತ್ರಜ್ಞಾನದ ಹಲವು ವಲಯಗಳಲ್ಲಿ ಬೆಂಗಳೂರು ದೇಶದಲ್ಲೇ ನಂಬರ್ ಒನ್ ಸ್ಥಾನದಲ್ಲಿದೆ. ಆದರೆ ಡೇಟಾ ಸೆಂಟರ್‌ನಲ್ಲಿ ಐದನೇ ಸ್ಥಾನದಲ್ಲಿದೆ. ಮುಂಬೈ, ಹೈದರಾಬಾದ್, ಚೆನ್ನೈ, ದೆಹಲಿ ಮೊದಲ ನಾಲ್ಕು ಸ್ಥಾನ ಪಡೆದುಕೊಂಡಿವೆ. ರಾಜ್ಯ ಸರಕಾರ ಡಾಟಾ ಸೆಂಟರ್‌ಗಳ ಸ್ಥಾಪನೆಗೆ ಹೆಚ್ಚಿನ ಆದ್ಯತೆ ನೀಡಬೇಕು. ಅದರಲ್ಲೂ ಬೆಂಗಳೂರು ಉತ್ತರ ಜಿಲ್ಲೆ ಯಲ್ಲಿ ಇತ್ತೀಚೆಗೆ ಮಾಹಿತಿ ತಂತ್ರಜ್ಞಾನ ಪ್ರಭುದ್ಧ ಮಾನಕ್ಕೆ ಬರುತ್ತಿದೆ. ದೊಡ್ಡಬಳ್ಳಾಪುರ ಸುತ್ತಮುತ್ತ ಕ್ವಿನ್ ಸಿಟಿ ಸ್ಥಾಪಿಸಲು 6000 ಎಕರೆ ಭೂ ಸ್ವಾಧೀನ ಪಡಿಸಿಕೊಳ್ಳಲಾಗುತ್ತಿದೆ. ಡಾಟಾ ಸೆಂಟರ್ ಬೆಂಗಳೂ ರಿನ ಹೊರಭಾಗದಲ್ಲಿ ಆರಂಭಿಸಿ, ಅದರಲ್ಲೂ ದೊಡ್ಡ ಬಳ್ಳಾಪುರದಲ್ಲೇ ಸ್ಥಾಪಿಸಿ ಎಂದು ಒತ್ತಾಯಿಸಿದರಲ್ಲದೆ, ಗೂಗಲ್ ಡಾಟಾ ಸೆಂಟರ್ ಆಂಧ್ರ ಪ್ರದೇಶದ ಹೋಗಿದೆ ಎಂದು ಇದೆ ವೇಳೆ ವಿಷಾದಿಸಿದರು.

ರಾಜ್ಯದಲ್ಲಿ 32 ಖಾಸಗಿ ಡಾಟಾ ಸೆಂಟರ್‌ಗಳಿವೆ. ಸರಕಾರದಿಂದಲೇ ಡಾಟಾ ಸೆಂಟರ್ ಸ್ಥಾಪಿಸಬೇಕು ಎಂಬುದು ಶಾಸಕರ ಆಗ್ರಹ. ಮಿಷನ್ ಲರ್ನಿಂಗ್, ಆರ್ಟಿಫಿಷಿಯಲ್ ಇಂಟಲಿಜೆನ್ಸಿ ಮತ್ತು ಉದಯೋನ್ಮುಖ ತಂತ್ರಜ್ಞಾನಗಳಿಗೆ ಡಾಟಾ ಸೆಂಟರ್ ಅಗತ್ಯ ಇದೆ. ಆದರೆ ಇವು ಅತಿ ಹೆಚ್ಚು ನೀರು ಮತ್ತು ಇಂಧನ ಬಯಸುತ್ತದೆ. ಮೊದಲು ರೂಪಿಸಲಾಗಿದ್ದ ಡಾಟಾ ಸೆಂಟರ್ ನೀತಿ ಮೂರ್ನಾಲ್ಕು ವರ್ಷ ಹಳೆಯದಾಗಿದೆ. ಅದನ್ನು ಪರಿಷ್ಕರಣೆ ಮಾಡುವ ಅಗತ್ಯ ಇದೆ. ಬದಲಾಗಿರುವ ತಂತ್ರಜ್ಞಾನಕ್ಕೆ ಅನುಗುಣವಾಗಿ ಅದನ್ನು ಹೊಸದಾಗಿ ರೂಪಿಸಲಾಗುವುದು ಎಂದರು.

ಗೂಗಲ್ ಡಾಟಾ ಸೆಂಟರ್ ವೈಜಾಗ್‌ಗೆ ಹೋಗಿರುವ ಬಗ್ಗೆ ಭಾರಿ ಚರ್ಚೆಗಳು ನಡೆಯುತ್ತಿವೆ. ಆದರೆ ಆಂಧ್ರಪ್ರದೇಶ ಸರಕಾರ 22 ಸಾವಿರ ಕೋಟಿ ರು.ಗಳ ಆರ್ಥಿಕ ನೆರವನ್ನು ಆ ಯೋಜನೆಗಾಗಿ ನೀಡಿದೆ. ಭೂಮಿ ಖರೀದಿಗೆ ಶೇ.25ರಷ್ಟು ಮತ್ತು ಪ್ರತಿ ಯೂನಿಟ್ ವಿದ್ಯುತ್ ಮೇಲೆ 1 ರು. ವಿನಾಯಿತಿ 15 ವರ್ಷಗಳಿಗೆ ಹಾಗೂ 10 ವರ್ಷಕ್ಕೆ ಶೇ.10ರಷ್ಟು ಜಿಎಸ್‌ಟಿ ವಿನಾಯಿತಿ ನೀಡಲಾಗುತ್ತಿದೆ . ಒಟ್ಟಾರೆ ಈ ಕೇಂದ್ರದಿಂದ ಕೇವಲ 1500 ಉದ್ಯೋಗಾವಕಾಶದ ಮಾತ್ರ ದೊರೆಯುತ್ತದೆ. ಅದಕ್ಕೆ ಅಷ್ಟೊಂದು ಆರ್ಥಿಕ ನೆರವು ನೀಡುವ ಬಗ್ಗೆ ಚರ್ಚೆಯಾಗಬೇಕು ಎಂದರು.

2129 ಸ್ಟಾರ್ಟ್‌ಅಪ್‌ಗಳ ಕಾರ್ಯನಿರ್ವಹಣೆ

ಕಳೆದ 3 ವರ್ಷಗಳಿಂದ ರಾಜ್ಯದಲ್ಲಿ ಒಟ್ಟು 2129 ಕಂಪನಿ/ಸ್ಟಾರ್ಟ್ ಅಪ್ ಕಂಪನಿಗಳು ಆರಂಭಗೊಂಡಿದ್ದು, ಸುಮಾರು 2.50ಲಕ್ಷ ಉದ್ಯೋಗಾವಕಾಶಗಳು ದೊರಕಿವೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ಅವರು ತಿಳಿಸಿದರು. ಕಳೆದ 03 ವರ್ಷಗಳಲ್ಲಿ ಇಲಾಖೆಯಲ್ಲಿ ಐಟಿ ವಲಯಕ್ಕೆ ಸಂಬಂಧಿಸಿದಂತೆ ಸುಮಾರು 05 ಒಡಂಬಡಿಕೆಗಳು ಹಾಗೂ ಬಿಟಿ ವಲಯಕ್ಕೆ ಸಂಬಂಧಿಸಿದಂತೆ ಸುಮಾರು 13 ಹಾಗೂ ಸ್ಟಾರ್ಟ್ ಅಪ್ ವಲಯಲ್ಲಿ ಸುಮಾರು 475 ನವೋದ್ಯಮಗಳಿಗೆ ತ್ರಿಪಕ್ಷೀಯ ಕರಾರು ಒಪ್ಪಂದ ಮತ್ತು ಹಾಗೂ ರಾಜೀವ್ ಗಾಂಧಿ ಉದ್ಯಮಶೀಲತೆಯಡಿ ಒಟ್ಟು 60 ನಾವೀನ್ಯಕಾರರೊಂದಿಗೆ ತ್ರಿಪಕ್ಷೀಯ ಕರಾರು ಒಪ್ಪಂದ ಹಾಗೂ ಮಹಿಳಾ ಉದ್ಯಮ ಶೀಲತಾ 04 ಸಂಸ್ಥೆಗಳೊಂದಿಗೆ ದ್ವಿಪಕ್ಷೀಯ ಕರಾರು ಒಪ್ಪಂದ ಹಾಗೂ ಗ್ರಾಸ್ ರೂಟ್ ಇನ್ನೋವೇಶನ್ ಕಾರ್ಯಕ್ರಮದಡಿ 27 ನವೋದ್ಯಮಗಳಿಗೆ ತ್ರಿಪಕ್ಷೀಯ ಕರಾರು ಒಪ್ಪಂದ ಮಾಡಿಕೊಳ್ಳಲಾಗಿರುತ್ತದೆ ಎಂದರು.

ಕರಾವಳಿ ಭಾಗದಲ್ಲಿ ಸ್ಟಾರ್ಟ್ ಅಪ್‌ಗಳ ಸ್ಥಾಪನೆಗೆ ಸರಕಾರ ಹಲವು ಕ್ರಮ ಕೈಗೊಂಡಿದೆ. ಟೆಕ್ನೋವಾಂಜಾ ಸಮ್ಮೇಳನ, ಬಿಯಾಂಡ್ ಬೆಂಗಳೂರು ಕ್ಲಸ್ಟರ್ ಸೀಡ್ ಫಂಡ್, ಕರ್ನಾಟಕ ಆಕ್ಸಿಲರೇಷನ್ ನೆಟ್‌ವರ್ಕ್ ಅಡಿಯಲ್ಲಿ ಕರಾವಳಿ ಪ್ರದೇಶದ ಸ್ಟಾರ್ಟ್ ಅಪ್‌ಗಳಿಗಾಗಿ ಮಂಗಳೂರಿನಲ್ಲಿ ಶೈನ್ ಫೌಂಡೇಷನ್ ಗುರುತಿಸಲಾಗಿದೆ. ಎಲಿವೇಟ್ ಯೋಜನೆಯಡಿ 90 ನವೋದ್ಯಮಗಳಿಗೆ ಒಟ್ಟು 1,970 ಲಕ್ಷ ಅನುದಾನ ನೀಡುವ ಮೂಲಕ ಕರಾವಳಿ ಜಿಲ್ಲೆಯನ್ನು ಉತ್ತೇಜಿಸಲಾಗಿದೆ.

- ಪ್ರಿಯಾಂಕ್ ಖರ್ಗೆ ಸಚಿವ

ಮಾಜಿ ಸೈನಿಕರಿಗೆ ಸೈಟ್ ಬದಲಿಗೆ ಜಿ ಪ್ಲಸ್ ಮಾದರಿ ಮನೆ ಹಂಚಿಕೆ

ವಿಧಾನ ಪರಿಷತ್: ಬೆಂಗಳೂರಿನಲ್ಲಿ ಮಾಜಿ ಸೈನಿಕರಿಗೆ ನಿವೇಶನ ಬದಲಿಗೆ ಜಿಪ್ಲಸ್ ಮಾದರಿಯಲ್ಲಿ ಮನೆಗಳನ್ನು ಹಂಚಿಕೆ ಮಾಡುವುದು ಒಳ್ಳೆಯದು ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು ತಿಳಿಸಿದರು.

ಪ್ರಶ್ನೋತ್ತರ ವೇಳೆಯಲ್ಲಿ ಕಾಂಗ್ರೆಸ್‌ನ ಶ್ರೀನಿವಾಸ್ ಅವರ ಪ್ರಶ್ನೆಗೆ ಉತ್ತರ ನೀಡಿದ ಸಚಿವರು, ಜಿ ಪ್ಲಸ್ ಮಾದರಿಯಲ್ಲಿ ಮನೆಗಳನ್ನು ಹಂಚಿಕೆ ಮಾಡಬೇಕೆನ್ನುವ ಒತ್ತಾಯಪೂರ್ವಕವಾದ ಸಲಹೆಯನ್ನು ನಾನು ರಾಜೀವ ಗಾಂಧೀ ವಸತಿ ನಿಗಮಕ್ಕೆ ನೀಡಬಲ್ಲೆ, ಇದು ಆದೇಶವಲ್ಲ, ಇದೊಂದು ಸಲಹೆ. ಆದರೆ ಇದಕ್ಕಿಂತ ಪರ್ಯಾಯ ಮಾರ್ಗ ಬೇರೆ ಇಲ್ಲ. 4 ಎಕರೆ ಜಮೀನು ಬೆಂಗಳೂರಿನಲ್ಲಿ ಹಂಚಿಕೆ ಮಾಡಲು ಸಾಧ್ಯವೇ ಇಲ್ಲ, ಅದಕ್ಕಿಂತಲೂ ಜಿ ಪ್ಲಸ್ ಮಾದರಿಯ ಮನೆ ನೀಡುವುದು ಒಳ್ಳೆಯದು ಎಂದು ಹೇಳಿದರು. ಯಲಹಂಕ ಹೋಬಳಿಯ ಗಂಟಿಗಾನಹಳ್ಳಿ ಗ್ರಾಮದಲ್ಲಿ ಮಾಜಿ ಸೈನಿಕರಿಗೆ ಹಂಚಿಕೆ ಮಾಡಲಾದ ಜಮೀನನ್ನು ಪ್ರಭಾವಿಗಳು ಒತ್ತುವರಿ ಮಾಡಿದ್ದಾರೆ. ದೇಶದ ಸುರಕ್ಷತೆಗಾಗಿ ತಮ್ಮ ಅಮೂಲ್ಯ ಸೇವೆ ಸಲ್ಲಿಸಿದ ಮಾಜಿ ಯೋಧರ ಜಮೀನು ಈ ರೀತಿ ಒತ್ತುವರಿಯಾಗಿರುವುದು ನೋವಿನ ಸಂಗತಿ, ಕೂಡಲೇ ಮಾಜಿ ಸೈನಿಕರಿಗೆ ನ್ಯಾಯ ಒದಗಿಸಿ ಸದಸ್ಯ ಡಿ.ಟಿ.ಶ್ರೀನಿವಾಸ ಒತ್ತಾಯಿಸಿದರು. ಈ ವಿಷಯದ ಕುರಿತು ಅನೇಕ ಬಾರಿ ಸದನದಲ್ಲಿ ಪ್ರಸ್ತಾಪಿಸಿರುವ ಶ್ರೀನಿವಾಸ ಈ ಬಾರಿಯೂ ಈ ಮಹತ್ವದ ವಿಷಯವನ್ನು ಪ್ರಶ್ನೋತ್ತರ ಕಲಾಪದಲ್ಲಿ ಮಾಜಿ ಸೈನಿಕರಿಗೆ ಹಂಚಿಕೆಯಾದ ಭೂಮಿ ಅತಿಕ್ರಮಣವಾಗಿರುವ ವಿಷಯದ ಬಗ್ಗೆ ಸರಕಾರಕ್ಕೆ ಪ್ರಶ್ನೆ ಕೇಳಿದರು. ಇಂದು ನಾವು ಸುರಕ್ಷಿತವಾ ಗಿರಲು ಸೈನಿಕರೇ ಕಾರಣ, ಸೈನ್ಯದಲ್ಲಿ ಅಮೂಲ್ಯ ಸೇವೆ ಸಲ್ಲಿಸಿದ 253 ವೀರ ಯೋಧರಿಗೆ ನಿವೇಶನ ಹಂಚಿಕೆ ಮಾಡಲು ಸರಕಾರ ನಿರ್ಧರಿಸಿತ್ತು. ರಾಜೀವ ಗಾಂಧಿ ವಸತಿ ನಿಗಮಕ್ಕೆ ಜಮೀನು ಸಹ ಹಸ್ತಾಂತರವಾಗಿದ್ದು, ಸ್ಥಳೀಯ ಜಿಲ್ಲಾ ಪಂಚಾಯತ ಮಟ್ಟದ ಪ್ರಭಾವಿಗಳೇ ಆ ಜಮೀನು ಒತ್ತುವರಿ ಮಾಡಿಕೊಂಡಿದ್ದಾರೆ. ಇದರಿಂದಾಗಿ ಅಧಿಕಾರಿಗಳಿಗೂ ಒತ್ತುವರಿ ತೆರವು ಮಾಡಲು ಕಷ್ಟಸಾಧ್ಯವಾಗುತ್ತಿದೆ. ಈ ಬಗ್ಗೆ ಮಾಜಿ ಸೈನಿಕರು ಅನೇಕ ಬಾರಿ ಸರಕಾರಕ್ಕೆ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ ಎಂದರು.

ಬೆಂಗಳೂರಿನಲ್ಲಿ ಹಂಚಿಕೆ ಮಾಡಲು ಸಾಧ್ಯವಿಲ್ಲ

ನೂತನ ಕಾಯಿದೆ ಪ್ರಕಾರ ಸಹಾಯಾರ್ಥ ನೀಡಲಾಗುವ ನಿವೇಶನಗಳನ್ನು ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಯಲ್ಲಿ ಹಂಚಿಕೆ ಮಾಡಲು ಸಾಧ್ಯವೇ ಇಲ್ಲ, ಆದರೆ ಮಾಜಿ ಸೈನಿಕರ ಬಗ್ಗೆ ನಮಗೆ ಅತ್ಯಂತ ಗೌರವವಿದೆ, ಅವರಿಗೆ ನಿವೇಶನ ನೀಡುವುದಿಲ್ಲ ಎಂದು ಹೇಳುತ್ತಿಲ್ಲ. ಅದರ ಬದಲಿಗೆ ಜಿ ಪ್ಲಸ್ ಮಾದರಿಯಲ್ಲಿ ಮನೆ ಹಂಚಿಕೆ ಮಾಡುವುದು ಒಳ್ಳೆಯದು ಎಂಬ ಒತ್ತಾಯಪೂರ್ವಕವಾದ ಸಲಹೆಯನ್ನು ನಾನು ರಾಜೀವ್‌ಗಾಂಧಿ ವಸತಿ ನಿಗಮಕ್ಕೆ ನೀಡ ಬಲ್ಲೆ, ಇದು ಆದೇಶವಲ್ಲ, ಇದೊಂದು ಸಲಹೆ. ಆದರೆ ಇದಕ್ಕಿಂತ ಪರ್ಯಾಯ ಮಾರ್ಗ ಬೇರೆ ಇಲ್ಲ. 4 ಎಕರೆ ಜಮೀನು ಬೆಂಗಳೂರಿನಲ್ಲಿ ಹಂಚಿಕೆ ಮಾಡಲು ಸಾಧ್ಯವೇ ಇಲ್ಲ, ಅದಕ್ಕಿಂತಲೂ ಜಿ ಪ್ಲಸ್ ಮಾದರಿಯ ಮನೆ ನೀಡುವುದು ಒಳ್ಳೆಯದು ಎಂದರು.

ಕಾಲಕಾಲಕ್ಕೆ ಮಾರ್ಗಸೂಚಿ ದರ ಪರಿಷ್ಕರಣೆ ಪರಿಹಾರ

ವಿಧಾನ ಪರಿಷತ್: ಭೂ ಸ್ವಾಧೀನ ಪ್ರಕ್ರಿಯೆ ಪರಿಹಾರದ ವಿಚಾರದಲ್ಲಿ ರೈತರಿಗೆ ಆಗುತ್ತಿರುವ ಅನ್ಯಾಯವನ್ನು ತಪ್ಪಿಸಲು ಕಾಲಕಾಲಕ್ಕೆ ಮಾರ್ಗಸೂಚಿ ದರ ಪರಿಷ್ಕರಣೆ ಮಾಡುವುದೊಂದೆ ಪರಿಹಾರ ಎಂದು ಸಚಿವ ಕೃಷ್ಣ ಬೈರೇಗೌಡ ಅವರು ಅಭಿಪ್ರಾಯಪಟ್ಟಿದ್ದಾರೆ.

ಸದಸ್ಯರಾದ ಕೆ.ಎಸ್.ನವೀನ್ ಅವರು 2019 ಕ್ಕೂ ಹಿಂದಿನ ಮಾರ್ಗಸೂಚಿ ದರ ಆಧಾರದಲ್ಲಿ ಈಗಿನ ಭೂಸ್ವಾದೀನಕ್ಕೆ ಪರಿಹಾರ ನೀಡುವುದು ರೈತರಿಗೆ ನಷ್ಟವಲ್ಲವೇ? ಎಂದು ಪ್ರಶ್ನಿಸಿದರು. ಈ ಪ್ರಶ್ನೆಗೆ ಉತ್ತರ ನೀಡಿದ ಕಂದಾಯ ಸಚಿವರು, ಭೂ ಸ್ವಾಧೀನಕ್ಕೆ ರೈತರಿಗೆ ಪರಿಹಾರ ನೀಡುವ ಸಂಬಂಧ 2013ರ ಕಾನೂನಿನಲ್ಲಿ ಸ್ಪಷ್ಟವಾಗಿದೆ. ಈ ಕಾನೂನಿನ ಪ್ರಕಾರ ಭೂ ಸ್ವಾಧೀನಕ್ಕೆ ಪ್ರಾಥಮಿಕ ಅಧಿಸೂಚನೆ ಹೊರಡಿಸಿದ ನಂತರ ಭೂಮಿಗೆ ಹೊಸದಾಗಿ ಮಾರ್ಗಸೂಚಿ ದರವನ್ನು ಪರಿಷ್ಕರಿಸುವುದಿಲ್ಲ. ಬದಲಾಗಿ ಹಿಂದಿನ ಮಾರ್ಗಸೂಚಿ ದರ ಅಥವಾ ಹಿಂದಿನ ಮೂರು ವರ್ಷದ ಮಾರುಕಟ್ಟೆಯ ನೋಂದಾಯಿತ ಸೇಲ್ ಡೀಡ್ (ಮಾರಾಟ ಪತ್ರ) ದರ ಪರಿಗಣಿಸಲಾಗುತ್ತದೆ. ಆ ಪೈಕಿ ಭೂಮಿ ಹೆಚ್ಚಿನ ದರಕ್ಕೆ ವಹಿವಾಟು ಆಗಿರುವ ಆಧಾರದಲ್ಲಿ ಸರಾಸರಿ ಮೊತ್ತ ಪರಿಹಾರವಾಗಿ ನಿಗದಿಪಡಿಸಲಾಗುತ್ತದೆ ಎಂದು ವಿವರಿಸಿದರು.

ಕಾಲಕಾಲಕ್ಕೆ ಮಾರ್ಗಸೂಚಿ ದರ ಪರಿಷ್ಕರಣೆಯೇ ಪರಿಹಾರ: ಈ ವೇಳೆ ಮಧ್ಯಪ್ರವೇಶಿಸಿದ ಕೆ.ಎಸ್.ನವೀನ್ ಅವರು, ಹಳೆಯ ಮಾರ್ಗಸೂಚಿ ದರದ ಆಧಾರದಲ್ಲೇ ಪರಿಹಾರದ ಮೊತ್ತವನ್ನು ನಿಗದಿ ಪಡಿಸುವುದು ರೈತರಿಗೆ ಅನ್ಯಾಯ ಮಾಡಿದಂತೆ ಆಗುವುದಿಲ್ಲವೇ? ಎಂಬ ಮರುಪ್ರಶ್ನೆಗೆ ಉತ್ತರ ನೀಡಿದ ಅವರು, ಸರಕಾರ ಪ್ರತಿನಿತ್ಯ ಒಂದಲ್ಲಾ ಒಂದು ಕಾರಣಕ್ಕೆ ಭೂ ಸ್ವಾಧೀನ ಮಾಡುತ್ತಲೇ ಇರುತ್ತದೆ. ಕಾಲದಿಂದ ಕಾಲಕ್ಕೆ ದರ ಪರಿಷ್ಕರಣೆ ಮಾಡದಿದ್ದಲ್ಲಿ ರೈತರಿಗೆ ನಷ್ಟವಾಗುತ್ತದೆ ಎಂಬುದು ಸತ್ಯ. ಇದೇ ಕಾರಣಕ್ಕೆ ನಾವೂ ಸಹ ಮಾರ್ಗಸೂಚಿ ದರ ಪರಿಷ್ಕರಣೆ ಆಗಬೇಕು ಎನ್ನುತ್ತೇವೆ. ಆದರೆ, ಅದಕ್ಕೂ ವಿರೋಧ ವ್ಯಕ್ತಪಡಿಸುತ್ತಾರೆ ಎಂದು ವಿಷಾದಿಸಿ ದರು. ಈ ಬಗ್ಗೆಯೂ ಸದನದ ಗಮನ ಸೆಳೆದ ಕೃಷ್ಣಬೈರೇಗೌಡ ಅವರು, ಕೆಲವು ಕಡೆ ಮಾರ್ಗಸೂಚಿ ದರಕ್ಕೂ ಮಾರುಕಟ್ಟೆ ದರಕ್ಕೂ ಅಜಗಜಾಂತರ ವ್ಯತ್ಯಾಸಗಳಿವೆ. ಕೆಲವು ಕಡೆ ಭೂಮಿ ಮಾರ್ಗಸೂಚಿ ದರ 2 ಲಕ್ಷ ಇದ್ದರೆ, ಮಾರುಕಟ್ಟೆ ಮೌಲ್ಯ 70 ರಿಂದ 80 ಲಕ್ಷ ಇದೆ. ಪರಿಣಾಮ ಕಪ್ಪು ಹಣದ ವಹಿವಾಟಿಗೂ ಇದು ಕಾರಣವಾಗಿದೆ. ಹೀಗಾಗಿ ಈ ಎಲ್ಲಾ ಅಕ್ರಮ ವಹಿವಾಟು ನಿಯಂತ್ರಿಸಿ ರೈತರಿಗೂ ನ್ಯಾಯಬದ್ಧ ಪರಿ ಹಾರ ನೀಡಲು ಕಾಲಕಾಲಕ್ಕೆ ಮಾರ್ಗಸೂಚಿ ದರ ಪರಿಷ್ಕರಣೆಯೊಂದೇ ಪರಿಹಾರ ಎಂದು ಅವರು ವಿವರಿಸಿದರು.

ಶಿಕ್ಷಕರಿಗೆ ನಾಯಿ ನಿಯಂತ್ರಿಸುವ ಆದೇಶ ನೀಡಿದ್ದು ಖಂಡನಾರ್ಹ

ವಿಧಾನ ಪರಿಷತ್: ಬೋಧಕೇತರ ಚಟುವಟಿಕೆಗಳ ಕಾರ್ಯಬಾಹುಳ್ಯವಿರುವ ಶಿಕ್ಷಕರಿಗೆ ಈಗ ಶಾಲಾ ಆವರಣದಲ್ಲಿ ನಾಯಿಗಳನ್ನು ನಿಯಂತ್ರಿಸುವ ಅವೈಜ್ಞಾನಿಕ ಹಾಗೂ ಹಾಸ್ಯಾಸ್ಪದವಾದ ಆದೇಶವನ್ನು ಹೊರಡಿಸಿರುವುದು ಖಂಡನಾರ್ಹ, ಕೂಡಲೇ ಈ ಆದೇಶವನ್ನು ವಾಪಸ್ ಪಡೆಯಬೇಕು ಎಂದು ಬಿಜೆಪಿಯ ಸದಸ್ಯ ಹಣಮಂತ ನಿರಾಣಿ ಒತ್ತಾಯಿಸಿದರು.

ಶೂನ್ಯ ವೇಳೆಯಲ್ಲಿ ವಿಷಯವನ್ನು ಪ್ರಸ್ತಾಪಿಸಿದ ಅವರು, ಬಿಸಿಯೂಟ, ಮೊಟ್ಟೆ ಲೆಕ್ಕ ಸೇರಿ ಅನೇಕ ಬೋಧನಾರಹಿತ ಕಾರ್ಯ ಚಟುವಟಿಕೆಗಳ ಒತ್ತಡದಿಂದ ಈಗಾಗಲೇ ಶಿಕ್ಷಕರು ಬಳಲುವಂತಾಗಿದೆ, ಈಗ ಇನ್ನೊಂದೆಡೆ ಸರಕಾರಿ ಶಾಲೆಗಳ ಆವರಣದಲ್ಲಿ ಬೀದಿ ನಾಯಿಗಳನ್ನು ನಿಯಂತ್ರಿಸಲು ಓರ್ವ ಶಿಕ್ಷಕರನ್ನು ನೋಡೆಲ್ ಅಧಿಕಾರಿಯನ್ನಾಗಿ ನಿಯೋಜಿಸಿ, ನಾಯಿ ಕಡಿತದಂತಹ ಘಟನೆ ನಡೆದರೆ ಶಿಕ್ಷಕರನ್ನೇ ಹೊಣೆಗಾರರನ್ನಾಗಿ ಮಾಡುವುದು ಅತ್ಯಂತ ಅವೈಜ್ಞಾನಿಕ ನಿರ್ಧಾರ. ನಾಯಿಗಳನ್ನು ನಿಯಂತ್ರಿಸುವುದು ಶಿಕ್ಷಕರ ಕೆಲಸವಲ್ಲ, ಈ ಕಾರ್ಯ ನಿರ್ವಹಣೆ ವೇಳೆ ನಾಯಿಗಳು ದಾಳಿ ಮಾಡಿ ಶಿಕ್ಷಕರಿಗೆ ಅಪಾಯವಾದರೆ ಯಾರು ಹೊಣೆ? ನಾಯಿಗಳ ನಿಯಂತ್ರಣಕ್ಕೆ ಸ್ಥಳೀಯ ಸಂಸ್ಥೆ ಅಥವಾ ಗ್ರಾಮೀಣ ಭಾಗದಲ್ಲಿದ್ದರೆ ಗ್ರಾಮ ಪಂಚಾಯಿತಿಗಳಿಗೆ ವಹಿಸಬೇಕು. ಅದನ್ನು ಬಿಟ್ಟು ಶಿಕ್ಷಕರಿಗೆ ಈ ಜವಾಬ್ದಾರಿ ನೀಡಿರುವುದು ಖೇದಕರ. ಸರಕಾರ ಕೂಡಲೇ ಈ ಆದೇಶವನ್ನು ವಾಪಸ್ ಪಡೆಯಬೇಕು. ಬೋಧಕೇತರ ಚಟುವಟಿಕೆಗಳಿಗೆ ಶಿಕ್ಷಕರ ಸಮಯ ವ್ಯಯವಾಗುತ್ತಿದೆ. ಬೋಧನೆಗೆ ಅವರಿಗೆ ಸಮಯವೇ ದೊರಕುತ್ತಿಲ್ಲ. ಹೀಗಾಗಿ ಬೋಧಕೇತರ ಚಟುವಟಿಕೆಗಳ ಒತ್ತಡವನ್ನು ಶಿಕ್ಷಕರಿಗೆ ಕಡಿಮೆ ಮಾಡಬೇಕು ಎಂದು ಇದೇ ಸಂದರ್ಭದಲ್ಲಿ ನಿರಾಣಿ ಪ್ರಸ್ತಾಪಿಸಿದರು.

ಸದನ ಸ್ವಾರಸ್ಯ

ಅವ್ರು ಕೂರ್ಲಿ, ನಾನೂ ಕೂರ್ತಿನಿ!

ಸದನದ ಒಳಗಿರಲಿ, ಹೊರಗಿರಲಿ ಪ್ರಧಾನಿ ನರೇಂದ್ರ ಮೋದಿ, ಬಿಜೆಪಿಯನ್ನು ಟೀಕಿಸುವುದರಲ್ಲಿ ಸಚಿವ ಪ್ರಿಯಾಂಕ್ ಖರ್ಗೆ ಅಗ್ರಸ್ಥಾನದಲ್ಲಿ ನಿಲ್ಲುತ್ತಾರೆ. ಅದರಲ್ಲಿಯೂ ಸದನದೊಳಗೆ ತಮ್ಮದಲ್ಲದ ಇಲಾಖೆಯಾಗಿದ್ದರೂ, ಮೋದಿ ಹಾಗೂ ಕೇಂದ್ರ ಸರಕಾರವನ್ನು ಟೀಕಿಸುವ ಯಾವೊಂದೂ ಅವಕಾಶವನ್ನು 'ಮಿಸ್' ಮಾಡಿಕೊಳ್ಳಲು ಬಯಸುವುದಿಲ್ಲ. ಬುಧವಾರವೂ, ವಾಣಿಜ್ಯ ಬಳಕೆಯ ಸಿಲಿಂಡರ್ ವಿಷಯದಲ್ಲಿ ಶೂನ್ಯವೇಳೆಯಲ್ಲಿ ರಂಗನಾಥ್ ಪ್ರಸ್ತಾಪಿಸುತ್ತಿದ್ದಂತೆ, ಮುನಿಯಪ್ಪ ಅವರು ಪ್ರತಿಕ್ರಿಯಿಸುವ ಮೊದಲೇ ಪ್ರಿಯಾಂಕ್ ಖರ್ಗೆ ಕೇಂದ್ರದ ವಿರುದ್ಧ ಕಿಡಿಕಾರಲು ಶುರು ಮಾಡಿದರು. ಸಿದ್ದರಾಮಯ್ಯ ಎದ್ದು ನಿಂತರೂ ತಮ್ಮ ಟೀಕೆಗೆ ಬ್ರೇಕ್ ಹಾಕಲಿಲ್ಲ. ಕೊನೆಗೆ ಸಿದ್ದರಾಮಯ್ಯ ಅವರು ಕುಳಿತುಕೊಳ್ಳಿ ಎಂದು ಸೂಚನೆ ನೀಡಿದರೂ, ಒಂದೆರೆಡು ಮಾತು ಸರ್ ಎಂದರು. ಅದಕ್ಕೆ ಸಿದ್ದು ಅವಕಾಶ ನೀಡದೇ ಇದಿದ್ದರಿಂದ ಕೂತರು.

ಬಳಿಕ ಮುನಿಯಪ್ಪ ಮಾತಾಡುವಾಗಲೂ ಎದ್ದು ನಿಲ್ಲಲು ಮುಂದಾಗುತ್ತಿದ್ದಂತೆ, ಖರ್ಗೆ ವಿರುದ್ಧ ಸುರೇಶ್‌ಕುಮಾರ್ ಸೇರಿ ಬಿಜೆಪಿಯ ಎಲ್ಲರೂ ಮುಗಿಬಿದ್ದರು. ಈ ಸಮಯದಲ್ಲಿ ಗದ್ದಲ ಜೋರಾಗಿದ್ದರಿಂದ ಸ್ಪೀಕರ್ ಯು.ಟಿ.ಖಾದರ್ ಮಧ್ಯಪ್ರವೇಶಿಸಿ, ಎಲ್ಲರನ್ನೂ ಕೂರುವಂತೆ ಹೇಳಿದರು. ಆದರೆ ಸುರೇಶ್‌ಕುಮಾರ್ ಮಾತ್ರ, ಪ್ರಿಯಾಂಕ್ ಕೂತರೆ ಮಾತ್ರ ನಾನು ಕೂರುತ್ತೇನೆ. ಇಲ್ಲದೇ ಹೋದರೆ, ನಾನೂ ನಿಂತಿರುತ್ತೇನೆ ಎಂದು ಸವಾಲು ಹಾಕಿದರು. ಇದರಿಂದ ಕೊನೆಗೆ ಸಿಎಂ, ದಿನೇಶ್ ಗುಂಡೂರಾವ್, ಖಾದರ್ ಹೇಳಿದ ಬಳಿಕ ಪ್ರಿಯಾಂಕ್ ಕೂತರು.

ಖರ್ಗೆ ಆ್ಯಂಟಿ ಬಿಜೆಪಿ ಸೆಲ್ ಮುಖ್ಯಸ್ಥ!

ಬಿಜೆಪಿ ಶಾಸಕರು ಹಾಗೂ ಪ್ರಿಯಾಂಕ್ ಖರ್ಗೆ ನಡುವಿನ ಗಲಾಟೆ ಮುಗಿಯುವ ಲಕ್ಷಣ ಕಾಣಿಸಲಿಲ್ಲ. ಇದರಿಂದ ಕುಪಿತರಾದ ಸುರೇಶ್ ಕುಮಾರ್ ಅವರು, ಬಿಜೆಪಿ ಮತ್ತು ಮೋದಿ ವಿರುದ್ಧ ಮಾತಾಡಲು ಪ್ರಿಯಾಂಕ್ ಕಾಯುತ್ತಿರುತ್ತಾರೆ ಎಂದರು. ಇದಕ್ಕೆ ಇನ್ನೊಬ್ಬ ಶಾಸಕ, ಅವರ ಇಲಾಖೆ ಬಿಟ್ಟು ಬೇರೆಲ್ಲ ಇಲಾಖೆಯ ಬಗ್ಗೆ ಮಾತಾಡುತ್ತಾರೆ ಎಂದರು. ಇದಕ್ಕೆ ಪ್ರಿಯಾಂಕ್ ಖರ್ಗೆ ಉತ್ತರಿಸೋಕೆ ಮುಂದಾಗುತ್ತಿದ್ದಂತೆ, ಮಾತನಾಡಿದ ಸುರೇಶ್ ಕುಮಾರ್, 'ಆ್ಯಂಟಿ ಬಿಜೆಪಿ ಅಥವಾ ಆ್ಯಂಟಿ ಮೋದಿ' ಎನ್ನುವ ಹೊಸ ಸೆಲ್ ಅನ್ನು ಸ್ಥಾಪಿಸಿ ಎಂದು ವ್ಯಂಗ್ಯವಾಡಿದರು. ಇದಕ್ಕೆ ಪ್ರತಿಕ್ರಿಯಿಸಿದ ಖರ್ಗೆ, ನಾನು ಈಗಾಗಲೇ ಆ್ಯಂಟಿ ಬಿಜೆಪಿ ಹಾಗೂ ಆ್ಯಂಟಿ ಮೋದಿಯ ಅಧ್ಯಕ್ಷನೆಂದು ಸವಾಲು ಹಾಕಿ, ಚರ್ಚೆಗೆ ಇತಿಶ್ರೀ ಹಾಡಿದರು.

ನಾನೂ ಮಾತಾಡಲ್ಲ, ನೀವೂ ಮಾತಾಡ್ಬೇಡಿ

ಕಾಂಗ್ರೆಸ್‌ನ ಶಿವಲಿಂಗೇಗೌಡರು ಮಾತಿಗೆ ನಿಂತರೆ ಅದೇನೋ ಪ್ರತಿಪಕ್ಷ ಬಿಜೆಪಿಯ ಕೆಲ ಸದಸ್ಯರಿಗೆ ಒಂತರಾ ಖುಷಿ. ಅವರು ಮಾತಾಡೋಕ್ಕಿಂತ ಜಾಸ್ತಿ ಪ್ರತಿಪಕ್ಷದ ಲಾಸ್ಟ್‌ಬೆಂಚ್ ಶಾಸಕರ ಕೀಟಲೆಯೇ ಹೆಚ್ಚಾಗಿರುತ್ತದೆ. ಇದೇ ಕೀಟಲೆಯ ಕಾರಣಕ್ಕೆ ಕಳೆದ ಅಧಿವೇಶನದಲ್ಲಿ ಭಾರಿ ವಾಗ್ಯುದ್ಧವಾಗಿ, ಕೊನೆಗೆ ಸದನವನ್ನೇ ಮುಂದೂಡಬೇಕಾಗಿತ್ತು. ಆದ್ದರಿಂದ ಈ ಬಾರಿ ಬಜೆಟ್ ಮೇಲಿನ ಚರ್ಚೆಯಲ್ಲಿ ಶಿವಲಿಂಗೇಗೌಡರು ಭಾಷಣ ಆರಂಭಿಸುವ ಮೊದಲೇ 'ಇಂಟ್ರೋ' ರೀತಿ ನಾನು ಬಿಜೆಪಿಯವರನ್ನು ಕೆಣಕಲ್ಲ, ನೀವು ನನ್ನ ಕೆಣಕಬೇಡಿ. ನಾನು ಮಾತಾಡಿದ್ದರಲ್ಲಿ ತಪ್ಪಾಗಿದ್ರೆ, ಆಮೇಲೆ ಏನಾದ್ರೂ ಶಿಕ್ಷೆ ಕೊಡಿ ಎಂದು ಪೀಠಿಕೆ ಹಾಕಿದರು. ಇದಕ್ಕೆ ಸ್ಪೀಕರ್ ಖಾದರ್, 'ನೀವು ನನ್ನ ನೋಡಿಕೊಂಡು ಮಾತನಾಡಿ. ಕಿವಿಯನ್ನು ಬಂದ್ ಮಾಡಿಕೊಳ್ಳಿ' ಎಂದರು. ಸಿ.ಸಿ.ಪಾಟೀಲರು ಶಿವಲಿಂಗೇಗೌಡರಿಗೆ ಕುದುರೆ ಕಟ್ಟುವ ಹಾಗೆ, ನೀವೊಬ್ಬರೇ ಕಾಣುವಂತೆ 'ಕಣ್ಪಟ್ಟಿ' ಕಟ್ಟಿಕೊಂಡು ಮಾತನಾಡುವುದು ಸೂಕ್ತ ಎಂದರು. ಇನ್ನು ಬಿಜೆಪಿಯ ಬಹುಪಾಲು ಶಾಸಕರು ಹೊರಗೆ ಬಂದು, ನಾವಿದ್ದರೆ ತಾನೇ ಅವರಿಗೆ ಕೀಟಲೆ ಮಾಡೋದು, ಅದ್ಕೆ ಎದ್ದು ಬಂದೆವು ಎಂದರು.

ನಕಲಿ ಪ್ರಮಾಣ ಪತ್ರ: ನಿವೃತ್ತ ನ್ಯಾಯಾಧೀಶರಿಂದ ತನಿಖೆ

ವಿಧಾನ ಪರಿಷತ್: ಸಾರಿಗೆ ಇಲಾಖೆಯಲ್ಲಿ ಲಿಪಿಕ ವರ್ಗದವರು ಬಡ್ತಿ ಪಡೆಯಲು ನಕಲಿ ಡಿಪ್ಲೊಮಾ ಪ್ರಮಾಣ ಪತ್ರ ನೀಡಿರುವ ಆರೋಪದ ಸಂಬಂಧ ನಿವೃತ್ತ ನ್ಯಾಯಾಧೀಶರಿಂದ ತನಿಖೆ ನಡೆಸಲಾಗುವುದು ಎಂದು ಸಚಿವ ರಾಮಲಿಂಗಾರೆಡ್ಡಿ ಅವರು ತಿಳಿಸಿದರು.

ಲಿಪಿಕ ವರ್ಗದವರು ಬಡ್ತಿ ಪಡೆಯಲು ನಕಲಿ ಡಿಪ್ಲೊಮಾ ಪ್ರಮಾಣ ಪತ್ರ ನೀಡಿರುವ ಸಂಬಂಧ ಅಕ್ರಮ ನಡೆದಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ. ಈ ವಿಚಾರ ತಾಂತ್ರಿಕ ಶಿಕ್ಷಣ ಇಲಾಖೆಯನ್ನು ಒಳಗೊಂಡಿರುವುದರಿಂದ ನಿವೃತ್ತ ಜಿಲ್ಲಾ ಸತ್ರ ನ್ಯಾಯಾಧೀಶರಾದ ನಾರಾಯಣ್ ಎಂಬುವರಿಂದ ತನಿಖೆ ನಡೆಸಲು ಅಧಿಸೂಚನೆ ಹೊರಡಿಸಲಾಗಿದೆ ಎಂದು ಹೇಳಿದರು. ಜೆಡಿಎಸ್ ಸದಸ್ಯ ಟಿ.ಎ.ಶರವಣ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಈ ವಿಚಾರದಲ್ಲಿ ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಜರುಗಿಸಲಾಗುತ್ತದೆ ಎಂದು ಹೇಳಿದರು. ಗ್ರೂಪ್ ಸಿ ವೃಂದದಿಂದ ಮೋಟಾರು ವಾಹನ ನಿರೀಕ್ಷಕರ ಹುದ್ದೆಗೆ ಬಡ್ತಿ ನೀಡಲು ಸರಕಾರ 2022ರ ಅ.12 ರಂದು ಅಧಿಸೂಚನೆ ಹೊರಡಿಸಿ ಅವಕಾಶ ನೀಡಿತ್ತು. ಸಾರಿಗೆ ಇಲಾಖೆಯ ಗ್ರೂಪ್ ಸಿ ನೌಕರರಿಗೆ ಡಿಪ್ಲೊಮಾ ಆಟೋಮೊಬೈಲ್ ಸಂಜೆ ಕಾಲೇಜಿನಲ್ಲಿ ವ್ಯಾಸಂಗ ಮಾಡಲು ಸಾರಿಗೆ ಇಲಾಖೆಯಿಂದ ಆಕ್ಷೇಪಣಾ ರಹಿತ ಪತ್ರವನ್ನು 2022-23 ರಲ್ಲಿ 17 ನೌಕರರಿಗೆ, 2023-24 ರಲ್ಲಿ 24 ನೌಕರರಿಗೆ ಹಾಗೂ 2024-25 ರಲ್ಲಿ 15 ನೌಕರರಿಗೆ ನೀಡಲಾಗಿತ್ತು. ತಾಂತ್ರಿಕ ಶಿಕ್ಷಣ ಇಲಾಖೆಯಡಿ ಬರುವ ಕಾಲೇಜುಗಳಲ್ಲಿ ಡಿಪ್ಲೊಮಾ ಪದವಿ ಸಂಬಂಧ ಪ್ರವೇಶಾತಿ ಪಡೆದಿರುವ ಅಭ್ಯರ್ಥಿಗಳು ಸಲ್ಲಿಸಿರುವ ಸೇವಾನುಭವ ಪ್ರಮಾಣಪತ್ರಗಳ ನೈಜತೆ ಕುರಿತು ವರದಿ ಸಲ್ಲಿಸುವಂತೆ ಸಾರಿಗೆ ಆಯುಕ್ತರು ಕೋರಿದ್ದರು.

2020 ರ ಫೆ.9ರವರೆಗೆ ನೈಜತೆ ಕುರಿತು ಪ್ರಸ್ತಾಪ ಬಂದಿಲ್ಲ. ಸರಕಾರಿ ಕೆಲಸದೊಂದಿಗೆ ವಿವಿಧ ಖಾಸಗಿ ಕಂಪನಿ/ಕೈಗಾರಿಕೆಗಳಲ್ಲಿ ತಾಂತ್ರಿಕ ಹುದ್ದೆಯಲ್ಲಿ ಕೆಲಸ ನಿರ್ವಹಿಸುತ್ತಿರುವುದಾಗಿ ತಾಂತ್ರಿಕ ಶಿಕ್ಷಣ ಇಲಾಖೆ ನಿರ್ದೇಶಕರು ಸಲ್ಲಿಸಿರುವ ವರದಿ ಹಾಗೂ ದಾಖಲೆಗಳನ್ನು ಆಧರಿಸಿ ಸಂಬಂಧಿಸಿದ ನೌಕರರಿಗೆ ಮಾ.3 ರಂದು ಕಾರಣ ಕೇಳಿ ನೋಟೀಸ್ ಜಾರಿ ಮಾಡಲಾಗಿದೆ. ಅವರಿಂದ ಸಮಜಾಯಿಷಿ ಸ್ವಿಕೃತವಾದ ನಂತರ ಪರಿಶೀಲಿಸಿ ನಿಯಮಾನುಸಾರ ಸಾರಿಗೆ ಆಯುಕ್ತರು ಕ್ರಮ ಕೈಗೊಳ್ಳುವ ಪ್ರಕ್ರಿಯೆ ಚಾಲನೆಯಲ್ಲಿದೆ ಎಂದು ಸಚಿವರು ತಿಳಿಸಿದರು.

ಪಶು ವೈದ್ಯರ ಕೊರತೆ ನಿವಾರಿಸಿ

ವಿಧಾನ ಪರಿಷತ್: ಪಶು ವೈದ್ಯರ ಕೊರತೆ ನೀಗಿಸಲು 400 ಮಂದಿ ಕೆಪಿಸಿಸಿ ಮೂಲಕ ಹಾಗೂ 400 ಮಂದಿಯನ್ನು ಹೊರಗುತ್ತಿಗೆ ಮೂಲಕ ಭರ್ತಿ ಮಾಡಿಕೊಳ್ಳಲಾಗುತ್ತಿದೆ ಎಂಬ ಸರಕಾರದ 'ಟೇಪ್' ಉತ್ತರವನ್ನು 3 ವರ್ಷಗಳಿಂದ ಕೇಳಿ ಕೇಳಿ ಸಾಕಾಗಿದೆ ಎಂದು ಮೇಲ್ಮನೆ ಬಿಜೆಪಿ ಸದಸ್ಯ ಎಸ್.ವಿ.ಸಂಕನೂರ ಅವರು ಅಸಮಾಧಾನ ವ್ಯಕ್ತಪಡಿಸಿದರು.

ಸದಸ್ಯರಾದ ಡಿ.ಎಸ್.ಅರುಣ್, ಹೇಮಲತಾ ನಾಯಕ, ಎಸ್.ವಿ.ಸಂಕ ನೂರ ಈ ಸಮಸ್ಯೆಯ ಬಗ್ಗೆ ಸರಕಾರವನ್ನು ಪ್ರಶ್ನೆ ಮಾಡಿದರು. ಈ ವೇಳೆ ಎಸ್.ವಿ.ಸಂಕನೂರ ಮಾತ ನಾಡಿ, ಮೂಕ ಪ್ರಾಣಿಗಳ ವೇದನೆ ಯಾರು ಕೇಳು ವರು? 6757 ಹುದ್ದೆಗಳು ಖಾಲಿ ಇವೆ, ಪ್ರತಿ ಬಾರಿ ಈ ವಿಷಯವನ್ನು ಪ್ರಸ್ತಾಪಿಸುತ್ತಲೇ ಇರುವೆ, ಇದೇ ಸಿದ್ಧ ಉತ್ತರ ಸರಕಾರದಿಂದ ಬರುತ್ತಿದೆ ಎಂದರು. ಈ ವಿಷಯವಾಗಿ ಡಿ.ಎಸ್.ಅರುಣ್ ಮಾತನಾಡಿ, ಪಶುಗಳಿಗೆ ಆರೋಗ್ಯ ಸೇವೆ ಒದಗಿಸುವ ದೃಷ್ಟಿಯಿಂದ ಮೊಬೈಲ್ ಕ್ಲಿನಿಕ್ ಆರಂಭಿಸಲಾಗಿದೆ, ಆದರೆ ಈ ಮೊಬೈಲ್ ಕ್ಲಿನಿಕ್ ಪಶು ಆಸ್ಪತ್ರೆ ಸಮಯದಲ್ಲಿಯೇ ಕಾರ್ಯನಿರ್ವಹಿಸುತ್ತಿದೆ. ಆಸ್ಪತ್ರೆ ಮುಚ್ಚಿದ ಮೇಲೆ ಈ ಮೊಬೈಲ್ ಕ್ಲಿನಿಕ್ ಸೇವೆ ಸ್ಥಗಿತವಾಗುತ್ತಿದೆ. ಹೀಗಾದರೆ ಮೊಬೈಲ್ ಕ್ಲಿನಿಕ್ ಸ್ಥಾಪನೆಯ ಪ್ರಯೋಜನವೇನು ಎಂದು ಪ್ರಶ್ನಿಸಿದರು.

ಆಗ ಸಭಾಪತಿ ಬಸವರಾಜ ಹೊರಟ್ಟಿ ಮಾತನಾಡಿ, ಪಶು ವೈದ್ಯರ ಕೊರತೆಯಿಂದ ರೈತರು ಎದುರಿಸುತ್ತಿರುವ ಸಮಸ್ಯೆ ಗಂಭೀರವಾ ಗಿದೆ, ಅನೇಕ ಕಡೆಗಳಲ್ಲಿ ರೈತರೇ ವೆಹಿಕಲ್ ಕೊಟ್ಟು ಪಶು ವೈದ್ಯರನ್ನು ಕರೆಯಿಸಿಕೊಳ್ಳಬೇಕಾದ ಪರಿಸ್ಥಿತಿ ಇದೆ ಎಂದರು. ಆಗ ಉತ್ತರಿಸಿದ ಸಚಿವ ಕೆ. ವೆಂಕ ಟೇಶ, ನಿಯಮಾವಳಿಗಳ ಅನ್ವಯ ರಾಜ್ಯದಲ್ಲಿ 2,776 ಆಸ್ಪತ್ರೆಗಳು ಇರಬೇಕು, ಆದರೆ ನಮ್ಮಲ್ಲಿ ನಾಲ್ಕು ಪಟ್ಟು 4,166 ಸಂಖ್ಯೆಯ ಆಸ್ಪತ್ರೆಗಳಿವೆ, ನೆರೆಯ ತಮಿಳುನಾಡಿನಲ್ಲಿ ನಿಯಮಾವಳಿಗಳ ಪ್ರಕಾರ 4,900 ಆಸ್ಪತ್ರೆಗಳು ಇರಬೇಕು, ಆದರೆ ಅಲ್ಲಿರುವುದು 3,860 ಪಶು ಆಸ್ಪತ್ರೆಗಳು ಮಾತ್ರ ಎಂದರು.

ರಸ್ತೆ ಅಪಘಾತ ತಡೆಗೆ ಕ್ರಮ

ವಿಧಾನ ಪರಿಷತ್: ಬಿಎಂಐಸಿ ಯೋಜನೆಯ ರಸ್ತೆಗಳಲ್ಲಿ ಉಂಟಾಗುತ್ತಿರುವ ಅಪಘಾತಗಳ ಬಗ್ಗೆ ಬೆಂಗಳೂರು ನಗರ ಜಿಲ್ಲೆ ಸುರಕ್ಷತೆ ಸಮಿತಿ ಸಭೆಯಲ್ಲಿ ಗಂಭೀರ ಚರ್ಚೆ ನಡೆಸಲಾಗುತ್ತಿದೆ ಎಂದು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ತಿಳಿಸಿದ್ದಾರೆ. ಪ್ರಶ್ನೋತ್ತರ ವೇಳೆಯಲ್ಲಿ ಪದವೀಧರ ಕ್ಷೇತ್ರದ ರಾಮೋಜಿಗೌಡ ಅವರ ಪ್ರಶ್ನೆಗೆ ಉತ್ತರ ನೀಡಿದ ಅವರು ಬಿಎಂಐಸಿ ಯೋಜನೆಯ ರಸ್ತೆಗಳಲ್ಲಿ ಉಂಟಾಗುತ್ತಿರುವ ಅಪಘಾತಗಳನ್ನು ತಗ್ಗಿಸಲು ಹಾಗೂ ವೇಗದ ಮಿತಿಯನ್ನು ನಿಗಾವಹಿಸಲು ಕ್ರಮ ಕೈಗೊಳ್ಳಲಾಗಿದೆ. ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ವ್ಯಾಪ್ತಿಗೊಳಪಡುವ ಬೆಂಗಳೂರು ಮೈಸೂರು ರಸ್ತೆಯಲ್ಲಿ (ರಾಷ್ಟ್ರೀಯ ಹೆದ್ದಾರಿ-275) ರಲ್ಲಿ ಅಳವಡಿಸಿರುವಂತೆ ನೈಸ್ ರಸ್ತೆಯಲ್ಲೂ ಸಹಾ ಎಐ ಕ್ಯಾಮರಾ ಅಳವಡಿಸುವ ಬಗ್ಗೆ ಚರ್ಚೆಯಾಗಿದ್ದು, ನೈಸ್ ಸಂಸ್ಥೆರವರು ರಸ್ತೆಗಳಲ್ಲಿ 40 ಸ್ಥಳಗಳನ್ನು ಗುರುತಿಸಿ ಈಗಾಗಲೇ 2 ಸ್ಥಳಗಳಲ್ಲಿ ಎಐ ಕ್ಯಾಮರಾ ಅಳವಡಿಸಲಾಗಿದೆ. ಕಳೆದ 2025ರ ಏಪ್ರಿಲ್‌11ರಂದು ನಡೆದ ಸಚಿವ ಸಂಪುಟ ಸಭೆಯ ನಿರ್ಣಯದಂತೆ ಸಂಪುಟ ಉಪಸಮಿತಿ ರಚಿಸಲಾಗಿದ್ದು, ಸಮಿತಿಯ ಮುಂದೆ ಸದರಿ ವಿಷಯವು ಪರಿಶೀಲನೆ ಹಂತದಲ್ಲಿದೆ ಎಂದರು.

ನಿಟ್ಟೂರು-ಸಿಂಗಾಪುರ ಬ್ರಿಡ್ಜ್ ನಿರ್ಮಾಣಕ್ಕೆ 99.82 ಕೋಟಿ ಅವಶ್ಯ: ಸಿಂಧನೂರು ಮತ್ತು ಸಿರುಗುಪ್ಪ ತಾಲೂಕುಗಳ ಹಲವಾರು ಹಳ್ಳಿಗಳಿಗೆ ಸಂಪರ್ಕ ಕಲ್ಪಿಸಲು ತುಂಗಭದ್ರ ನದಿಗೆ ಅಡ್ಡಲಾಗಿ ನಿಟ್ಟೂರು-ಸಿಂಗಾಪುರ ಬ್ರಿಡ್ಜ್ ನಿರ್ಮಾಣಕ್ಕೆ 99.82 ಕೋಟಿ ರು. ಅವಶ್ಯಕತೆಯಿದೆ ಎಂದು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ತಿಳಿಸಿದರು. ಪ್ರಶ್ನೋತ್ತರ ವೇಳೆಯಲ್ಲಿ ಸದಸ್ಯ ಬಸವನಗೌಡ ಬಾದರ್ಲಿ ಅವರ ಪ್ರಶ್ನೆಗೆ ಉತ್ತರ ನೀಡಿದ ಸಚಿವ ನಿಟ್ಟೂರು-ಸಿಂಗಾಪುರ ಬ್ರಿಡ್ಜ್ ನಿರ್ಮಾಣ ಕಾಮಗಾರಿ ನಡೆಸುವುದು ಸರಕಾರದ ಗಮನಕ್ಕೆ ಬಂದಿದೆ ಎಂದು ಹೇಳಿದರು.

ಸಂಪಾದಕೀಯ

ಕ್ರೀಡಾ ವ್ಯವಸ್ಥೆ ಬಿಸಿಸಿಐಗೆ ಸಿಕ್ಕರೆ...

2024ರಲ್ಲಿ ರೋಹಿತ್ ಶರ್ಮಾ ನಾಯಕತ್ವದಲ್ಲಿ ಭಾರತ ಟಿ20 ವಿಶ್ವಕಪ್ ಗೆದ್ದಾಗ ಬಿಸಿಸಿಐ 125 ಕೋಟಿ ರು.ಗಳನ್ನು ನಗದು ಬಹುಮಾನವಾಗಿ ಘೋಷಿಸಿತ್ತು. ಮೊನ್ನೆಮೊನ್ನೆ ಸೂರ್ಯಕುಮಾರ್ ನಾಯಕತ್ವದಲ್ಲಿ ಭಾರತ ಮತ್ತೆ ಕಪ್ ಗೆದ್ದ ಬೆನ್ನಲ್ಲೇ 131 ಕೋಟಿ ರು.ಗಳನ್ನು ಘೋಷಿಸಿತು. ಐಸಿಸಿ ಇಡೀ ಕೂಟದಲ್ಲಿ ತಂಡಗಳಿಗೆ ನೀಡಲು ವ್ಯಯಿಸಿದ ಪ್ರಶಸ್ತಿ ಮೊತ್ತವೇ 101 ಕೋಟಿ ರು. ಇಲ್ಲಿ ಬರೀ ಭಾರತ ತಂಡಕ್ಕೆ 131 ಕೋಟಿ ರು. ಸಿಕ್ಕಿದೆ! ಬಿಸಿಸಿಐನಲ್ಲಿ ಬೇಕಾದಷ್ಟು ಹಣವಿದೆ ಎನ್ನುವುದಕ್ಕೆ ಯಾವುದೇ ಆಧಾರಗಳನ್ನು ನೀಡುವ ಅಗತ್ಯವಿಲ್ಲ. ಅಂತಹ ಬಿಸಿಸಿಐ ಕೈಯಲ್ಲಿ ಭಾರತದ ಫುಟ್‌ಬಾಲ್, ಕಬಡ್ಡಿ, ಹಾಕಿ, ಒಲಿಂಪಿಕ್ಸ್ ಕ್ರೀಡೆಗಳು ಸಿಕ್ಕರೆ ಬಹುಶಃ ಕ್ರೀಡಾಕ್ರಾಂತಿಯೇ ನಡೆದುಹೋಗುತ್ತದೆ. ಇಡೀ ದೇಶದಲ್ಲಿ ಶಿಸ್ತುಬದ್ಧವಾಗಿ ಕ್ರೀಡಾವ್ಯವಸ್ಥೆಯನ್ನು ರೂಪಿಸಿದ ಶ್ರೇಯಸ್ಸು ಬಿಸಿಸಿಐಗೆ ಸಲ್ಲುತ್ತದೆ. ಇಲ್ಲಿ ಕ್ರಿಕೆಟನ್ನು ವೃತ್ತಿಯೆಂಬಂತೆಯೇ ನೋಡಲಾಗುತ್ತದೆ. ಹಾಗಾಗಿ ಆಟಗಾರರು ಮತ್ತೊಂದು ವೃತ್ತಿಯತ್ತ ಹೋಗುವ ಅಗತ್ಯವಿಲ್ಲ. ಹೀಗೆ ಒಂದು ಸುಭದ್ರ ಕ್ರೀಡಾ ವ್ಯವಸ್ಥೆಯನ್ನು ಭಾರತದಲ್ಲಿ ಇತರೆ ಕ್ರೀಡೆಗಳಿಗೂ ರೂಪಿಸುವ ಶಕ್ತಿಯಿರುವುದು ಬಿಸಿಸಿಐಗೆ ಮಾತ್ರ. ಕೇಂದ್ರ ಸರಕಾರ ಅಂತಹ ಅಧಿಕಾರವನ್ನು ಬಿಸಿಸಿಐಗೆ ನೀಡಬೇಕು. ಕನಿಷ್ಠ ಪಕ್ಷ ಫುಟ್‌ಬಾಲ್, ಹಾಕಿಯಂತಹ ಕ್ರೀಡೆಗಳನ್ನು ಪ್ರಾಯೋಗಿಕವಾಗಿ ಬಿಸಿಸಿಐಗೆ ನೀಡಿದರೆ, ಅದರ ಸ್ವರೂಪವೇ ಬದಲಾಗುತ್ತದೆ. ಫುಟ್‌ಬಾಲ್‌ಗೆ ಜಾಗತಿಕವಾಗಿ ಜನಪ್ರಿಯತೆ ಇದೆ. ಅದಕ್ಕೆ ತಕ್ಕಂತೆ ಭಾರತದಲ್ಲಿ ಪ್ರತಿಭೆಗಳ ಗಣಿಯೇ ಇದೆ. ಅಂತಹ ಪ್ರತಿಭೆಗಳಿಗೆ ಸೂಕ್ತವಾದ ಅವಕಾಶಗಳನ್ನು ನೀಡಿ, ಭರವಸೆ ತುಂಬಬೇಕಿರುವುದು ಈಗಿನ ಅಗತ್ಯ. ಅರ್ಜೆಂಟೀನಾ, ಬ್ರೆಜಿಲ್, ಉರುಗ್ವೆ, ಇಟಲಿಯಂತಹ ದೇಶಗಳು ಫುಟ್‌ಬಾಲ್‌ನಲ್ಲಿ ವಿಶ್ವಕಪ್ ಗೆಲ್ಲುತ್ತವೆ ಎಂದರೆ ಭಾರತಕ್ಕೆ ಸಾಧ್ಯವಿಲ್ಲವೇ? ಭಾರತದ ಜನಸಂಖ್ಯೆ, ಯುವಶಕ್ತಿ ಎಂತಹ ಅಸಾಧ್ಯವನ್ನಾದರೂ ಸಾಧಿಸಿ ತೋರಬಲ್ಲ ಶಕ್ತಿ ಹೊಂದಿದೆ. ದೇಶದಲ್ಲಿನ ನಾಯಕರು ಸಮರ್ಥ ಕ್ರೀಡಾವ್ಯವಸ್ಥೆಯೊಂದನ್ನು ರೂಪಿಸಲು ಸಮರ್ಥರ ಕೈಗೆ ಅಧಿಕಾರ ನೀಡಬೇಕು. ಸದ್ಯದ ಮಟ್ಟಿಗೆ ಭಾರತದಲ್ಲಿ ಕಾಣುತ್ತಿರುವುದು ಬಿಸಿಸಿಐ ಮಾತ್ರ. ಬಿಸಿಸಿಐನಲ್ಲಿ ಹಣವಿದೆ, ಶಿಸ್ತಿದೆ, ಬೇಕುಬೇಕಾದಂತೆ ರಾಜಕೀಯ ಮಾಡಲು ಅಲ್ಲಿ ಅವಕಾಶವಿಲ್ಲ. ಇದು ಈಗಿನ ಕ್ರೀಡಾವ್ಯವಸ್ಥೆಗೆ ಅಗತ್ಯ.

ಸೊಂಪಾದಕೀಯ

ಸ್ಫೋಟಕೀಯ ಮತ್ತು ಬ್ಲಾಸ್ಟೋರಿಯಲ್

ಕನ್ನಡ ಪತ್ರಿಕೆಗಳಲ್ಲಿ ಸಂಪಾದಕೀಯ ಅಂತ ಒಂದು ಅಂಕಣವಿರುತ್ತದೆ. ಇಂಗ್ಲಿಷ್ ಪತ್ರಿಕೆಗಳು ಅದನ್ನು ಎಡಿಟೋರಿಯಲ್ ಎನ್ನುತ್ತವೆ. ನಿರ್ದಿಷ್ಟ ಬೆಳವಣಿಗೆಯ ಬಗ್ಗೆ ಪತ್ರಿಕೆಯ ನಿಲುವನ್ನು ತಿಳಿಸುವುದು ಇದರ ಉದ್ದೇಶ. ಸದ್ಯ ಜಗತ್ತಿನ ಪರಿಸ್ಥಿತಿ ನೋಡಿದರೆ ಕನ್ನಡ ಪತ್ರಿಕೆಗಳು ಸ್ಫೋಟಕೀಯ, ಇಂಗ್ಲಿಷ್ ಪತ್ರಿಕೆಗಳು ಬ್ಲಾಸ್ಟೋರಿಯಲ್ ಅಂತ ಒಂದು ಅಂಕಣ ಇಟ್ಟುಕೊಳ್ಳುವುದು ಒಳಿತೆನ್ನಿಸುತ್ತದೆ. ಡೊನಾಲ್ಡ್ ಟ್ರಂಪ್‌ನಂತಹ ಹುಚ್ಚರು ಅಮೆರಿಕದಂತಹ ದೇಶಗಳಿಗೆ ಮತ್ತೆಮತ್ತೆ ಅಧ್ಯಕ್ಷರಾದರೆ, ಒಂದು ಕಡೆ ನೊಬೆಲ್ ಪ್ರಶಸ್ತಿ ಕೊಡಿ ಎಂದು ನಿರಂತರ ಬೇಡುವುದು, ಕೊಡಲಿಲ್ಲವೆಂದರೆ ಯಾವುದಾದರು ಒಂದು ದೇಶದ ಮೇಲೆ ಪಟಾಕಿ ಹೊಡೆದಂತೆ ಬಾಂಬ್ ಹಾಕುವುದು ಸತತವಾಗಿ ನಡೆಯಬಹುದು! ಆಗ ನಿತ್ಯ ಸ್ಫೋಟಕೀಯ ಎಂಬ ಹೆಸರಿನಲ್ಲಿ ಪತ್ರಿಕೆಗಳು ಅಭಿಪ್ರಾಯ ಹಾಕಬೇಕಾಗುತ್ತದೆ. ಒಂದು ಕಡೆ ಟ್ರಂಪ್ ನೊಬೆಲ್ ಕೇಳಿದಾಗ ನಗುವನ್ನು ಸ್ಫೋಟಿಸಿ ಸ್ಫೋಟಕೀಯ ಬರೆಯಬಹುದು. ಇದರ ಬೆನ್ನಲ್ಲೇ ಅವರು ಸಿಟ್ಟಾಗಿ ಯಾವುದೋ ಬಡರಾಷ್ಟ್ರದ ಮೇಲೆ ಯಾವುದೋ ಕಾರಣವನ್ನಿಟ್ಟುಕೊಂಡು ಬಾಂಬ್ ಹಾಕಬಹುದು. ಆಗಲೂ ಸ್ಫೋಟವನ್ನು ಖಂಡಿಸಿ ಸ್ಫೋಟಕೀಯ ಬರೆಯಬಹುದು! ವಿಚಿತ್ರವೇನು ಗೊತ್ತಾ? ಟ್ರಂಪ್‌ರದ್ದೊಂದು ಚಿತ್ರ ಟೈಮ್ ನಿಯತಕಾಲಿಕೆಯಲ್ಲಿ ಪ್ರಕಟವಾಗಿತ್ತು. ಮುಖಪುಟದಲ್ಲೇ ಪ್ರಕಟವಾದ ತಮ್ಮ ಚಿತ್ರವನ್ನು ನೋಡಿ ಟ್ರಂಪ್ ಸಿಟ್ಟಾಗಿದ್ದರು. ಹೋಗಿಹೋಗಿ ಇಂತಹ ಚಿತ್ರವನ್ನಾ ಪ್ರಕಟಿಸುವುದು, ಒಂದು ಸರಿಯಾದ ಚಿತ್ರವೂ ಸಿಗಲಿಲ್ಲವೇ ಎಂದು ಕೇಳಿದ್ದರು. ಬಹುಶಃ ಟೈಮ್‌ಗೆ ಅದಕ್ಕಿಂತ ಒಳ್ಳೆಯ ಚಿತ್ರ ಸಿಕ್ಕದೇ ಇದ್ದಿರಬಹುದು ಅಥವಾ ಇದೇ ಎಲ್ಲಕ್ಕಿಂತ ಉತ್ತಮ ಅನಿಸಿದ್ದಿರಬಹುದು. ಟ್ರಂಪ್‌ಗೆ ಗೊತ್ತಾಗದೇ ಹೋಗಿರುವ ಸತ್ಯವೆಂದರೆ, ಅವರ ಚಿತ್ರ ಬಳಸುವಾಗ ಯಾವುದು ಉತ್ತಮ ಎಂದು ನಿರ್ಧರಿಸುವುದು ಕಷ್ಟವಾಗುತ್ತದೆ ಎಂಬ ಸಂಗತಿ. ಸದಾ ಹಾಸ್ಯಾಸ್ಪದ ಹೇಳಿಕೆಗಳು, ಬೇಕಾಬಿಟ್ಟಿ ನಿರ್ಧಾರಗಳನ್ನೇ ಮಾಡುವ ಅವರ ಕುರಿತ ಯಾವುದೇ ಚಿತ್ರ ಪ್ರಕಟಿಸಿದರೂ, ಅವರ ಮೂಲ ವ್ಯಕ್ತಿತ್ವವೇ ನೆನಪಾಗುವುದರಿಂದ, ಅವರ ಯಾವುದೇ ಚಿತ್ರಗಳೂ ಸರಿಯಾಗಿ ಕಾಣುವುದೇ ಇಲ್ಲ. ಮನಸ್ಸು ಅವರ ಕುರಿತು ಜುಗುಪ್ಸಿತ ಚಿತ್ರವನ್ನೇ ರೂಪಿಸಿಕೊಂಡಿರುವುದರಿಂದ, ಅದನ್ನು ಮೀರಿ ಅವರ ನಿಜವಾದ ಚಿತ್ರವೂ ಪರಿಣಾಮ ಬೀರುವುದಿಲ್ಲ! ಭಾರತ-ಪಾಕಿಸ್ತಾನ ಯುದ್ಧವನ್ನು ತಾನೇ ನಿಲ್ಲಿಸಿದ್ದು ಎಂದು ನಿರಂತರವಾಗಿ ಹೇಳಿಕೊಂಡ ಟ್ರಂಪ್ ತನಗೆ ನೊಬೆಲ್ ಕೊಡಿ ಅಕ್ಷರಶಃ ಅಂಗಲಾಚಿ ಕೇಳಿಕೊಂಡರು. ಇದನ್ನು ನೋಡಿ ರೋಸಿಹೋದಂತೆ ಕಂಡ ವೆನೆಜುವೆಲಾದ ವಿರೋಧಪಕ್ಷದ ನಾಯಕಿ ತನಗೆ ಸಿಕ್ಕಿದ್ದ ನೊಬೆಲ್ ಪ್ರಶಸ್ತಿಯನ್ನೇ ಟ್ರಂಪ್ ಕಚೇರಿಯಲ್ಲಿಟ್ಟುಬಂದರು. ಅದನ್ನೇ ಟ್ರಂಪ್ ಖುಷಿಯಿಂದ ಸ್ವೀಕರಿಸಿದರು. ಇದಕ್ಕಿಂತ ಸ್ಫೋಟಕೀಯ ಇನ್ನೇನಿದೆ?

ಸಂಪಾದಕರ ಸದ್ಯಶೋಧನೆ

ಬಾಲಿಯಲ್ಲಿ ಹಿಂದೂ ಧರ್ಮ

ಬಾಲಿ ದ್ವೀಪದಲ್ಲಿ ಹಿಂದೂ ಧರ್ಮವು ಹೇಗೆ ಬಹುಸಂಖ್ಯಾತವಾಗಿ ಉಳಿಯಿತು ಎಂಬುದು ಇತಿಹಾಸದ ಒಂದು ರೋಚಕ ಅಧ್ಯಾಯ. ಇಂಡೋನೇಷ್ಯಾ ವಿಶ್ವದ ಅತಿ ಹೆಚ್ಚು ಮುಸ್ಲಿಂ ಜನಸಂಖ್ಯೆಯನ್ನು ಹೊಂದಿರುವ ರಾಷ್ಟ್ರವಾಗಿದ್ದರೂ, ಬಾಲಿ ದ್ವೀಪದಲ್ಲಿ ಮಾತ್ರ ಸುಮಾರು ಶೇ.87 ಜನರು ಇಂದಿಗೂ ಹಿಂದೂ ಧರ್ಮವನ್ನು ಪಾಲಿಸುತ್ತಿದ್ದಾರೆ. ಬಾಲಿಯಲ್ಲಿ ಹಿಂದೂ ಧರ್ಮವನ್ನು ಯಾರೂ ಹೊರಗಿನಿಂದ ಹೇರಿದ್ದಲ್ಲ, ಬದಲಾಗಿ ವ್ಯಾಪಾರ ಮತ್ತು ಸಾಂಸ್ಕೃತಿಕ ವಿನಿಮಯದ ಮೂಲಕ ನಿಧಾನವಾಗಿ ಹರಡಿತು. ಪ್ರಾಚೀನ ಕಾಲದಲ್ಲಿ ಭಾರತದ ಚೋಳ, ಪಲ್ಲವ ಮತ್ತು ಕಳಿಂಗ ಸಾಮ್ರಾಜ್ಯದ ನಾವಿಕರು ಸಾಂಬಾರು ಪದಾರ್ಥಗಳ ವ್ಯಾಪಾರಕ್ಕಾಗಿ ಆಗ್ನೇಯ ಏಷ್ಯಾಕ್ಕೆ ಪ್ರಯಾಣಿಸುತ್ತಿದ್ದರು. ಅವರೊಂದಿಗೆ ಬ್ರಾಹ್ಮಣರು ಮತ್ತು ಬೌದ್ಧ ಭಿಕ್ಷುಗಳು ತೆರಳಿ ಅಲ್ಲಿನ ಸ್ಥಳೀಯ ರಾಜರಿಗೆ ಹಿಂದೂ ಧರ್ಮದ ತತ್ವಗಳನ್ನು ಪರಿಚಯಿಸಿದರು. ಬಾಲಿಯ ಹಳೆಯ ಶಾಸನಗಳು ಸಂಸ್ಕೃತ ಮತ್ತು ಪಲ್ಲವ ಲಿಪಿಯಲ್ಲಿವೆ. ಇದು ದಕ್ಷಿಣ ಭಾರತದೊಂದಿಗೆ ಅವರಿಗಿದ್ದ ಗಾಢ ಸಂಬಂಧವನ್ನು ಸಾಬೀತುಪಡಿಸುತ್ತದೆ. ಬಾಲಿಯಲ್ಲಿ ಹಿಂದೂ ಧರ್ಮ ಗಟ್ಟಿಯಾಗಿ ನೆಲೆಯೂರಲು ಅತ್ಯಂತ ಪ್ರಮುಖ ಕಾರಣ 'ಮಜಾಪಹಿತ್' ಸಾಮ್ರಾಜ್ಯ. ಜಾವಾ ದ್ವೀಪವನ್ನು ಕೇಂದ್ರವಾಗಿಸಿಕೊಂಡಿದ್ದ ಮಜಾಪಹಿತ್ ಸಾಮ್ರಾಜ್ಯವು ಇಡೀ ಇಂಡೋನೇಷ್ಯಾವನ್ನು ಆಳುತ್ತಿತ್ತು. ಹದಿನೈದನೇ ಶತಮಾನದ ಅಂತ್ಯದ ವೇಳೆಗೆ ಜಾವಾದಲ್ಲಿ ಇಸ್ಲಾಂ ಧರ್ಮದ ಪ್ರಭಾವ ಹೆಚ್ಚಾಗಿ ಮಜಾಪಹಿತ್ ಸಾಮ್ರಾಜ್ಯ ಪತನಗೊಂಡಿತು. ಇಸ್ಲಾಂ ಆಕ್ರಮಣದ ಸಮಯದಲ್ಲಿ ಜಾವಾದಲ್ಲಿದ್ದ ಹಿಂದೂ ರಾಜಮನೆತನದವರು, ಕವಿಗಳು, ಸಂಗೀತಗಾರರು, ವಾಸ್ತುಶಿಲ್ಪಿಗಳು ಮತ್ತು ಪಂಡಿತರು ಪಕ್ಕದ ಬಾಲಿ ದ್ವೀಪಕ್ಕೆ ವಲಸೆ ಬಂದರು. ಅವರು ಬಾಲಿಯನ್ನು ತಮ್ಮ ಸಾಂಸ್ಕೃತಿಕ ಕೋಟೆಯನ್ನಾಗಿ ಮಾಡಿಕೊಂಡರು. ಇದು ಬಾಲಿಯನ್ನು 'ಹಿಂದೂ ಸಂಸ್ಕೃತಿಯ ಸಂರಕ್ಷಿತ ದ್ವೀಪ'ವಾಗಿ ಮಾರ್ಪಡಿಸಿತು. ಬಾಲಿಯ ಹಿಂದೂ ಧರ್ಮವು ಭಾರತದ ಹಿಂದೂ ಧರ್ಮದಂತೆಯೇ ಇದ್ದರೂ, ಅಲ್ಲಿನ ಸ್ಥಳೀಯ ನಂಬಿಕೆಗಳೊಂದಿಗೆ ಸಮ್ಮಿಲನಗೊಂಡು ವಿಶಿಷ್ಟ ರೂಪ ಪಡೆದಿದೆ. ಬಾಲಿಯ ಜನರು ಪ್ರಕೃತಿಯನ್ನು ದೈವವೆಂದು ನಂಬುತ್ತಾರೆ. ಅವರ ದೇವಾಲಯಗಳ ವಿನ್ಯಾಸ ಭಾರತದ ದೇವಾಲಯಗಳಿಗಿಂತ ಭಿನ್ನವಾಗಿದ್ದು, ಪಿರಮಿಡ್ ಆಕಾರದ 'ಮೇರು' ಗೋಪುರಗಳನ್ನು ಹೊಂದಿರುತ್ತವೆ. ಅವರು 'ಅಚಿಂತ್ಯ' ಅಥವಾ 'ಸಂಗ್ ಹ್ಯಾಂಗ್ ವಿಧಿ ವಾಸ' ಎಂಬ ಪರಮಾತ್ಮನನ್ನು ಆರಾಧಿಸುತ್ತಾರೆ. ಇವರು ಬ್ರಹ್ಮ, ವಿಷ್ಣು ಮತ್ತು ಮಹೇಶ್ವರರನ್ನೊಳಗೊಂಡ ಸರ್ವೋಚ್ಚ ಶಕ್ತಿ ಎಂಬುದು ಅವರ ನಂಬಿಕೆ. ಬಾಲಿ ಒಂದು ಸಣ್ಣ ದ್ವೀಪವಾಗಿದ್ದು, ಜಾವಾ ದ್ವೀಪದಿಂದ ಕಿರಿದಾದ ಸಮುದ್ರದ ಮೂಲಕ ಬೇರ್ಪಟ್ಟಿದೆ. ಈ ಭೌಗೋಳಿಕ ದೂರವು ಬಾಲಿಯು ಹೊರಗಿನ ಧಾರ್ಮಿಕ ಬದಲಾವಣೆಗಳಿಂದ ತಕ್ಷಣಕ್ಕೆ ಪ್ರಭಾವಿತವಾಗದಂತೆ ರಕ್ಷಿಸಿತು. ಮುಸ್ಲಿಂ ಸುಲ್ತಾನರು ಜಾವಾವನ್ನು ವಶಪಡಿಸಿಕೊಂಡರೂ, ಬಾಲಿಯ ಕಠಿಣ ಭೂಪ್ರದೇಶ ಮತ್ತು ಅಲ್ಲಿನ ರಾಜರ ಪ್ರತಿರೋಧದಿಂದಾಗಿ ಬಾಲಿ ತನ್ನ ಹಿಂದೂ ಅಸ್ತಿತ್ವವನ್ನು ಉಳಿಸಿಕೊಂಡಿತು. 1945ರಲ್ಲಿ ಇಂಡೋನೇಷ್ಯಾ ಸ್ವತಂತ್ರವಾದಾಗ, ಸಂವಿಧಾನವು 'ಏಕದೇವೋಪಾಸನೆ' ತತ್ವವನ್ನು ಅಳವಡಿಸಿಕೊಂಡಿತು. ಬಾಲಿಯ ಜನರು ತಮ್ಮ ಧರ್ಮವು ವೇದಗಳ ಮೇಲೆ ಆಧಾರಿತವಾಗಿದೆ ಮತ್ತು ತಾವು ಒಬ್ಬನೇ ದೇವರನ್ನು ವಿವಿಧ ರೂಪಗಳಲ್ಲಿ ಪೂಜಿಸುತ್ತೇವೆ ಎಂದು ಸಾಬೀತುಪಡಿಸುವ ಮೂಲಕ ಅಧಿಕೃತ ಧರ್ಮದ ಮಾನ್ಯತೆ ಪಡೆದರು. ಬಾಲಿಯ ಜನರ ಜೀವನದ ಪ್ರತಿ ಹಂತವೂ ಧರ್ಮದೊಂದಿಗೆ ಬೆಸೆದುಕೊಂಡಿದೆ. ನ್ಯೆಪಿ ಅವರ ಮೌನ ಹಬ್ಬ (ಹೊಸ ವರ್ಷ). ಇಡೀ ದ್ವೀಪ ಅಂದು ದೀಪಗಳಿಲ್ಲದೇ, ವಾಹನಗಳಿಲ್ಲದೇ ಮೌನವಾಗಿರುತ್ತದೆ. ಗಲುಂಗನ್ ಕೆಟ್ಟದ್ದರ ಮೇಲೆ ಒಳ್ಳೆಯದರ ವಿಜಯವನ್ನು ಆಚರಿಸುವ ಹಬ್ಬ. ಈ ಸಮಯದಲ್ಲಿ ಬಾಲಿಯ ಬೀದಿಗಳೆಲ್ಲವೂ 'ಪೆಂಜೋರ್' ಎಂಬ ಸುಂದರ ಬಿದಿರಿನ ಅಲಂಕಾರಗಳಿಂದ ಕೂಡಿರುತ್ತವೆ. ಬಾಲಿಯಲ್ಲಿ ಇಂದು ಹಿಂದೂಗಳು ಹೆಚ್ಚಿನ ಸಂಖ್ಯೆಯಲ್ಲಿರಲು ಅವರ ಪೂರ್ವಜರ ಸಂಕಲ್ಪ ಮತ್ತು ಸಂಸ್ಕೃತಿಯ ಮೇಲಿನ ಅತೀವ ಪ್ರೇಮ ಕಾರಣ. ಭಾರತದಲ್ಲಿ ಹಿಂದೂ ಧರ್ಮವು ಅನೇಕ ರೂಪಾಂತರಗಳನ್ನು ಕಂಡಿದ್ದರೆ, ಬಾಲಿಯಲ್ಲಿ ಅದು ತನ್ನ ಪ್ರಾಚೀನ ವೈದಿಕ ಸಾರವನ್ನು ಸ್ಥಳೀಯ ಸೊಬಗಿನೊಂದಿಗೆ ಉಳಿಸಿಕೊಂಡು ಬಂದಿದೆ. ಇಂದು ಬಾಲಿ ವಿಶ್ವಕ್ಕೆ 'ಸಹಿಷ್ಣುತೆ ಮತ್ತು ಸಾಂಸ್ಕೃತಿಕ ಗಟ್ಟಿತನ'ದ ಸಂಕೇತವಾಗಿ ನಿಂತಿದೆ.

ಯುದ್ಧದ ವಿಷಯ ಬಂದರೆ ಇಸ್ರೇಲ್ ಏಕೆ ಮುಂಗಾಲಪುಟಕಿ?

ನೂರೆಂಟು ವಿಶ್ವ

ವಿಶ್ವೇಶ್ವರ ಭಟ್
vbhat@me.com

ಇರಾನ್ ವಿರುದ್ಧದ ಯುದ್ಧದಲ್ಲಿ ಅಮೆರಿಕದ ಹೆಗಲ ಮೇಲೆ ಇಸ್ರೇಲ್ ಕುಳಿತಿದೆಯೋ, ಇಸ್ರೇಲ್ ಭುಜದ ಮೇಲೆ ಅಮೆರಿಕ ಕುಳಿತಿದೆಯೋ ಎಂಬ ಪ್ರಶ್ನೆಗೆ ನಿಖರ ಉತ್ತರ ಹೇಳುವುದು ಕಷ್ಟ. ಅದಕ್ಕಾಗಿ ಎಲ್ಲರೂ ಅಮೆರಿಕ ಬೆಂಬಲಿತ ಇಸ್ರೇಲ್ ವರ್ಸಸ್ ಇರಾನ್ ಅಥವಾ ಇಸ್ರೇಲ್ ಬೆಂಬಲಿತ ಅಮೆರಿಕ ವರ್ಸಸ್ ಇರಾನ್ ಎಂದು ಹೇಳುತ್ತಿವೆ. ಅಂದರೆ ಒಂದು ಸಂಗತಿ ಸ್ಪಷ್ಟ. ಅದೇನೆಂದರೆ, ಅಮೆರಿಕಕ್ಕಾಗಲಿ ಅಥವಾ ಇಸ್ರೇಲಿಗಾಗಲಿ ಏಕಾಂಗಿಯಾಗಿ ಇರಾನ್ ಮೇಲೆ ಯುದ್ಧ ಮಾಡುವುದು ಸಾಧ್ಯವಿರಲಿಲ್ಲ. ಮಧ್ಯಪ್ರಾಚ್ಯದಲ್ಲಿ, ಅರಬ್ ದೇಶಗಳೆಲ್ಲ ಒಂದಿಲ್ಲೊಂದು ಸಂದರ್ಭದಲ್ಲಿ ಇಸ್ರೇಲ್ ವಿರುದ್ಧ ತೊಡೆ ತಟ್ಟಿದವರೇ. ಒಂದಕ್ಕಿಂತ ಹೆಚ್ಚು ದೇಶಗಳು ಒಂದಾಗಿ ಯುದ್ಧ ಮಾಡಿದ ಅನೇಕ ನಿದರ್ಶನಗಳಿವೆ. ಜೋರ್ಡಾನ್, ಈಜಿಪ್ಟ್, ಸಿರಿಯಾ, ಲೆಬನಾನ್, ಸೌದಿ ಅರೇಬಿಯಾ, ಇರಾನ್, ಇರಾಕ್... ಹೀಗೆ ಎಲ್ಲ ದೇಶಗಳೂ ಇಸ್ರೇಲ್ ಮೇಲೆ ಬೇರೆ ಬೇರೆ ಸಂದರ್ಭಗಳಲ್ಲಿ ಯುದ್ಧ ಮಾಡಿವೆ. ಇಷ್ಟೆಲ್ಲ ವೈರಿಗಳನ್ನು ಬಗಲಲ್ಲಿ ಇಟ್ಟುಕೊಂಡು ನಿರಂತರವಾಗಿ ಹೋರಾಡುತ್ತಾ ಇಸ್ರೇಲ್ ತನ್ನ ಅಸ್ತಿತ್ವವನ್ನು ಕಾಪಾಡಿಕೊಂಡಿರುವುದು ಸಣ್ಣ ಮಾತಲ್ಲ. ಇಸ್ರೇಲ್ ಅನುಸರಿಸಿಕೊಂಡು ಬಂದಿರುವ ತಂತ್ರಗಳನ್ನು ಯಾರು ಎಷ್ಟೇ ಟೀಕಿಸಬಹುದು, ಆದರೆ ಇಸ್ರೇಲೇನಾದರೂ ಒಂದು ಕ್ಷಣ ಮೈಮರೆತಿದ್ದರೆ, ಆ ದೇಶ ಇಂದು ವಿಶ್ವದ ಭೂಪಟದಲ್ಲಿಯೇ ಇರುತ್ತಿರಲಿಲ್ಲ ಎಂಬುದು ಅಷ್ಟೇ ಸತ್ಯ.

ಇಸ್ರೇಲ್‌ನ ಮೊದಲ ಪ್ರಧಾನಿ ಡೇವಿಡ್ ಬೆನ್ ಗುರಿಯನ್ ಒಂದು ಮಾತನ್ನು ಯಾವತ್ತೂ ಖಡಾಖಡಿ ಹೇಳುತ್ತಿದ್ದರು-ಇಸ್ರೇಲ್‌ನ ಅಸ್ತಿತ್ವಕ್ಕೆ ಸವಾಲು ಹಾಕುವ ಯಾವುದೇ ನೆರೆರಾಷ್ಟ್ರವಿರಲಿ, ಅದನ್ನು 'ಸಂಹಾರಕ ಅಸ್ತ್ರ'ಗಳನ್ನು (ಪರಮಾಣು, ಜೈವಿಕ ಅಥವಾ ರಾಸಾಯನಿಕ ಶಸ್ತ್ರಾಸ್ತ್ರ) ಬಳಸಿ, ಸರ್ವನಾಶ ಮಾಡದೇ ಇಸ್ರೇಲ್ ಬಿಡುವುದಿಲ್ಲ, ಭಾರತ, ಇರಾನ್ ಇರಬಹುದು ಇಲ್ಲವೇ ಅಮೆರಿಕವೇ ಇರಬಹುದು, ಯುದ್ಧದ ಸಮಯದಲ್ಲಿ ಸ್ವಲ್ಪ ಭೂಭಾಗವನ್ನು ಕಳೆದುಕೊಂಡರೂ ಮತ್ತೆ ಹೋರಾಡಿ ಅದನ್ನು ವಾಪಸ್ ಪಡೆಯುವ ಅವಕಾಶವಿರುತ್ತದೆ. ಆದರೆ ಇಸ್ರೇಲ್‌ಗೆ ಅಂಥ ಐಷಾರಾಮಿ ಅವಕಾಶವಿಲ್ಲ. ಇಲ್ಲಿ ಸೋಲು ಎಂದರೆ ದೇಶದ ಸಂಪೂರ್ಣ ವಿನಾಶ. ಆದ್ದರಿಂದಲೇ, ಇಸ್ರೇಲ್ ತನ್ನ ಗಡಿಯೊಳಗೆ ಯುದ್ಧ ನಡೆಯುವುದನ್ನು ಎಂದಿಗೂ ಇಷ್ಟಪಡುವುದಿಲ್ಲ. ಯುದ್ಧವೇನಿದ್ದರೂ ಶತ್ರುವಿನ ನೆಲದಲ್ಲಿಯೇ ನಡೆಯಬೇಕು ಎಂಬುದು ಇಸ್ರೇಲ್ ಸೇನೆಯ ಕಟ್ಟುನಿಟ್ಟಿನ ನಿಯಮ. ಇಸ್ರೇಲ್ ಈ ನೀತಿಯನ್ನು ಅಪ್ಪಿಕೊಳ್ಳಲು ಪ್ರಮುಖ ಕಾರಣ ಅದರ ಭೌಗೋಳಿಕತೆ. ಇಸ್ರೇಲ್ ಅತ್ಯಂತ ಚಿಕ್ಕ ದೇಶ. ಅದರ ಒಂದು ತುದಿಯಿಂದ ಇನ್ನೊಂದು ತುದಿಗೆ ಕಾರ್‌ನಲ್ಲಿ ಅರ್ಧ ದಿನದಲ್ಲಿ ತಲುಪಬಹುದು. ಇಂಥ ದೇಶಕ್ಕೆ 'ವ್ಯೂಹಾತ್ಮಕ ಆಳ' (Strategic Depth) ಇಲ್ಲ. ಅಂದರೆ, ಶತ್ರು ಸೈನ್ಯವು ಒಮ್ಮೆ ಗಡಿ ದಾಟಿ ಒಳಬಂದರೆ, ದೇಶದ ಪ್ರಮುಖ ನಗರಗಳು, ವಿಮಾನ ನಿಲ್ದಾಣಗಳು ಮತ್ತು ಜನವಸತಿ ಪ್ರದೇಶಗಳು ತಕ್ಷಣವೇ ಶತ್ರುವಿನ ವಶವಾಗುತ್ತವೆ. ಹೀಗಾಗಿ ಇದು ಕೇವಲ ಒಂದು ಯುದ್ಧ ತಂತ್ರವಲ್ಲ, ಬದಲಾಗಿ ಇಸ್ರೇಲ್ ಎಂಬ ರಾಷ್ಟ್ರದ ಅಸ್ತಿತ್ವದ ಪ್ರಶ್ನೆ.

ಇಸ್ರೇಲ್‌ನ ಗುಪ್ತಚರ ಸಂಸ್ಥೆ 'ಮೊಸಾದ್' ಈ ಪೂರ್ವಭಾವಿ ದಾಳಿ ನೀತಿಯ ಬೆನ್ನೆಲುಬು. ಕೇವಲ ವೈಮಾನಿಕ ದಾಳಿಗಳಷ್ಟೇ ಅಲ್ಲ, ವೈಯಕ್ತಿಕ ಗುರಿಗಳನ್ನು (Targeted Killings) ನಾಶಪಡಿಸುವುದರಲ್ಲಿ ಇಸ್ರೇಲ್ ನಿಸ್ಸೀಮ. ಅಪಾಯವು ಚಿಗುರುವ ಹಂತದಲ್ಲಿರುವಾಗಲೇ ಅದನ್ನು ಚಿವುಟಿ ಹಾಕುವುದು ಮೊಸಾದ್‌ನ ತಂತ್ರ. ಒಬ್ಬ ವಿಜ್ಞಾನಿ ಶತ್ರು ರಾಷ್ಟ್ರಕ್ಕೆ ಪರಮಾಣು ಬಾಂಬ್ ತಯಾರಿಸಿಕೊಡುತ್ತಿದ್ದಾನೆ ಅಥವಾ ಒಬ್ಬ ಭಯೋತ್ಪಾದಕ ನಾಯಕ ಇಸ್ರೇಲ್ ಮೇಲೆ ದಾಳಿಗೆ ಸಂಚು ರೂಪಿಸುತ್ತಿದ್ದಾನೆ ಎಂದು ತಿಳಿದರೆ, ಮೊಸಾದ್ ಅವನನ್ನು ಅವನ ಮನೆಯಲ್ಲೇ, ಅವರ ಬೆಡ್ ರೂಮ್‌ನಲ್ಲೇ ಸಾಯಿಸುತ್ತದೆ. 'ಇರಾನ್‌ನ ಪರಮಾಣು ಕಾರ್ಯಕ್ರಮದ ರೂವಾರಿ' ಎಂದು ಕರೆಯಲಾಗುವ ಮೊಹ್ಸೆನ್ ಫಕ್ರಿಝಾದ್ ಹತ್ಯೆ ಇದಕ್ಕೆ ಇತ್ತೀಚಿನ ಉದಾಹರಣೆ. ಇದು ಇಪ್ಪತ್ತೊಂದನೇ ಶತಮಾನದ ಅತ್ಯಂತ ರೋಚಕ ಮತ್ತು ತಾಂತ್ರಿಕವಾಗಿ ಅತ್ಯಾಧುನಿಕವಾದ ಗುಪ್ತಚರ ಕಾರ್ಯಾಚರಣೆಗಳಲ್ಲಿ ಒಂದು. ನವೆಂಬರ್ 27, 2020ರಂದು ನಡೆದ ಈ ಘಟನೆಯು ಇಸ್ರೇಲ್‌ನ 'ಪೂರ್ವಭಾವಿ ದಾಳಿ' (Preventive Strike) ನೀತಿಯು ಎಷ್ಟು ವಿನಾಶಕಾರಿಯಾಗಿರುತ್ತದೆ ಎಂಬುದಕ್ಕೆ ಸಾಕ್ಷಿ. ಈ ರೀತಿಯ ದಾಳಿಗಳು ಶತ್ರುಗಳಲ್ಲಿ ದೈಹಿಕ ನಷ್ಟಕ್ಕಿಂತ ಹೆಚ್ಚಾಗಿ ಮಾನಸಿಕ ಭಯವನ್ನು ಹುಟ್ಟಿಸುತ್ತವೆ. 'ನಾವು ಎಲ್ಲಿಯೇ ಇದ್ದರೂ ಇಸ್ರೇಲ್ ನಮ್ಮನ್ನು ಬಿಡುವುದಿಲ್ಲ' ಎಂಬ ಸಂದೇಶವು ಶತ್ರುವಿನ ಎದೆಯಲ್ಲಿ ನಡುಕ ಹುಟ್ಟಿಸುತ್ತದೆ.

ಆ ದಿನಗಳಲ್ಲಿ ಮೊಹ್ಸೆನ್ ಫಕ್ರಿಝಾದ್ ಯಾರು ಎಂಬುದು ಜಗತ್ತಿಗೆ ಗೊತ್ತಿರಲಿಲ್ಲ. ಆದರೆ ಇಸ್ರೇಲ್ ಪಾಲಿಗೆ ಆತ ಇರಾನ್‌ನ ಅತ್ಯಂತ ಅಪಾಯಕಾರಿ ವ್ಯಕ್ತಿಯಾಗಿದ್ದ. ಇರಾನ್‌ನ ಗುಪ್ತ ಪರಮಾಣು ಶಸ್ತ್ರಾಸ್ತ್ರ ಯೋಜನೆ 'ಅಮದ್' (AMAD) ಇದರ ಸಂಪೂರ್ಣ ಜವಾಬ್ದಾರಿ ಇವನ ಮೇಲಿತ್ತು. ಇಸ್ರೇಲ್ ಇವನನ್ನು 'ಇರಾನ್‌ನ ಅಣುಬಾಂಬ್ ಪಿತಾಮಹ' ಎಂದೇ ಕರೆಯುತ್ತಿತ್ತು. 2018ರಲ್ಲಿ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು, ಇರಾನ್‌ನ ಪರಮಾಣು ರಹಸ್ಯಗಳನ್ನು ಜಗತ್ತಿನ ಮುಂದೆ ಪ್ರದರ್ಶಿಸುವಾಗ ಫಕ್ರಿಝಾದ್ ಫೋಟೋ ತೋರಿಸಿ, 'ಫಕ್ರಿಝಾದ್ ಎಂಬ ಹೆಸರನ್ನು ನೆನಪಿಟ್ಟುಕೊಳ್ಳಿ, ಇಲ್ಲದಿದ್ದರೆ ಮುಂದೆ ನಾನೇ ಆ ಹೆಸರನ್ನು ನಿಮಗೆ ನೆನಪಿಸುತ್ತೇನೆ' ಎಂದು ಎಚ್ಚರಿಸಿದ್ದರು. ಆ ಎಚ್ಚರಿಕೆಯ ಬೆನ್ನಲ್ಲೇ ಆತನ ಹತ್ಯೆಯ ಸಂಚು ರೂಪಿತವಾಗಿತ್ತು.

ಫಕ್ರಿಝಾದ್ ಹತ್ಯೆಯ ವಿಶೇಷವೆಂದರೆ, ಆ ಸ್ಥಳದಲ್ಲಿ ದಾಳಿ ಮಾಡಲು ಒಬ್ಬನೇ ಒಬ್ಬ ಇಸ್ರೇಲಿ ಸೈನಿಕ, ಬಾಡಿಗೆ ಹಂತಕ ಅಥವಾ ಶೂಟರ್ ಇರಲಿಲ್ಲ! ಹೌದು, ಇದು ಸಂಪೂರ್ಣವಾಗಿ 'ರಿಮೋಟ್ ಕಂಟ್ರೋಲ್' ಕಾರ್ಯಾಚರಣೆಯಾಗಿತ್ತು. ಆ ಕಾರ್ಯಾಚರಣೆ ಹೇಗಾಯಿತು ಎಂಬುದು ಕೆಲದಿನಗಳ ಕಾಲ ಇಡೀ ಜಗತ್ತಿಗೆ ಗೊತ್ತಾಗಲೇ ಇಲ್ಲ. ಮೊಹಮ್ಮದ್ ಫಕ್ರಿಝಾದ್ ಹತ್ಯೆಯಲ್ಲಿ ಮೊಸಾದ್ ಬಳಸಿದ ತಂತ್ರಜ್ಞಾನವು ಮಾನವ ಇತಿಹಾಸದ ಅತ್ಯಂತ ಸಂಕೀರ್ಣ 'ರಿಮೋಟ್ ಕಿಲ್ಲಿಂಗ್' ಕಾರ್ಯಾಚರಣೆಯಾಗಿದೆ. ಮೊಸಾದ್ ಏಜೆಂಟರು ಇರಾನ್‌ನೊಳಗೆ ಗುಟ್ಟಾಗಿ ನುಗ್ಗಿ, ಬಿಡಿಭಾಗಗಳ ರೂಪದಲ್ಲಿ ಬೆಲ್ಜಿಯಂ ನಿರ್ಮಿತ 'ಎಫ್‌ಎನ್ ಮ್ಯಾಗ್' ಮಷೀನ್ ಗನ್ ಅನ್ನು ಸಾಗಿಸಿದ್ದರು. ಇದನ್ನು ಅಲ್ಲಿನ ರಸ್ತೆಬದಿಯ ಪಿಕಪ್ ಟ್ರಕ್ ಒಂದರಲ್ಲಿ ಯಾರಿಗೂ ಅನುಮಾನ ಬರದಂತೆ ಅಳವಡಿಸಿದ್ದರು. ಈ ಗನ್ ಅತ್ಯಂತ ಶಕ್ತಿಯುತವಾಗಿದ್ದು, ನಿಮಿಷಕ್ಕೆ ನೂರಾರು ಗುಂಡುಗಳನ್ನು ಹಾರಿಸುವ ಸಾಮರ್ಥ್ಯ ಹೊಂದಿತ್ತು.

ಈ ಗನ್ ಅನ್ನು ಸಾವಿರಾರು ಕಿಮೀ ದೂರದಲ್ಲಿದ್ದ ಇಸ್ರೇಲಿನ ಮೊಸಾದ್ ನಿಯಂತ್ರಣ ಕೊಠಡಿಯಿಂದ ನಿಯಂತ್ರಿಸಲಾಗುತ್ತಿತ್ತು. ಉಪಗ್ರಹದ ಮೂಲಕ ಆದೇಶಗಳನ್ನು ಕಳುಹಿಸುವಾಗ ಸಂಕೇತಗಳು ಹೋಗಿ ತಲುಪಲು ಸುಮಾರು 1.6 ಸೆಕೆಂಡ್ ವಿಳಂಬವಾಗುತ್ತಿತ್ತು. ಯುದ್ಧಭೂಮಿಯಲ್ಲಿ ಅಥವಾ ಚಲಿಸುವ ಕಾರನ್ನು ಗುರಿಯಾಗಿಸುವಾಗ ಈ 1.6 ಸೆಕೆಂಡ್ ಎನ್ನುವುದು ಬೃಹತ್ ಅಂತರವನ್ನು ಸೃಷ್ಟಿಸುತ್ತದೆ. ವಿಜ್ಞಾನಿಯ ಕಾರು ಚಲಿಸುತ್ತಿದ್ದಾಗ, ಆ ವೇಳೆಗೆ ಗುಂಡು ಹಾರಿಸುವ ಹೊತ್ತಿಗೆ ಕಾರು ಗುರಿಯಿಂದ ದೂರ ಹೋಗಿರುವ ಅಪಾಯವಿತ್ತು. ಈ 1.6 ಸೆಕೆಂಡುಗಳ ಕಾಲ ವಿಳಂಬವನ್ನು (Time Lag) ಸರಿಪಡಿಸಲು ಮೊಸಾದ್ ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ (ಎಐ) ಅಲ್ಗಾರಿದಮ್‌ಗಳನ್ನು ಬಳಸಿತು. ಈ ತಂತ್ರಜ್ಞಾನವು ಕಾರಿನ ವೇಗ, ಗಾಳಿಯ ದಿಕ್ಕು ಮತ್ತು ಗುಂಡು ತಲುಪಲು ಬೇಕಾದ ಸಮಯವನ್ನು ಮಿಲಿ ಸೆಕೆಂಡುಗಳಲ್ಲಿ ಲೆಕ್ಕ ಹಾಕುತ್ತಿತ್ತು. ಅಂದರೆ, ಕಾರು ಎಲ್ಲಿದೆ ಎಂಬುದಕ್ಕಿಂತ, ಮುಂದಿನ 1.6 ಸೆಕೆಂಡ್ ನಂತರ ಕಾರು ಎಲ್ಲಿರಲಿದೆ ಎಂಬುದನ್ನು ಎಐ ಊಹಿಸಿ, ಅದಕ್ಕೆ ತಕ್ಕಂತೆ ಗನ್ ಅನ್ನು ತಿರುಗಿಸಿ ಗುಂಡು ಹಾರಿಸುವಂತೆ ಅಣಿಗೊಳಿಸಲಾಗಿತ್ತು.

ನವೆಂಬರ್ 27ರ ಶುಕ್ರವಾರ ಮಧ್ಯಾಹ್ನ, ಫಕ್ರಿಝಾದ್ ತನ್ನ ಪತ್ನಿಯೊಂದಿಗೆ ಬುಲೆಟ್ ಪ್ರೂಫ್ ಕಾರಿನಲ್ಲಿ ಟೆಹ್ರಾನ್‌ನಿಂದ ಅಬ್ಸಾರ್ಡ್ ಎಂಬ ರೆಸಾರ್ಟ್ ಪಟ್ಟಣಕ್ಕೆ ತೆರಳುತ್ತಿದ್ದ. ಅವನ ರಕ್ಷಣೆಗೆ ಮೂರು ಬೆಂಗಾವಲು ಕಾರುಗಳಿದ್ದವು. ಫಕ್ರಿಝಾದ್ ಕಾರು ಒಂದು ನಿರ್ದಿಷ್ಟ ತಿರುವಿಗೆ ಬಂದಾಗ, ರಸ್ತೆ ಬದಿಯಲ್ಲಿ ನಿಂತಿದ್ದ ಪಿಕಪ್ ಟ್ರಕ್‌ನಲ್ಲಿದ್ದ ಮಷೀನ್ ಗನ್ ತನ್ನಷ್ಟಕ್ಕೆ ತಾನೇ ಗುಂಡು ಹಾರಿಸಲು ಆರಂಭಿಸಿತು. ಗುಂಡುಗಳು ಕಾರಿನ ಮುಂಭಾಗದ ಬುಲೆಟ್ ಪ್ರೂಫ್ ಗ್ಲಾಸಿಗೆ ಬಿದ್ದ ತಕ್ಷಣ ಫಕ್ರಿಝಾದ್ ಕಾರು ನಿಲ್ಲಿಸಿದ. ಆತ ಕಾರಿನಿಂದ ಹೊರಬಂದ ಕ್ಷಣ, ಮಷೀನ್ ಗನ್ ಅವನ ದೇಹವನ್ನೇ ಗುರಿಯಾಗಿಸಿ ಗುಂಡಿನ ಮಳೆಗರೆಯಿತು. ಈ ದಾಳಿ ಎಷ್ಟು ನಿಖರವಾಗಿತ್ತೆಂದರೆ, ಫಕ್ರಿಝಾದ್ ಪತ್ನಿ ಅವನ ಪಕ್ಕದಲ್ಲೇ ಕುಳಿತಿದ್ದರೂ ಅವಳಿಗೆ ಒಂದು ಸಣ್ಣ ಗಾಯವೂ ಆಗಲಿಲ್ಲ. ಕೇವಲ ಹತ್ತು ಇಂಚಿನ ಅಂತರದಲ್ಲಿದ್ದ ವ್ಯಕ್ತಿಯನ್ನು ಬಿಟ್ಟು, ಸರಿಯಾಗಿ ಫಕ್ರಿಝಾದ್‌ಗೆ ಮಾತ್ರ ಗುರಿಯಾಗಿಸಲಾಗಿತ್ತು. ದಾಳಿ ಮುಗಿದ ಕೆಲವೇ ಸೆಕೆಂಡುಗಳಲ್ಲಿ ಆ ಪಿಕಪ್ ಟ್ರಕ್ ಒಳಗಿದ್ದ ಸ್ಫೋಟಕಗಳ ಮೂಲಕ ಸ್ವಯಂಚಾಲಿತವಾಗಿ ಸ್ಫೋಟಗೊಂಡು ಚಿಂದಿಯಾಯಿತು. ದಾಳಿಗೆ ಬಳಸಿದ ಗನ್ ಮತ್ತು ತಂತ್ರಜ್ಞಾನದ ಕುರುಹುಗಳು ಸಿಗಬಾರದು ಎಂಬುದು ಪಕ್ಕಾ ಲೆಕ್ಕಾಚಾರವಾಗಿತ್ತು. ಇರಾನ್‌ನ ಭದ್ರತಾ ಪಡೆಗಳು ಸ್ಥಳಕ್ಕೆ ಬರುವಷ್ಟರಲ್ಲಿ ಎಲ್ಲವೂ ಮುಗಿದುಹೋಗಿತ್ತು. ಶತ್ರುಗಳು ಕಣ್ಣಿಗೆ ಕಾಣದೆಯೇ ಅಷ್ಟು ದೊಡ್ಡ ವಿಜ್ಞಾನಿಯನ್ನು ಮೊಸಾದ್ ದೂರದಲ್ಲಿ ಕುಳಿತು ಮುಗಿಸಿತ್ತು!

ಇಸ್ರೇಲ್ ಈ ಹತ್ಯೆಯ ಹೊಣೆಯನ್ನು ಎಂದಿನಂತೆ ಹೊತ್ತುಕೊಳ್ಳಲಿಲ್ಲ, ಆದರೆ ಇಡೀ ಜಗತ್ತಿಗೆ ಸತ್ಯ ತಿಳಿದಿತ್ತು. ಅಪಾಯವು ಚಿಗುರುವ ಹಂತದಲ್ಲಿರುವಾಗಲೇ ಅದನ್ನು ಚಿವುಟಿ ಹಾಕುವ ಇಸ್ರೇಲ್‌ನ 'ಪೂರ್ವಭಾವಿ ದಾಳಿ' ನೀತಿಗೆ ಇದು ಅನ್ವರ್ಥವಾಗಿತ್ತು. ಈ ಹತ್ಯೆಯ ಮೂಲಕ ಇಸ್ರೇಲ್ ಇರಾನ್‌ಗೆ ಮೂರು ಸಂದೇಶಗಳನ್ನು ರವಾನಿಸಿತು - ನಿಮ್ಮ ಅತ್ಯಂತ ಸುಭದ್ರ ಪ್ರದೇಶಗಳಲ್ಲೂ ನಾವು ನುಗ್ಗಬಲ್ಲೆವು, ನಿಮ್ಮ ತಂತ್ರಜ್ಞಾನಕ್ಕಿಂತ ನಮ್ಮ ತಂತ್ರಜ್ಞಾನ ಹತ್ತು ಪಟ್ಟು ಮಿಗಿಲಾದುದು ಹಾಗೂ ಅಣುಬಾಂಬ್ ತಯಾರಿಸಲು ಹೊರಟರೆ ನಿಮ್ಮ ವಿಜ್ಞಾನಿಗಳು ಸುರಕ್ಷಿತವಾಗಿರುವುದಿಲ್ಲ.

ಇರಾನ್ ಈ ಹತ್ಯೆಯನ್ನು 'ಭಯೋತ್ಪಾದನೆ' ಎಂದು ಕರೆದರೆ, ಇಸ್ರೇಲ್ ಇದನ್ನು 'ಆತ್ಮರಕ್ಷಣೆ' ಎಂದು ಸಮರ್ಥಿಸಿಕೊಂಡಿತು. ಫಕ್ರಿಝಾದ್ ಸಾವು ಇರಾನ್‌ನ ಪರಮಾಣು ಯೋಜನೆಯ ವೇಗವನ್ನು ಗಮನಾರ್ಹವಾಗಿ ಕುಂದಿಸಿತು. ಶತ್ರುವು ಬಲಶಾಲಿಯಾಗುವವರೆಗೂ ಇಸ್ರೇಲ್ ಕಾಯುವುದಿಲ್ಲ, ಶತ್ರುವಿನ ಮಿದುಳು ಆಲೋಚಿಸುವ ಮೊದಲೇ ಅದರ ಮೇಲೆ ಪ್ರಹಾರ ಮಾಡುತ್ತದೆ. ಫಕ್ರಿಝಾದ್ ಹತ್ಯೆಯು ಈ ಕ್ರೂರ ವಾಸ್ತವದ ಜೀವಂತ ಸಾಕ್ಷಿ.

ಈ ಪ್ರಸಂಗ ಬಳಿಕ ನೆನಪಾಗುವ ಇನ್ನೊಂದು ಕಾರ್ಯಾಚರಣೆ ಅಂದ್ರೆ, 'ಆಪರೇಷನ್ ಒಪೆರಾ'. ಅದು ಇಸ್ರೇಲ್‌ನ ಅಸ್ತಿತ್ವದ ಹಠ



ಮತ್ತು ಶತ್ರುವಿನ ಅಂಗಳದಲ್ಲೇ ನುಗ್ಗಿ ಅವರ ಶಕ್ತಿಯನ್ನು ಕುಂದಿಸುವ 'ಪ್ರಿವೆಂಟಿವ್ ಸ್ಟ್ರೈಕ್' ಸಿದ್ಧಾಂತದ ಅತ್ಯಂತ ಯಶಸ್ವಿ ಅಧ್ಯಾಯ. 1981ರ ಜೂನ್ 7ರಂದು ನಡೆದ ಈ ಘಟನೆಯು ಇಡೀ ಜಗತ್ತನ್ನೇ ಬೆಚ್ಚಿಬೀಳಿಸಿತು.

1970ರ ದಶಕದ ಉತ್ತರಾರ್ಧದಲ್ಲಿ ಇರಾಕ್‌ನ ಸರ್ವಾಧಿಕಾರಿ ಸದ್ದಾಂ ಹುಸೇನ್ ಪಶ್ಚಿಮ ಏಷ್ಯಾದಲ್ಲಿ ಅಪ್ರತಿಮ ಶಕ್ತಿಯಾಗಲು ಹವಣಿಸುತ್ತಿದ್ದ. ಅದರ ಭಾಗವಾಗಿಯೇ ಆತ ಫ್ರಾನ್ಸ್‌ನ ನೆರವಿನೊಂದಿಗೆ ಬಾಗ್ದಾದ್‌ನ ಹೊರವಲಯದಲ್ಲಿ 'ಒಸಿರಾಕ್' ಎಂಬ ಬೃಹತ್ ಪರಮಾಣು ರಿಯಾಕ್ಟರ್ ನಿರ್ಮಿಸಲು ಆರಂಭಿಸಿದ. ಫ್ರಾನ್ಸ್‌ನಲ್ಲಿ 'ಒಸ್ಸೆರಿಸ್' ಎಂಬ ಹೆಸರಿನ ರಿಯಾಕ್ಟರ್ ಇದೆ. ಇರಾಕ್ ದೇಶದ ಹೆಸರಿನೊಂದಿಗೆ ಅದನ್ನು ಸೇರಿಸಿ 'ಒಸ್ಸೆರಿಸ್ + ಇರಾಕ್ = ಒಸಿರಾಕ್' ಎಂದು ಹೆಸರಿಸಲಾಯಿತು. ಫ್ರಾನ್ಸ್ ಇದನ್ನು 'ಶಾಂತಿಯುತ ಸಂಶೋಧನೆ'ಗಾಗಿ ಎಂದು ಹೇಳಿದರೂ, ಇಸ್ರೇಲ್‌ನ ಗುಪ್ತಚರ ಸಂಸ್ಥೆ 'ಮೊಸಾದ್'ಗೆ ತಿಳಿದಿದ್ದ ಸತ್ಯವೇ ಬೇರೆಯಾಗಿತ್ತು. ಸದ್ದಾಂ ಈ ರಿಯಾಕ್ಟರ್ ಮೂಲಕ ಅಣುಬಾಂಬ್ ತಯಾರಿಸಲು ಬೇಕಾದ ಪ್ಲುಟೋನಿಯಂ ಸಿದ್ಧಪಡಿಸುತ್ತಿದ್ದ. ಈ ರಿಯಾಕ್ಟರ್ ಕೆಲಸ ಮಾಡಲು ಬೇಕಾಗಿದ್ದ 'ಪುಷ್ಟೀಕರಿಸಿದ ಯುರೇನಿಯಂ' ಅನ್ನು ಫ್ರಾನ್ಸ್ ಸರಬರಾಜು ಮಾಡುತ್ತಿತ್ತು. ಇದು ಬಾಂಬ್ ತಯಾರಿಕೆಗೆ ಸುಲಭವಾಗಿ ಬಳಕೆಯಾಗುವ ಸಾಧ್ಯತೆಯಿತ್ತು. ಇಸ್ರೇಲ್ ಈ ರಿಯಾಕ್ಟರ್ ಅನ್ನು ತನ್ನ ಅಸ್ತಿತ್ವಕ್ಕೆ ಎದುರಾಗಿರುವ 'ಡೆತ್ ವಾರೆಂಟ್' (ಮರಣ ಶಾಸನ) ಎಂದೇ ಪರಿಗಣಿಸಿತ್ತು. ಒಂದು ವೇಳೆ ಈ ರಿಯಾಕ್ಟರ್ ಕೆಲಸ ಆರಂಭಿಸಿದ್ದರೆ, ಇರಾಕ್ ಕೇವಲ ಒಂದೆರಡು ವರ್ಷಗಳಲ್ಲಿ ಅಣುಬಾಂಬ್ ತಯಾರಿಸುವ ಸಾಮರ್ಥ್ಯ ಪಡೆಯುತ್ತಿತ್ತು. ಇಸ್ರೇಲ್ ಪಾಲಿಗೆ ಇದು ಅಸ್ತಿತ್ವದ ಪ್ರಶ್ನೆಯಾಗಿತ್ತು. ಇರಾಕ್ ಒಂದು ಅಣುಬಾಂಬ್ ತಯಾರಿಸಿದರೂ ಸಾಕು, ಇಸ್ರೇಲ್ ಭೂಪಟದಿಂದ ಅಳಿಸಿಹೋಗುತ್ತಿತ್ತು.

ಇಸ್ರೇಲ್ ಆರಂಭದಲ್ಲಿ ಈ ರಿಯಾಕ್ಟರ್ ನಿರ್ಮಾಣವನ್ನು ತಡೆಯಲು ರಾಜತಾಂತ್ರಿಕ ಪ್ರಯತ್ನಗಳನ್ನು ಮಾಡಿತು. ಇರಾಕ್‌ಗೆ ನೆರವು ನೀಡದಂತೆ ಫ್ರಾನ್ಸ್ ಮತ್ತು ಇಟಲಿ ದೇಶಗಳಿಗೆ ಮನವಿ ಮಾಡಿತು. ಆದರೆ ಆರ್ಥಿಕ ಹಿತಾಸಕ್ತಿಗಳ ಮುಂದೆ ಇಸ್ರೇಲ್‌ನ ಅಳಲು ಯಾರಿಗೂ ಕೇಳಿಸಲಿಲ್ಲ. ಅಂತಿಮವಾಗಿ ಇಸ್ರೇಲ್‌ನ ಅಂದಿನ ಪ್ರಧಾನಿ ಮೆನಾಚೆಮ್ ಬೆಗಿನ್ ಒಂದು ಕಠಿಣ ನಿರ್ಧಾರ ತಳೆದರು - 'ನಾವು ಇದನ್ನು ಬಾಂಬ್ ಹಾಕಿ ನಾಶಪಡಿಸಬೇಕು.'

ಒಂದು ವೇಳೆ ರಿಯಾಕ್ಟರ್ ಕಾರ್ಯಾರಂಭ ಮಾಡಿದರೆ, ಅದರ ಮೇಲೆ ಬಾಂಬ್ ಹಾಕಿದರೆ ವಿಕಿರಣ ಹರಡಿ ಬಾಗ್ದಾದ್‌ನ ಲಕ್ಷಾಂತರ ನಾಗರಿಕರು ಸಾಯುತ್ತಿದ್ದರು. ಆದ್ದರಿಂದ, ರಿಯಾಕ್ಟರ್ 'ಲೈವ್' ಆಗುವ ಮೊದಲೇ ಅದನ್ನು ಧೂಳೀಪಟ ಮಾಡುವುದು ಇಸ್ರೇಲ್ ಮುಂದಿದ್ದ ಏಕೈಕ ದಾರಿಯಾಗಿತ್ತು. ಬಾಗ್ದಾದ್‌ನಿಂದ ಇಸ್ರೇಲ್ ಮಧ್ಯದ ಅಂತರ ಸುಮಾರು 1,600 ಕಿಮೀ. ಇಸ್ರೇಲ್‌ನ ವಿಮಾನಗಳು ಅಷ್ಟು ದೂರ ಹಾರಬೇಕೆಂದರೆ ಅವು ಸೌದಿ ಅರೇಬಿಯಾ ಅಥವಾ ಜೋರ್ಡಾನ್ ದೇಶಗಳ ವಾಯುಪ್ರದೇಶವನ್ನು ಹಾದು ಹೋಗಬೇಕಿತ್ತು. ಈ ದೇಶಗಳು ಇಸ್ರೇಲ್‌ನ ಶತ್ರುಗಳಾಗಿದ್ದರಿಂದ ರೇಡಾರ್ ಕಣ್ಣಿಗೆ ಬಿದ್ದರೆ ವಿಮಾನಗಳನ್ನು ಹೊಡೆದುರುಳಿಸುವ ಅಪಾಯವಿತ್ತು. ಅಲ್ಲದೇ, ರಿಯಾಕ್ಟರ್ ಸುತ್ತಲೂ ಇರಾಕ್ ಬಲಿಷ್ಠ ಕ್ಷಿಪಣಿ ನಿರೋಧಕ ವ್ಯವಸ್ಥೆಯನ್ನು ಅಳವಡಿಸಿತ್ತು.

ಜೂನ್ 7, 1981.

ಆ ಭಾನುವಾರದ ಸಂಜೆ ಇಸ್ರೇಲ್‌ನ ಎಟ್ಜಿಯಾನ್ ವಾಯುನೆಲೆಯಿಂದ ಎಂಟು ಎಫ್-16 ವಿಮಾನಗಳು ಮತ್ತು ಅವುಗಳಿಗೆ ರಕ್ಷಣೆ ನೀಡಲು ಆರು ಎಫ್-15 ವಿಮಾನಗಳು ಹಾರಿದವು. ಈ ಹಾರಾಟವು ವಿಮಾನಯಾನ ಇತಿಹಾಸದಲ್ಲೇ ಒಂದು ಅಚ್ಚರಿ. ಶತ್ರುಗಳ ರೇಡಾರ್‌ನಿಂದ ತಪ್ಪಿಸಿಕೊಳ್ಳಲು ಈ ವಿಮಾನಗಳು ಸಮುದ್ರ ಮಟ್ಟದಿಂದ ಕೇವಲ 100 ಅಡಿ ಎತ್ತರದಲ್ಲಿ ಹಾರುತ್ತಿದ್ದವು. ಇಷ್ಟು ಕಡಿಮೆ ಎತ್ತರದಲ್ಲಿ ಹಾರುವುದರಿಂದ ರೇಡಾರ್‌ಗಳಿಗೆ ವಿಮಾನಗಳು ಕಾಣಿಸುವುದಿಲ್ಲ. ವಿಮಾನಗಳ ನಡುವೆ ರೇಡಿಯೋ ಸಂವಹನವನ್ನೂ ಸಂಪೂರ್ಣ ಸ್ಥಗಿತಗೊಳಿಸಲಾಗಿತ್ತು. ಸೌದಿ ಅರೇಬಿಯಾದ ವಾಯುಪಡೆಗೆ ಅನುಮಾನ ಬಾರದಿರಲು, ಇಸ್ರೇಲಿ ಪೈಲಟ್‌ಗಳು ಅರಬಿಕ್ ಭಾಷೆಯಲ್ಲಿ ಮಾತನಾಡುತ್ತಾ ತಾವು ದಾರಿ ತಪ್ಪಿದ ಸೌದಿ ವಿಮಾನಗಳು ಎಂಬಂತೆ ನಟಿಸಿದ್ದರು!

ಸಾಯಂಕಾಲ 6:35ಕ್ಕೆ ಇಸ್ರೇಲ್ ವಿಮಾನಗಳು ಒಸಿರಾಕ್ ರಿಯಾಕ್ಟರ್ ತಲುಪಿದವು. ಇರಾಕ್‌ನ ಸೈನಿಕರು ಆಗಷ್ಟೇ ತಮ್ಮ ಊಟದ ವಿರಾಮದಲ್ಲಿದ್ದರು. ರೇಡಾರ್ ಕಣ್ಣು ತಪ್ಪಿಸಿ ಬಂದ ವಿಮಾನಗಳು ದಿಢೀರನೆ ಎತ್ತರಕ್ಕೇರಿ, ರಿಯಾಕ್ಟರ್ ಮೇಲೆ ಮುಗಿಬಿದ್ದವು. ಒಟ್ಟು 16 ಬಾಂಬ್‌ಗಳು ನಿಖರವಾಗಿ ರಿಯಾಕ್ಟರ್‌ನ ಗುಮ್ಮಟದ ಮೇಲೆ ಬಿದ್ದವು. ಕೇವಲ 80 ಸೆಕೆಂಡುಗಳಲ್ಲಿ ಇಡೀ ರಿಯಾಕ್ಟರ್, ದೊಡ್ಡ ಹೊಂಡವಾಗಿ ಹೋಯಿತು. ಸದ್ದಾಂ ಹುಸೇನ್ ಅವರ ವರ್ಷಗಳ ಕನಸು ಮತ್ತು ಕೋಟ್ಯಂತರ ಹಣ ಬೆಂಕಿಯ ಕೆನ್ನಾಲಿಗೆಗೆ ಆಹುತಿಯಾಯಿತು. ಕಾರ್ಯಾಚರಣೆ ಮುಗಿಸಿ ಎಲ್ಲ ಇಸ್ರೇಲಿ ವಿಮಾನಗಳು, ಸುರಕ್ಷಿತವಾಗಿ ಸ್ವದೇಶಕ್ಕೆ ಮರಳಿದವು.

ಮರುದಿನ ಈ ಸುದ್ದಿ ಜಗತ್ತಿನಾದ್ಯಂತ ಸಂಚಲನ ಮೂಡಿಸಿತು. ಅಮೆರಿಕ ಕೂಡ ಇಸ್ರೇಲ್ ಮೇಲೆ ಅಸಮಾಧಾನ ವ್ಯಕ್ತಪಡಿಸಿತು. ವಿಶ್ವಸಂಸ್ಥೆಯು ಇಸ್ರೇಲ್‌ನ ಕ್ರಮವನ್ನು 'ಅಂತಾರಾಷ್ಟ್ರೀಯ ಕಾನೂನಿನ ಉಲ್ಲಂಘನೆ' ಎಂದು ಖಂಡಿಸಿತು. ಇಸ್ರೇಲ್ ಒಂಟಿಯಾಯಿತು. ಆದರೆ ಇಸ್ರೇಲ್ ಪ್ರಧಾನಿ ಬೆಗಿನ್ ಧೃತಿಗೆಡಲಿಲ್ಲ, ಅವರು ಇಡೀ ಜಗತ್ತಿಗೆ ಹೇಳಿದ್ದು ಒಂದೇ ಮಾತು - 'ನಾವು ನಮ್ಮ ಮಕ್ಕಳ ಭವಿಷ್ಯವನ್ನು ಉಳಿಸಿದ್ದೇವೆ. ಈ ರಿಯಾಕ್ಟರ್ ಪೂರ್ಣಗೊಂಡಿದ್ದರೆ ಸದ್ದಾಂ ಇಸ್ರೇಲ್ ಮೇಲೆ ಅಣುಬಾಂಬ್ ಹಾಕುತ್ತಿದ್ದ. ನಮ್ಮ ಜನರ ಸಾವನ್ನು ನೋಡಿ ಕಣ್ಣೀರು ಹಾಕುವ ಬದಲು, ಶತ್ರುವನ್ನು ಹತ್ತಿಕ್ಕಿ ಟೀಕೆಗಳನ್ನು ಎದುರಿಸುವುದೇ ನಮಗೆ ಇಷ್ಟ.'

ಈ ದಾಳಿಯಿಂದಾಗಿ ಇರಾಕ್‌ನ ಪರಮಾಣು ಕಾರ್ಯಕ್ರಮ ಕನಿಷ್ಠ 20 ವರ್ಷಗಳಷ್ಟು ಹಿಂದಕ್ಕೆ ಹೋಯಿತು. 1991ರ ಗಲ್ಫ್ ಯುದ್ಧದ ಸಮಯದಲ್ಲಿ ಸದ್ದಾಂ ಬಳಿ ಅಣುಬಾಂಬ್ ಇರಲಿಲ್ಲ, ಅದಕ್ಕೆ ಕಾರಣ ಇದೇ 'ಆಪರೇಷನ್ ಒಪೆರಾ'. ಒಂದು ವೇಳೆ ಇದ್ದಿದ್ದರೆ, ವರ ಪಡೆದ ಭಸ್ಮಾಸುರನಂತೆ, ಸದ್ದಾಂ ಯಾವ ದೇಶದ ಮೇಲಾದರೂ ಅಣುಬಾಂಬ್ ಹಾಕುತ್ತಿದ್ದ! ಇಸ್ರೇಲ್ ಅಸಾಧ್ಯವಾದುದನ್ನು ಸಾಧ್ಯವಾಗಿಸಿ ತೋರಿಸಿತು.

ಇಂದು ಇರಾನ್ ಜತೆ ನಡೆಯುತ್ತಿರುವ ಸಂಘರ್ಷವನ್ನೂ 1981ರ ಈ ಘಟನೆಗೆ ಹೋಲಿಸಬಹುದು. ಅಂದು ಇರಾಕ್ ಮೇಲೆ ದಾಳಿ ಮಾಡಿದ್ದ ಇಸ್ರೇಲ್, ಇಂದು ಇರಾನ್‌ನ ಪರಮಾಣು ಕೇಂದ್ರಗಳನ್ನು ಗುರಿಯಾಗಿಸುತ್ತಿದೆ. ಇಸ್ರೇಲ್‌ನ ಇತಿಹಾಸದಲ್ಲಿ 'ಕ್ಷಮಿಸುವುದಕ್ಕಿಂತ ರಕ್ಷಿಸಿಕೊಳ್ಳುವುದು ಲೇಸು' ಎಂಬ ತತ್ವವೇ ಹಾಸುಹೊಕ್ಕಾಗಿದೆ. 'ಆಪರೇಷನ್ ಒಪೆರಾ' ಕಲಿಸಿದ ಪಾಠ ಅಂದ್ರೆ - ಬಲಿಷ್ಠ ಶತ್ರುವಿನ ಮುಂದೆ ಬದುಕುಳಿಯಬೇಕಾದರೆ ಕೇವಲ ಪ್ರಾರ್ಥನೆ ಸಾಲದು, ಬದಲಾಗಿ ಶತ್ರುವಿನ ಮರ್ಮವನ್ನೇ ಅರಿತು ಹೊಡೆಯುವ ಚಾಣಾಕ್ಷತನ ಬೇಕು.' ಈ ಹಿನ್ನೆಲೆಯಲ್ಲಿ, ಈಗ ನಡೆಯುತ್ತಿರುವ ಇರಾನ್ ವಿರುದ್ಧದ ಸಂಘರ್ಷದಲ್ಲಿ ಇಸ್ರೇಲ್ ಪಾತ್ರವನ್ನು ನೋಡಬೇಕು.

ರಾಜಕಾರಣದಲ್ಲಿ ಬಣ್ಣ ಬದಲಿಸುವ ವಿಶಿಷ್ಟ ಕಲೆಗಾರಿಕೆ

ಇಂದಿನ ರಾಜಕಾರಣದಲ್ಲಿ ಸಿದ್ಧಾಂತವೆಂಬುದು ನಾಯಿ-ನರಿಗಳ ಪಾಲಾಗಿದೆ! ಬಹುಶಃ ಎಐ ಕೂಡ ಯಾವ ರಾಜಕಾರಣಿ ಯಾರೊಂದಿಗೆ ಇದ್ದಾರೆ ಮತ್ತು ಎಲ್ಲಿದ್ದಾರೆ ಎಂಬುದನ್ನು ಹೇಳಲು ಸಾಧ್ಯವಿಲ್ಲ. ನಮ್ಮ ರಾಜಕಾರಣಿಗಳು ಹೋಳಿಯನ್ನೂ ಮೀರಿಸುವ ರೀತಿಯಲ್ಲಿ, ಊಸರವಳ್ಳಿಯನ್ನೂ ನಾಚಿಸುವ ರೀತಿಯಲ್ಲಿ 'ಕಲರ್‌ಫುಲ್' ಆಗಿರಬಲ್ಲರು.

ಹಿರಿಯ ಪತ್ರಿಕೋದ್ಯಮಿ

ಡಾ.ವಿಜಯ್ ದರಡಾ
vveditoped@gmail.com

ಕಳೆದ ವಾರ ಹೋಳಿ ಮತ್ತು ರಂಗಪಂಚಮಿಯ ಬಣ್ಣ ಮೆತ್ತಿಕೊಂಡಿದ್ದ ಮುಖಗಳನ್ನು ನೋಡುತ್ತಿದ್ದೆ. ಮನಸ್ಸಿನಲ್ಲೊಂದು ಪ್ರಶ್ನೆಯೆದ್ದಿತು. 'ನಮ್ಮ ರಾಜಕಾರಣ ಕೂಡ ಇಷ್ಟೇ ಕಲರ್‌ಫುಲ್ ಆಗಿದೆಯಲ್ಲವೇ? ಇಲ್ಲಿ ಬಣ್ಣಗಳ ಹಿಂದಿನ ನಿಜವಾದ ಮುಖವನ್ನು ಗುರುತಿಸುವುದೇ ಕಷ್ಟವಾಗುತ್ತಿದೆಯಲ್ಲ? ಎಂದು ಯೋಚಿಸಿದೆ. ರಾಜಕಾರಣಿಗಳ ನಿಜವಾದ ಬಣ್ಣವನ್ನು ಗುರುತಿಸುವುದು ಹೇಗೆ? ಹಿಂದೆ ಜನರು ಗುಲಾಲ್ ಮತ್ತು ನೈಸರ್ಗಿಕ ಬಣ್ಣಗಳನ್ನು ಬಳಸಿ ಹೋಳಿಯಾಡುತ್ತಿದ್ದರು. ಆಗ ಅವರನ್ನು ಗುರುತಿಸುವುದು ಸುಲಭವಾಗಿತ್ತು. ಈಗ ಹೋಳಿಯಾಡುವಾಗ ರಾಸಾಯನಿಕ ಮಿಶ್ರಿತ ಗಾಢವಾದ ಬಣ್ಣಗಳನ್ನು ಬಳಿದುಕೊಳ್ಳುತ್ತಾರೆ. ಕೆಲವೊಮ್ಮೆ ಟಾರು ಮತ್ತು ಚರಂಡಿಯ ಕೊಚ್ಚೆಯನ್ನೂ ಬಳಿದುಕೊಳ್ಳುವುದುಂಟು. ಅಂತಹವರನ್ನು ಗುರುತಿಸುವುದು ಕಷ್ಟವೇ. ಹೋಳಿ ಕಳೆದು ಸಾಕಷ್ಟು ದಿನ ಆಯಿತಲ್ಲ, ಈಗೇಕೆ ಇವನು ಹೋಳಿ ಬಗ್ಗೆ ಮಾತನಾಡುತ್ತಿದ್ದಾನೆ ಎಂದು ಯೋಚಿಸುತ್ತೀರಾ? ಕಾರಣ ಇದೆ. ಅದು ರಾಜಕೀಯ. 'ರಾಜಕಾರಣದಲ್ಲಿ ಸಿದ್ಧಾಂತವೆಂಬುದು ನಾಯಿ ನರಿಗಳ ಪಾಲಾಗಿದೆ! ಅದರ ಬದಲು ಎಲ್ಲರೂ ತಮ್ಮ ತಮ್ಮ ಸ್ವಂತದ ಮತ್ತು ಸ್ವಾರ್ಥದ ಐಡಿಯಾಲಜಿಗಳಿಗೇ ಜೋತುಬಿದ್ದಿದ್ದಾರೆ ಎಂಬ ಹೇಳಿಕೆ ಇಂದು ನೂರಕ್ಕೆ ನೂರು ಸತ್ಯವಾಗುತ್ತಿದೆ.

ರಾಜಕಾರಣದಲ್ಲಿ ಸಿದ್ಧಾಂತವು ನಾಯಿ ನರಿಗಳ ಪಾಲಾಗಿದೆ ಅಂದರೆ ಅದರರ್ಥ, ಇಂದಿನ ರಾಜಕಾರಣದಲ್ಲಿ ಸಿದ್ಧಾಂತಕ್ಕೆ ಯಾವುದೇ ಬೆಲೆ ಇಲ್ಲ ಎಂದು. ಸಿದ್ಧಾಂತದಿಂದ ಅಧಿಕಾರದ ಗುರಿ ತಲುಪಲು ಸಾಧ್ಯವಿಲ್ಲ ಎಂದಾದರೆ ಅಂತಹ ಸಿದ್ಧಾಂತವನ್ನು ಕೈಬಿಟ್ಟು, ಯಾವ ಗುರಿಯಲ್ಲಿ ನಮ್ಮ ಕಣ್ಣು ನೆಟ್ಟಿದೆಯೋ ಅದನ್ನು ಹೇಗಾದರೂ ಸರಿ ಈಡೇರಿಸಿಕೊಳ್ಳುವುದು ಜಾಣತನವಲ್ಲವೇ ಎಂದು ಅನೇಕರು ಬಹಿರಂಗವಾಗಿಯೇ ಮಾತನಾಡಲು ಆರಂಭಿಸಿದ್ದಾರೆ. ಏನೇ ಬಂದರೂ ನಾವು ನಂಬಿದ ಸಿದ್ಧಾಂತವನ್ನು ಬಿಡಬಾರದು, ಅಧಿಕಾರ ಸಿಕ್ಕರೂ ಸರಿ, ಸಿಗದಿದ್ದರೂ ಸರಿ, ಸಿದ್ಧಾಂತವನ್ನು ಪಾಲಿಸಬೇಕು ಎಂಬ ಉಪದೇಶ ಇಂದು ನಂಬಿಕೆ ಕಳೆದುಕೊಂಡಿದೆ. ಈಗ ನಾವಿರುವುದು ಆಧುನಿಕ ಜಗತ್ತಿನಲ್ಲಿ. ರಾಜಕಾರಣಿಗಳು ಕೂಡ ಇಲ್ಲಿ ಹೊಸ ಮತ್ತು ಆಧುನಿಕ ಹಾದಿಗಳನ್ನು ಹುಡುಕಿಕೊಂಡಿದ್ದಾರೆ. ಇತ್ತೀಚೆಗೆ ಶಿವಸೇನೆಯ ನಾಯಕರೊಬ್ಬರನ್ನು ಭೇಟಿಯಾಗಿದ್ದೆ. ನಿಮ್ಮ ಪಕ್ಷದ ಚಟುವಟಿಕೆಗಳು ಹೇಗೆ ನಡೆಯುತ್ತಿವೆ ಎಂದು ಕೇಳಿದೆ. ಅವರು ಮುಗುಳ್ನಗುತ್ತಾ, 'ಓಹ್, ನಾನು ಇತ್ತೀಚೆಗೆ ಭಾರತೀಯ ಜನತಾ ಪಾರ್ಟಿಯ ಪರ ಕೆಲಸ ಮಾಡುತ್ತಿದ್ದೇನೆ ಎಂದರು. ಹಾಗೆಯೇ, ನ್ಯಾಷನಲಿಸ್ಟ್ ಕಾಂಗ್ರೆಸ್ ಪಕ್ಷ(ಎನ್‌ಸಿಪಿ)ದ ನಾಯಕರೊಬ್ಬರನ್ನು ಭೇಟಿಯಾಗಿದ್ದೆ. ಅವರಿಗೂ, ನಿಮ್ಮ ಪಕ್ಷದ ಕೆಲಸ ಹೇಗೆ ನಡೆಯುತ್ತಿದೆ ಎಂದು ಕೇಳಿದ್ದೆ. ಅದಕ್ಕವರು, 'ಎಲ್ಲವೂ ಬಹಳ ಚೆನ್ನಾಗಿ ನಡೆಯುತ್ತಿದೆ. ಬಿಜೆಪಿಯಂತಹ ಇನ್ನೊಂದು ಪಕ್ಷ ಇಲ್ಲ ಬಿಡಿ! ಅಂದರು. ನಾವು ಅಧಿಕಾರದಲ್ಲಿ ಉಳಿಯದಿದ್ದರೆ ಜನರ ಆಶೋತ್ತರಗಳನ್ನೂ, ಮತದಾರರ ನಿರೀಕ್ಷೆಗಳನ್ನೂ ಈಡೇರಿಸುವುದು ಹೇಗೆ ಎಂಬುದು ಅವರ ಪ್ರಶ್ನೆಯಾಗಿತ್ತು. ಆಗ ನನ್ನ ಪಕ್ಕದಲ್ಲಿ ಕುಳಿತಿದ್ದ ಪತ್ರಕರ್ತರೊಬ್ಬರು ಸಿದ್ಧಾಂತದ ವಿಚಾರವನ್ನು ಎತ್ತಿದರು. ಅದಕ್ಕೆ ರಾಜಕೀಯ ನಾಯಕರು ನಗುತ್ತಾ, 'ನಾವು ಸಿದ್ಧಾಂತಕ್ಕೆ ಜೋತುಬಿದ್ದರೆ ಹೀಗೇ ಹೋರಾಡುತ್ತಲೇ ಮುದುಕರಾಗಿ ಸಾಯುತ್ತೇವೆ. ಸಿದ್ಧಾಂತವನ್ನಿಟ್ಟುಕೊಂಡು ಏನು ಮಾಡಬೇಕು.. ಉಪ್ಪಿನಕಾಯಿ ಹಾಕಿಕೊಂಡು ನೆಕ್ಕಬೇಕಾ! ನಮ್ಮ ಮಾತು ಬಿಡಿ. ರಾಹುಲ್ ಗಾಂಧಿಯವರಿಗೆ ತುಂಬಾ ಹತ್ತಿರದಲ್ಲಿದ್ದವರು ಕೂಡ ಅವರನ್ನು ಬಿಟ್ಟು ಹೋಗಿದ್ದಾರೆ ಎಂದು ಹೇಳಿದರು. ಈ ರೀತಿಯ ಉತ್ತರಗಳನ್ನು ಕೇಳಿದ ನಂತರ ನಾನಿನ್ನು ಯಾವುದೇ ರಾಜಕಾರಣಿಯನ್ನು ಭೇಟಿಯಾದರೂ ಮೊದಲಿಗೆ 'ನೀವೀಗ ಯಾವ ಪಕ್ಷದಲ್ಲಿದ್ದೀರಿ ಎಂದು ಕೇಳಿಕೊಂಡೇ ಅವರನ್ನು ಮಾತಿಗೆಳೆಯುವುದು ಒಳ್ಳೆಯದು ಎಂದು ಲೆಕ್ಕ ಹಾಕುತ್ತಿದ್ದೇನೆ.

ಅಫ್‌ಕೋರ್ಸ್, ಎಡಪಂಥೀಯ ನಾಯಕರ ಬಳಿ ಮಾತ್ರ ಇಂತಹ ಪ್ರಶ್ನೆ ಕೇಳುವಂತಿಲ್ಲ. ಕಮ್ಯುನಿಸ್ಟ್ ಚಳವಳಿಯ ಮೂಲವಾಗಿರುವ ಚೀನಾ ಮತ್ತು ರಷ್ಯಾ ದೇಶಗಳೇ ಇಂದು ಎಡಪಂಥೀಯ ಚಿಂತನೆಯನ್ನು ಬಿಟ್ಟು ಮುಂದೆ ಸಾಗಿದ್ದರೂ ನಮ್ಮಲ್ಲಿರುವ ಎಡ ಸ್ನೇಹಿತರು ಮಾತ್ರ ಈಗಲೂ ಅದರ ಸಿದ್ಧಾಂತವನ್ನು ಗಟ್ಟಿಯಾಗಿ ಅಪ್ಪಿಕೊಂಡಿದ್ದಾರೆ. ತಮ್ಮ ಒಡನಾಟಕ್ಕೆ ಬರುವವರಿಗೆ ಅವರು, 'ಹುಷಾರು, ಆಮಿಷಗಳಿಗೆ ಬಲಿಯಾಗಬೇಡಿ ಎಂದು ಎಚ್ಚರಿಕೆಯನ್ನೂ ಕೊಡುತ್ತಾರೆ. ನಾವು ಹಿಂದೆ ಎಡಪಂಥೀಯರಾಗಿದ್ದೆವು, ಈಗಲೂ ಎಡಪಂಥೀಯರಾಗಿದ್ದೇವೆ ಮತ್ತು ಮುಂದೆಯೂ ಎಡಪಂಥೀಯರಾಗಿಯೇ ಇರುತ್ತೇವೆ ಎಂದು ಅವರು ಹೇಳುತ್ತಾರೆ. ನಿಮಗೊಂದು ಘಟನೆಯನ್ನು ಹೇಳಬೇಕು. ಹಿಂದೆ ಸಿಪಿಎಂನ ಜ್ಯೋತಿ ಬಸು ಅವರನ್ನು ಪ್ರಧಾನಮಂತ್ರಿ ಮಾಡಲು ಎಲ್ಲಾ ವಿರೋಧ ಪಕ್ಷಗಳೂ ಒಪ್ಪಿದ್ದವು. ಆದರೆ ಅವರದೇ ಪಕ್ಷದ ಎಡಪಂಥೀಯ ನಾಯಕರಾದ ಪ್ರಕಾಶ್ ಕಾರಟ್ ಮತ್ತು ಹರಕಿಶನ್ ಸಿಂಗ್ ಸುರ್ಜೀತ್ ಅವರು ಅದನ್ನು ವಿರೋಧಿಸಿದರು. ವಿರೋಧ ಪಕ್ಷಗಳ ಸಿದ್ಧಾಂತಕ್ಕೂ ನಮ್ಮ ಸಿದ್ಧಾಂತಕ್ಕೂ ಹೊಂದಾಣಿಕೆ ಆಗುವುದಿಲ್ಲ ಎಂಬುದು ಅವರ ವಾದವಾಗಿತ್ತು. ಹೀಗಾಗಿ ಜ್ಯೋತಿ ಬಸು ಪ್ರಧಾನಿ ಆಗಲಿಲ್ಲ.

ಹಾಗೆಯೇ, ಹಿಂದೆ ಬಿಜೆಪಿ ಹೊಂದಿದ್ದ ಸೈದ್ಧಾಂತಿಕ ಬದ್ಧತೆಯನ್ನು ಕೂಡ ನಾವು ನೆನಪಿಸಿಕೊಳ್ಳಬೇಕು. ಸಂಸತ್ತಿನಲ್ಲಿ ಬಿಜೆಪಿಯ ಇಬ್ಬರೇ ಸದಸ್ಯರು ಇದ್ದಾಗಲೂ ಪಕ್ಷದ ನಾಯಕರು ತಮ್ಮ ಸೈದ್ಧಾಂತಿಕ ನಿಲುವನ್ನು ಸಡಿಲಗೊಳಿಸಿರಲಿಲ್ಲ. ಕಾಂಗ್ರೆಸ್ ಪಕ್ಷವು ಭಾರತದಲ್ಲಿ ಉತ್ತುಂಗದಲ್ಲಿ ಇದ್ದಾಗ ರಾಮ ಮನೋಹರ ಲೋಹಿಯಾ, ಮಧು ಲಿಮಯೆ, ಮಧು ದಂಡವತೆ ಮತ್ತು ಮೃಣಾಲ್ ಗೋರ್‌ರಂತಹ ನಾಯಕರು ಎಷ್ಟೇ ಕಷ್ಟ ಬಂದರೂ ತಾವು ನಂಬಿದ ಸಿದ್ಧಾಂತಕ್ಕೆ ಕೊಂಚವೂ ಚ್ಯುತಿ ಬಾರದಂತೆ ನಡೆದುಕೊಂಡರು ಎಂಬುದನ್ನು ಹೇಗೆ ಮರೆಯಲು ಸಾಧ್ಯ? ಅವರು ಯಾವತ್ತೂ ಪಕ್ಷಾಂತರ ಮಾಡಲಿಲ್ಲ. ಪ್ರಸಿದ್ಧ ರೈತನಾಯಕ ಎನ್.ಡಿ.ಪಾಟೀಲ್ ನಿಮಗೆ ನೆನಪಿರಬೇಕು. ಅವರು ಶರದ್ ಪವಾರ್‌ರ ಭಾವನಾಗಿದ್ದರೂ ಅವರಿಗೆ ಪ್ರಬಲವಾದ ಸೈದ್ಧಾಂತಿಕ ವಿರೋಧಿಯಾಗಿದ್ದರು. ಭಾರತದ ರಾಜಕಾರಣದಲ್ಲಿ ಇಂತಹ ಹಲವು ಉದಾಹರಣೆಗಳಿವೆ. ಆದರೆ ಈಗ ಕಾಲ ಬದಲಾಗಿದೆ.

ಇತ್ತೀಚೆಗೆ ಮಹಾರಾಷ್ಟ್ರದಲ್ಲಿ ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಯಿತು. ಆಗ ನನ್ನ ಬಳಿ ಒಬ್ಬರು, 'ಈಗ ಯಾವ ರಾಜಕಾರಣಿ ಯಾರ ಪರವಾಗಿದ್ದಾನೆ ಮತ್ತು ಯಾರ ವಿರುದ್ಧ ಇದ್ದಾನೆ ಎಂಬುದನ್ನು ಹೇಳುವುದೇ ತುಂಬಾ ಕಷ್ಟವಾಗಿದೆ ಎಂದಿದ್ದರು. ಮುಂಬೈನಲ್ಲಿ ಒಂದು ಬಣದ ನಾಯಕನ ಕೈಹಿಡಿದು ನಿಂತು ಪೋಸು ಕೊಡುವ ರಾಜಕಾರಣಿಗಳು ಪುಣೆಗೆ ಹೋಗಿ ತಲುಪುತ್ತಿದ್ದಂತೆ ಇನ್ನೊಂದು ಬಣದ ಗುಂಪಿನಲ್ಲಿ ನಿಂತಿರುತ್ತಾರೆ. ಅದೇ ವ್ಯಕ್ತಿ ಇನ್ನೊಂದು ದಿನ ಮತ್ತೊಬ್ಬರ ಗುಂಪಿನಲ್ಲಿ ಕಾಣಿಸಿಕೊಳ್ಳುತ್ತಾನೆ. ಚುನಾವಣೆಯ ಸಮಯದಲ್ಲಿ ನಡೆದ ಸಂಗತಿಗಳನ್ನೆಲ್ಲ ಹೇಳಿದರೆ ಗೊಂದಲದಿಂದ ತಲೆ ಚಚ್ಚಿಕೊಳ್ಳಬೇಕಷ್ಟೆ. ಬೃಹನ್ಮುಂಬೈ ಮಹಾನಗರ ಪಾಲಿಕೆ (ಬಿಎಂಸಿ) ಚುನಾವಣೆಯಲ್ಲಿ ಭಾರತೀಯ ಜನತಾ ಪಾರ್ಟಿ (ಬಿಜೆಪಿ) ಮತ್ತು ಶಿವಸೇನೆ (ಶಿಂದೆ ಬಣ) ಒಟ್ಟಿಗೇ ಸ್ಪರ್ಧಿಸಿದ್ದವು. ಎನ್‌ಸಿಪಿ ಅಜಿತ್ ಕುಮಾರ್ ಬಣದವರು ಕೂಡ ಸರ್ಕಾರದಲ್ಲಿ ಈ ಪಕ್ಷಗಳೊಂದಿಗೆ ಮೈತ್ರಿ ಹೊಂದಿದ್ದರು. ಆದರೆ ಬಿಎಂಸಿ ಚುನಾವಣೆಯಲ್ಲಿ ಎಲ್ಲರೂ ಪ್ರತ್ಯೇಕವಾಗಿ ಸ್ಪರ್ಧಿಸಿದ್ದರು. ಆದರೆ ಈ ಸಮೀಕರಣ ಪುಣೆಯಲ್ಲಿ ಬದಲಾಗಿತ್ತು. ಅಲ್ಲಿ ಬಿಜೆಪಿ ಮತ್ತು ಶಿಂದೆ ನೇತೃತ್ವದ ಶಿವಸೇನೆ ಸ್ವತಂತ್ರವಾಗಿ ಸ್ಪರ್ಧಿಸಿದ್ದವು. ಆದರೆ, ಪುಣೆಯಲ್ಲಿ ಅಜಿತ್ ಪವಾರ್ ಬಣದ ಎನ್‌ಸಿಪಿ ಶರದ್ ಪವಾರ್ ಬಣದ ಎನ್‌ಸಿಪಿ ಜೊತೆ ಮೈತ್ರಿ ಮಾಡಿಕೊಂಡು ಸ್ಪರ್ಧಿಸಿತ್ತು. ಆದರೆ ನಾಗಪುರದಲ್ಲಿ ಈ ಎರಡೂ ಬಣಗಳು ಪ್ರತ್ಯೇಕವಾಗಿ ಸ್ಪರ್ಧಿಸಿದ್ದವು. ಮುಂಬೈನಲ್ಲಿ ಕಾಂಗ್ರೆಸ್ ಪಕ್ಷ ಠಾಕರೆ ಸಹೋದರರ ಜೊತೆ ಮೈತ್ರಿ ಕಡಿದುಕೊಂಡಿತ್ತು, ಆದರೆ ಪುಣೆಯಲ್ಲಿ ಅವರ ಜೊತೆಗೇ ಕೈಜೋಡಿಸಿತ್ತು. ಮುಂಬೈನಲ್ಲಿ ಕಾಂಗ್ರೆಸ್ ಜೊತೆ ಸೇರಿ ಸ್ಪರ್ಧಿಸಿದ್ದ 'ವಂಚಿತ ಬಹುಜನ ಅಘಾಡಿ ಪಕ್ಷವು ಪುಣೆಯಲ್ಲಿ ಕಾಂಗ್ರೆಸ್ ವಿರುದ್ಧವೇ ಸ್ಪರ್ಧಿಸಿತ್ತು. ಛತ್ರಪತಿ ಸಂಭಾಜಿ ನಗರದಲ್ಲಿ ಆಡಳಿತಾರೂಢ ಮೈತ್ರಿಕೂಟದ ಬಿಜೆಪಿ, ಶಿವಸೇನೆ (ಶಿಂದೆ) ಹಾಗೂ ಎನ್‌ಸಿಪಿ (ಅಜಿತ್) ಪಕ್ಷಗಳು ಪ್ರತ್ಯೇಕವಾಗಿಯೇ ತಮ್ಮ ಅದೃಷ್ಟ ಪರೀಕ್ಷೆಗೆ ಇಳಿದಿದ್ದವು. ನಾಸಿಕ್‌ನಲ್ಲಿ ಬಿಜೆಪಿ ಒಂಟಿಯಾಗಿ ಸ್ಪರ್ಧಿಸಿದ್ದರೆ ಶಿಂದೆ ಮತ್ತು ಪವಾರ್ ಗುಂಪುಗಳು ಮೈತ್ರಿ ಮಾಡಿಕೊಂಡಿದ್ದವು. ನಂತರ ನಡೆದ ಮೇಯರ್ ಚುನಾವಣೆಯಲ್ಲೂ ಕೂಡ ಚಿತ್ರವಿಚಿತ್ರ ಮೈತ್ರಿಗಳು ಕಾಣಿಸಿದವು. ಭಿವಾಂಡಿ-ನಿಜಾಮ್‌ಪುರ ಮಹಾನಗರ ಪಾಲಿಕೆಯಲ್ಲಿ ಬಿಜೆಪಿಗೆ ಸ್ಪಷ್ಟ ಬಹುಮತವಿದ್ದುದರಿಂದ ಆ ಪಕ್ಷ ಸ್ನೇಹಾ ಪಾಟೀಲ್‌ರನ್ನು ತನ್ನ ಅಭ್ಯರ್ಥಿಯಾಗಿ ಕಣಕ್ಕಿಳಿಸಿತ್ತು. ಆದರೆ ಬಿಜೆಪಿ ನಾಯಕ ನಾರಾಯಣ ಚೌಧರಿ ಬಂಡೆದ್ದರು. ಅವರು ಶರದ್ ಪವಾರ್‌ರ ಎನ್‌ಸಿಪಿ ನೇತೃತ್ವದ ಭಿವಾಂಡಿ ಸೆಕ್ಯುಲರ್ ಫ್ರಂಟ್‌ನಿಂದ ಬೆಂಬಲ ಪಡೆದು ಮೇಯರ್ ಆದರು. ಅದನ್ನು ನೋಡಿ ಒಬ್ಬ ಬಿಜೆಪಿ ಕಾರ್ಯಕರ್ತ ತನ್ನ ಆತಂಕವನ್ನು ಜೋರಾಗಿಯೇ ವ್ಯಕ್ತಪಡಿಸಿದ್ದ. ಹೊರಗಿನಿಂದ ಬಂದು ಬಿಜೆಪಿಯೊಳಗೆ ಸೇರಿಕೊಂಡಿರುವವರು ಈಗ ಎಲ್ಲಾ ಲಾಭವನ್ನೂ ಪಡೆದುಕೊಳ್ಳುತ್ತಿದ್ದಾರೆ, ಆದರೆ ದೀರ್ಘಾವಧಿಯಿಂದ ಇಲ್ಲೇ ಸೇವೆ ಸಲ್ಲಿಸುತ್ತಿರುವವರು ಜೀವನಪೂರ್ತಿ ಚಾಪೆ ಹಾಸುತ್ತಲೇ ಇದ್ದಾರೆ ಎಂದು ಆತ ಹೇಳಿಕೆ ನೀಡಿದ್ದು ಸುದ್ದಿಯಾಗಿತ್ತು. ಚಂದ್ರಾಪುರದಲ್ಲಿ ಕಾಂಗ್ರೆಸ್ ಪಕ್ಷ ಬಹುಮತ ಪಡೆಯುವುದಕ್ಕೆ ಅತ್ಯಂತ ಸನಿಹದಲ್ಲಿತ್ತು. ಆದರೆ ಶಿವಸೇನೆಯ ಉದ್ಧವ್ ಬಣದ ಬೆಂಬಲದೊಂದಿಗೆ ಅಲ್ಲಿ ಬಿಜೆಪಿ ಅಭ್ಯರ್ಥಿ ಮೇಯರ್ ಆದರು.

ಈಗಿನ ರಾಜಕೀಯ ವಾತಾವರಣದಲ್ಲಿ ಕೆಲವರು ರಾಮದಾಸ್ ಅಠಾವಳೆ ಬಹುಶಃ ಅತ್ಯಂತ ಪ್ರಾಮಾಣಿಕ ನಾಯಕ ಎಂದು ಹೊಗಳುತ್ತಾರೆ. ಅಠಾವಳೆಗೆ ಅವರ ಜಾಗ ಯಾವುದು ಎಂಬುದರ ಬಗ್ಗೆ ಸ್ಪಷ್ಟ ಕಲ್ಪನೆಯಿದೆ. ಯಾರು ಅಧಿಕಾರದಲ್ಲಿದ್ದಾರೋ ಅವರ ಜೊತೆಗೆ ನಾವಿದ್ದೇವೆ ಮತ್ತು ಯಾರ ಜೊತೆಗೆ ನಾವಿದ್ದೇವೋ ಅವರು ಅಧಿಕಾರದಲ್ಲಿರುತ್ತಾರೆ ಎಂದು ಅವರು ಬಹಿರಂಗವಾಗಿಯೇ ಹೇಳುತ್ತಿದ್ದರು! ಇದನ್ನೇ ನೇರವಾಗಿ ಹೇಳುವುದಾದರೆ, ಅಠಾವಳೆಯವರು ಯಾವುದೇ ಮುಚ್ಚುಮರೆಯಿಲ್ಲದೆ ಅಧಿಕಾರದ ಹಿಂದೆ ಓಡುತ್ತಿದ್ದರು. ಆದರೆ ಇನ್ನುಳಿದ ರಾಜಕಾರಣಿಗಳು ಹೀಗಲ್ಲ. ಅವರ ಮುಖಕ್ಕೆ ಬಣ್ಣ ಮೆತ್ತಿಕೊಂಡಿರುತ್ತದೆ. ಅದನ್ನು ಯಾವಾಗ ಬೇಕಾದರೂ ಒರೆಸಿ, ಕಣ್ಣುಮುಚ್ಚಿ ತೆರೆಯುವುದರೊಳಗೆ ಇನ್ನೊಂದು ಬಣ್ಣವನ್ನು ಅವರು ಬಳಿದುಕೊಳ್ಳುತ್ತಾರೆ. ಒಂದು ಬಣ್ಣ ತೆಗೆದು, ಇನ್ನೊಂದು ಬಣ್ಣ ಹಚ್ಚಿಕೊಂಡು, ಮರುಕ್ಷಣವೇ ಅದನ್ನೂ ಅಳಿಸಿ, ಮತ್ತೊಂದು ಬಣ್ಣ ಬಳಿದುಕೊಳ್ಳುತ್ತಾ ಜೀವನಪೂರ್ತಿ ಬಣ್ಣ ಬದಲಾಯಿಸುತ್ತಲೇ ಇರುತ್ತಾರೆ. ನಾನು ಇಷ್ಟೆಲ್ಲಾ ಕಲರ್‌ಫುಲ್ ಆಗಿರುವುದು ನಿಮಗೋಸ್ಕರ ಎಂದು ಮತದಾರರಿಗೆ ಮಂಕುಬೂದಿಯನ್ನು ಕೂಡ ಎರಚುತ್ತಿರುತ್ತಾರೆ. ತಮ್ಮ ಕೆಲಸ ಬರೀ ಚಪ್ಪಾಳೆ ಹೊಡೆಯುವುದು ಎಂಬುದು ಜನರಿಗೂ ಗೊತ್ತಿದೆ... ಹೀಗಾಗಿ ಅವರು ಚಪ್ಪಾಳೆ ಹೊಡೆಯುವುದನ್ನು ಮುಂದುವರಿಸುತ್ತಾರೆ!

ಭಟ್ಟರ್ ಸ್ಕಾಚ್

- **ವಿ.ಸುಬ್ಬರಾವ್, ಬೆಂಗಳೂರು**
  ಭಟ್ರೇ, ಜಿಮ್‌ಗೆ ಸೇರಿದ ಎರಡೇ ದಿನಕ್ಕೆ ಕೆಲವರು ಕನ್ನಡಿಯಲ್ಲಿ ಮಸಲ್ ಚೆಕ್ ಮಾಡ್ತಾರಲ್ಲ?
  - **ಪೇಯ್ಡ್ ಸಬ್‌ಸ್ಕ್ರಿಪ್ಶನ್ ತಗೊಂಡ ಮೇಲೆ ಅಡ್ವರ್ಟೈಸ್‌ಮೆಂಟ್ ಬರೋದು ನಿಂತಿದೆಯೇ ಅಂತ ಚೆಕ್ ಮಾಡೋ ಥರ ಅನ್ನು!**
- **ಅನಂತ ಹುಲಗಿ, ಗದಗ**
  ಭಟ್ರೇ, ಮೊಬೈಲ್ ಬ್ಯಾಟರಿ ಶೇ.1ರಷ್ಟು ಇದ್ದಾಗ ಬರುವ ಧೈರ್ಯ ಬೇರೆ ಯಾವಾಗ ಬರುತ್ತೆ?
  - **ಪರೀಕ್ಷೆ ಹಾಲ್‌ನಲ್ಲಿ ಏನೂ ಓದದೇ ಹೋದಾಗ ಬರುವ ಧೈರ್ಯಕ್ಕೆ ಮಾತ್ರ ಅದನ್ನು ಹೋಲಿಸಲಿಕ್ಕೆ ಸಾಧ್ಯ!**
- **ಕೆ.ಸಿ.ಪಾಟೀಲ, ಬಾಗಲಕೋಟ**
  ಭಟ್ರೇ, ಸಾಣೇಹಳ್ಳಿ ಸ್ವಾಮಿ, ನಿಜಗುಣಾನಂದ ಸ್ವಾಮಿ ಹಿಂದೂಗಳನ್ನೇ ಟೀಕಿಸುತ್ತಾರಲ್ಲ?
  - **ಇವರಿಬ್ಬರೂ ಒಬ್ಬ ಕನ್ನೇರಿ ಸ್ವಾಮಿ ಮುಂದೆ ಬಾಲ ಮುದುಡಿ ಕುಳಿತುಕೊಳ್ಳುವುದನ್ನು ನೀನು ನೋಡಿಲ್ಲ ಅಂತ ಕಾಣಿಸುತ್ತದೆ!**
- **ಬಾಲಚಂದ್ರ, ಗಡಿ, (ಇಮೇಲ್ ಮೂಲಕ)**
  ಭಟ್ರೇ, ಪರೀಕ್ಷೆ ಹತ್ತಿರ ಬಂದಾಗ ಯಾಕೆ ನಿದ್ದೆ ಜಾಸ್ತಿ ಬರುತ್ತದೆ?
  - **ಯಾಕಂದ್ರೆ, ಪುಸ್ತಕ ತೆರೆದ ತಕ್ಷಣ ಮಿದುಳಿಗೆ 'ಇದು ನಿನಗೆ ಅರ್ಥವಾಗುವ ವಿಷಯವಲ್ಲ, ಸುಮ್ಮನೆ ಮಲಗಿಬಿಡು' ಅಂತ ಸಿಗ್ನಲ್ ಸಿಗುತ್ತದೆ!**
- **ನಿರ್ಮಲ ಮಠದ, ಹುಬ್ಬಳ್ಳಿ**
  ಭಟ್ರೇ, ಹಿರಿಯರು 'ಮಾತೇ ಮುತ್ತು' ಅಂತ ಯಾಕೆ ಹೇಳಿದ್ದಾರೆ?
  - **ಮುತ್ತುಗಳನ್ನು ಜೋಪಾನವಾಗಿ ಡಬ್ಬಿಯಲ್ಲಿ ಇಟ್ಟ ಹಾಗೆ, ಬಾಯನ್ನೂ ಮುಚ್ಚಿಕೊಂಡು ಇರಲಿ ಅಂತ!**
- **ಭರತ ಪಟ್ಟಣ, ಬೆಳಗಾವಿ**
  ಭಟ್ರೇ, ಸ್ಮಾರ್ಟ್ ಫೋನ್ ಬಂದ ಮೇಲೆ ಮನುಷ್ಯ ಯಾಕೆ ದಡ್ಡನಾಗುತ್ತಿದ್ದಾನೆ?
  - **ಫೋನ್ ತನ್ನ ಕೆಲಸ ತಾನು ಮಾಡ್ತಿದೆ, ಮನುಷ್ಯ ಕೆಲಸ ಮಾಡೋದನ್ನೇ ನಿಲ್ಲಿಸಿದ್ದಾನೆ!**
- **ಹೇಮರೆಡ್ಡಿ, ಬಾಣಸವಾಡಿ**
  ಭಟ್ರೇ, ಭೂಮಿ ಯಾಕೆ ಸದಾ ಸುತ್ತುತ್ತಲೇ ಇರುತ್ತದೆ?
  - **ಅದಕ್ಕೆ ಕೂರಲು ಎಲ್ಲೂ ಕ್ಲೀನ್ ಆದ ಬೆಂಚ್ ಸಿಗುತ್ತಿಲ್ಲ ಅಂತ ಕಾಣುತ್ತೆ!**
- **ರಮೇಶ ಗೌಡ, ಮಳವಳ್ಳಿ**
  ಭಟ್ರೇ, ಮದುವೆಯಾದ ಮೇಲೆ ಗಂಡ ಯಾಕೆ ಯಾವಾಗಲೂ ಸೈಲೆಂಟ್ ಆಗಿರುತ್ತಾನೆ?
  - **ಯಾಕಂದ್ರೆ, 'ನೆಟ್ ವರ್ಕ್' ಸಿಗದ ಜಾಗದಲ್ಲಿ ಮೊಬೈಲ್ ಕೂಡ ಸೈಲೆಂಟ್ ಆಗಿಯೇ ಇರುತ್ತಲ್ಲ, ಹಾಗೆ!**

ಬೆಳಕು ಮತ್ತು ಬೆಂಕಿ: ಇದು ಪೆಟ್ರೋಲಿಯಂ



ಕಾಡುದಾರಿ

ಹರೀಶ್ ಕೇರ
vveditoped@gmail.com

1911ನೇ ಇಸವಿ. ವಿನ್‌ಸ್ಟನ್ ಚರ್ಚಿಲ್ ಆಗ ಬ್ರಿಟನ್‌ನ ಗೃಹ ಕಾರ್ಯದರ್ಶಿಯಾಗಿದ್ದ. ಆಗ ಜರ್ಮನಿ ತನ್ನ ನೌಕಾಪಡೆಯ ಶಕ್ತಿ ಹೆಚ್ಚಿಸಿಕೊಳ್ಳುತ್ತಿತ್ತು. ಜರ್ಮನಿಯೊಂದಿಗೆ ನಡೆಯುತ್ತಿದ್ದ ನೌಕಾಪಡೆಯ ಸ್ಪರ್ಧೆಗಾಗಿ ಹೆಚ್ಚು ಯುದ್ಧ ನೌಕೆಗಳನ್ನು ನಿರ್ಮಿಸುವ ಬದಲು, ಆ ಹಣವನ್ನು ಕಲ್ಯಾಣ ಕಾರ್ಯಗಳಿಗೆ ಬಳಸಬೇಕು ಎನ್ನುತ್ತಿದ್ದ ಚರ್ಚಿಲ್. ಜರ್ಮನಿಯ ಉದ್ದೇಶ ಆಕ್ರಮಣ ಅಲ್ಲ, ಯುದ್ಧವೂ ಅನಿವಾರ್ಯವಲ್ಲ ಎಂಬುದು ಅವನ ಅಭಿಪ್ರಾಯವಾಗಿತ್ತು. ಆಗೆಲ್ಲಾ ಯುದ್ಧನೌಕೆಗಳು ಕಲ್ಲಿದ್ದಲು ಇಂಧನದಿಂದ ನಡೆಯುತ್ತಿದ್ದವು. ಆದರೆ 1911ರ ಜುಲೈ 1ರಂದು ನಡೆದ ಒಂದು ಘಟನೆ ಎಲ್ಲವನ್ನೂ ಬದಲಿಸಿತು. ಜರ್ಮನಿ 'ಪ್ಯಾಂಥರ್' ಎಂಬ ಯುದ್ಧ ನೌಕೆಯನ್ನು ಮೊರೊಕ್ಕೊದ ಅಟ್ಲಾಂಟಿಕ್ ಕರಾವಳಿಯ ಅಗದೀರ್ ಬಂದರಿಗೆ ಕಳುಹಿಸಿತು. ಇದರ ಉದ್ದೇಶ ಆಫ್ರಿಕಾದಲ್ಲಿ ಫ್ರಾನ್ಸ್‌ನ ಪ್ರಭಾವವನ್ನು ತಡೆಯುವುದು ಮತ್ತು ಜರ್ಮನಿಯ ಮೇಲುಗೈ. ಈ ಘಟನೆ ಜಾಗತಿಕ ರಾಜಕೀಯ ಸಂಕಷ್ಟಕ್ಕೆ ಕಾರಣವಾಯಿತು. ಕೆಲವು ವಾರ ಯುರೋಪ್‌ನಲ್ಲಿ ಯುದ್ಧದ ಭೀತಿ ಆವರಿಸಿತು. ಚರ್ಚಿಲ್ ನೋಟ ಬದಲಾಯಿತು. ಜರ್ಮನಿ ಜಗತ್ತಿನ ಮೇಲೆ ಪ್ರಭುತ್ವ ಸಾಧಿಸಲು ಯತ್ನಿಸುತ್ತಿದೆ ಎಂಬ ನಂಬಿಕೆ ಆತನಿಗೆ ಬಂತು.

ಅಗದೀರ್ ಘಟನೆಯ ನಂತರ ಚರ್ಚಿಲ್‌ನನ್ನು ಬ್ರಿಟನ್ ನೌಕಾಪಡೆಯ ಮುಖ್ಯಸ್ಥನಾಗಿ ನೇಮಿಸಲಾಯಿತು. ಜರ್ಮನಿಯ ಸವಾಲನ್ನು ಎದುರಿಸಲು ಬ್ರಿಟಿಷ್ ನೌಕಾಪಡೆಯನ್ನು ಆತ ಸಂಪೂರ್ಣವಾಗಿ ಸಿದ್ಧಗೊಳಿಸಬೇಕಿತ್ತು. ಈ ಸಂದರ್ಭದಲ್ಲಿ ಆತ ಎದುರಿಸಿದ ಪ್ರಮುಖ ಪ್ರಶ್ನೆ - ನೌಕಾಪಡೆಯ ಇಂಧನವನ್ನು ಕಲ್ಲಿದ್ದಲಿನಿಂದ ತೈಲಕ್ಕೆ ಬದಲಿಸಬೇಕೇ ಎಂಬುದು. ಇದಕ್ಕೆ ವಿರೋಧವೂ ಬಹಳ ಇತ್ತು. ಕಲ್ಲಿದ್ದಲು ಬ್ರಿಟನ್‌ನಲ್ಲೇ ದೊರೆಯುತ್ತಿತ್ತು. ತೈಲವನ್ನು ಪರ್ಷಿಯಾದಿಂದ ತರಬೇಕಾಗುತ್ತಿತ್ತು. ಭದ್ರತೆ ಕಡಿಮೆ. ಆದರೂ ತೈಲದಿಂದ ನೌಕೆಗಳಿಗೆ ಹೆಚ್ಚು ವೇಗ ಮತ್ತು ಕಾರ್ಯಕ್ಷಮತೆ ಎಂಬುದು ಗೊತ್ತಿತ್ತು. ಕೊನೆಗೂ ಬ್ರಿಟನ್ ನೌಕಾಪಡೆಯ ಇಂಧನವನ್ನು ತೈಲಕ್ಕೆ ಬದಲಿಸಲಾಯಿತು. ಈ ನಿರ್ಧಾರ ಜಗತ್ತಿನ ಇತಿಹಾಸದಲ್ಲಿ ಮಹತ್ವದ್ದೆನಿಸಿತು. ಮುಂದೆ ನಡೆದ ಎರಡು ವಿಶ್ವಯುದ್ಧಗಳಲ್ಲಿ ಜರ್ಮನಿಯ ಮಹಾಸೈನ್ಯದೊಂದಿಗೆ ಹೋರಾಡಲು ಬ್ರಿಟನ್ನೂ ಸೇರಿದಂತೆ ಮಿತ್ರಪಡೆಗಳು ಕಲ್ಲಿದ್ದಲಿನೊಂದಿಗೆ ತೈಲವನ್ನೂ ಯಥೇಚ್ಛವಾಗಿ ಬಳಸಿದವು. ತೈಲವೇ ಶಕ್ತಿಯ ಸಂಕೇತ ಎಂಬುದನ್ನು ಚರ್ಚಿಲ್ ಸ್ಪಷ್ಟವಾಗಿ ಅರ್ಥಮಾಡಿಕೊಂಡಿದ್ದ. ಅವನು ಊಹಿಸಿದಂತೆಯೇ ಇಪ್ಪತ್ತನೇ ಶತಮಾನದಲ್ಲಿ ತೈಲವೇ ಜಗತ್ತಿನ ಎನರ್ಜಿಯ, ಅಧಿಕಾರದ ಕೀಲಿಕೈ ಆಯಿತು.

1930ರ ದಶಕ. ಆ ಸಮಯದಲ್ಲಿ ಇನ್ನೂ ಸೌದಿ ಅರೇಬಿಯಾ ಸಂಪೂರ್ಣ ಮರಳುಗಾಡು ಮತ್ತು ಬಡ ದೇಶ. ಅಲ್ಲಿ ತೈಲ ಇದೆಯೋ ಇಲ್ಲವೋ ಎಂದು ಯಾರಿಗೂ ಖಚಿತವಿರಲಿಲ್ಲ. ಆದರೂ ಅಮೆರಿಕಾದ ಸ್ಟಾಂಡರ್ಡ್ ಆಯಿಲ್ ಆಫ್ ಕ್ಯಾಲಿಫೋರ್ನಿಯಾ ಕಂಪನಿಯ ಕೆಲ ಭೂವಿಜ್ಞಾನಿಗಳು ಇಲ್ಲಿ ತೈಲಶೋಧದ ಒಂದು ದೊಡ್ಡ ಸಾಹಸಕ್ಕೆ ಹೊರಟರು. ಕಾರುಗಳಲ್ಲಿ ಹೋಗುವಂಥ ರಸ್ತೆ ಇರಲಿಲ್ಲ, ಹಾಗಾಗಿ ಅವರು ಒಂಟೆಗಳ ಮೇಲೆ ಕ್ಯಾರವಾನ್‌ನಲ್ಲಿ ಸಾಗಿದರು. ಅವರ ಜೊತೆ ಇದ್ದದ್ದು ಹಳೆಯ ನಕ್ಷೆಗಳು, ಭೂವಿಜ್ಞಾನ ಉಪಕರಣಗಳು, ಕುಡಿಯುವ ನೀರಿನ ಡಬ್ಬಿಗಳು ಮತ್ತು ಅಪಾರ ಆಶೆ. ವಾರಗಳ ಕಾಲ ಮರು ಭೂಮಿಯಲ್ಲಿ ಸುತ್ತಿದರು. ಕೆಲವೊಮ್ಮೆ ದಿಕ್ಕೇ ತಪ್ಪುತ್ತಿದ್ದರು. ಕೆಲ ದಿನ ನೀರು ಇರುತ್ತಿರಲಿಲ್ಲ. ಒಮ್ಮೆ ಒಬ್ಬ ಭೂವಿಜ್ಞಾನಿ ಒಂದು ಕಡೆ ಮರಳನ್ನು ಕೈಯಲ್ಲಿ ಹಿಡಿದು ನೋಡಿದ. ಅದರಲ್ಲಿ ಸ್ವಲ್ಪ ತೈಲದ ವಾಸನೆ ಇದ್ದಂತೆ ಅನಿಸಿತು. ಕೆಲ ವರ್ಷಗಳ ನಂತರ ಅಲ್ಲಿ ತೋಡಿದ ಬಾವಿಯಿಂದ ಭಾರೀ ಪ್ರಮಾಣದ ತೈಲ ಹೊರಬಂತು. ಅದು ದಮ್ಮಾಮ್ ಪ್ರದೇಶದ ಪ್ರಸಿದ್ಧ ತೈಲಬಾವಿ. ಆ ಒಂದು ಶೋಧದಿಂದ ಸೌದಿ ಅರೇಬಿಯಾ ವಿಶ್ವದ ದೊಡ್ಡ ತೈಲ ಶಕ್ತಿಯಾಯಿತು. ನಂತರ ಸೌದಿ ಅರೇಬಿಯಾ ಎಂಬ ಮಹಾಕಂಪನಿ ಹುಟ್ಟಿತು. ಮಧ್ಯಪ್ರಾಚ್ಯ ಜಾಗತಿಕ ರಾಜಕೀಯದ ಕೇಂದ್ರವಾಯಿತು. ಇಂಥ ಬಹಳಷ್ಟು ಘಟನೆಗಳು,



ಜಾಗತಿಕ ತೈಲ ಇತಿಹಾಸದ ಒಳನೋಟಗಳು, ಪೆಟ್ರೋಲಿಯಂ ಜಗತ್ತಿನ ಪ್ರಮುಖ ಇಂಧನ ಹಾಗೂ ಅಧಿಕಾರದ ಮೂಲವಾದ ಬಗೆಯನ್ನು ಇಂಧನ ತಜ್ಞ ಡೇನಿಯಲ್ ಯೆರ್ಗಿನ್ ಎಂಬಾತ ಬರೆದ "The Prize: The Epic Quest for Oil, Money and Power' ಎಂಬ ಪುಸ್ತಕ ವಿವರಿಸುತ್ತದೆ. ಬೋರಿಂಗ್ ಇತಿಹಾಸದಂತಿರದೆ, ಸ್ವಾರಸ್ಯಕರ ಸಂಗತಿಗಳೊಂದಿಗೆ ಇದು ಓದಿಸಿಕೊಳ್ಳುತ್ತದೆ. 19ನೇ ಶತಮಾನದ ಆರಂಭದಿಂದ 20ನೇ ಶತಮಾನದ ಅಂತ್ಯದವರೆಗಿನ ಜಾಗತಿಕ ತೈಲ ಉದ್ಯಮದ ಇತಿಹಾಸವನ್ನು ವಿವರಿಸುವ ಇದು 1991ರಲ್ಲೇ ಪ್ರಕಟವಾಗಿ, 1992ರ ಪುಲಿಟ್ಜರ್ ಪ್ರಶಸ್ತಿಯನ್ನು ಪಡೆದುಕೊಂಡರೂ ಇಂದಿಗೂ ಪ್ರಸಕ್ತವಾಗಿಯೇ ಇದೆ. ಇಂದು ತೈಲದ ರಾಜಕೀಯದ ಸುಳಿಯಲ್ಲಿ ಸಿಕ್ಕಿದ ತರಗೆಲೆಗಳಾಗಿರುವ ನಾವು ಈ ಕೃತಿಯನ್ನು ಓದಿದರೆ, ಕಲ್ಲೆಣ್ಣೆಯು ಜಾಗತಿಕ ಇತಿಹಾಸವನ್ನೇ ಬದಲಿಸಿದ ಚಿತ್ರಣ ಕಾಣುತ್ತದೆ. ಆದ್ದರಿಂದ ವರ್ತಮಾನವೂ ತೈಲವನ್ನೇ ನೆಚ್ಚಿದೆ ಎಂಬುದು ನಾವು ಅರ್ಥ ಮಾಡಿಕೊಳ್ಳಬೇಕಾದ ಸಂಗತಿ.

ಒಂದೊಂದು ತೈಲಬಾವಿಯ ಶೋಧವೂ ಒಂದೊಂದು ಕತೆಯ ಮೂಲ. ಉದಾಹರಣೆಗೆ ಇರಾನನ್ನೇ ನೋಡಬಹುದು. 1900ರ ಆರಂಭದಲ್ಲಿ ಬ್ರಿಟಿಷ್ ಉದ್ಯಮಿ ವಿಲಿಯಂ ನಾಕ್ಸ್ ಡಿಆರ್ಕಿ ಎಂಬಾತ ಇರಾನ್‌ನಲ್ಲಿ ತೈಲ ಹುಡುಕಲು ದೊಡ್ಡ ಪ್ರಮಾಣದ ಹಣ ಹೂಡಿದ್ದ. ಆದರೆ ವರ್ಷಗಳು ಕಳೆದರೂ ಏನೂ ಸಿಗಲಿಲ್ಲ. ಮರಳುಗಾಡು, ಕಾಡು ಬೆಟ್ಟಗಳು, ರೋಗಗಳು, ದೂಳಿನ ಬಿರುಗಾಳಿ- ಎಲ್ಲವೂ ಸಮಸ್ಯೆ. ಹಣ ಖಾಲಿಯಾಗುತ್ತಿತ್ತು. ಅವನಿಗಾಗಿ ಕೆಲಸ ಮಾಡುತ್ತಿದ್ದ ಎಂಜಿನಿಯರ್ ಜಾರ್ಜ್ ಬರ್ನಾರ್ಡ್ ರೆನಾಲ್ಡ್ಸ್ ಎಂಬಾತ ಮಸ್ಜಿದ್ ಸೊಲೆಮಾನಿ ಎಂಬ ಒಂದು ಪರ್ವತ ಪ್ರದೇಶದಲ್ಲಿ ತೋಡುತ್ತಿದ್ದ. 1908ರ ವೇಳೆಗೆ ಪರಿಸ್ಥಿತಿ ತುಂಬಾ ಕಷ್ಟಕರವಾಯಿತು. ಹಣ ಮುಗಿದಿದೆ. ಕೆಲಸ ನಿಲ್ಲಿಸಿ ಎಂಬ ಸಂದೇಶ ಲಂಡನ್‌ನಿಂದ ಹೊರಟಿತು. ಆದರೆ ಆ ಸಂದೇಶ ತಲುಪುವ ಮೊದಲು ರೆನಾಲ್ಡ್ಸ್ ಕೊನೆಯ ಪ್ರಯತ್ನ ಮಾಡಲು ತೀರ್ಮಾನಿಸಿದ. ಮೇ ತಿಂಗಳ ಒಂದು ಬೆಳಿಗ್ಗೆ ಹಠಾತ್ ಭೂಮಿಯೊಳಗಿಂದ ಭಾರೀ ಶಬ್ದ ಕೇಳಿಸಿತು ಕೆಲವೇ ಕ್ಷಣಗಳಲ್ಲಿ ಕಪ್ಪು ದ್ರವ ಮೇಲಕ್ಕೆ ಸ್ಫೋಟಿಸಿದಂತೆ ನುಗ್ಗಿಬಂದಿತು. ಇದು ಮಧ್ಯಪ್ರಾಚ್ಯದ ಮೊದಲ ದೊಡ್ಡ ತೈಲ ಶೋಧ. ಇದರಿಂದ ಹುಟ್ಟಿದ ಕಂಪನಿಯೇ ಆಂಗ್ಲೋ ಪರ್ಷಿಯನ್ ತೈಲ ಕಂಪನಿ. ಮುಂದೆ ಈ ಬಾವಿಯೇ ಬ್ರಿಟನ್‌ನ ನೌಕಾಪಡೆಗೆ ತೈಲ ಒದಗಿಸಿತು. ಮಧ್ಯಪ್ರಾಚ್ಯದ ತೈಲ ಯುಗವನ್ನು ಆರಂಭಿಸಿತು.

ಮುಂದೆ ಇರಾನ್‌ನ ತೈಲದ ಮೇಲೆ ಬ್ರಿಟನ್‌ನ ಹಿಡಿತ ಹೆಚ್ಚಿತು. ಆಂಗ್ಲೋ ಪರ್ಷಿಯನ್ ತೈಲ ಕಂಪನಿಯಲ್ಲಿ ಬ್ರಿಟನ್ ಸರ್ಕಾರ ದೊಡ್ಡ ಪಾಲು ಹೊಂದಿತ್ತು. ತೈಲ ತಮ್ಮ ದೇಶದ್ದಾದರೂ ಲಾಭದ ದೊಡ್ಡ ಭಾಗ ಬ್ರಿಟನ್‌ಗೆ ಹೋಗುತ್ತಿದ್ದುದು ಇರಾನ್‌ನ ಜನರಲ್ಲಿ ಅಸಮಾಧಾನ ಹೆಚ್ಚಿಸಿತು. ಆಗ ಇರಾನ್‌ನ ಪ್ರಧಾನಿಯಾಗಿದ್ದ ಮೊಹಮ್ಮದ್ ಮೊಸಾದೇಕ್ ಒಂದು ಧೈರ್ಯದ ನಿರ್ಧಾರ ತೆಗೆದುಕೊಂಡರು. 1951ರಲ್ಲಿ ಇರಾನ್‌ನ ತೈಲ ಇರಾನ್‌ಗೆ ಸೇರುತ್ತದೆ ಎಂದರು. ದೇಶದ ತೈಲ ಉದ್ಯಮವನ್ನು ರಾಷ್ಟ್ರೀಕರಣ ಮಾಡಿದರು. ಬ್ರಿಟನ್ ಕಂಪನಿಯ ನಿಯಂತ್ರಣವನ್ನು ತೆಗೆದುಹಾಕಿದರು. ಈ ನಿರ್ಧಾರದಿಂದ ಬ್ರಿಟನ್ ತುಂಬಾ ಕೋಪಗೊಂಡಿತು. ಅಲ್ಲಿ ತೈಲ ಸರಬರಾಜು ಕಡಿತವಾಯಿತು. ಆರ್ಥಿಕ ಒತ್ತಡ ಶುರುವಾಯಿತು. ಕೊನೆಗೆ ಒಂದು ಗುಪ್ತ ಕಾರ್ಯಾಚರಣೆ ಆರಂಭವಾಯಿತು. 1953ರಲ್ಲಿ ಅಮೆರಿಕದ ಸಿಐಎ ಮತ್ತು ಬ್ರಿಟನ್‌ನ ಎಂ16 ಬೇಹುಗಾರಿಕೆ ಸಂಸ್ಥೆಗಳು ಸಂಚು ಹೂಡಿ ಇರಾನಿನಲ್ಲಿ ದಂಗೆ ಎಬ್ಬಿಸಿದವು. ಮೊಸದೇಕ್ ಅಧಿಕಾರ ಕಳೆದುಕೊಂಡರು. ಶಾಹ್ ಮತ್ತೆ ಅಧಿಕಾರದಲ್ಲಿ ಬಲವಾದ ಸ್ಥಾನ ಪಡೆದರು. ಈ ಘಟನೆ ಪಾಶ್ಚಾತ್ಯ ರಾಷ್ಟ್ರಗಳ ಮೇಲೆ ಇರಾನ್‌ನಲ್ಲಿ ಅನುಮಾನ ಹೆಚ್ಚಿಸಿದ್ದಲ್ಲದೆ, ನಂತರದ ಹಲವಾರು ರಾಜಕೀಯ ಘಟನೆಗಳಿಗೆ ನೆಲೆ ಸೃಷ್ಟಿಸಿತು.

ದ್ವಿತೀಯ ವಿಶ್ವಯುದ್ಧದಲ್ಲಿಯೂ ತೈಲ ಮಹತ್ವದ ಪಾತ್ರ ವಹಿಸಿತು. ಜಪಾನ್ ವೆಸ್ಟ್‌ಇಂಡೀಸ್‌ನ ತೈಲ ಸಂಪತ್ತನ್ನು ಪಡೆಯಲು ಹೋಗುತ್ತಿದ್ದಾಗ ಪರ್ಲ್ ಹಾರ್ಬರ್ ಮೇಲೆ ದಾಳಿ ನಡೆಸಿತು. ಹಿಟ್ಲರ್ ಸೋವಿಯತ್ ಒಕ್ಕೂಟದ ಮೇಲೆ ದಾಳಿ ಮಾಡಿದ ಪ್ರಮುಖ ಕಾರಣಗಳಲ್ಲಿ ಒಂದು, ಕಾಕಸಸ್ ಪ್ರದೇಶದ ತೈಲ ಕ್ಷೇತ್ರಗಳನ್ನು ಹಿಡಿಯುವುದು. ಆದರೆ ಅಮೆರಿಕದ ತೈಲ ಉತ್ಪಾದನೆಯ ಶಕ್ತಿ ಯುದ್ಧದ ಫಲಿತಾಂಶವನ್ನು ನಿರ್ಧರಿಸಿತು. ಯುದ್ಧದ ಅಂತ್ಯದ ವೇಳೆಗೆ ಜರ್ಮನಿ ಮತ್ತು ಜಪಾನ್‌ನ ಇಂಧನ ಟ್ಯಾಂಕ್‌ಗಳು ಖಾಲಿಯಾಗಿದ್ದವು. ತೈಲ ಅಪಾರ ಸಂಪತ್ತನ್ನು ನೀಡುವ ಸಾಮರ್ಥ್ಯ ಹೊಂದಿದ್ದರೂ, ಕೆಲವೊಮ್ಮೆ ಅದು 'ಮೂರ್ಖನ ನಿಧಿ'ಯೂ ಆಗಬಹುದು. ಉದಾಹರಣೆಗೆ ಇರಾನ್‌ನ ಶಾಹ್ ತನ್ನ ಅತ್ಯಂತ ದೊಡ್ಡ ಆಸೆಯಾದ ತೈಲ ಸಂಪತ್ತನ್ನು ಪಡೆದರು. ಆದರೆ ಅದೇ ಸಂಪತ್ತು ಕೊನೆಗೆ ಅವರ ಆಡಳಿತದ ಕುಸಿತಕ್ಕೆ ಕಾರಣವಾಯಿತು. ಮೆಕ್ಸಿಕೋ ದೇಶದ ಆರ್ಥಿಕತೆಯನ್ನೂ ತೈಲ ಒಂದು ಹಂತದಲ್ಲಿ ಬಲಪಡಿಸಿತು. ಆದರೆ ನಂತರ ಅದೇ ಆರ್ಥಿಕತೆಯನ್ನು ದುರ್ಬಲಗೊಳಿಸಿತು.

ತೈಲ ಉದ್ಯಮದ ಆರಂಭಿಕ ದಿನಗಳಲ್ಲಿ, ಸೀಮೆ ಎಣ್ಣೆ ಪ್ರಮುಖ ಉತ್ಪನ್ನವಾಗಿತ್ತು. ಕೈಗಾರಿಕೀಕರಣಕ್ಕೂ ಕಾರಣವಾದ ಈ ಕೆರೋಸಿನ್ ರಾತ್ರಿ ಕತ್ತಲೆಯನ್ನು ದೂರ ಮಾಡಿ ಕೆಲಸದ ಸಮಯವನ್ನು ವಿಸ್ತರಿಸಿತು. ಹೀಗಾಗಿ ಅದನ್ನು ಹೊಸ ಬೆಳಕು ಎಂದು ಕರೆಯಲಾಗುತ್ತಿತ್ತು. 19ನೇ ಶತಮಾನದ ಅಂತ್ಯದ ವೇಳೆಗೆ ಕೆರೋಸಿನ್ ಮಾರಾಟದಿಂದಲೇ ಜಾನ್ ಡಿ. ರಾಕ್‌ಫೆಲ್ಲರ್ ಅಮೆರಿಕದ ಅತಿ ಶ್ರೀಮಂತ ವ್ಯಕ್ತಿಯಾದರು. ಆಗ ಪೆಟ್ರೋಲ್ ಬಹುತೇಕ ಉಪಯೋಗವಿಲ್ಲದ ಉಪ ಉತ್ಪನ್ನವಾಗಿತ್ತು. ಕೆಲವೊಮ್ಮೆ ಅದನ್ನು ಗ್ಯಾಲನ್‌ಗೆ ಎರಡು ಸೆಂಟ್‌ಗೆ ಮಾರಲಾಗುತ್ತಿತ್ತು. ಮಾರಾಟವಾಗದಿದ್ದರೆ ನದಿಗಳಲ್ಲೇ ಸುರಿಯಲಾಗುತ್ತಿತ್ತು. ವಿದ್ಯುತ್ ದೀಪದ ಶೋಧದ ನಂತರ ತೈಲ ಉದ್ಯಮ ಮುಗಿಯಬಹುದು ಎಂದು ಕೆಲವರು ಭಾವಿಸಿದ್ದರು. ಆದರೆ ಪೆಟ್ರೋಲ್ ಬಳಸಿ ಓಡುವ ಆಂತರಿಕ ದಹನ ಎಂಜಿನ್ ಆವಿಷ್ಕಾರವಾದ ಬಳಿಕ ತೈಲ ಉದ್ಯಮಕ್ಕೆ ಹೊಸ ಮಾರುಕಟ್ಟೆ ಸಿಕ್ಕಿತು- ಮತ್ತು ಹೊಸ ನಾಗರಿಕತೆ ಹುಟ್ಟಿತು.

ಈ ಪುಸ್ತಕ ಓದುತ್ತ ಹೋದರೆ ಹಲವು ವಿಷಯಗಳು ಸ್ಪಷ್ಟವಾಗುತ್ತ ಹೋಗುತ್ತವೆ- ಬಂಡವಾಳಶಾಹಿ ಮತ್ತು ಆಧುನಿಕ ಜಾಗತಿಕ ವ್ಯವಹಾರದ ಬೆಳವಣಿಗೆ, ತೈಲ ಮತ್ತು ಜಾಗತಿಕ ರಾಜಕೀಯದ ಸಂಬಂಧ. ಜಗತ್ತಿನ ರಾಜಕೀಯವನ್ನು ತೈಲದ ನಕ್ಷೆ ಅರ್ಥ ಮಾಡಿಕೊಳ್ಳದೆ ತಿಳಿಯಲು ಸಾಧ್ಯವಿಲ್ಲ. ಯಾವ ದೇಶದಲ್ಲಿ ತೈಲ ಇದೆ, ಯಾರ ಕೈಯಲ್ಲಿ ಅದನ್ನು ನಿಯಂತ್ರಿಸುವ ಶಕ್ತಿ ಇದೆ, ಮತ್ತು ಯಾವ ಮಾರ್ಗಗಳಿಂದ ಅದು ಸಾಗುತ್ತದೆ - ಇವೆಲ್ಲವೂ ಜಗತ್ತಿನ ಅಧಿಕಾರದ ಸಮತೋಲನವನ್ನು ನಿರ್ಧರಿಸುತ್ತವೆ. ಇಂದಿನ ಪರಿಸ್ಥಿತಿಯನ್ನೇ ನೋಡಿ. ಹೊರ್ಮುಜ್ ಜಲಸಂಧಿಯಂತಹ ಒಂದು ಸಣ್ಣ ಭೌಗೋಳಿಕ ಮಾರ್ಗವೇ ವಿಶ್ವದ ಆರ್ಥಿಕತೆಯನ್ನು ನಡುಗಿಸಬಹುದು. ಇಲ್ಲಿರುವ ದುರಂತವನ್ನೂ ನಾವು ಗಮನಿಸಬೇಕು. ತೈಲದಿಂದಾಗಿ ನಾವು- ನಮ್ಮ ಸಮಾಜವೇ ಹೈಡ್ರೋಕಾರ್ಬನ್ ಸಮಾಜವಾಗಿ ಬದಲಾಗಿದೆ. ಅಂದರೆ ಮಾನವ ಜೀವನವೇ ತೈಲ ಮತ್ತು ಅನಿಲದ ಮೇಲೆ ಅವಲಂಬಿತವಾಗಿದೆ. ಒಂದು ತಿಂಗಳು ಎಲ್‌ಪಿಜಿ ಬರಲಿಲ್ಲ ಎಂದರೆ ಭಾರತದ ಒಲೆಗಳಿಗಲ್ಲ, ಮನೆಗಳಿಗೇ ಬೆಂಕಿ ಬೀಳುತ್ತದೆ.

ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಮನುಷ್ಯನಿಗೆ ಜೇನು ಅಮೃತ, ನಾಯಿಯ ಪಾಲಿಗೆ ಯಮ!

ಈ ಜಗತ್ತು ಅತ್ಯಂತ ವಿಚಿತ್ರ ಮತ್ತು ವಿಶಾಲವಾದದ್ದು. ಇಲ್ಲಿ, ಎಲ್ಲವೂ ಎಲ್ಲರಿಗೂ ಒಳಿತೇ ಅಥವಾ ಕೆಡುಕೇ ಆಗಿರಬೇಕೆಂದೇನಿಲ್ಲ. ಆದರೊಂದು ಕೆಲ ವಸ್ತುಗಳು ಸಾಮಾನ್ಯವಾಗಿ ಮನುಷ್ಯರಿಗೆ ಒಳ್ಳೆಯದು ಅಂದುಕೊಂಡಿದ್ದು, ಪ್ರಾಣಿಗಳ ಜೀವವನ್ನೇ ತೆಗೆಯುವಂತವೂ ಇವೆ. ಆಯುರ್ವೇದದಲ್ಲಿ, ಜೇನು ತುಪ್ಪವನ್ನು ಅಮೃತ ಅಂತಲೇ ಪರಿಗಣಿಸುತ್ತಾರೆ. ಆದರೆ ಅಚ್ಚರಿಯ ಸಂಗತಿ ಅಂದರೆ, ಅದೇ ಜೇನನ್ನು ನೆಕ್ಕಿದರೆ ನಾಯಿ ಸಾಯುತ್ತದೆ. ದೇಸೀ ಹಸುವಿನ ತುಪ್ಪ ಬಹಳಷ್ಟು ಔಷಧಿ ಗುಣಗಳನ್ನು ಹೊಂದಿದೆ. ಆದರೆ ಸದಾ ಕೊಳಕನ್ನೇ ತಿನ್ನುವ ನೊಣ ಇದೇ ತುಪ್ಪದ ರುಚಿ

ನೋಡಲು ಬಯಸಿದರೆ, ನೋವಿನಿಂದ ವಿಲಾ-ವಿಲಾ ಒದ್ದಾಡಿಕೊಂಡು ಸಾಯುತ್ತದೆ. ಕಲ್ಲುಸಕ್ಕರೆ ಸಾಕಷ್ಟು ಔಷಧಿ ಗುಣಗಳನ್ನು ಹೊಂದಿರುತ್ತದೆ. ಆದರೇನು ಕತ್ತೆ ಅದರ ಸವಿ ಸವಿದರೆ ಸ್ವಲ್ಪೇ ಸಮಯದಲ್ಲಿ ಅದರ ಜೀವವೇ ಹಾರಿ ಹೋಗುತ್ತದೆ. ಬೇವಿನ ಕಾಯಿ ಬಲಿತು ಮಾಗಿದಾಗ, ಅನೇಕ ರೋಗಗಳನ್ನು ಸೋಲಿಸುವ ಶಕ್ತಿ ಹೊಂದಿರುತ್ತದೆ. ಆದರೆ ಅದನ್ನೇ ಒಂದು ಕಾಗೆ ತಿಂದರೆ ಅದರ ಸಾವು ಖಚಿತ!

ಇದೇ ಅಲ್ಲವೇ ಈ ಭೂಮಿಯ ಮೇಲಿನ ವಿಸ್ಮಯ! ಇದು ನಮ್ಮ ಬದುಕಿನಲ್ಲೂ ಕಾಣಲು ಸಿಗುತ್ತದೆ. ಒಬ್ಬ, ತನ್ನ ದೇಶದ ಹಿತದೃಷ್ಟಿಯೊಂದನ್ನೇ ಮುಂದಿಟ್ಟುಕೊಂಡು, ಕೆಲ ಕಠಿಣ ನಿರ್ಣಯಗಳನ್ನು ತೆಗೆದುಕೊಳ್ಳಲೇ ಬೇಕಾಗುತ್ತದೆ. ಇದು ರಾಷ್ಟ್ರದ ಹಿತದೃಷ್ಟಿಯಿಂದ ಅಥವಾ ಆರೋಗ್ಯಕ್ಕೆ ಬೇಕೇಬೇಕಾಗುತ್ತದೆ. ಆದರೇನು, ಅದೇ ಕ್ರಿಯೆ ಕೆಲವರಿಗೆ ವಿಷದಂತೆ ಕಾಣುತ್ತದೆ. ಹಾಗಂತ ಜೇನಿನ, ತುಪ್ಪದ, ಕಲ್ಲುಸಕ್ಕರೆಯಲ್ಲಿರುವ ಒಳ್ಳೆಯ ಅಂಶಕ್ಕೆ ಎಂದಾದರೂ ಧಕ್ಕೆ ಬರಲಾರದು. ಹೇಳುವವರು ತಮಗೆ ತೋಚಿದ್ದನ್ನು, ತಮ್ಮ ಅನುಕೂಲಕ್ಕೆ ಹೊಂದುವ ರೀತಿ ಅರ್ಥೈಸಿದರೂ, ಅಂತಿಮ ಪರಿಣಾಮ ಬಂದಾಗ ಅವುಗಳ ನಿಜವಾದ ಗುಣ ಅಥವಾ ಶಕ್ತಿಯ ಪರಿಚಯವಾಗೇ ಆಗುತ್ತದೆ. ಅವಶ್ಯವಿರುವುದು ತಾಳ್ಮೆ, ಸಹನೆ. ನಮ್ಮ ನಾಯಕರ ಉದ್ದೇಶ, ಗುರಿ, ಧೋರಣೆಗಳೆಲ್ಲ ಪಾರದರ್ಶಕವಾಗಿದ್ದಾಗ, ಯಾರು ಏನು ಹೇಳುತ್ತಾರೆ ಎಂಬುದು ನಗಣ್ಯ. ಕೆಲವರಿಗೆ ಇದೊಂದು ರೀತಿ ಸಂತೋಷಪಟ್ಟುಕೊಳ್ಳುವ ಮಾರ್ಗ. ಹಾಗಂತ ಅವರಿಗೂ ಜೇನಿನ, ತುಪ್ಪದ ಉತ್ತಮ ಗುಣಗಳ ಪರಿಚಯ ಇಲ್ಲವೆಂತಲೂ ಅಲ್ಲ. ಆದರೂ ಅದೇಕೋ ತೀಟೆ ತೀರಿಸಿಕೊಳ್ಳುವ ಬಯಕೆ. ಅದು ಎಂದೂ ಫಲಕಾರಿ ಆಗದು ಎಂಬುದೂ ಅಷ್ಟೇ ಸತ್ಯ. ಆದರೂ, ಬದುಕು, ಜೀವನ, ಸಮಾಜ ಅಂದ ಮೇಲೆ ಇವೆಲ್ಲ ಇರಲೇಬೇಕು!

- **ಶಂಕರನಾರಾಯಣ ಭಟ್, ಹೊನ್ನಾವರ**

ಓದುಗರ ಓಣಿಗೆ ಭೇಟಿ ಕೊಡಿ
ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ವಿಳಿಂಜಂ ಬಂದರು-ಭಾರತದ ನವ ಸಾಗರ ಶಕ್ತಿ

ವಿಳಿಂಜಂ ಪೋರ್ಟ್ ಕೇವಲ ಕೇರಳದ ಯೋಜನೆಯಲ್ಲ, ಇದು ಭಾರತದ ಸಾಗರಮಾಲಾ ಯೋಜನೆಯ ಭವಿಷ್ಯದ ಸಂಕೇತ. ಭಾರತ, ಈಗ ಕೇವಲ ಕರಾವಳಿ ಹೊಂದಿದ ದೇಶವಲ್ಲ, ಬದಲಾಗಿ ಭಾರತ ಒಂದು ಸಾಗರ ಶಕ್ತಿಯಾಗಿದೆ ಎಂಬ ಸಂದೇಶ ಸಾರುವ ಮೊದಲ ಹೆಜ್ಜೆಯಾಗಿದೆ. ವಿಳಿಂಜಂ ಬಂದರು ಯೋಜನೆಯ ಕಲ್ಪನೆ ಹೊಸದಲ್ಲ. ಇದನ್ನು ಮೊದಲ ಬಾರಿಗೆ ತೊಂಬತ್ತರ ದಶಕದಲ್ಲಿ ಚರ್ಚಿಸಲಾಯಿತು. ಆದರೆ ಯೋಜನೆ ಹಲವು ಕಾರಣಗಳಿಂದ ಮುಂದೂಡಲ್ಪಟ್ಟಿತು.

ಗಂಟಾಘೋಷ

ಗುರುರಾಜ್ ಗಂಟಿಹೊಳೆ
vveditoped@gmail.com

ವಿಳಿಂಜಂ ಅಂತರಾಷ್ಟ್ರೀಯ ಸೀ ಏರ್‌ಪೋರ್ಟ್, ಕೇರಳದ ಅತ್ಯಂತ ಮಹತ್ವದ ಅಂತಾರಾಷ್ಟ್ರೀಯ ಡೀಪ್-ಸೀ ಪೋರ್ಟ್ ಆಗಿದ್ದು, ಭಾರತದ ಪಾಲಿನ ದೊಡ್ಡ ಗೇಮ್ ಚೇಂಜರ್ ಎಂದು ಕರೆಯಲಾಗುತ್ತಿದೆ. ಇದೊಂದು ಭಾರತದ ಸಾಗರ ವಲಯದಲ್ಲಿ ಇತಿಹಾಸದ ಹೊಸ ಅಧ್ಯಾಯ ಎನ್ನಬಹುದು. ಪೋರ್ಟ್ ಆಫ್ ಸಿಂಗಪೂರ್, ಕೊಲಂಬೋ, ದುಬೈ(ಜೆಬೆಲ ಅಲಿ), ರೋಟೆರ್‌ಡಾಮ್ ವಿಶ್ವದಲ್ಲಿ ಕೆಲವು ಪ್ರಮುಖ ಟ್ರಾನ್ಸ್‌ಶಿಪ್‌ಮೆಂಟ್ ಹಬ್‌ಗಳಾಗಿ ಗುರುತಿಸಿಕೊಂಡಿವೆ. ಭಾರತದ ಸಾಗರ ವ್ಯವಹಾರದಲ್ಲಿದ್ದ ದೊಡ್ಡ ಸಮಸ್ಯೆ, ಭಾರತದ ಕಂಟೇನರ್ ಸರಕುಗಳ ಸುಮಾರು 40%-50%ರಷ್ಟು ವಿದೇಶಿ ಬಂದರುಗಳ ಮೂಲಕವೇ ಸಾಗುತ್ತಿತ್ತು.

ವಿದೇಶಿ ಬಂದರು ಬಳಕೆಯ ಪರಿಣಾಮ, ಭಾರತೀಯ ವ್ಯಾಪಾರಿಗಳು ಪ್ರತಿ ಕಂಟೇನರ್‌ಗೆ ಹೆಚ್ಚುವರಿ ಶುಲ್ಕ ಕೊಡಬೇಕಾಗುತ್ತಿತ್ತು. ಸರಕುಗಳು ಮೊದಲು ಬೇರೆ ದೇಶಕ್ಕೆ ಹೋಗಿ ಅಲ್ಲಿ ಮತ್ತೆ ಬೇರೆ ಹಡಗಿಗೆ ಬದಲಾಯಿಸಬೇಕಾಗುತ್ತಿತ್ತು. ಇದು ಅತ್ಯಧಿಕ ಸಮಯ ನಷ್ಟಕ್ಕೆ ಕಾರಣವಾಗಿತ್ತು. ವಿದೇಶಿ ಬಂದರುಗಳ ಮೇಲೆ ಅವಲಂಬನೆಯ ಜೊತೆಗೆ ತಂತ್ರಜ್ಞಾನದ ದುರ್ಬಲತೆಯೂ ಆಗಿತ್ತು. ಇದು ಭೌಗೋಳಿಕ ರಾಜಕೀಯಕ್ಕೆ ಅಪಾಯ ತಂದೊಡ್ಡುವ ಭೀತಿಗೂ ಕಾರಣವಾಗಿತ್ತೆನ್ನಬಹುದು.

ಇಲ್ಲಿಂದ ಪಶ್ಚಿಮ ಏಷ್ಯಾ, ಆಫ್ರಿಕಾ, ಯುರೋಪ್ ಸೇರಿದಂತೆ ಎಲ್ಲ ಕಡೆಗೆ ಸಾಗರಮಾರ್ಗ ಸುಲಭ ಸಾಗಾಣಿಕೆ ಸಾಧ್ಯವಾಗುತ್ತದೆ. ಈ ಬಂದರು ನಿರ್ಮಾಣದ ಇತಿಹಾಸದ ಬಗ್ಗೆ ಗಮನಿಸಿದಾಗ, ವಿಳಿಂಜಂ ಬಂದರು ಯೋಜನೆಯ ಕಲ್ಪನೆ ಹೊಸದಲ್ಲ, ಇದನ್ನು ಮೊದಲ ಬಾರಿಗೆ ತೊಂಬತ್ತರ ದಶಕದಲ್ಲಿ ಚರ್ಚಿಸಲಾಯಿತು. ಆದರೆ ಯೋಜನೆ ಹಲವು ಕಾರಣಗಳಿಂದ ಮುಂದೂಡಲ್ಪಟ್ಟಿತು. ಪರಿಸರ ವಿರೋಧ, ಹಣಕಾಸಿನ ಸಮಸ್ಯೆ, ರಾಜಕೀಯ ಬದಲಾವಣೆಗಳು ಸಹ ಕಾರಣವಾದವು.

ಭಾರತೀಯ ಮಹಾಸಾಗರದಲ್ಲಿ ಚೀನಾ ತನ್ನ ಪ್ರಭಾವ ಹೆಚ್ಚಿಸುತ್ತಿದೆ. ಈಗಾಗಲೇ ಅದು ಹಲವು ಬಂದರುಗಳನ್ನು ನಿರ್ಮಿಸಿದೆ. ಉದಾಹರಣೆಗೆ ಹಂಬನ್‌ಟೋಟಾ, ಗ್ವಾದರ್, ಕ್ಯೂಕ್ಪು ಪೋರ್ಟ್ ಮುಂತಾದವುಗಳಿವೆ. ಇದನ್ನು ಸ್ಟ್ರಿಂಗ್ ಆಫ್ ಪರ್ಲ್ ಸ್ಟ್ರಾಟಜಿ ಎಂದು ಕರೆಯುತ್ತಾರೆ. ಇದಕ್ಕೆ ಪ್ರತಿಯಾಗಿ ಭಾರತ ತನ್ನ ಸಾಗರ ಸಾಮರ್ಥ್ಯವನ್ನು ಹೆಚ್ಚಿಸಬೇಕಿತ್ತು. ಅದರ ಭಾಗವಾಗಿ, ವಿಳಿಂಜಂ ಬಂದರು, ಜಿಯೋ ಪೊಲಿಟಿಕ್ಸ್ ಭಾಗವಾಗಿ ಭಾರತೀಯ ಮಹಾಸಾಗರದ ಆಟದ ಮೈದಾನವಾಗಿ ನಿಲ್ಲಬಲ್ಲುದಾಗಿದೆ. ಈ ಸಮುದ್ರ ರಾಜಕೀಯದ ಪ್ರಮುಖ ಭಾಗವಾಗಿದೆ.

ಭಾರತದ ಬಹುತೇಕ ಬಂದರುಗಳಿಗೆ ಒಂದು ದೊಡ್ಡ ಸಮಸ್ಯೆಯೆಂದರೆ, ಅದು ಡ್ರೆಡ್ಜಿಂಗ್. ಅಂದರೆ ಸಮುದ್ರದ ನೆಲವನ್ನು ತೆಗೆಯಬೇಕು. ಜವಹರಲಾಲ್ ನೆಹರು ಪೋರ್ಟ್, ಚೆನ್ನೈ ಪೋರ್ಟ್ ಬಂದರುಗಳಲ್ಲಿ ಹಡಗುಗಳು ಸುಲಭವಾಗಿ ಬರಲು ನಿರಂತರವಾಗಿ ಡ್ರೆಡ್ಜಿಂಗ್ ಮಾಡಬೇಕು. ಆದರೆ ವಿಳಿಂಜಂನಲ್ಲಿ 18-20 ಮೀಟರ್ ಸಹಜ ಆಳ ಇದೆ. ಇದು ಅತ್ಯಂತ ದೊಡ್ಡ ಕಂಟೇನರ್ ಹಡಗುಗಳಿಗೆ ಸೂಕ್ತ.

ಇಂದಿನ ವಿಶ್ವದ ದೊಡ್ಡ ಕಂಟೇನರ್ ಹಡಗುಗಳು, 18,000 TEU, 20,000 TEU, 24,000 TEUಗಳಷ್ಟಿದ್ದು, ಇವುಗಳನ್ನು Ultra Large Container Vessels (ULCV) ಎಂದು ಕರೆಯುತ್ತಾರೆ. ವಿಳಿಂಜಂ ಬಂದರು ಇವುಗಳನ್ನು ನೇರವಾಗಿ ಸ್ವೀಕರಿಸಬಲ್ಲದು. ಭಾರತಕ್ಕೆ ತನ್ನದೇ ಟ್ರಾನ್ಸ್‌ಶಿಪ್‌ಮೆಂಟ್ ಬಂದರು ಇರದ ಕಾರಣ, ಪ್ರತಿವರ್ಷ 200 ಮಿಲಿಯನ್ ಡಾಲರ್‌ಗಿಂತ ಹೆಚ್ಚು ಹಣ ವಿದೇಶಗಳಿಗೆ ಹೋಗುತ್ತದೆ. ಈ ಹಣವನ್ನು ಪಡೆಯುತ್ತಿರುವ ಪ್ರಮುಖ ಬಂದರು, ಪೋರ್ಟ್ ಕೊಲಂಬೋ ಆಗಿದೆ. ಭಾರತದ ಕಂಟೇನರ್ ಸರಕುಗಳ ಸುಮಾರು 60% ಕೊಲಂಬೋ ಮೂಲಕ ಸಾಗುತ್ತಿತ್ತು.

ನೀಲಿ ಆರ್ಥಿಕತೆ ಎಂದರೆ, ಸಮುದ್ರದ ಸಂಪನ್ಮೂಲಗಳನ್ನು ಸತತ ಅಭಿವೃದ್ಧಿಗಾಗಿ ಬಳಸುವುದು. ಇದರ ಮುಖ್ಯ ಕ್ಷೇತ್ರಗಳು, ಸಾಗರ ವ್ಯಾಪಾರ, ಮೀನುಗಾರಿಕೆ, ಸಮುದ್ರದ ಖನಿಜಗಳು, ಕರಾವಳಿ ಪ್ರವಾಸೋದ್ಯಮ, ನವೀಕರಿಸಬಹುದಾದ ಸಮುದ್ರ ಇಂಧನಗಳಾಗಿವೆ. ನೀಲಿ ಆರ್ಥಿಕತೆಯ ಪ್ರಮುಖ ಭಾಗವಾಗಿಯೂ ಈ ಬಂದರು ನಿರ್ಮಾಣಗೊಳ್ಳುತ್ತಿದೆ. ಭಾರತದಲ್ಲಿ ಇನ್ನೂ ಕೆಲವು ಮೆಗಾ ಬಂದರುಗಳು ಅಭಿವೃದ್ಧಿಯಲ್ಲಿವೆ. ವಧವನ್ ಬಂದರು, ಎನಾಯಂ ಬಂದರು, ಪಾರ್ದೀಪ್ ಈ ಬಂದರುಗಳು ಭಾರತದ ಸಾಗರ ಸಾಮರ್ಥ್ಯವನ್ನು ಹೆಚ್ಚಿಸುತ್ತವೆ.

ಬಂದರುಗಳು ಕೇವಲ ವ್ಯಾಪಾರ ಕೇಂದ್ರಗಳಲ್ಲ, ರಾಷ್ಟ್ರೀಯ ಭದ್ರತೆಯ ಕೇಂದ್ರಗಳೂ ಆಗಿವೆ. ಭಾರತೀಯ ಮಹಾಸಾಗರ ಪ್ರದೇಶದಲ್ಲಿ ಸಾಗರ ಭದ್ರತೆ ಅತ್ಯಂತ ಮಹತ್ವದ ವಿಷಯ. ಈ ಹಿನ್ನೆಲೆಯಲ್ಲಿ ಪ್ರಮುಖ ಪಾತ್ರವಹಿಸುವುದು ಭಾರತೀಯ ನೌಕಾಸೇನೆ. ಈ ಬಂದರು ಸಾಗರ ಭದ್ರತಾ ದೃಷ್ಟಿಯಿಂದಲೂ ಮಹತ್ವದ್ದಾಗಿದೆ.

ತಿರುವನಂತಪುರಂ ಭವಿಷ್ಯದಲ್ಲಿ ಒಂದು ದೊಡ್ಡ ಲಾಜಿಸ್ಟಿಕ್ಸ್ ಕೇಂದ್ರವಾಗಬಹುದು. ಈ ಪ್ರದೇಶದಲ್ಲಿ, ಗೋದಾಮುಗಳು, ಕೈಗಾರಿಕಾ ವಲಯಗಳು, ವ್ಯಾಪಾರ ಕೇಂದ್ರಗಳು ಅಭಿವೃದ್ಧಿಯಾಗಬಹುದು. ಭಾರತದ ಕಂಟೇನರ್ ಸರಕುಗಳ ದೊಡ್ಡ ಭಾಗವನ್ನು ಇತರ ದೇಶಗಳ ಬಂದರುಗಳ ಮೂಲಕವೇ ಜಗತ್ತಿಗೆ ಕಳುಹಿಸಬೇಕಾಗುತ್ತಿತ್ತು. ಈ ಹಿನ್ನೆಲೆಯಲ್ಲಿ ಭಾರತಕ್ಕೆ ಅತ್ಯಂತ ತುರ್ತಾಗಿ ಬೇಕಾಗಿದ್ದ ಮೂಲಸೌಕರ್ಯವೇ ಡೀಪ್-ವಾಟರ್ ಟ್ರಾನ್ಸ್‌ಶಿಪ್‌ಮೆಂಟ್ ಪೋರ್ಟ್. ಈ ಐತಿಹಾಸಿಕ ಅಗತ್ಯಕ್ಕೆ ಉತ್ತರವಾಗಿ ಉದಯಿಸಿದ ಬಂದರು ಎಂದರೆ, ವಿಳಿಂಜಂ ಅಂತರಾಷ್ಟ್ರೀಯ ಸೀ-ಏರ್‌ಪೋರ್ಟ್. ಇದು ಕೇವಲ ಬಂದರು ಮಾತ್ರವಲ್ಲ. ಭಾರತದ ಸಾಗರ ತಂತ್ರಜ್ಞಾನದ ಸಂಕೇತ, ಜಿಯೋ ಪೊಲಿಟಿಕಲ್ ಬದಲಾವಣೆಯ ಸೂಚನೆ, ಆರ್ಥಿಕ ಸ್ವಾವಲಂಬನೆಯ ಹೆಜ್ಜೆ, ಹಾಗೂ ಭಾರತೀಯ ಮಹಾಸಾಗರದಲ್ಲಿ ಭಾರತದ ಹೊಸ ಘೋಷಣೆ.ಟ್ರಾನ್ಸ್‌ಶಿಪ್‌ಮೆಂಟ್ ಎಂದರೆ; ಒಂದು ದೊಡ್ಡ ಹಡಗಿನಿಂದ ಸರಕುಗಳನ್ನು ಇಳಿಸಿ, ಅವುಗಳನ್ನು ಸಣ್ಣ ಹಡಗುಗಳಲ್ಲಿ ಬೇರೆ ಬೇರೆ ದೇಶಗಳಿಗೆ ಕಳುಹಿಸುವ ವ್ಯವಸ್ಥೆ. ಉದಾಹರಣೆಗೆ, ಅಮೆರಿಕದಿಂದ ದೊಡ್ಡ ಕಂಟೇನರ್ ಹಡಗು ಭಾರತಕ್ಕೆ ಬರುತ್ತದೆ. ಆದರೆ ಅದು ನೇರವಾಗಿ ಮಲೇಷ್ಯಾ, ಶ್ರೀಲಂಕಾ, ಆಫ್ರಿಕಾ, ಮಧ್ಯಪೂರ್ವ ಸೇರಿದಂತೆ ಎಲ್ಲೆಡೆ ಹೋಗುವುದಿಲ್ಲ. ಅದಕ್ಕೆ ಒಂದು ಕೇಂದ್ರ ಬಂದರು ಬೇಕಾಗುತ್ತದೆ. ಅಲ್ಲಿ ಸರಕುಗಳನ್ನು ಪುನಃ ಹಂಚಲಾಗುತ್ತದೆ. ಈ ಕೇಂದ್ರವನ್ನು ಟ್ರಾನ್ಸ್‌ಶಿಪ್‌ಮೆಂಟ್ ಹಬ್ ಎಂದು ಕರೆಯುತ್ತಾರೆ. ಭಾರತದ ಮೊದಲ ಸ್ವಾಭಾವಿಕ ಡೀಪ್-ವಾಟರ್ ಟ್ರಾನ್ಸ್‌ಶಿಪ್‌ಮೆಂಟ್ ಬಂದರು ಆಗಿದೆ. ಇದು ಮೂರು ಕಾರಣಗಳಿಂದ ವಿಶೇಷವಾಗಿದ್ದು...

1. ಸಹಜವಾಗಿ ಆಳವಾದ ಸಮುದ್ರ: ಇದು ಬಹುತೇಕ ಎಲ್ಲ ಬಂದರುಗಳ ಪ್ರಮುಖ ಸಮಸ್ಯೆಯಾಗಿದೆ. ಅಗತ್ಯಕ್ಕೆ ಬೇಕಾದ ಆಳ ಸಿಗದೇ ಇರುವುದರಿಂದ, ಸಮುದ್ರದ ನೆಲವನ್ನು ಸರಿಯಾದ ಆಳಕ್ಕೆ ಅಗೆಯಬೇಕು (ಡ್ರೆಡ್ಜಿಂಗ್). ವಿಳಿಂಜಂನಲ್ಲಿ ಸಹಜವಾಗಿ 20 ಮೀಟರ್‌ಗಿಂತ ಹೆಚ್ಚು ಆಳ ಇದೆ. ಇದು ವಿಶ್ವದ ದೊಡ್ಡ ಕಂಟೇನರ್ ಹಡಗುಗಳಿಗೆ ಸಾಕಷ್ಟು ಸ್ಥಳಾವಕಾಶವನ್ನು ನೀಡುವಂತದ್ದಾಗಿದೆ.

2. ಅಂತಾರಾಷ್ಟ್ರೀಯ ಸಾಗರ ಮಾರ್ಗಕ್ಕೆ ಹತ್ತಿರ: ವಿಶ್ವದ ಪ್ರಮುಖ ಸಾಗರ ಮಾರ್ಗವಾದ ಈಸ್ಟ್-ವೆಸ್ಟ್ ಶಿಪ್ಪಿಂಗ್ ಲೇನ್ ವಿಳಿಂಜಂ ಬಂದರಿಗೆ ಕೇವಲ 10 ನಾಟಿಕಲ್ ಮೈಲು ದೂರದಲ್ಲಿದೆ. ಅಂದರೆ ಹಡಗುಗಳು ತಮ್ಮ ಬರುವಿಕೆಯ ಮಾರ್ಗದಿಂದ ಬಹಳ ದೂರ ತಿರುಗಬೇಕಾಗುವುದಿಲ್ಲ.

3. ಮೆಗಾ ಕಂಟೇನರ್ ಹಡಗುಗಳಿಗೆ ಸೂಕ್ತ: ಇಂದು ವಿಶ್ವದಲ್ಲಿ 20,000 TEU ಸಾಮರ್ಥ್ಯದ ಹಡಗುಗಳು ಓಡಾಡುತ್ತಿವೆ. ಅವುಗಳಿಗೆ ದೊಡ್ಡ ಬಂದರು ಬೇಕು. ಇಂತಹ ಸಂದರ್ಭದಲ್ಲಿ ವಿಳಿಂಜಂ ಅತ್ಯಂತ ಸೂಕ್ತವಾದ ಬಂದರು ಎನ್ನಬಹುದು. ಜೊತೆಗೆ, ಬಂದರು ಇರುವ ಸ್ಥಳವು ತಿರುವನಂತಪುರಂ ಹತ್ತಿರವಿದ್ದು, ಭಾರತದ ದಕ್ಷಿಣ ತುದಿಯ ಆಯಕಟ್ಟಿನ ಜಾಗದಲ್ಲಿದೆ.

ಅದಾನಿ ಪೋರ್ಟ್ ಆ್ಯಂಡ್ ಸ್ಪೆಷಲ್ ಎಕಾನಾಮಿಕ್ ಝೋನ್ ಎಂಬ ಭಾರತೀಯ ಕಂಪನಿಯು ಈ ಬಂದರು ನಿರ್ಮಾಣದ ಹೊಣೆಗಾರಿಕೆ ಪಡೆದುಕೊಂಡಿತು. ಇದು ಭಾರತದ ಅತಿದೊಡ್ಡ ಖಾಸಗಿ ಬಂದರು ನಿರ್ಮಾಣ ಮತ್ತು ನಿರ್ವಹಣೆ ಸಂಸ್ಥೆಯಾಗಿದೆ. ಪಬ್ಲಿಕ್, ಪ್ರೈವೇಟ್ ಪಾಲುದಾರಿಕೆ ಮಾದರಿಯಲ್ಲಿ ಇದರ ನಿರ್ಮಾಣ ನಡೆಯುತ್ತಿದೆ. ಇದರಲ್ಲಿ ಸರ್ಕಾರ ಮತ್ತು ಖಾಸಗಿ ಕಂಪನಿಗಳು ಒಟ್ಟಾಗಿ ಯೋಜನೆ ನಡೆಸುತ್ತವೆ. ಕೇರಳ ಸರ್ಕಾರವು ಭೂಮಿ ಮತ್ತು ಮೂಲಸೌಕರ್ಯ ಒದಗಿಸಿದರೆ, ಅದಾನಿ ಪೋರ್ಟ್ ಕಂಪನಿಯು ಬಂದರು ನಿರ್ಮಾಣ ಮತ್ತು ಕಾರ್ಯಾಚರಣೆ ಹೊಣೆ ಹೊತ್ತಿದೆ.

ವಿಳಿಂಜಂ ಬಂದರು ಬಂದರು ಸಾಮರ್ಥ್ಯವು ಬಹುತೇಕ ಪ್ರತಿ ವರ್ಷ ಸುಮಾರು 1 ಮಿಲಿಯನ್ TEU '6 ಮಿಲಿಯನ... TEU (TEU ಎಂದರೆ, Twenty - foot Equivalent Unit, ಅಂದರೆ ಒಂದು ಸಾಮಾನ್ಯ ಕಂಟೇನರ್ ಎಂದರ್ಥ) ಸಾಮರ್ಥ್ಯದವರೆಗೆ ವಿಸ್ತರಿಸಬಹುದು. ಭಾರತದ ಸಾಗರ ಭವಿಷ್ಯವೆಂದೇ ಜಾಗತಿಕವಾಗಿ ಕರೆಯಬಹುದಾದ ವಿಳಿಂಜಂ ಬಂದರು ಪೂರ್ಣ ಪ್ರಮಾಣದಲ್ಲಿ ಕಾರ್ಯನಿರ್ವಹಿಸಿದರೆ, ಭಾರತವು ಟ್ರಾನ್ಸ್‌ಶಿಪ್‌ಮೆಂಟ್ ಹಬ್ ಆಗಬಹುದು, ಸಾಗರ ವ್ಯಾಪಾರದ ವೆಚ್ಚ ಕಡಿಮೆ ಆಗಬಹುದು, ಭಾರತೀಯ ಬಂದರುಗಳ ಸ್ಪರ್ಧಾತ್ಮಕತೆ ಹೆಚ್ಚಬಹುದು, ಇದು ಭಾರತದ ಸಾಗರ ಆರ್ಥಿಕತೆಯ ಹೊಸ ಅಧ್ಯಾಯ.

ಇದೆಲ್ಲದರ ನಡುವೆ ವಿಳಿಂಜಂ ಬಂದರಿನ ಇಂಜಿನಿಯರಿಂಗ್ ಅದ್ಭುತವೆಂದೇ ಹೇಳಬಹುದಾಗಿದೆ. ಸಮುದ್ರದ ಮೇಲೆ ಬಂದರು ಕಟ್ಟುವುದು ಸುಲಭವಲ್ಲ. ಇದು ಸಾಮಾನ್ಯ ಕಟ್ಟಡ ನಿರ್ಮಾಣವಲ್ಲ, ಇದು ಸಮುದ್ರದ ಸ್ವಭಾವದೊಂದಿಗೆ ಹೋರಾಟವಾಗಿದೆ. ವಿಶ್ವದ ಅನೇಕ ಮೆಗಾ ಬಂದರುಗಳ ನಿರ್ಮಾಣದಲ್ಲಿ ಸಾವಿರಾರು ಕೋಟಿ ರು. ವೆಚ್ಚವಾಗಿದೆ. ಆದರೆ ವಿಳಿಂಜಂ ಬಂದರಿನ ನಿರ್ಮಾಣದಲ್ಲಿ ಸಮುದ್ರದ ಅಲೆಗಳ ಶಕ್ತಿ, ಕರಾವಳಿ ಕ್ಷಯ (Coastal Erosion), ಬ್ರೇಕ್‌ವಾಟರ್ ನಿರ್ಮಾಣದಂತಹ ಮೂರು ಮುಖ್ಯ ಸವಾಲುಗಳು ಎದುರಾಗಿದ್ದು, ಇವುಗಳನ್ನು ಮೀರಿ ಇದು ನಿರ್ಮಾಣದ ಪೂರ್ಣತೆ ಕಾಣುವ ಕಾತುರತೆಯಲ್ಲಿದೆ.

ಈ ಬಂದರಿನ ಅತ್ಯಂತ ಪ್ರಮುಖ ಭಾಗವೆಂದರೆ ಬ್ರೇಕ್ ವಾಟರ್. ಬಂದರಿಗೆ ಬರುತ್ತಿರುವ ದೊಡ್ಡ ಅಲೆಗಳನ್ನು ತಡೆಯುವ ಕಲ್ಲಿನ ಗೋಡೆಗೆ ಬ್ರೇಕ್‌ವಾಟರ್ ಎನ್ನುತ್ತಾರೆ. ಸುಮಾರು 3 ಕಿಲೋಮೀಟರ್ ಉದ್ದದಷ್ಟು ಇಲ್ಲಿ ನಿರ್ಮಾಣಗೊಳ್ಳುತ್ತಿದೆ. ಇದಕ್ಕಾಗಿ ಬಳಸುತ್ತಿರುವ ಕಲ್ಲುಗಳು ಕೆಲವು ಕಡೆ 25-30 ಟನ್ ತೂಕ ಹೊಂದಿವೆ. ಇದು ಭಾರತದ ಇತಿಹಾಸದಲ್ಲೇ ಅತಿ ದೊಡ್ಡ ಬ್ರೇಕ್ ವಾಟರ್ ಯೋಜನೆಗಳಲ್ಲಿ ಒಂದು.

ಸಾಗರಮಾಲಾ ಯೋಜನೆ ಭಾರತ ಸರ್ಕಾರ ಆರಂಭಿಸಿದ ಮಹತ್ವದ ಯೋಜನೆಯಾಗಿದೆ. ಈ ಯೋಜನೆಯ ಉದ್ದೇಶ, ಬಂದರು ಅಭಿವೃದ್ಧಿ, ಸಾಗರ ಆರ್ಥಿಕತೆ, ಕರಾವಳಿ ಕೈಗಾರಿಕೆ ಇತ್ಯಾದಿ. ಈ ಯೋಜನೆಯಡಿಯಲ್ಲಿ 800ಕ್ಕೂ ಹೆಚ್ಚು ಯೋಜನೆಗಳು ಅಭಿವೃದ್ಧಿಯಲ್ಲಿವೆ. ಇದರ ಭಾಗವಾಗಿ, ಫೇಸ್ 1ರಲ್ಲಿ 1 ಮಿಲಿಯನ್ TEU ಸಾಮರ್ಥ್ಯ ಹಾಗೂ ಮೂಲ ಬ್ರೇಕ್‌ವಾಟರ್ ನಿರ್ಮಾಣ. ಫೇಸ್ 2ರಲ್ಲಿ ಸಾಮರ್ಥ್ಯ 3 ಮಿಲಿಯನ್ TEU ಮತ್ತು ಫೇಸ್ 3ರಲ್ಲಿ 6 ಮಿಲಿಯನ್ TEU ಸಾಮರ್ಥ್ಯವಿರುವಂತೆ ಈ ಬಂದರು ಮೂರು ಹಂತಗಳಲ್ಲಿ ನಿರ್ಮಾಣವಾಗುತ್ತಿದೆ.

ಲಾಜಿಸ್ಟಿಕ್ಸ್ ಹಬ್, ವಾಣಿಜ್ಯ ಕೇಂದ್ರ, ಕೈಗಾರಿಕಾ ವಲಯಗಳು ಬಹುಸ್ತರದಲ್ಲಿ ಅಭಿವೃದ್ಧಿಯಾಗಬಲ್ಲವು. ಸಾಗರ ವ್ಯಾಪಾರವೆಂದರೆ ಕೇವಲ ಹಡಗುಗಳ ವಿಷಯವಲ್ಲ, ಇದು ಒಂದು ದೊಡ್ಡ ಲಾಜಿಸ್ಟಿಕ್ಸ್ ವ್ಯವಸ್ಥೆಯಾಗಿದೆ. ಒಂದು ಕಂಟೇನರ್ ಬಂದರಿಗೆ ಬಂದ ನಂತರ, ಕಸ್ಟಮ್ಸ್ ಪ್ರಕ್ರಿಯೆ, ಗೋದಾಮುಗಳು, ರೈಲು ಸಂಪರ್ಕ, ರಸ್ತೆ ಸಂಪರ್ಕ, ಕೈಗಾರಿಕಾ ವಲಯ ಇವೆಲ್ಲವೂ ಅಗತ್ಯ. ಈ ವ್ಯವಸ್ಥೆಯನ್ನು ಬಂದರು ನೇತೃತ್ವದ ಅಭಿವೃದ್ಧಿ ಎಂದು ಕರೆಯುತ್ತಾರೆ. ಒಂದು ದೊಡ್ಡ ಬಂದರು ನೂರಾರು ಕೈಗಾರಿಕೆಗಳಿಗೆ ಕಾರಣವಾಗುತ್ತದೆ. ಈ ಬಂದರು ಅಭಿವೃದ್ಧಿಯಾದ ನಂತರ, ಸಾವಿರಾರು ನೇರ ಉದ್ಯೋಗಗಳು, ಲಕ್ಷಾಂತರ ಪರೋಕ್ಷ ಉದ್ಯೋಗಗಳು ಸೃಷ್ಟಿಯಾಗಬಹುದು. ಲಾಜಿಸ್ಟಿಕ್ಸ್, ಸಾರಿಗೆ, ವ್ಯಾಪಾರ ಕ್ಷೇತ್ರಗಳು ವೇಗವಾಗಿ ಬೆಳೆಯಬಹುದು.

ಭಾರತವು ಪ್ರಾಚೀನ ಕಾಲದಲ್ಲಿ ಸಾಗರ ವ್ಯಾಪಾರದಲ್ಲಿ ದೊಡ್ಡ ಶಕ್ತಿಯಾಗಿತ್ತು. ಚೋಳರ ಕಾಲದಲ್ಲಿ ಭಾರತೀಯ ನೌಕಾಪಡೆ ದಕ್ಷಿಣ ಪೂರ್ವ ಏಷ್ಯಾದವರೆಗೆ ಸಾಗಿತ್ತು. 21ನೇ ಶತಮಾನದಲ್ಲಿ ಭಾರತ ಮತ್ತೆ ಸಾಗರಶಕ್ತಿಯಾಗುವ ಕನಸು ಕಾಣುತ್ತಿದೆ. ಸಾಗರ ಯೋಜನೆಯು ಅಭಿವೃದ್ಧಿ ಭಾರತದ ಕನಸಿನ ಸಂಕೇತವಾಗಿದ್ದು, ಮುಂದಿನ ದಿನಗಳಲ್ಲಿ ವಿಳಿಂಜಂ ಬಂದರು ಸಂಪೂರ್ಣ ಅಭಿವೃದ್ಧಿಯಾದರೆ, ಇದು ದಕ್ಷಿಣ ಏಷ್ಯಾದ ಪ್ರಮುಖ ಟ್ರಾನ್ಸ್‌ಶಿಪ್‌ಮೆಂಟ್ ಹಬ್, ಭಾರತೀಯ ಮಹಾಸಾಗರದ ಪ್ರಮುಖ ವ್ಯಾಪಾರ ಕೇಂದ್ರ, ಭಾರತದ ಸಾಗರ ಆರ್ಥಿಕತೆಯ ಪ್ರಮುಖ ಆಧಾರಸ್ತಂಭ ಆಗುವುದರಲ್ಲಿ ಅನುಮಾನವಿಲ್ಲ. ಸಮುದ್ರ ಎಂದರೆ ಕೇವಲ ನೀರಿನ ವ್ಯಾಪ್ತಿ ಅಲ್ಲ. ಅದು ವ್ಯಾಪಾರ, ಅದು ತಂತ್ರಜ್ಞಾನ, ಅದು ಜಿಯೋ ಪೊಲಿಟಿಕ್ಸ್, ಅದು ರಾಷ್ಟ್ರಗಳ ಭವಿಷ್ಯ.

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:11, Issue:56

ಸಮಾಚಾರ ಸಣ್ಣದಲ್ಲ

ಮುರಿದ್ ವಾಯುನೆಲೆ ಮುಖ್ಯ ಕಟ್ಟಡ ನೆಲಸಮ



ಇಸ್ಲಾಮಾಬಾದ್: ಆಪರೇಷನ್ ಸಿಂಧೂರ್ ಬಾಂಬ್ ದಾಳಿಯಿಂದ ಹಾನಿಗೀಡಾಗಿದ್ದ ಪಾಕಿಸ್ತಾನದ ವಾಯುಪಡೆಯ 'ಮುರಿದ್ ವಾಯು ನೆಲೆ'ಯಲ್ಲಿನ ಪ್ರಧಾನ ಕಟ್ಟಡವನ್ನು ದುರಸ್ತಿ ಮಾಡಲು ಯತ್ನಿಸಿ ವಿಫಲವಾದ ಪಾಕ್ ವಾಯುಪಡೆ ಈಗ ಇಡೀ ಕಟ್ಟಡವನ್ನೇ ನೆಲಸಮ ಮಾಡಿದೆ. ಪಾಕ್‌ನ ಚಕ್ವಾಲ್ ಬಳಿ ಇರುವ ಪ್ರಧಾನ ಮುರಿದ್ ವಾಯುನೆಲೆಯಲ್ಲಿನ ಪ್ರಮುಖ ಕಮಾಂಡ್ ಮತ್ತು ನಿಯಂತ್ರಣ ಕೇಂದ್ರದ ಮೇಲೆಯೇ ಭಾರತದ ವಾಯುಪಡೆ ಯುದ್ಧ ವಿಮಾನಗಳು ಗುರಿಯಿಟ್ಟು ಕ್ಷಿಪಣಿ ಪ್ರಯೋಗಿಸಿದ್ದರಿಂದ ಕಟ್ಟಡದ ತಾರಸಿ ಸೇರಿದಂತೆ ಹಲವು ಭಾಗ ಹಾನಿಗೀಡಾಗಿತ್ತು. ಅದನ್ನು ದುರಸ್ತಿ ಮಾಡಿಸಿ ಮೊದಲಿನಂತೆ ಮಾಡಲು ತಿಂಗಳುಗಳ ಕಾಲ ಯತ್ನಿಸಿದ ವಾಯುಪಡೆ ಸಿವಿಲ್ ಎಂಜಿನಿಯರ್‌ಗಳು ಕಡೆಗೆ ವಿಫಲರಾದರು. ಅನ್ಯಮಾರ್ಗವಿಲ್ಲದೇ ಇಡೀ ಕಟ್ಟಡವನ್ನು ತೆರವು ಮಾಡಿದೆ ನೆಲಸಮ ಮಾಡಲಾಗಿದೆ ಎಂದು ಪಾಕ್‌ನ ಖಾಸಗಿ ಸುದ್ದಿವಾಹಿನಿ ವರದಿ ಮಾಡಿದೆ. ಸಿಂಧೂರ್ ದಾಳಿ ಬಳಿಕ ಈ ಕಟ್ಟಡವನ್ನು ಟಾರ್ಪಾಲ್‌ನಿಂದ ಮುಚ್ಚಲಾಗಿತ್ತು. ಬಳಿಕ ದುರಸ್ತಿ ಕಾರ್ಯ ಆರಂಭಿಸಲಾಗಿತ್ತು. 10 ತಿಂಗಳಾದರೂ ಸರಿಯಾಗಿ ದುರಸ್ತಿ ಮಾಡಲು ಆಗಲಿಲ್ಲ ಎಂದು ವರದಿಯಾಗಿದೆ.

ಶಿವಪ್ರತಾಪ್ ಶುಕ್ಲಾ ತೆಲಂಗಾಣ ರಾಜ್ಯಪಾಲ



ಹೈದರಾಬಾದ್: ತೆಲಂಗಾಣ ರಾಜ್ಯದ ರಾಜ್ಯಪಾಲರಾಗಿ ಶಿವಪ್ರತಾಪ್ ಶುಕ್ಲಾ ಅವರನ್ನು ಕೇಂದ್ರ ಸರಕಾರದ ಶಿಫಾರಸಿನ ಮೇರೆಗೆ ರಾಷ್ಟ್ರಪತಿಗಳು ನೇಮಕ ಮಾಡಿದ್ದು, ಶುಕ್ಲಾ ಅವರು ಬುಧವಾರ ಬೆಳಗ್ಗೆ ಹೈದರಾಬಾದ್ ರಾಜಭವನದಲ್ಲಿ ನಡೆದ ಸರಳ ಸಮಾರಂಭದಲ್ಲಿ ಅಧಿಕಾರ ಸ್ವೀಕರಿಸಿದರು. ತೆಲಂಗಾಣ ಹೈಕೋರ್ಟ್ ಮುಖ್ಯನ್ಯಾಯಮೂರ್ತಿ ಅಪರೇಶ್ ಕುಮಾರ್ ಸಿಂಗ್ ಅವರು ಶುಕ್ಲಾ ಅವರಿಗೆ ಪ್ರತಿಜ್ಞಾವಿಧಿ ಬೋಧಿಸಿದರು. ಶುಕ್ಲಾ ಅವರು ಈ ಹಿಂದೆ ಕೇಂದ್ರ ಸಚಿವರಾಗಿದ್ದರು, ಹಿಮಾಚಲ ಪ್ರದೇಶದಲ್ಲಿ ರಾಜ್ಯಪಾಲರಾಗಿದ್ದರು. ಈ ಸಂದರ್ಭ ತೆಲಂಗಾಣ ಮುಖ್ಯಮಂತ್ರಿ ರೇವಂತ್ ರೆಡ್ಡಿ, ಉಪ ಮುಖ್ಯಮಂತ್ರಿ ಭಟ್ಟಿ ವಿಕ್ರಮಾರ್ಕ ಮಲ್ಲು ಮತ್ತು ಸಚಿವ ಸಂಪುಟ ಸಹೋದ್ಯೋಗಿಗಳು, ರಾಜ್ಯ ಸರಕಾರದ ಉನ್ನತ ಶ್ರೇಣಿ ಅಧಿಕಾರಿಗಳು ಉಪಸ್ಥಿತರಿದ್ದರು.

ಸುಳ್‌ಸುದ್ದಿ ತಡೆ ಕಾಯ್ದೆ ಸುಪ್ರೀಂಗೆ ಮೇಲ್ಮನವಿ

ದೆಹಲಿ: ಸರಕಾರದ ವಿರುದ್ಧ ನಕಲಿ ಅಥವಾ ಸುಳ್ಳು ಸುದ್ದಿಗಳನ್ನು ಸಾಮಾಜಿಕ ಜಾಲತಾಣದಲ್ಲಿ ಹರಡುವವರನ್ನು ನಿಯಂತ್ರಿಸಲೆಂದೇ ಕೇಂದ್ರ ಸರಕಾರ 'ಮಾಹಿತಿ ತಂತ್ರ ಜ್ಞಾನ(ತಿದ್ದುಪಡಿ) ಕಾಯಿದೆ- 2023' ಜಾರಿಗೆ ತಂದಿತ್ತು. ಅದನ್ನು ವಿರೋಧಿಸಿ ಹಾಸ್ಯ ಕಲಾವಿದ ಕುನಾಲ್ ಕಮ್ರಾ, 'ಎಡಿಟರ್ಸ್ ಗಿಲ್ಡ್ ಆಫ್ ಇಂಡಿಯ', ಮತ್ತು ಅಸೋಸಿಯೇಷನ್ ಆಫ್ ಇಂಡಿಯನ್ ಮ್ಯಾಗಜಿನ್ ಮುಂಬೈ ಹೈಕೋರ್ಟ್‌ನಲ್ಲಿ ತಕರಾರು ಅರ್ಜಿ ಸಲ್ಲಿಸಿದ್ದರು. ಈ ಕಾಯಿದೆ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಮೊಟಕುಗೊಳಿಸುತ್ತದೆ. ಈ ಕಾಯಿದೆ, ತನ್ನ ಬಗೆಗಿನ ಟೀಕೆಗಳನ್ನು ನಿಯಂತ್ರಿಸಲು ಸರಕಾರವೇ ನ್ಯಾಯಾಧೀಶ ಆಗುವಂತಿದೆ ಎಂದು ಆಕ್ಷೇಪ ವ್ಯಕ್ತಪಡಿಸಿ ಹೈಕೋರ್ಟ್ 2024ರಲ್ಲಿ ಕಾಯಿದೆಯನ್ನು ರದ್ದುಗೊಳಿಸಿತ್ತು. ಮುಂಬೈ ಹೈಕೋರ್ಟ್ ತೀರ್ಪಿನ ವಿರುದ್ಧ ಕೇಂದ್ರ ಸರಕಾರ ಮೇಲ್ಮನವಿ ಸಲ್ಲಿಸಿದ್ದು, ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಅವರ ನೇತೃತ್ವದ ತ್ರಿಸದಸ್ಯ ಪೀಠ ಅರ್ಜಿಯನ್ನು ವಿಚಾರಣೆಗೆ ಅಂಗೀಕರಿಸಿದೆ. ಈ ಸಂಬಂಧ ಕುನಾಲ್ ಕಮ್ರಾ, 'ಎಡಿಟರ್ಸ್ ಗಿಲ್ಡ್ ಆಫ್ ಇಂಡಿಯ', ಮತ್ತು ಅಸೋಸಿಯೇಷನ್ ಆಫ್ ಇಂಡಿಯನ್ ಮ್ಯಾಗಜಿನ್ ಪ್ರತಿನಿಧಿಗಳಿಗೆ ಪ್ರತಿಕ್ರಿಯೆ ಸಲ್ಲಿಸಲು ಸೂಚಿಸಿ ನೋಟಿಸ್ ಜಾರಿಗೊಳಿಸಿದೆ. ಹೈಕೋರ್ಟ್ ತೀರ್ಪಿಗೆ ಮಧ್ಯಂತರ ತಡೆಯಾಜ್ಞೆ ನೀಡಲು ನಿರಾಕರಿಸಿದೆ.

ಯುದ್ಧಕ್ಕೆ ಬ್ಯಾಂಕರ್ ಬಲಿ

ಟೆಹರಾನ್: ಅಮೆರಿಕ-ಇಸ್ರೇಲ್ ನಡೆಸುತ್ತಿರುವ ಜಂಟಿ ದಾಳಿಯಲ್ಲಿ ಟೆಹರಾನ್‌ನಲ್ಲಿರುವ ಬ್ಯಾಂಕ್ ಶಾಖೆಯೊಂದರ ಸಿಬ್ಬಂದಿ ಬುಧವಾರ ಸಾವಿಗೀಡಾಗಿದ್ದಾರೆ. ಇದಕ್ಕೆ ಪ್ರತಿಕಾರವಾಗಿ ಇರಾನ್‌ನ ಐಆರ್‌ಜಿಸಿ ಕೂಡಾ ನೆರೆಯ ಗಲ್ಫ್ ದೇಶಗಳಲ್ಲಿನ ಬ್ಯಾಂಕುಗಳು ಮತ್ತು ಹಣಕಾಸು ಸಂಸ್ಥೆಗಳತ್ತ ಗುರಿಯಿರಿಸಿ ದಾಳಿ ಮಾಡಲಾರಂಭಿಸಿದೆ ಎಂದು ಇರಾನ್ ಜಂಟಿ ಮಿಲಿಟರಿ ಕಮಾಂಡ್ ಹೇಳಿರುವುದಾಗಿ ಇರಾನ್ ಮಾಧ್ಯಮಗಳು ವರದಿ ಮಾಡಿವೆ. ಇರಾನ್‌ನ ಈ ಬೆದರಿಕೆ ವಿಶೇಷವಾಗಿ ದುಬೈಗೆ ಅಪಾಯ ತಂದಿದೆ. ಏಕೆಂದರೆ ದುಬೈ ನಗರಗಳು ಅನೇಕ ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆಗಳಿಗೆ ನೆಲೆಯಾಗಿವೆ.

{ ಪ್ರಿಯಾಂಕಾ ವಾದ್ರಾ } ಕಾಂಗ್ರೆಸ್ ಸಂಸದೆ

10 ವರ್ಷದಲ್ಲಿ ಎಲ್ಲಾ ಜೀವನಾವಶ್ಯಕ ಸಾಮಗ್ರಿಗಳು ತುಟ್ಟಿಯಾಗಿವೆ. ನಿರುದ್ಯೋಗ ಸಮಸ್ಯೆ ಹೆಚ್ಚುತ್ತಲೇ ಇದೆ. ಈಗ ಎಲ್‌ಪಿಜಿ ಸಿಲಿಂಡರ್ ಕೊರತೆ. ಇದೆಲ್ಲವೂ ಕೇಂದ್ರ ಸರಕಾರದ ಇಂಥ ಕೆಟ್ಟ ಆಡಳಿತದ ಪರಿಣಾಮ. ಜನರು ಎಷ್ಟು ಎಂದು ಸಹಿಸಿಕೊಳ್ಳಲು ಸಾಧ್ಯ? ಜನರ ತಾಳ್ಮೆ ಬಗ್ಗೆ ನನಗೇ ಆಶ್ಚರ್ಯವಾಗುತ್ತದೆ. ಈ ಸಮಸ್ಯೆಗಳನ್ನೆಲ್ಲಾ ಸಂಸತ್ತಿನಲ್ಲಿ ಚರ್ಚೆ ಮಾಡುವೆ.

ಥಾಯ್ಲೆಂಡ್ ನೌಕೆ ಮೇಲೆ ಇರಾನ್ ದಾಳಿ | ಹೊತ್ತಿ ಉರಿದ ನೌಕೆ: 20 ಸಿಬ್ಬಂದಿ ರಕ್ಷಣೆ | ಕಣ್ಮರೆಯಾಗಿದ್ದ ಮೂವರಲ್ಲಿ ಇಬ್ಬರ ಸಾವು | ಮತ್ತೊಬ್ಬ ನಾಪತ್ತೆ

ಇರಾನ್ ಯುದ್ಧ ದಿನ-12: ಭಾರತೀಯರಿಬ್ಬರು ಬಲಿ

ಟೆಹರಾನ್/ದೆಹಲಿ: ಇರಾನ್ ವಿರುದ್ಧ ಅಮೆರಿಕ ಮತ್ತು ಇಸ್ರೇಲ್ ಜಂಟಿಯಾಗಿ ಫೆ.28ರಂದು ಆರಂಭಿಸಿದ ಯುದ್ಧ ಬುಧವಾರ 12ನೇ ದಿನಕ್ಕೆ ಕಾಲಿಟ್ಟಿದೆ. ಈ ಮಧ್ಯೆ, ಯುದ್ಧದ ಕಾರಣವಾಗಿ ಅಮಾಯಕ ಭಾರತೀಯರೂ ಬಲಿಯಾಗಿರುವ ಸುದ್ದಿ ಬಂದಿದೆ.

ಭಾರತದತ್ತ ಬರುತ್ತಿದ್ದ ಥಾಯ್ಲೆಂಡ್ ಧ್ವಜವಿದ್ದ ಸರಕು ಸಾಗಣೆ ಮಾಡುವ ಕಮರ್ಷಿಯಲ್ ಷಿಪ್(ವಾಣಿಜ್ಯ ನೌಕೆ) ಮೇಲೆ ಬುಧವಾರ ದಾಳಿಯಾಗಿದ್ದು, ನೌಕೆ ಹೊತ್ತಿ ಉರಿದಿದೆ. ಈ ಸಂದರ್ಭ ಸರಕು ಸಾಗಣೆ ನೌಕೆಯಲ್ಲಿ 23 ಸಿಬ್ಬಂದಿಗಳಿದ್ದರು. ಅವರಲ್ಲಿ 20 ಮಂದಿಯನ್ನು ರಕ್ಷಣೆ ಮಾಡಲಾಗಿದೆ. ಮೂವರು ಕಣ್ಮರೆಯಾಗಿದ್ದವರಲ್ಲಿ ಇಬ್ಬರ ಮೃತದೇಹಗಳು ವ್ಯಾಪಕ ಶೋಧದ ನಂತರ ಕಡಲಿನಲ್ಲಿ ಸಿಕ್ಕಿವೆ. ಮೃತರು ಇಬ್ಬರೂ ಭಾರತೀಯ ಪ್ರಜೆಗಳು ಎಂಬುದು ದೃಢಪಟ್ಟಿದೆ. ಕಣ್ಮರೆಯಾಗಿರುವ ಮತ್ತೊಬ್ಬ ವ್ಯಕ್ತಿಯೂ ಭಾರತೀಯ ಎಂಬ ಮಾಹಿತಿ ಲಭ್ಯವಾಗಿದೆ.

ಥಾಯ್ಲೆಂಡ್ ಧ್ವಜವಿದ್ದ 'ಮಯೂರಿ ನಾರಿ' ಹೆಸರಿನ ಸರಕು ಸಾಗಣೆ ನೌಕೆಯ ಮೇಲೆ ಬುಧವಾರ ಮಧ್ಯಾಹ್ನ ಬಾಂಬ್ ದಾಳಿ ನಡೆದಿದೆ. ನೌಕೆ ಹೊತ್ತಿ ಉರಿಯಲಾರಂಭಿಸಿದಾಗ ಒಳಗಿದ್ದ ಸಿಬ್ಬಂದಿಗಳು 'ರಕ್ಷಣೆಗಾಗಿ ಸಂದೇಶ' ರವಾನಿಸಿದ್ದಾರೆ. ಸಮೀಪದಲ್ಲೇ ಇದ್ದ ಒಮಾನ್ ದೇಶದ ರಕ್ಷಣಾ ಸಿಬ್ಬಂದಿಗಳಿದ್ದ ಕರಾವಳಿ ಕಾವಲು ದೋಣಿಗಳು ಸ್ಥಳಕ್ಕೆ ಧಾವಿಸಿ ಹೊತ್ತಿ ಉರಿಯುತ್ತಿದ್ದ ಹಡಗಿನಿಂದ 20 ಸಿಬ್ಬಂದಿಗಳನ್ನು ರಕ್ಷಣೆ ಮಾಡಿವೆ. ಈ ವೇಳೆ ಮೂವರು ಸಿಬ್ಬಂದಿ ಕಾಣೆಯಾಗಿರುವುದು ಉಳಿದ ಸಿಬ್ಬಂದಿಗಳು ನೀಡಿದ ಮಾಹಿತಿಯಿಂದ ತಿಳಿದುಬಂದಿದೆ. ತಕ್ಷಣವೇ ಶೋಧ ಕಾರ್ಯ ಆರಂಭಿಸಲಾಗಿದ್ದು, ಸಂಜೆಯ ವೇಳೆಗೆ(ಭಾರತದ ಕಾಲಮಾನ) ಇಬ್ಬರ ಮೃತದೇಹಗಳು ಸಿಕ್ಕಿವೆ. ಮೃತರಿಬ್ಬರೂ ಮರ್ಚೆಂಟ್ ಷಿಪ್‌ನ ಭಾರತೀಯ ಸಿಬ್ಬಂದಿಗಳು ಎಂಬುದು ದೃಢಪಟ್ಟಿದೆ.

ಥಾಯ್ಲೆಂಡ್ ತೈಲ ಸಾಗಣೆ ನೌಕೆ ಹರ್ಮುಝ್ ಜಲಸಂಧಿ ಬಳಿ ಬುಧವಾರ ಬೆಳಗ್ಗೆ ದಾಳಿಗೊಳಗಾಗಿದ್ದು, ಹೊತ್ತಿ ಉರಿದಿದೆ.

ಭಾರತ-ಇರಾನ್ ವಿದೇಶಾಂಗ ಸಚಿವರ ಚರ್ಚೆ

ಈ ಮಧ್ಯೆ, ವಿದೇಶಾಂಗ ಸಚಿವ ಎಸ್.ಜೈಶಂಕರ್ ಅವರು ಇರಾನ್‌ನ ವಿದೇಶಾಂಗ ಸಚಿವ ಸಯ್ಯದ್ ಅಬ್ಬಾಸ್ ಅರಾಘ್ಚಿ ಅವರಿಗೆ ಮಂಗಳವಾರ ದೂರವಾಣಿ ಕರೆ ಮಾಡಿ ದೀರ್ಘ ಮಾತುಕತೆ ನಡೆಸಿದ್ದಾರೆ. ಇಬ್ಬರೂ ಸಚಿವರ ಮಾತಿನಲ್ಲಿ ಪರ್ಷಿಯನ್ ಕೊಲ್ಲಿ ಮತ್ತು ಹರ್ಮುಝ್ ಜಲಸಂಧಿಯಲ್ಲಿನ ಬಿಕ್ಕಟ್ಟಿನ ವಿಚಾರವೇ ಪ್ರಮುಖವಾಗಿ ಪ್ರಸ್ತಾಪವಾಗಿದೆ. ಭಾರತದಲ್ಲಿನ ಅನಿಲ ಮತ್ತು ತೈಲ ಸಮಸ್ಯೆಯನ್ನೂ ಚರ್ಚಿಸಿದ್ದಾರೆ. ಪರ್ಷಿಯನ್ ಕೊಲ್ಲಿ ಮತ್ತು

ಹರ್ಮುಝ್ ಜಲಸಂಧಿಯಲ್ಲಿ ಸಿಲುಕಿಕೊಂಡಿರುವ ಭಾರತಕ್ಕೆ ಕಚ್ಚಾತೈಲ ಮತ್ತು ಸರಕು ಸಾಗಣೆ ಮಾಡುತ್ತಿದ್ದ ನೌಕೆಗಳನ್ನು ಸಂಕಷ್ಟದಿಂದ ಮುಕ್ತಗೊಳಿಸುವ ಬಗೆ ಕುರಿತು ಇಬ್ಬರೂ ಸಚಿವರು ಚರ್ಚಿಸಿದ್ದಾರೆ ಎಂದು ತಿಳಿದುಬಂದಿದೆ.'ಭಾರತದ ವಿದೇಶಾಂಗ ಸಚಿವ ಮಿತ್ರ ಸುಬ್ರಮಣಿಯಂ ಜೈಶಂಕರ್ ಅವರು ಇರಾನ್ ವಿದೇಶಾಂಗ ಸಚಿವ ಸಯ್ಯದ್ ಅಬ್ಬಾಸ್ ಅವರಿಗೆ ದೂರವಾಣಿ ಕರೆ ಮಾಡಿದ್ದರು. ಪ್ರಾದೇಶಿಕ ಸಮಸ್ಯೆಗಳ ವಿಚಾರವಾಗಿ ಚರ್ಚಿಸಿದರು. ಅಮೆರಿಕ-ಇಸ್ರೇಲ್ ದಾಳಿಯಿಂದ ಇರಾನ್‌ನಲ್ಲಾಗಿರುವ ಹಾನಿ, ಮಕ್ಕಳು ಸೇರಿದಂತೆ 150ಕ್ಕೂ ಅಧಿಕ ಜೀವಬಲಿಯಾಗಿರುವುದನ್ನು ವಿವರಿಸಿದರು' ಎಂದು ಇರಾನ್‌ನ ವಿದೇಶಾಂಗ ಸಚಿವಾಲಯವೂ 'ಎಕ್ಸ್' ಖಾತೆಯಲ್ಲಿ ಹೇಳಿಕೊಂಡಿದೆ.ಇದರ ಬೆನ್ನಲ್ಲೇ, ಭಾರತೀಯ ನೌಕಾಪಡೆಯ ಹಲವು ಕಾವಲು ನೌಕೆಗಳು ಹರ್ಮುಝ್ ಜಲಸಂಧಿಯತ್ತ ಬುಧವಾರ ಪ್ರಯಾಣ ಬೆಳೆಸಿವೆ. ಹರ್ಮುಝ್ ಜಲಸಂಧಿಯಲ್ಲಿ ಸಿಲುಕಿಕೊಂಡಿರುವ ಭಾರತಕ್ಕೆ ಕಚ್ಚಾತೈಲ ತರುತ್ತಿದ್ದ ಕೆಲವು ನೌಕೆಗಳು ಮತ್ತು ಹತ್ತಾರು ಸರಕು ಸಾಗಣೆ ವಾಣಿಜ್ಯ ಉದ್ದೇಶದ ಹಡಗುಗಳ ರಕ್ಷಣೆಗಾಗಿ ಮತ್ತು ಅವನ್ನು ಭಾರತದತ್ತ ಕರೆತರುವುದಕ್ಕಾಗಿಯೇ ಈ ಕಾವಲು ನೌಕೆಗಳು ತೆರಳಿವೆ ಎಂದು ವರದಿಯಾಗಿದೆ.

ದುಬೈ ವಿ.ನಿಲ್ದಾಣಕ್ಕೆ ಡ್ರೋನ್ ದಾಳಿ: ಭಾರತೀಯ ಸೇರಿ ನಾಲ್ವರಿಗೆ ಗಾಯ

ದುಬೈ: ಅಮೆರಿಕ ಮತ್ತು ಇಸ್ರೇಲ್ ಸೇನೆಗಳು ಇರಾನ್ ಮೇಲೆ ದಾಳಿ ಮಾಡುವುದಕ್ಕೆ ಕೊಲ್ಲಿ ರಾಷ್ಟ್ರಗಳು ನೆರವಾಗುತ್ತಿವೆ ಎಂಬ ಕಾರಣಕ್ಕೇ ಗಲ್ಫ್ ದೇಶಗಳ ದಾಳಿ ಇರಾನ್ ಬುಧವಾರವೂ ದಾಳಿ ಮುಂದುವರೆಸಿತು. ದುಬೈನಲ್ಲಿನ ಅಂತಾರಾಷ್ಟ್ರೀಯ ವಿಮಾನ

ನಿಲ್ದಾಣದ ಮೇಲೆ 4 ಡ್ರೋನ್‌ಗಳ ಮೂಲ ದಾಳಿ ನಡೆಸಿದೆ. ಹಾಗಿದ್ದರೂ ವಿಮಾನ ಸಂಚಾರ ಮುಂದುವರೆದಿದೆ ಎಂದು ದುಬೈ ಸರ್ಕಾರ ತಿಳಿಸಿದೆ.ದುಬೈ ವಿಮಾನ ನಿಲ್ದಾಣದ ಮೇಲೆ 4 ಡ್ರೋನ್‌ಗಳು ಅಪ್ಪಳಿಸಿದ್ದರಿಂದ ನಿಲ್ದಾಣದ ಕೆಲವೆಡೆ ಭಾರೀ ಸ್ಫೋಟವಾಗಿದ್ದು, ಬೆಂಕಿ ಹೊತ್ತಿ ಉರಿಯಲಾರಂಭಿಸಿದೆ. ಪರಿಣಾಮ ವಿಮಾನ ನಿಲ್ದಾಣದಲ್ಲಿದ್ದ ಒಬ್ಬ ಭಾರತೀಯ ಸೇರಿದಂತೆ ನಾಲ್ವರು ಗಾಯಗೊಂಡಿದ್ದಾರೆ.ವಿಮಾನ ನಿಲ್ದಾಣಕ್ಕೆ ಅಪ್ಪಳಿಸಿದ 4 ಡ್ರೋನ್‌ಗಳು ಸ್ಫೋಟಕ್ಕೆ ಕಾರಣವಾಗಿದ್ದು, ನಿಲ್ದಾಣಕ್ಕೆ ಭಾರೀ ಹಾನಿಯಾಗಿದೆ. ನಿಲ್ದಾಣದ ಕೆಲವು ಭಾಗಗಳಲ್ಲಿ ಬೆಂಕಿ ಹೊತ್ತಿ ಉರಿದಿದ್ದು, ಆಕಾಶದೆತ್ತರಕ್ಕೆ ಹೊಗೆ ಚಿಮ್ಮಿದೆ. ಗಾಯಗೊಂಡವರಲ್ಲಿ ಒಬ್ಬರು ಭಾರತದವರು. ಇಬ್ಬರು ಘಾನಾ ದೇಶದ ಪ್ರಜೆಗಳು, ಮತ್ತೊಬ್ಬ ಬಾಂಗ್ಲಾದೇಶಿ ಪ್ರಜೆ. ಭಾರತೀಯ ವ್ಯಕ್ತಿಗೆ ಸಣ್ಣಪುಟ್ಟ ಗಾಯಗಳಾಗಿವೆ. ಉಳಿದ ಮೂವರಿಗೂ ಗಂಭೀರ ಗಾಯಗಳಾಗಿವೆ. ನಾಲ್ವರನ್ನೂ ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಲಾಗಿದೆ ಎಂದು ದುಬೈ ವಿಮಾನ ನಿಲ್ದಾಣದ ಅಧಿಕಾರಿಗಳು ತಿಳಿಸಿದ್ದಾರೆ.

'ಅಮೆರಿಕ ಫಸ್ಟ್' ತೈಲ ಘಟಕಕ್ಕೆ ರಿಲಯನ್ಸ್ ದೊಡ್ಡ ಹೂಡಿಕೆ

ವಾಷಿಂಗ್ಟನ್: ಭಾರತದ ರಿಲಯನ್ಸ್ ಇಂಡಸ್ಟ್ರೀಸ್ ಲಿ.(ಆರ್‌ಐಎಲ್) ಕಂಪನಿ ಅಮೆರಿಕದ ಟೆಕ್ಸಾಸ್ ರಾಜ್ಯದಲ್ಲಿ ನಿರ್ಮಾಣವಾಗಲಿರುವ ಹೊಸ ತೈಲ ಸಂಸ್ಕರಣಾ ಘಟಕಕ್ಕೆ(10 ಅಂಕಿಗಳಷ್ಟು) ದೊಡ್ಡ ಮೊತ್ತವನ್ನು ಹೂಡಿಕೆ ಮಾಡಲಿದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ.

'ಅಮೆರಿಕ ಫಸ್ಟ್ ರಿಫೈನಿಂಗ್' ಕಂಪನಿ ಟೆಕ್ಸಾಸ್ ರಾಜ್ಯದ ಬೌನ್ಸ್‌ವಿಲ್ಲೆ ಎಂಬಲ್ಲಿ 30,000 ಕೋಟಿ ಡಾಲರ್(27.56 ಲಕ್ಷ ಕೋಟಿ ರು.) ವೆಚ್ಚದಲ್ಲಿ ಹೊಸ ಕಚ್ಚಾತೈಲ ಸಂಸ್ಕರಣಾ ಘಟಕ ನಿರ್ಮಿಸುತ್ತಿದೆ. ಇದು ಅಮೆರಿಕದ ಇತಿಹಾಸದಲ್ಲೇ ಅತಿದೊಡ್ಡ ಕಚ್ಚಾತೈಲ ಸಂಸ್ಕರಣಾ ಘಟಕ ಎನಿಸಿಕೊಳ್ಳಲಿದೆ. ಟೆಕ್ಸಾಸ್‌ನಲ್ಲಿ 50 ವರ್ಷಗಳ ಬಳಿಕ ತೈಲ ಸಂಸ್ಕರಣಾ ಘಟಕ ತೆರೆಯಲಾಗುತ್ತಿದ್ದು, ಈ ಘಟಕಕ್ಕೆ ಸರಕಾರದ ಪೂರ್ಣ ಬೆಂಬಲವಿದೆ ಎಂದು ಟ್ರಂಪ್ ತಿಳಿಸಿದ್ದಾರೆ.

ಅಮೆರಿಕದ ಕಾರ್ಮಿಕರು, ಇಂಧನ ಕ್ಷೇತ್ರ ಮತ್ತು ದಕ್ಷಿಣ ಟೆಕ್ಸಾಸ್‌ನ ಮಹಾಜನರ ದೊಡ್ಡ ಮಟ್ಟದ ಸಾಧನೆ ಇದಾಗಿರಲಿದೆ. ದೊಡ್ಡ ಮಟ್ಟದ ಹೂಡಿಕೆಗಾಗಿ ಭಾರತದ ಪಾಲುದಾರ-ಅತಿದೊಡ್ಡ ಖಾಸಗಿ ಇಂಧನ ಕಂಪನಿ ರಿಲಯನ್ಸ್‌ಗೆ ಧನ್ಯವಾದ ಎಂದು ಟ್ರಂಪ್ 'ಟ್ರೂತ್' ಖಾತೆಯಲ್ಲಿ ಬರೆದಿದ್ದಾರೆ.

ಅಮೆರಿಕ ಸರಕಾರ ತೆರಿಗೆ ಪ್ರಮಾಣ ಕಡಿಮೆ ಮಾಡುತ್ತಿರುವುದರಿಂದ ದೇಶಕ್ಕೆ ನೂರಾರು ಕೋಟಿ ಡಾಲರ್‌ಗಳ ಹೂಡಿಕೆ ಹರಿದು ಬರುತ್ತಿದೆ. ಈ ಘಟಕದಿಂದ ಅಮೆರಿಕದ ಇಂಧನ ಉತ್ಪಾದನೆ ಹೆಚ್ಚಲಿದೆ. ಇದು ವಿಶ್ವದ ಅತ್ಯಂತ ಸ್ವಚ್ಛ ಸಂಸ್ಕರಣಾಗಾರವಾಗಲಿದೆ. ರಫ್ತು ವಹಿವಾಟಿಗೆ ಶಕ್ತಿ ತುಂಬುತ್ತದೆ, ಸಾವಿರಾರು ಉದ್ಯೋಗ ಸೃಷ್ಟಿಸಿ ಆರ್ಥಿಕ ಬೆಳವಣಿಗೆಗೂ ಕಾರಣವಾಗಲಿದೆ ಎಂದು 'ಟ್ರೂತ್' ಖಾತೆಯಲ್ಲಿ ಬರೆದಿದ್ದಾರೆ.

ಕಚೇರಿಗೆ ಬೆಳಗ್ಗೆ ಬೇಗ ಬನ್ನಿ, ಬೇಗ ಹೋಗಿ: ಮಹಾರಾಷ್ಟ್ರ

ಮುಂಬೈ: ಮಾ.8ರಂದು ಅಂತಾರಾಷ್ಟ್ರೀಯ ಮಹಿಳಾ ದಿನ ಆಚರಿಸಿಯಾಗಿದೆ. ಇದೇ ಸಂದರ್ಭ ಮಹಾರಾಷ್ಟ್ರ ಸರಕಾರ ವಿವಿಧ ಇಲಾಖೆಗಳಲ್ಲಿನ ಮಹಿಳಾ ಸಿಬ್ಬಂದಿಗೆ ಅನುಕೂಲವಾಗುವಂತೆ ಹೊಸ ಯೋಜನೆ ಜಾರಿಗೆ ತಂದಿದೆ. 'ಕಮ್ ಅರ್ಲಿ ಗೋ ಅರ್ಲಿ'(ಕಚೇರಿಗೆ ಬೇಗ ಬನ್ನಿ-ಬೇಗ ಮನೆಗೆ ಹೋಗಿ) ಎಂಬುದೇ ಆ ಯೋಜನೆಯಾಗಿದೆ.

ವಿಧಾನ ಪರಿಷತ್‌ನಲ್ಲಿ ಮಹಿಳಾ ಸಬಲೀಕರಣ ಚರ್ಚೆ ವೇಳೆ ಮಾತನಾಡಿದ ಉಪ ಮುಖ್ಯಮಂತ್ರಿ ಸುನೇತ್ರಾ ಪವಾರ್, ಮಹಿಳೆಯರ ಸುರಕ್ಷತೆ ಮತ್ತು ಸಬಲೀಕರಣಕ್ಕೆ ಮಹಾಯುತಿ ಸರಕಾರ ಬದ್ಧವಾಗಿದೆ. ಅದಕ್ಕಾಗಿಯೇ ಮುಂಬೈ ಮಹಾನಗರ ಪ್ರದೇಶದಲ್ಲಿ ಸರಕಾರಿ ಕಚೇರಿಗಳಲ್ಲಿ ಕೆಲಸ ಮಾಡುವ ಮಹಿಳಾ ಉದ್ಯೋಗಿಗಳಿಗಾಗಿ 'ಕಮ್ ಅರ್ಲಿ, ಗೋ ಅರ್ಲಿ' ಯೋಜನೆ ಆರಂಭಿಸಲಾಗಿದೆ. ಮುಂಬೈ ಮಹಾನಗರದಲ್ಲಿನ ಕಚೇರಿಗಳಲ್ಲಿನ ಮಹಿಳಾ ಸಿಬ್ಬಂದಿಗಳು ಬೆಳಗ್ಗೆ ಎಂದಿಗಿಂತ 30 ನಿಮಿಷ ಮುಂಚಿತವಾಗಿ ಕಚೇರಿಗೆ ಬಂದು, ಸಂಜೆ 30 ನಿಮಿಷ ಬೇಗ ಮನೆಗೆ ಮರಳಬಹುದು ಎಂದರು.

ಮಹಿಳಾ ಸಿಬ್ಬಂದಿ ಬೆಳಗ್ಗೆ 9.15-9.45ರ ನಡುವೆ ಕಚೇರಿಗೆ ಬಂದು ಸಂಜೆ ಮನೆಗೆ ಬೇಗ ಹೋಗಬಹುದು. 'ಲೋಕಲ್ ಟ್ರೇನ್'ಗಳಲ್ಲಿ ಜನದಟ್ಟಣೆ ತಗ್ಗಿಸಲು ಮತ್ತು ರಸ್ತೆಗಳಲ್ಲಿ ವಾಹನಗಳ ಸಂಚಾರ ಕಡಿಮೆ ಮಾಡುವ ದೃಷ್ಟಿಯಿಂದಲೂ ಸರಕಾರ ಈ ಕ್ರಮ ಕೈಗೊಂಡಿದೆ. ಇದರಿಂದ ಪ್ರಯಾಣದ ಅವಧಿಯಲ್ಲಿನ ಒತ್ತಡವನ್ನು ಕಡಿಮೆ ಮಾಡುತ್ತದೆ. ಅಲ್ಲದೇ, ಕಚೇರಿ ಕೆಲಸ ಮತ್ತು ಕೌಟುಂಬಿಕ ಜೀವನದ ನಡುವೆ ಸಮತೋಲನಕ್ಕೂ ಅವಕಾಶ ಮಾಡಿಕೊಡುತ್ತದೆ ಎಂದರು.

ಬೋಯಿಂಗ್ ಮುಂದಿನ ಚಕ್ರ ತುಂಡು, ಮತ್ತೊಂದು ಛಿದ್ರ

ಫುಕೆಟ್: ಎಐ ವಿಮಾನ ಹಾರ್ಡ್ ಲ್ಯಾಂಡಿಂಗ್

ಫುಕೆಟ್: ಹೈದರಾಬಾದ್ ನಗರದಿಂದ ಬುಧವಾರ ಬೆಳಗ್ಗೆ 6.20ಕ್ಕೆ ಬದಲಾಗಿ ಬೆಳಗ್ಗೆ 6.42ಕ್ಕೆ ಹೊರಟ ಏರ್ ಇಂಡಿಯ ಎಕ್ಸ್‌ಪ್ರೆಸ್ (ಎಐ 938)ವಿಮಾನ ಥಾಯ್ಲೆಂಡ್ ದೇಶದ ಫುಕೆಟ್ ನಗರದಲ್ಲಿನ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ(ಸ್ಥಳೀಯ ಸಮಯ) ಬೆಳಗ್ಗೆ 11.40ಕ್ಕೆ ತಲುಪಿದೆ. ತಾಂತ್ರಿಕ ದೋಷದ ಕಾರಣ 'ಹಾರ್ಡ್ ಲ್ಯಾಂಡಿಂಗ್' ಮಾಡಲಾಗಿದೆ.

ವಿಮಾನ ಲ್ಯಾಂಡಿಂಗ್ ವೇಳೆ ನೋಸ್ ಲ್ಯಾಂಡಿಂಗ್ ಗೇರ್ ಮುರಿದು ಹೋಗಿದ್ದು, ವಿಮಾನ ರನ್‌ವೇಯ ಉದ್ದಕ್ಕೂ ನೆಲಕ್ಕೆ ಉಜ್ಜಿಕೊಂಡು ಹೋಗಿದೆ. ಮುಂಬದಿಯ ಚಕ್ರ ಮುರಿದು ತುಂಡಾಗಿ ರನ್‌ವೇಯಲ್ಲಿ ಬಿದ್ದಿರುವುದು ಘಟನಾ ಸ್ಥಳದ ಚಿತ್ರಗಳಲ್ಲಿ ಗೋಚರಿಸುತ್ತಿದೆ. ಮತ್ತೊಂದು ಚಕ್ರದ ಟಯರ್ ಕೂಡಾ ಛಿದ್ರವಾಗಿದೆ.

ಸುದೈವವಶಾತ್ ಬೃಹತ್ ಗಾತ್ರದ ಬೋಯಿಂಗ್ 737 ಎಐ-8 ವಿಮಾನಕ್ಕೆ ಹೆಚ್ಚಿನ ಹಾನಿಯೇನೂ ಆಗಿಲ್ಲ. ವಿಮಾನದಲ್ಲಿದ್ದ 133 ಪ್ರಯಾಣಿಕರನ್ನು ತಕ್ಷಣವೇ ಕೆಳಕ್ಕಿಳಿಸಿ ಸುರಕ್ಷಿತ ಪ್ರದೇಶಕ್ಕೆ ಕರೆದೊಯ್ದು ಬಿಡಲಾಗಿದೆ. ದೊಡ್ಡ ಅನಾಹುತವಾಗುವುದೊಂದು ಸ್ವಲ್ಪದರಲ್ಲೇ ತಪ್ಪಿದಂತಾಗಿದೆ.

ವಿಮಾನದ ತಪಾಸಣೆ, ದುರಸ್ತಿಗಾಗಿ ಸಂಜೆ 6ರವರೆಗೂ ರನ್‌ವೇ ಮುಚ್ಚುವಂತೆ ವಿಮಾನ ನಿಲ್ದಾಣದ ಅಧಿಕಾರಿಗಳು ಸೂಚನೆ ನೀಡಿದ್ದಾರೆ ಎಂದು ವರದಿಯಾಗಿದೆ.

ಭಾರತಕ್ಕೆ ಕಡಿಮೆ ಬೆಲೆಗೆ ಕಚ್ಚಾತೈಲ ಇನ್ನು ಸಿಗದು | ದೇಶದ ಮಾರುಕಟ್ಟೆಯಲ್ಲಿ ತೈಲ ದರ ಏರಿಕೆ ಭೀತಿ

ತೈಲಕ್ಕೆ ಇನ್ನು ರಿಯಾಯಿತಿ ದರ ಇಲ್ಲ: ದಾಟಿ ಬದಲಿಸಿದ ರಷ್ಯಾ

ಮಾಸ್ಕೋ: ಇರಾನ್ ವಿರುದ್ಧದ ಅಮೆರಿಕ-ಇಸ್ರೇಲ್ ಯುದ್ಧ ಜಾಗತಿಕ ಮಟ್ಟದಲ್ಲಿ ಹಲವು ಪಲ್ಲಟಗಳಿಗೆ ಕಾರಣವಾಗಿದ್ದು, ಶತ್ರು ದೇಶಗಳು ಮಿತ್ರ ದೇಶಗಳಾಗಿಯೂ, ಮಿತ್ರ ದೇಶಗಳು ವ್ಯಾಪಾರಿ ಬುದ್ಧಿ ತೋರುವವರಾಗಿಯೂ ಬದಲಾಗಿದ್ದಾರೆ.

ಈವರೆಗೂ ನ್ಯಾಟೊಗೆ ವಿರೋಧ, ಉಕ್ರೇನ್ ಮೇಲೆ ಯುದ್ಧದ ಕಾರಣದಿಂದ ಪಶ್ಚಿಮದ ದೇಶಗಳಿಗೆ ಶತ್ರುವಾಗಿದ್ದ ರಷ್ಯಾ ಮತ್ತು ಅದರ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಈಗ ಕಚ್ಚಾತೈಲ ಬೆಲೆ ಏರಿಕೆ ಮತ್ತು ಸರಬರಾಜು ಸ್ಥಗಿತ ಕಾರಣದಿಂದಾಗಿ ತೈಲ ಗ್ರಾಹಕ ದೇಶಗಳಿಗೆ ಆಪತ್ಬಾಂಧವನಂತಾಗಿದ್ದಾರೆ. ಕಚ್ಚಾತೈಲ ದರ 100 ಡಾಲರ್ ಗಡಿ ದಾಟಿದ ಸಂದರ್ಭದ ಲಾಭ ಮಾಡಿಕೊಳ್ಳಲು ರಷ್ಯಾ ಕೂಡಾ ಮುಂದಾಗಿದೆ. ಭಾರತದ ಜತೆಗೂ ಈಗ ಅದೇ ದನಿಯಲ್ಲಿ ಮಾತನಾಡಲಾರಂಭಿಸಿದೆ.

ಉಕ್ರೇನ್ ವಿರುದ್ಧದ ಯುದ್ಧದಿಂದಾಗಿ ಅಮೆರಿಕ ಮತ್ತು ಯುರೋಪ್ ದೇಶಗಳಿಂದ ಆರ್ಥಿಕ ದಿಗ್ಬಂಧನಕ್ಕೆ ಒಳಗಾದ ರಷ್ಯಾ, ಕಚ್ಚಾತೈಲ ಮಾರಾಟಕ್ಕೆ ಗ್ರಾಹಕರೇ ಇಲ್ಲದಂತಾಗಿತ್ತು. ಆಗ ರಷ್ಯಾದಿಂದ ತೈಲ ಖರೀದಿಗೆ ಮುಂದಾಗಿದ್ದು ಭಾರತ ಮತ್ತು ಚೀನಾ ಮಾತ್ರ. ಅದೇ ಕಾರಣವಾಗಿ ಭಾರತ ಮತ್ತು ಚೀನಾಕ್ಕೆ ಈವರೆಗೂ ರಿಯಾಯಿತಿ ದರದಲ್ಲಿ ಕಚ್ಚಾತೈಲ ಮಾರಾಟ ಮಾಡಿದ್ದ ರಷ್ಯಾ ಈಗ ರಿಯಾಯಿತಿ ಸ್ಥಗಿತಗೊಳಿಸಿರುವುದಾಗಿ ಭಾರತಕ್ಕೆ ಹೇಳಿದೆ ಎಂದು ವರದಿಯಾಗಿದೆ.

ಈಗ ಪಶ್ಚಿಮ ಏಷ್ಯಾ ಭಾಗದಲ್ಲಿನ ಸಂಘರ್ಷದಿಂದಾಗಿ



ಜಾಗತಿಕ ಇಂಧನ ಮಾರುಕಟ್ಟೆಯಲ್ಲಿ ಅಸ್ಥಿರತೆ ಉಂಟಾಗಿ ತೈಲ ಬೆಲೆಗಳು ಬ್ಯಾರೆಲ್‌ಗೆ 100 ಡಾಲರ್ ಮಟ್ಟ ದಾಟಿದ್ದವು. ಜಿ-7 ರಾಷ್ಟ್ರಗಳ ಮಧ್ಯ ಪ್ರವೇಶದ ಬಳಿಕ ತೈಲ ಬೆಲೆ 86-90 ಡಾಲರ್ ಮಟ್ಟಕ್ಕೆ ತಗ್ಗಿದೆ.

ಮಾಹಿತಿ ನೀಡದೆಯೇ ತೈಲ ಖರೀದಿ ಏಕಾಏಕಿ ಸ್ಥಗಿತಗೊಳಿಸಿದಿರಿ. ಅದೂ ಈಗ ರಿಯಾಯಿತಿ ದರದಲ್ಲಿ ಕಚ್ಚಾತೈಲ ಕೇಳುತ್ತಿದ್ದೀರಿ ಎಂದು ಭಾರತವನ್ನು ರಷ್ಯಾ ಪ್ರಶ್ನೆ ಮಾಡಿದೆ ಎಂಬ ವರದಿ ರಷ್ಯಾದ ರಾಷ್ಟ್ರೀಯ ಮಾಧ್ಯಮದಲ್ಲಿ ಪ್ರಕಟವಾಗಿದೆ.

ಇನ್ನು ಮುಂದೆ ಕಚ್ಚಾತೈಲದ ವ್ಯಾಪಾರ ಪೂರ್ಣವಾಗಿ ವಾಣಿಜ್ಯ ನೆಲೆಯಲ್ಲಿ ನಡೆಯಬೇಕು. ಹಿಂದಿನ ರಿಯಾಯಿತಿ ದರದಲ್ಲಿ ತೈಲ ಪೂರೈಕೆ ಸಾಧ್ಯವಿಲ್ಲ ಎಂಬ ಸ್ಪಷ್ಟ ಸಂದೇಶ ಪುಟಿನ್‌ರಿಂದ ರಷ್ಯಾ ಅಧಿಕಾರಿಗಳಿಗೆ ಮುಟ್ಟಿದೆ ಎಂದು ತಿಳಿದುಬಂದಿದೆ. ಹಾಗಾಗಿ ರಷ್ಯಾದಿಂದ ಭಾರತಕ್ಕೆ ಹಿಂದಿನಂತೆ ರಿಯಾಯಿತಿ ದರದಲ್ಲಿ ಕಚ್ಚಾತೈಲ ದೊರೆಯದು ಎಂಬುದು ಸ್ಪಷ್ಟ.

ರಷ್ಯಾದ 3ಕೋ. ಬ್ಯಾರೆಲ್ ತೈಲ ಖರೀದಿಸಿದ ಭಾರತ

ದೆಹಲಿ: ಇರಾನ್ ಯುದ್ಧದ ಕಾರಣದಿಂದ ಹರ್ಮುಜ್ ಜಲಸಂಧಿಯಲ್ಲಿ 700ಕ್ಕೂ ಅಧಿಕ ತೈಲ ಸಾಗಣೆ ನೌಕೆಗಳು ಸ್ಥಗಿತಗೊಂಡಿರುವುದರಿಂದ ಕೊಲ್ಲಿ ರಾಷ್ಟ್ರಗಳಿಂದ ಬರಬೇಕಿದ್ದ ಕಚ್ಚಾತೈಲ ನಿಂತುಹೋಗಿದೆ. ಹಾಗಾಗಿ, ಭಾರತ ಮತ್ತೆ ರಷ್ಯಾದಿಂದ ತೈಲ ಖರೀದಿಗೆ ಮುಂದಾಗಿದೆ. ಇದೇ ವೇಳೆ, ರಷ್ಯಾದಿಂದ ತೈಲ ಖರೀದಿಸಿದರೆ ಭಾರತಕ್ಕೆ ವಿಧಿಸಲಾಗುತ್ತಿದ್ದ ದಂಡಸುಂಕ ನಿಯಮವನ್ನು 30 ದಿನಗಳವರೆಗೆ ತೆರುವುಗೊಳಿಸಿರುವುದಾಗಿ ಅಮೆರಿಕ ಹೇಳಿದೆ.ಭಾರತದ ತೈಲ ಸಂಸ್ಕರಣಾ ಕಂಪನಿಗಳು ರಷ್ಯಾದಿಂದ 3 ಕೋಟಿ ಬ್ಯಾರೆಲ್‌ಗಳಷ್ಟು ಕಚ್ಚಾತೈಲವನ್ನು ರಷ್ಯಾದಿಂದ ಖರೀದಿಸಿವೆ. ಜಾಗತಿಕ ಮಾರುಕಟ್ಟೆಯಲ್ಲಿ ಮಾರಾಟವಾಗದೇ ಉಳಿದಿದ್ದ ರಷ್ಯಾದ ಅಷ್ಟೂ ಕಚ್ಚಾತೈಲದ ನೌಕೆಗಳನ್ನೂ 'ಸ್ಪಾಟ್ ಮಾರ್ಕೆಟ್'ನಲ್ಲಿ ಭಾರತ ಸರಕಾರದ 'ಇಂಡಿಯನ್ ಆಯಿಲ್ ಕಾರ್ಪೊರೇಷನ್'(ಐಒಸಿ) ಮತ್ತು ಖಾಸಗಿ ಕಂಪನಿ 'ರಿಲಯನ್ಸ್ ಇಂಡಸ್ಟ್ರೀಸ್ ಲಿ.' ಖರೀದಿಸಿವೆ. ಫೆಬ್ರವರಿ ತಿಂಗಳಲ್ಲೇ 'ಐಒಸಿ' ರಷ್ಯಾದಿಂದ ಒಟ್ಟು 1 ಕೋಟಿ ಬ್ಯಾರೆಲ್ ತೈಲವನ್ನು ಖರೀದಿಸಿದೆ ಎಂದು 'ಬ್ಲೂಮ್‌ಬರ್ಗ್' ಮಾಧ್ಯಮ ವರದಿ ಮಾಡಿದೆ.

ಎನ್‌ಯುಎಫ್‌ಡಿ ಸಂಶೋಧನಾ ನಿರ್ದೇಶಕ ಖೊಸ್ರೊ

ಮಗ ಸರ್ವೋಚ್ಚ ನಾಯಕ: ಖಮೇನಿಗೇ ಇಷ್ಟ ಇರಲಿಲ್ಲ

ಟೆಹರಾನ್: ಅಯತೊಲ್ಲಾ ಅಲಿ ಖಮೇನಿ ಅವರ 2ನೇ ಪುತ್ರ, ಮೊಜ್ತಬಾ ಖಮೇನಿ ಈಗ ಇರಾನ್‌ನ ಸರ್ವೋಚ್ಚ ನಾಯಕರಾಗಿದ್ದಾರೆ. ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ಸ್ ಕಾರ್ಪ್ಸ್ (ಐಆರ್‌ಜಿಸಿ) ಸೇರಿದಂತೆ ಕೆಲರಿಗೆ ಅದು ಮೆಚ್ಚುಗೆಯಾಗಿದೆ. ಆದರೆ ಮೊಜ್ತಬಾ ಅವರ ತಂದೆ ಯತೊಲ್ಲಾ ಅವರಿಗೇ ಪುತ್ರ ಸರ್ವೋಚ್ಚನಾಯಕ ಆಗುವುದು ಇಷ್ಟ ಇರಲಿಲ್ಲ ಎಂಬ ಸಂಗತಿ ಖಮೇನಿ ಅವರ ಉಯಿಲಿನಿಂದ ಬಹಿರಂಗವಾಗಿದೆ. ಮಗ ನನ್ನ ಉತ್ತರಾಧಿಕಾರಿಯಾಗಿ ನೇಮಕವಾಗುವುದಕ್ಕೆ ನನ್ನ ಒಪ್ಪಿಗೆ ಇಲ್ಲ ಎಂದೇ ಅಯತೊಲ್ಲಾ ಅವರು ಉಯಿಲಿನಲ್ಲಿ ಬರೆಸಿದ್ದರು ಎಂದು ನ್ಯೂಯಾರ್ಕ್ ಪೋಸ್ಟ್ ವರದಿ ಮಾಡಿದೆ.

ನನ್ನ ಮಕ್ಕಳು ಈ ಹುದ್ದೆಗೆ ಸೂಕ್ತರೇ? ಎಂಬ ಬಗ್ಗೆ ಅಯತೊಲ್ಲಾ ಅವರಿಗೆ ಶಂಕೆಯಿತ್ತು. ಮೊಜ್ತಬಾನನ್ನು ಉತ್ತರಾಧಿಕಾರಿಯಾಗಿಸಬಾರದು ಎಂದು ಉಯಿಲಿನಲ್ಲಿ ಸ್ಪಷ್ಟವಾಗಿ ಬರೆಸಿದ್ದರೆಂದು ಇರಾನ್ ಗುಪ್ತಚರ ಜಾಲದ ನಂಟಿರುವ ವಿದೇಶಿ ಗುಂಪು 'ನ್ಯಾಷನಲ್ ಯೂನಿಯನ್ ಫಾರ್ ಡೆಮಾಕ್ರಸಿ' (ಎನ್‌ಯುಎಫ್‌ಡಿ) ಯಲ್ಲಿ ಸಂಶೋಧನಾ ನಿರ್ದೇಶಕರಾಗಿರುವ ಖೊಸ್ರೊ ಇಸ್ಫಹಾನಿ ತಿಳಿಸಿದ್ದಾಗಿ ಪತ್ರಿಕೆ ವರದಿ ಮಾಡಿದೆ.

ದೇಶವನ್ನು ಮುನ್ನಡೆಸಲು ಅಗತ್ಯವಾದ ಅನುಭವ ಮತ್ತು ರಾಜಕೀಯ ಚಿಂತನೆಯನ್ನು ಮೊಜ್ತಬಾ ಹೊಂದಿಲ್ಲ ಎಂಬುದೇ ಖಮೇನಿ ಅವರ ಈ ನಿಲುವಿಗೆ ಕಾರಣವಾಗಿತ್ತು. ಧರ್ಮಗುರುವಾಗಿ ಮೊಜ್ತಬಾ ದುರ್ಬಲರು. ದೇಶದ ರಾಜಕೀಯದಲ್ಲಿ ಏನನ್ನೂ ಸಾಧಿಸಿಲ್ಲ ಎಂದು ಇಸ್ಫಹಾನಿ ವಿಶ್ಲೇಷಿಸಿದ್ದಾರೆ.

ಸರ್ವೋಚ್ಚ ನಾಯಕನನ್ನು ಆಯ್ಕೆ ಮಾಡುವ ಜವಾಬ್ದಾರಿ ಹೊಂದಿರುವ '88 ತಜ್ಞರ ಸಭೆ'ಯೇ ಉತ್ತರಾಧಿಕಾರಿ ಕುರಿತೂ ನಿರ್ಧರಿಸುತ್ತದೆ. ಮೊಜ್ತಬಾ ನೇಮಕದಲ್ಲಿ ಈ ಕ್ರಮ ಅನುಸರಿಸಲಾಗಿಲ್ಲ. ಮೊಜ್ತಬಾ ಬಹುಮತ ಪಡೆದಿಲ್ಲ. ಆದರೆ, ಐಆರ್‌ಜಿಸಿ ಒತ್ತಡದಿಂದಾಗಿ ಅವರ ಹೆಸರು ಘೋಷಿಸಲಾಗಿದೆ ಎಂದೇ ಇಸ್ಫಹಾನಿ ಹೇಳಿರುವುದಾಗಿ ನ್ಯೂಯಾರ್ಕ್ ಪೋಸ್ಟ್ ಪ್ರಕಟಿಸಿದೆ.

ಲೋಕಸಭೆಯಲ್ಲಿ ರಾಹುಲ್ ವಾಗ್ದಾಳಿ

ಪ್ರಧಾನಿ ಮೋದಿ ಅವರದು ಹೊಂದಾಣಿಕೆ ರಾಜಕಾರಣ

ದೆಹಲಿ: ಪ್ರಧಾನಿ ನರೇಂದ್ರ ಮೋದಿ ಹೊಂದಾಣಿಕೆ ರಾಜಕಾರಣ ಮಾಡುತ್ತಿದ್ದಾರೆ ಎಂದು ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಬುಧವಾರ ಲೋಕಸಭೆಯಲ್ಲಿ ಟೀಕಿಸಿದರು.

ಪ್ರಧಾನಿ ಮೋದಿ ಅವರ ಹೊಂದಾಣಿಕೆ ರಾಜಕಾರಣದ ಬಗ್ಗೆ ನನ್ನದು ಮೂಲಭೂತ ಪ್ರಶ್ನೆಯಾಗಿದೆ. ಮಾಜಿ ಸೇನಾ ಮುಖ್ಯಸ್ಥ ಜನರಲ್ ಎಂ.ಎಂ.ನರವಣೆ ಹಾಗೂ ಅಮೆರಿಕದ ಜೆಫ್ರಿ ಎಫ್‌ಸ್ಟೈನ್ ಫೈಲ್ಸ್‌ಗೆ ಸಂಬಂಧಿಸಿ ಚರ್ಚೆ ಮಾಡಲು ಮುಂದಾದ ನನ್ನನ್ನು ಕಳೆದ ಬಾರಿ ತಡೆದರು. ಇದು ಲೋಕಸಭೆಯಲ್ಲಿ ಪ್ರತಿಪಕ್ಷ ನಾಯಕನಿಗೆ ಮಾತನಾಡಲು ಅವಕಾಶ ನೀಡದ ಮೊದಲ ಘಟನೆ ಎಂದು ಆರೋಪಿಸಿದರು.



ಈ ಸದನ ಒಂದೇ ಪಕ್ಷವನ್ನು ಪ್ರತಿನಿಧಿಸಲ್ಲ, ಇಡೀ ದೇಶವನ್ನು ಪ್ರತಿನಿಧಿಸುತ್ತದೆ. ಕೋಟ್ಯಂತರ ಭಾರತೀಯರ ಅಭಿವ್ಯಕ್ತಿ. ನಾವು ಮಾತನಾಡಲು ಎದ್ದು ನಿಂತಾಗಲೆಲ್ಲ ನಮ್ಮನ್ನು ತಡೆಯಲಾಗುತ್ತಿದೆ ಎಂದು ರಾಹುಲ್ ಗಾಂಧಿ ಅಸಮಾಧಾನ ವ್ಯಕ್ತಪಡಿಸಿದರು.

ಮೋದಿ ಅವರು ಯಾರ ಜತೆಗೂ ರಾಜಿ ಮಾಡಿಕೊಂಡಿಲ್ಲ, ಮಾಡಲು ಸಾಧ್ಯವೇ ಇಲ್ಲ ಎಂದು ಆಡಳಿತ ಪಕ್ಷಗಳ ಸಂಸದರು ಪ್ರತ್ಯುತ್ತರ ನೀಡಿದರು. ಬಿಜೆಪಿ ಸಂಸದ ರವಿಶಂಕರ್ ಪ್ರಸಾದ್, ರಾಹುಲ್ ಆರೋಪವನ್ನು ತಳ್ಳಿಹಾಕಿ ಪ್ರಧಾನಿಯನ್ನು ಸಮರ್ಥಿಸಿಕೊಂಡರು.

ಎನ್‌ಸಿಇಆರ್‌ಟಿ ಪಠ್ಯ ಸಿದ್ಧಪಡಿಸಿದವನ ಕಪ್ಪು ಪಟ್ಟಿಗೆ ಸೇರಿಸಿ

'ನ್ಯಾಯಾಂಗದಲ್ಲಿ ಭ್ರಷ್ಟಾಚಾರ' ಪಠ್ಯ ರಚಿಸಿದ ಲೇಖಕಗೆ ನಿಷೇಧ: ಸುಪ್ರೀಂ

ದೆಹಲಿ: ಕೇಂದ್ರೀಯ ಪಠ್ಯ ಕ್ರಮವನ್ನು ಸಿದ್ಧಪಡಿಸುವ 'ನ್ಯಾಷನಲ್ ಕೌನ್ಸಿಲ್ ಆಫ್ ಎಜುಕೇಶನಲ್ ರಿಸರ್ಚ್ ಆ್ಯಂಡ್ ಟ್ರೈನಿಂಗ್'(ಎನ್‌ಸಿಇಆರ್‌ಟಿ) ಮೇಲಿನ ಸುಪ್ರೀಂ ಕೋರ್ಟ್‌ನ ಸಿಟ್ಟು ಇನ್ನೂ ತಣಿದಿಲ್ಲ. ಎನ್‌ಸಿಇಆರ್‌ಟಿ ಪಠ್ಯಕ್ರಮದ ಶಾಲೆ ಗಳಲ್ಲಿನ 8ನೇ ತರಗತಿಗಾಗಿ ಸಮಾಜ ವಿಜ್ಞಾನ ವಿಷಯದ ಪಠ್ಯ ಪುಸ್ತಕದಲ್ಲಿ 'ನ್ಯಾಯಾಂಗದಲ್ಲಿ ಭ್ರಷ್ಟಾಚಾರ' ಅಧ್ಯಾಯ ಬರೆದ ಲೇಖಕರನ್ನು ಕಪ್ಪುಪಟ್ಟಿಗೆ ಸೇರಿಸಲು ಸರಕಾರಕ್ಕೆ ಬುಧವಾರ ಸೂಚನೆ ನೀಡಿದ ಪೀಠ, ಆ ವ್ಯಕ್ತಿ ಬೇರಾವುದೇ ಪಠ್ಯಕ್ರಮ ಕಾರ್ಯದಲ್ಲಿ ಭಾಗಿಯಾಗದಂತೆ ನಿಷೇಧ ವಿಧಿಸಲಾಗಿದೆ ಎಂದು ಕಠಿಣ ಆದೇಶ ಹೊರಡಿಸಿದೆ.

ನ್ಯಾಯಾಂಗದಲ್ಲಿ ಭ್ರಷ್ಟಾಚಾರವಿದೆ ಎಂದು 8ನೇ ತರಗತಿ ಮಕ್ಕಳ ಮನಸ್ಸಲ್ಲಿ ತುಂಬಲು ಯತ್ನಿಸಿರುವುದು ಕಳವಳಕಾರಿ ಸಂಗತಿ. ಇಂಥ ವ್ಯಕ್ತಿಗಳನ್ನು ದೂರ ಇರಿಸಿ ಎಂದು ಕೇಂದ್ರ-ರಾಜ್ಯ ಸರಕಾರಗಳು ಮತ್ತು ಶಿಕ್ಷಣ ಸಂಸ್ಥೆಗಳಿಗೆ ಪೀಠ ನಿರ್ದೇಶನ ನೀಡಿದೆ.

ಈಗ ಉಂಟಾಗಿರುವ ಸಮಸ್ಯೆಗೆ ಪ್ರಾಮಾಣಿಕವಾಗಿ ವಿಷಾದ ವ್ಯಕ್ತಪಡಿಸುತ್ತೇವೆ. ಬೇರೆ ತರಗತಿಗಳ ಪಠ್ಯ ಪುಸ್ತಕಗಳನ್ನು ಮತ್ತೊಮ್ಮೆ ಪರಿಶೀಲಿಸುವಂತೆ ಕೇಂದ್ರ ಸರಕಾರ ಎನ್‌ಸಿಇಆರ್‌ಟಿಗೆ ನಿರ್ದೇಶನ ನೀಡಿದೆ ಎಂದು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಬುಧವಾರದ ಕಲಾಪ ವೇಳೆ ಪೀಠಕ್ಕೆ ತಿಳಿಸಿದರು.

ನೆಟ್ಟಿಗರಿಗೂ ತರಾಟೆ: ವಿವಾದಿತ ಪಠ್ಯಕ್ಕೆ ಸಂಬಂಧಿಸಿ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡ(ಸುಮೋಟು) ನ್ಯಾಯಾಲಯದ ಹಿಂದಿನ ಆದೇಶದ ಬಗ್ಗೆ ಅಭಿಪ್ರಾಯ ಹಂಚಿಕೊಂಡು ಬೇಜವಾಬ್ದಾರಿ ಪ್ರದರ್ಶಿಸಿರುವ ಸಾಮಾಜಿಕ ಮಾಧ್ಯಮಗಳ ವಿರುದ್ಧವೂ ಪೀಠ ಆಕ್ಷೇಪ ವ್ಯಕ್ತಪಡಿಸಿದೆ. ಜಾಲತಾಣದಿಂದ ಅಭಿಪ್ರಾಯಗಳನ್ನು ತೆಗೆದುಹಾಕುವಂತೆಯೂ ಸೂಚನೆ ನೀಡಿತು.

ಹತ ಉಗ್ರ ಎಲ್‌ಇಟಿ ಪ್ರಮುಖ

ಶ್ರೀನಗರ: ಜಮ್ಮು-ಕಾಶ್ಮೀರದಲ್ಲಿ ಗಡಿ ನಿಯಂತ್ರಣ ರೇಖೆ ಬಳಿ ಮಂಗಳವಾರ ಮಧ್ಯಾಹ್ನ 3ರ ವೇಳೆ ಗಡಿ ನುಸುಳಲೆತ್ನಿಸಿದ ಇಬ್ಬರಲ್ಲಿ ಒಬ್ಬನನ್ನು ಭದ್ರತಾ ಪಡೆಗಳು ಗುಂಡಿಕ್ಕಿ ಸಾಯಿಸಿದ್ದು, ಮತ್ತೊಬ್ಬ ಉಗ್ರ ಪಾಕ್ ಕಡೆಗೆ ಓಡಿಹೋದ. ಮೃತ ಉಗ್ರ ಪಾಕಿಸ್ತಾನದ ಲಷ್ಕರ್ ಎ ತಯ್ಯಬಾ(ಎಲ್‌ಇಟಿ) ಉಗ್ರ ಸಂಘಟನೆ ಪ್ರಮುಖ ಸದಸ್ಯ ಎಂದು ಅಧಿಕಾರಿಗಳು ಗುರುತಿಸಿದ್ದಾರೆ.

ನೌಶೇರಾ ಸೆಕ್ಟಾರ್ ಬಳಿ ಅರಣ್ಯದಲ್ಲಿ ಹತನಾದ ಉಗ್ರ ಪಾಕ್ ಆಕ್ರಮಿತ ಕಾಶ್ಮೀರದ(ಪಿಒಕೆ) ನಿವಾಸಿ ಹಮ್ಜಾ ಯೂಸುಫ್. ಈತ ಎಲ್‌ಇಟಿಯಲ್ಲಿ ಲಾಂಚ್‌ಪ್ಯಾಡ್ ಮಾಡ್ಯೂಲ್‌ನಲ್ಲಿ ಪ್ರಮುಖ ಸದಸ್ಯನಾಗಿದ್ದ. ತರಬೇತಾದ ಉಗ್ರರನ್ನು ಭಾರತದೊಳಕ್ಕೆ ನುಸುಳಿಸುವುದರಲ್ಲಿ ನೆರವಾಗುತ್ತಿದ್ದ. ಹಮ್ಜಾ ಹತ್ಯೆಯಿಂದ 'ಎಲ್‌ಇಟಿ'ಯ ಲಾಂಚ್ ಪ್ಯಾಡ್ ವಿಭಾಗಕ್ಕೆ ಗಣನೀಯ ಪೆಟ್ಟು ಬಿದ್ದಂತಾಗಿದೆ ಎಂದು ಭದ್ರತಾ ಪಡೆ ಅಧಿಕಾರಿಗಳು ತಿಳಿಸಿದ್ದಾರೆ.ಹತ ಉಗ್ರ ಹಮ್ಜಾ ಮೃತದೇಹದ ಬಳಿ 1 ಎಕೆ-47 ಬಂದೂಕು, 2 ಮ್ಯಾಗಜಿನ್, ಎರಡು ಪಿಸ್ತೂಲ್‌ಗಳು ಮತ್ತು ಅದರ ಗುಂಡುಗಳಿದ್ದ 4 ಮ್ಯಾಗಜಿನ್‌ಗಳು, ಅಲ್ಲದೇ, ಹೆಚ್ಚುವರಿ 58 ಗುಂಡುಗಳು, 3 ಹ್ಯಾಂಡ್ ಗ್ರನೇಡ್, ಮೊಬೈಲ್ ಫೋನ್, 2 ಸಿಮ್ ಕಾರ್ಡ್ ಮತ್ತು ಪಾಕ್ ಕರೆನ್ಸಿಗಳು ಇದ್ದು, ಎಲ್ಲವನ್ನೂ ಭದ್ರತಾ ಪಡೆ ವಶಪಡಿಸಿಕೊಂಡಿದೆ.

ಭಾರತದ ನೆಲದಲ್ಲಿ ದೊಡ್ಡ ಮಟ್ಟದಲ್ಲಿ ಭಯೋತ್ಪಾದಕ ದಾಳಿ ನಡೆಸುವ ಉದ್ದೇಶದಿಂದಲೇ ಇಬ್ಬರೂ ಎಲ್‌ಇಟಿ ಉಗ್ರರು ಗಡಿ ನುಸುಳಲೆತ್ನಿಸಿದ್ದರು. ಒಬ್ಬ ಹತನಾಗಿ, ಮತ್ತೊಬ್ಬ ಓಡಿಹೋಗಿದ್ದರಿಂದ ಭಾರೀ ಅನಾಹುತ ತಪ್ಪಿದೆ ಎಂದು ಅಧಿಕಾರಿಗಳು ವಿವರಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ನಾಳೆ ಜೀವಮಾನ ಸಾಧನಾ ಪುರಸ್ಕಾರ ಕಾರ್ಯಕ್ರಮ

ಬೆಂಗಳೂರು: ಶ್ರೀ ದೇವಿ ಚಾರಿಟಬಲ್ ಟ್ರಸ್ಟ್ ಮತ್ತು ಡಾ.ಎಂ.ಆರ್ ಹುಲಿನಾಯ್ಕರ್ ಪ್ರತಿಷ್ಠಾನ ವತಿಯಿಂದ ತುಮಕೂರಿನ ಶ್ರೀದೇವಿ ವೈದ್ಯಕೀಯ ಆಸ್ಪತ್ರೆಯ ಸಭಾಂಗಣದಲ್ಲಿ ಮಾ.13 ರಂದು ಡಾ.ಎಂ.ಆರ್ ಹುಲಿನಾಯ್ಕರ್ ಅವರ ಶ್ರೀಮತಿ ಶಾಂತಾದುರ್ಗದೇವಿ ಹುಲಿನಾಯ್ಕರ್ ಅವರಿಗೆ ಜೀವಮಾನ ಸಾಧನಾ ಪುರಸ್ಕಾರ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಸಂಸ್ಥೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಈ ವೇಳೆ ಕಾರ್ಯಕ್ರಮದಲ್ಲಿ ಮಾಜಿ ಮುಖ್ಯಮಂತ್ರಿ ಬಿ.ಎಸ್ .ಯಡಿಯೂರಪ್ಪ, ಗೃಹ ಸಚಿವ ಡಾ.ಜಿ.ಪರಮೇಶ್ವರ್, ಸುವರ್ಣಮುಖಿ ಸಂಸ್ಕೃತಿಧಾಮದ ಸಂಸ್ಥಾಪಕ ಡಾ. ಆಚಾರ್ಯ ಎಂ. ನಾಗರಾಜ್, ಕೊಯಮತ್ತೂರ್‌ನ ಜಿಮ್ ಆಸ್ಪತ್ರೆಯ ಸಂಸ್ಥಾಪಕ ಡಾ.ಸಿ.ಪಳನಿವೇಲು, ನವದೆಹಲಿಯ ರಾಷ್ಟ್ರೀಯ ಸ್ವಾಭಿಮಾನ ಪರಿಷತ್ ಅಧ್ಯಕ್ಷ ಬಸವರಾಜ್ ಪಾಟೀಲ್ ಸೇರಿದಂತೆ ಇನ್ನಿತರರು ಉಪಸ್ಥಿತರಿರಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಂಶೋಧನಾ ಸಹಾಯಕರಿಗೆ ಅರ್ಜಿ ಆಹ್ವಾನ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯ ಐಸಿಎಸ್ ಎಸ್‌ಆರ್ ಸಂಯೋಜಿತ ಯೋಜನೆಯಾದ The Impact of Women&Centric Government Initiatives on Education, Skill Development, and Inclusive Socio&Economic Progress to achieve Viksit Bharat 2047: A Study in Karnataka State ಯೋಜನೆಯಲ್ಲಿ ಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸಲು ಸಂಶೋಧನಾ ಸಹಾಯಕರು ಮತ್ತು ಕ್ಷೇತ್ರ ಪರಿವೀಕ್ಷಕರಿಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತ ಅಭ್ಯರ್ಥಿಗಳು ತಮ್ಮ ಅರ್ಹತೆಗೆ ಹೊಂದುವ ಹುದ್ದೆಗೆ ಸ್ವವಿವರದ ಸಂಪೂರ್ಣ ಮಾಹಿತಿ ಒಳಗೊಂಡ ಅರ್ಜಿಯನ್ನು icssrmrpbu.2026 gmail.com ಇ-ಮೇಲ್ ವಿಳಾಸಕ್ಕೆ ಮಾರ್ಚ್ 16 ರೊಳಗೆ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಡಾ.ವಾಹಿನಿ, ಪ್ರಾಧ್ಯಾಪಕರು, ವಿದ್ಯುನ್ಮಾನ ಮಾಧ್ಯಮ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ 9482218980 ರವರನ್ನು ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆ ಮೂಲಕ ತಿಳಿಸಿರುತ್ತಾರೆ.

ಎಲ್‌ಪಿಜಿ ಗ್ಯಾಸ್ ಸಿಲಿಂಡರ್‌ಗಳ ಕೊರತೆ | ಹೋಟೆಲ್ ಮೆನು ಕಡಿತ | ಪಿಜಿಗಳಲ್ಲಿ ಚಪಾತಿ, ಪೂರಿ ಬಂದ್

ಗ್ಯಾಸ್ ಸಂಕಷ್ಟದಿಂದ ಬೆಂಗಳೂರು ಅಸ್ತವ್ಯಸ್ತ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯ ರಾಜಧಾನಿ ಬೆಂಗಳೂರಿನಲ್ಲಿ ವಾಣಿಜ್ಯ ಹಾಗೂ ಗೃಹ ಬಳಕೆಯ ಎಲ್‌ಪಿಜಿ ಗ್ಯಾಸ್ ಸಿಲಿಂಡರ್‌ಗಳ ಕೊರತೆ ತೀವ್ರವಾಗುತ್ತಿದ್ದು, ನಗರದ ಹೋಟೆಲ್ ಉದ್ಯಮ, ದೇವಾಲಯಗಳ ಅನ್ನದಾನ ಸೇವೆ ಹಾಗೂ ಸಾಮಾನ್ಯ ಕುಟುಂಬಗಳ ದಿನನಿತ್ಯದ ಜೀವನದ ಮೇಲೆ ಗಂಭೀರ ಪರಿಣಾಮ ಬೀರಿದೆ.

ಇರಾನ್-ಇಸ್ರೇಲ್ ಯುದ್ಧದ ಪರಿಣಾಮವಾಗಿ ಕಳೆದ ಕೆಲವು ದಿನಗಳಿಂದ ಗ್ಯಾಸ್ ಪೂರೈಕೆಯಲ್ಲಿ ಉಂಟಾದ ವ್ಯತ್ಯಯದಿಂದ ಅನೇಕ ಹೋಟೆಲ್‌ಗಳು ತಮ್ಮ ಮೆನುಗಳನ್ನು ಕಡಿಮೆ ಮಾಡಬೇಕಾದ ಪರಿಸ್ಥಿತಿ ಎದುರಿಸುತ್ತಿದ್ದು, ಕೆಲವು ಕಡೆಗಳಲ್ಲಿ ಚಾರ್ಕೋಲ್ ಹಾಗೂ ಕಲ್ಲಿದ್ದಲು ಬಳಸಿ ಅಡುಗೆ ಮಾಡುವ ಸ್ಥಿತಿ ಉಂಟಾಗಿದೆ. ಬುಧವಾರ ನಗರದ ಹಲವೆಡೆ ಇದರಿಂದ ಸಾಕಷ್ಟು ತೊಂದರೆಗಳಾಗಿದ್ದು, ನಾಯಂಡಹಳ್ಳಿ ಭಾಗದಲ್ಲಿರುವ ಖಾಸಗಿ ವಾಹನಗಳ ಎಲ್‌ಪಿಜಿ ಗ್ಯಾಸ್ ಬಂಕ್ ಒಂದು ಗ್ಯಾಸ್ ಕೊರತೆಯ ಕಾರಣದಿಂದ ಬುಧವಾರ ಮುಚ್ಚಲ್ಪಟ್ಟಿತು. ಇದರಿಂದ ವಾಹನಗಳಿಗೆ ಎಲ್‌ಪಿಜಿ ಬಳಸುವ ಚಾಲಕರು ಸಹ ತೊಂದರೆಗೆ ಒಳಗಾಗಿದ್ದಾರೆ.

ಇದೇ ವೇಳೆ ಕಮರ್ಷಿಯಲ್ ಗ್ಯಾಸ್ ಕೊರತೆಯ ಪರಿಣಾಮವಾಗಿ ಬಸವನಗುಡಿಯ ಪ್ರಸಿದ್ಧ ವಿದ್ಯಾರ್ಥಿ ಭವನ ಹೋಟೆಲ್‌ಗೂ ದೊಡ್ಡ ಹೊಡೆತ ಬಿದ್ದಿದೆ. ಸಾಮಾನ್ಯವಾಗಿ ಅನೇಕ ವಿಧದ ತಿಂಡಿಗಳು ದೊರೆಯುತ್ತಿದ್ದ ಈ ಹೋಟೆಲ್‌ನಲ್ಲಿ ಈಗ ಮೆನು ಕಡಿತಗೊಳಿಸಿ ಕೇವಲ ಮಸಾಲೆ ದೋಸೆ, ವಡೆ, ಟೀ ಮತ್ತು ಕಾಫಿ ಮಾತ್ರ ಪೂರೈಕೆ ಮಾಡಲಾಗುತ್ತಿದೆ. ಹೋಟೆಲ್ ಮಾಲೀಕರ ಪ್ರಕಾರ ಗುರುವಾರ ಮಧ್ಯಾಹ್ನದವರೆಗೆ ಮಾತ್ರ ಗ್ಯಾಸ್ ಸ್ಟಾಕ್ ಉಳಿದಿದ್ದು, ನಂತರ ಇನ್ನಷ್ಟು ಸಮಸ್ಯೆ ಎದುರಾಗುವ ಸಾಧ್ಯತೆ ಇದೆ ಎಂದು ಹೇಳಿದ್ದಾರೆ. ಇದರಿಂದ ಇಷ್ಟವಾದ ತಿಂಡಿಗಳನ್ನು ತಿನ್ನಲು ಬಂದ ಗ್ರಾಹಕರು ನಿರಾಸೆ ವ್ಯಕ್ತಪಡಿಸಿದ್ದಾರೆ.

ಮಲ್ಲೇಶ್ವರಂನ ಅತಿಥಿ ಗಾರ್ಡೆನಿಯಾ ಹೋಟೆಲ್‌ನಲ್ಲಿ ಸಿಲಿಂಡರ್ ಕೊರತೆಯಿಂದ ಪೂರಿ ತಯಾರಿಕೆ ನಿಲ್ಲಿಸಲಾಗಿದೆ. ಪೂರಿ ಸಿಗದೆ ಕೆಲ ಗ್ರಾಹಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಇದರ ನಡುವೆ ಗಾಂಧಿನಗರದಲ್ಲಿರುವ ಕೆಲವು ದೋಸೆ ಅಂಗಡಿಗಳು ಸ್ನೇಹಿತರ ಮೂಲಕ ಹೆಚ್ಚಿನ ದರಕ್ಕೆ ಸಿಲಿಂಡರ್ ಖರೀದಿ ಮಾಡಿ ವ್ಯವಹಾರ ಮುಂದುವರಿಸುತ್ತಿವೆ. ಆದರೆ ಇದು ಎಲ್ಲರಿಗೂ ಸಾಧ್ಯವಾಗದ ಕಾರಣ ಅನೇಕ ಹೋಟೆಲ್‌ಗಳು ಸಂಕಷ್ಟದಲ್ಲಿವೆ.

ಮಲ್ಲೇಶ್ವರಂನ ಮೂನ್ ಲೈಟ್ ಹೋಟೆಲ್‌ನಲ್ಲಿ ತಂದೂರಿ ಪದಾರ್ಥ ತಯಾರಿಸಲು ಗ್ಯಾಸ್ ಸಿಗದ ಕಾರಣ ಚಾರ್ಕೋಲ್ ಬಳಸಿ ಅಡುಗೆ ಮಾಡಲಾಗುತ್ತಿದೆ. 18 ಕೆಜಿ ಕಮರ್ಷಿಯಲ್ ಸಿಲಿಂಡರ್ ಬದಲು ಕೆಲ ಕಡೆಗಳಲ್ಲಿ 8 ಕೆಜಿ ಸಿಲಿಂಡರ್ ಮಾತ್ರ ಸಿಗುತ್ತಿರುವುದರಿಂದ ಹೋಟೆಲ್‌ಗಳ ಕಾರ್ಯಾಚರಣೆಗೆ ದೊಡ್ಡ ಅಡಚಣೆ ಉಂಟಾಗಿದೆ. ಬಸವನಗುಡಿಯ ಬನಶಂಕರಿ ದೇವಾಲಯದಲ್ಲೂ ಈ ಗ್ಯಾಸ್ ಕೊರತೆಯ ಪರಿಣಾಮ ಕಂಡುಬಂದಿದೆ. ಇಲ್ಲಿ ಪ್ರತಿದಿನ ಮೂರು ಬಾರಿ ಅನಿಯಮಿತವಾಗಿ ನೀಡಲಾಗುತ್ತಿದ್ದ ಉಚಿತ ಪ್ರಸಾದ ವಿತರಣೆಯನ್ನು ಈಗ ಕಡಿಮೆ ಮಾಡಿ ದಿನಕ್ಕೆ ಒಮ್ಮೆ ಮಾತ್ರ ನೀಡಲಾಗುತ್ತಿದೆ ಎಂದು ದೇವಾಲಯದ ಸಿಬ್ಬಂದಿ ತಿಳಿಸಿದ್ದಾರೆ. ವಿಜಯನಗರ , ವಿವಿ ಪುರಂ, ವೈಟ್‌ಫೀಲ್ಡ್, ಸೇರಿದಂತೆ ಇನ್ನಿತರರ ಜನಪ್ರಿಯ ಫುಡ್‌ಸ್ಟ್ರೀಟ್‌ಗಳಿಗೂ ಸಿಲಿಂಡರ್ ಶಾಖ ತಟ್ಟಿದೆ. ಒಟ್ಟಿನಲ್ಲಿ ಬೆಂಗಳೂರಿನಲ್ಲಿ ಉಂಟಾಗಿರುವ ಕಮರ್ಷಿಯಲ್ ಹಾಗೂ ಗೃಹ ಬಳಕೆಯ ಗ್ಯಾಸ್ ಸಿಲಿಂಡರ್ ಕೊರತೆ ಜನಜೀವನದ ಮೇಲೆ ಗಂಭೀರ ಪರಿಣಾಮ ಬೀರುತ್ತಿದ್ದು, ಸಮಸ್ಯೆಯನ್ನು ತ್ವರಿತವಾಗಿ ಬಗೆಹರಿಸಲು ಸರಕಾರ ಹಾಗೂ ತೈಲ ಕಂಪನಿಗಳು ತಕ್ಷಣ ಕ್ರಮ ಕೈಗೊಳ್ಳಬೇಕು ಎಂಬುದು ಸಾರ್ವಜನಿಕರ ಒತ್ತಾಯವಾಗಿದೆ.

ಬೆಂಗಳೂರು ನಗರದ ಲಾಲ್‌ಬಾಗ್‌ನ ಬೊಟಾನಿಕಲ್ ಗಾರ್ಡನ್ ಸಮೀಪದ 99 ವೆರೈಟೀಸ್ ದೋಸೆ ಕಾರ್ನರ್‌ನಲ್ಲಿ ವಾಣಿಜ್ಯ ಎಲ್‌ಪಿಜಿ ಗ್ಯಾಸ್ ಸಿಲಿಂಡರ್ ಕೊರತೆಯಿಂದ ಬುಧವಾರ ಕಲ್ಲಿದ್ದಲು ಒಲೆ ಬಳಸಿ ದೋಸೆ ತಯಾರಿಸುತ್ತಿರುವ ದೃಶ್ಯ. (ಸುಧಾಕರ್ ದೇವರಾಜ್)

ಪಿಜಿಗಳಲ್ಲಿ ಚಪಾತಿ, ಪೂರಿ ಬಂದ್

ವಾಣಿಜ್ಯ ಗ್ಯಾಸ್ ಸಿಲಿಂಡರ್‌ಗಳ ಬಿಸಿ ಪಿಜಿಗಳಿಗೂ ತಟ್ಟಿದೆ. ಈ ಹಿನ್ನೆಲೆಯಲ್ಲಿ ನಗರದಲ್ಲಿನ ಪಿಜಿ ವಸತಿಗಳಲ್ಲಿ ಆಹಾರ ಮೆನುವಿನಲ್ಲಿ ಬದಲಾವಣೆ ಕಂಡುಬಂದಿದೆ. ಬಹುತೇಕ ಪಿಜಿಗಳಲ್ಲಿ ಚಪಾತಿ ಮತ್ತು ಪೂರಿ ತಯಾರಿಕೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಿ, ಪುಳಿಯೋಗರೆ, ಉಪ್ಪಿಟ್ಟು ಮತ್ತು ಪಲಾವ್ ಮುಂತಾದ ಸರಳ ಆಹಾರಗಳನ್ನು ಮಾತ್ರ ನೀಡಲಾಗುತ್ತಿದೆ. ಕೆಲವು ಪಿಜಿಗಳಲ್ಲಿ ಮಧ್ಯಾಹ್ನದ ಊಟ ಕೂಡಾ ಸ್ಥಗಿತವಾಗಿದೆ. ಪಿಜಿಗಳಲ್ಲಿ ಲಕ್ಷಾಂತರ ಸಾಫ್ಟ್‌ವೇರ್ ಇಂಜಿನಿಯರ್‌ಗಳು, ವಿದ್ಯಾರ್ಥಿಗಳು, ಕಂಪನಿ ಹಾಗೂ ಕಾರ್ಖಾನೆ ಉದ್ಯೋಗಿಗಳು ವಾಸವಾಗಿದ್ದು, ಅವರಿಗೆ ದಿನಕ್ಕೆ ಮೂರು ಬಾರಿ ಆಹಾರ ಒದಗಿಸುವುದು ಪಿಜಿ ಮಾಲೀಕರಿಗೆ ಸವಾಲಾಗಿ ಪರಿಣಮಿಸಿದೆ. ಗ್ಯಾಸ್ ಸಿಲಿಂಡರ್‌ಗಳ ಸರಬರಾಜಿನಲ್ಲಿ ವ್ಯತ್ಯಯ ಉಂಟಾದ ಹಿನ್ನೆಲೆಯಲ್ಲಿ ಚಪಾತಿ ಮತ್ತು ಪೂರಿ ತಯಾರಿಸಲು ಅಗತ್ಯವಾದ ಹೆಚ್ಚಿನ ಗ್ಯಾಸ್ ಬಳಕೆ ಸಾಧ್ಯವಾಗುತ್ತಿಲ್ಲ ಎಂದು ಮಾಲೀಕರು ತಿಳಿಸಿದ್ದಾರೆ.

ನಮ್ಮ ಮನೆಯಲ್ಲಿ ಗೃಹ ಬಳಕೆಯ ಎಲ್‌ಪಿಜಿ ಸಿಲಿಂಡರ್ ಖಾಲಿಯಾಗಿದೆ. ಹಲವು ಗ್ಯಾಸ್ ಏಜೆನ್ಸಿಗಳಲ್ಲಿ ಬುಕ್ಕಿಂಗ್ ಮಾಡಿದ ತಕ್ಷಣ ಸಿಲಿಂಡರ್ ದೊರೆಯುತ್ತಿಲ್ಲ. ಏಜೆನ್ಸಿಯವರು ಕನಿಷ್ಠ ಐದು ದಿನಗಳವರೆಗೆ ಕಾಯಬೇಕು ಎಂಬ ಉತ್ತರ ನೀಡುತ್ತಿದ್ದಾರೆ. ಹಿಂದೆ 21 ದಿನಗಳ ನಂತರ ಮತ್ತೊಂದು ಸಿಲಿಂಡರ್ ಬುಕ್ ಮಾಡಲು ಅವಕಾಶ ಇದ್ದರೆ, ಈಗ ಕನಿಷ್ಠ 30 ದಿನಗಳ ಬಳಿಕ ಮಾತ್ರ ಬುಕ್ಕಿಂಗ್ ಮಾಡಲು ಅವಕಾಶ ನೀಡಲಾಗುತ್ತಿದೆ.

-ಅಕ್ಷತಾ , ಗೃಹಿಣಿ

ನಗರದಲ್ಲಿ ವಾಣಿಜ್ಯ ಎಲ್‌ಪಿಜಿ ಗ್ಯಾಸ್ ಸಿಲಿಂಡರ್ ಕೊರತೆ ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಹೋಟೆಲ್, ಪಿಜಿ ಹಾಗೂ ಇತರೆ ವಾಣಿಜ್ಯ ಬಳಕೆದಾರರಿಗೆ ಗ್ಯಾಸ್ ಪೂರೈಕೆ ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ. ಆಸ್ಪತ್ರೆಗಳು ಹಾಗೂ ಕಾಲೇಜು ಕ್ಯಾಂಟೀನ್ ಪ್ರಮುಖ ಅಗತ್ಯ ಸೇವೆಗಳಿಗೆ ಮಾತ್ರ ಸಿಲಿಂಡರ್ ಪೂರೈಕೆ ಮಾಡುವ ವ್ಯವಸ್ಥೆ ಮಾಡಲಾಗಿದೆ. ಗೃಹಬಳಕೆ ಸಿಲಿಂಡರ್‌ಗಳ ಪೂರೈಕೆ ಸಹ ನಿಯಂತ್ರಿತವಾಗಿ ನಡೆಯುತ್ತಿದೆ. ಒಂದು ಏಜೆನ್ಸಿಗೆ ಒಂದು ದಿನ ಲೋಡ್ ಬಂದರೆ, ಮುಂದಿನ ದಿನ ಲೋಡ್ ಬಾರದ ಪರಿಸ್ಥಿತಿ ನಿರ್ಮಾಣವಾಗಿದ್ದು,ದಿನಬಿಟ್ಟು ದಿನ ಪೂರೈಕೆ ನಡೆಯುತ್ತಿದೆ. ಸರಕಾರ ನಿಗದಿಪಡಿಸಿದ ಬಿಲ್ ದರಕ್ಕಿಂತ ಹೆಚ್ಚಾಗಿ ವಸೂಲಿ ಮಾಡುವ ಪ್ರಶ್ನೆಯೇ ಇಲ್ಲ. ಆದರೆ ಕೆಲ ಖಾಸಗಿ ವಲಯದಲ್ಲಿ ಸಂಗ್ರಹಣೆ ಮಾಡಿಕೊಂಡು ದರ ಹೆಚ್ಚಿಸುತ್ತಿದ್ದಾರೆ.

-ಗೋವಿಂದರಾಜು, ಮುಖ್ಯಸ್ಥರು ಮಲ್ಲೇಶ್ವರಂ ಗ್ಯಾಸ್ ಏಜೆನ್ಸಿ

ವಾಣಿಜ್ಯ ಗ್ಯಾಸ್ ಸಿಲಿಂಡರ್‌ಗಳ ತೀವ್ರ ಕೊರತೆಯಿಂದಾಗಿ ನಗರದಲ್ಲಿನ ಅನೇಕ ಹೋಟೆಲ್‌ಗಳು ಬಂದ್ ಆಗುವ ಸ್ಥಿತಿ ಎದುರಿಸುತ್ತಿದೆ. ಸರಿಯಾದ ಸಮಯದಲ್ಲಿ ಗ್ಯಾಸ್ ಪೂರೈಕೆ ಆಗದ ಕಾರಣ ಹೋಟೆಲ್ ವ್ಯವಹಾರ ನಡೆಸುವುದು ಕಷ್ಟವಾಗಿದ್ದು, ಇನ್ನೂ ಕೆಲವು ದಿನಗಳಲ್ಲಿ ಅನೇಕ ಹೋಟೆಲ್‌ಗಳು ಬಾಗಿಲು ಮುಚ್ಚುವ ಸಾಧ್ಯತೆ ಇದೆ. ಈಗಾಗಲೇ ಕೆಲವು ಕಡೆ ಗ್ಯಾಸ್ ಸಿಲಿಂಡರ್ ಸಿಗದೆ ಹೋಟೆಲ್ ಕಾರ್ಯಾಚರಣೆ ಶೇ.20 ರಿಂದ 25 ರಷ್ಟು ಸ್ಥಗಿತಗೊಂಡಿದ್ದು, ಇನ್ನೂ ಒಂದು ವಾರದೊಳಗೆ ಪರಿಸ್ಥಿತಿ ಮತ್ತಷ್ಟು ಗಂಭೀರವಾಗುವ ಸಾಧ್ಯತೆ ಇದೆ.

-ಸುಬ್ರಮಣ್ಯ ಹೊಳ್ಳ ಎಸ್. ಅಧ್ಯಕ್ಷ, ಬೆಂಗಳೂರು ಹೋಟೆಲುಗಳ ಸಂಘ

ದೇವಸ್ಥಾನಗಳಲ್ಲಿ ಸಿಲಿಂಡರ್ ಕೊರತೆ ಉಂಟಾಗದಂತೆ ಕ್ರಮವಹಿಸಿ

ಬೆಂಗಳೂರು: ರಾಜ್ಯದಲ್ಲಿ ಉಂಟಾಗಿರುವ ಎಲ್‌ಪಿಜಿ ಗ್ಯಾಸ್ ಸಿಲಿಂಡರ್ ಕೊರತೆಯ ಹಿನ್ನೆಲೆ ಮುಜರಾಯಿ ಇಲಾಖೆಯ ವ್ಯಾಪ್ತಿಯ ದೇವಸ್ಥಾನಗಳಲ್ಲಿ ದಾಸೋಹ ಮತ್ತು ಪ್ರಸಾದ ತಯಾರಿಕೆಗೆ ತೊಂದರೆ ಆಗದಂತೆ ನೋಡಿಕೊಳ್ಳಲು ಮುಜರಾಯಿ ಸಚಿವ ರಾಮಲಿಂಗರೆಡ್ಡಿ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ. ಈ ಸಂಬಂಧ ಸಚಿವರು ಮುಜರಾಯಿ ಆಯುಕ್ತರಿಗೆ ದೂರವಾಣಿ ಮೂಲಕ ಸಂಪರ್ಕಿಸಿ, ರಾಜ್ಯದ ವಿವಿಧ ದೇವಸ್ಥಾನಗಳಲ್ಲಿ ಗ್ಯಾಸ್ ಬಳಸಿ ದಾಸೋಹ ನಡೆಸುತ್ತಿರುವ ಆಡಳಿತ ಮಂಡಳಿಗಳೊಂದಿಗೆ ಚರ್ಚೆ ನಡೆಸಿ ಭಕ್ತರಿಗೆ ಯಾವುದೇ ತೊಂದರೆ ಆಗದಂತೆ ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಿದ್ದಾರೆ. ವಿಧಾನಸೌಧದಲ್ಲಿ ಈ ಕುರಿತು ಮಾತನಾಡಿದ ಅವರು, ರಾಜ್ಯದ ಸುಮಾರು 15 ಪ್ರಮುಖ ಮುಜರಾಯಿ ದೇವಸ್ಥಾನಗಳಲ್ಲಿ ಗ್ಯಾಸ್ ಕೊರತೆಯಿಂದ ಸ್ವಲ್ಪ ಮಟ್ಟಿನ ಸಮಸ್ಯೆ ಎದುರಾಗಿದೆ. ಪ್ರಸಾದ ತಯಾರಿಕೆ ಮತ್ತು ದಾಸೋಹ ಸೇವೆಗೆ ಗ್ಯಾಸ್ ಪೂರೈಕೆ ಅತ್ಯಗತ್ಯವಾಗಿದ್ದು, ಭಕ್ತರಿಗೆ ಪ್ರಸಾದ ದೊರಕುವುದು ಅವರ ಧಾರ್ಮಿಕ ತೃಪ್ತಿಗೆ ಮುಖ್ಯವಾಗಿರುವುದರಿಂದ ಯಾವುದೇ ವ್ಯತ್ಯಯ ಉಂಟಾಗದಂತೆ ನೋಡಿಕೊಳ್ಳಬೇಕು ಎಂದು ದೇವಸ್ಥಾನಗಳ ಆಡಳಿತ ಮಂಡಳಿಗೆ ಸೂಚಿಸಲಾಗಿದೆ ಎಂದರು. ಅಂತರಾಷ್ಟ್ರೀಯ ಪರಿಸ್ಥಿತಿಗಳ ಪರಿಣಾಮವಾಗಿ ಪೂರೈಕೆಯಲ್ಲಿ ಸಮಸ್ಯೆ ಉಂಟಾಗಿದ್ದರೆ ಮುಂದಿನ ದಿನಗಳಲ್ಲಿ ಪರಿಸ್ಥಿತಿಯನ್ನು ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳಲಾಗುವುದ. ಇಂಧನದ ಪರ್ಯಾಯ ವ್ಯವಸ್ಥೆಗಳಾದ ಕಟ್ಟಿಗೆ ಒಲೆಗಳ ಬಳಕೆ ಈಗ ಸಾಧ್ಯವಾಗದ ಪರಿಸ್ಥಿತಿ ಇರುವುದಾಗಿ ಹಾಗೂ ದೇವಸ್ಥಾನಗಳು ಈಗ ವಿದ್ಯುತ್ ಮತ್ತು ಗ್ಯಾಸ್ ಮೇಲೆಯೇ ಅವಲಂಬಿತವಾಗಿವೆ. ಕಡಿಮೆ ಇಂಧನ ಬಳಸಿ ಪ್ರಸಾದ ತಯಾರಿಸುವ ಬಗ್ಗೆ ಈಗಾಗಲೇ ಯಾವುದೇ ನಿರ್ಧಾರ ಕೈಗೊಂಡಿಲ್ಲ, ಮುಂದಿನ ಪರಿಸ್ಥಿತಿಯನ್ನು ಗಮನಿಸಿ ಈ ಕುರಿತು ಚರ್ಚೆ ನಡೆಸಲಾಗುವುದು ಎಂದರು.

ಕೋಲಿ, ಕಬ್ಬಲಿಗ, ಬೆಸ್ತ ಜಾತಿಗಳನ್ನು ಎಸ್‌ಟಿಗೆ ಸೇರಿಸಲು ಅಗತ್ಯ ಕ್ರಮ: ಸಚಿವ ಭೋಸರಾಜು

ವಿಶ್ವವಾಣಿ ಸುದ್ದಿಮನೆ ವಿಧಾನ ಪರಿಷತ್

ಕೋಲಿ, ಕಬ್ಬಲಿಗ, ಬೆಸ್ತ, ಅಂಬಿಗಣ ಬಾರ್ಕಿ ಜಾತಿಗಳನ್ನು ಎಸ್‌ಟಿ ಸಮುದಾಯಕ್ಕೆ ಸೇರಿಸಲು ಕೇಂದ್ರಕ್ಕೆ ಶೀಘ್ರವೇ ಶಿಫಾರಸು ಕಳಿಸುವುದಾಗಿ ಸಚಿವ ಭೋಸರಾಜು ತಿಳಿಸಿದ್ದಾರೆ.

ವಿಧಾನ ಪರಿಷತ್ ಗಮನ ಸೆಳೆಯುವ ಪ್ರಸ್ತಾಪದಲ್ಲಿ ಕಾಂಗ್ರೆಸ್‌ನ ತಿಪ್ಪಣ್ಣಪ್ಪ ಕಮಕನೂರು, ಬಿಜೆಪಿ ಸದಸ್ಯ ತಳವಾರ್ ಸಾಬಣ್ಣ ವಿಷಯ ಪ್ರಸ್ತಾಪ ಮಾಡಿದರು. ಕೋಲಿ, ಕಬ್ಬಲಿಗ, ಬೆಸ್ತ, ಅಂಬಿಗ ಮತ್ತು ಬಾರ್ಕಿ ಜಾತಿಗಳನ್ನು ಎಸ್‌ಟಿ ಸಮುದಾಯಕ್ಕೆ ಸೇರಿಸಿ. ಈ ಸಮುದಾಯಗಳು ಹಿಂದುಳಿದ ಸಮುದಾಯಗಳು. ಈ ಸಮುದಾಯಗಳನ್ನು ಎಸ್‌ಟಿಗೆ ಸೇರಿಸಬೇಕು. ರಾಜ್ಯದ ಸರಕಾರ ಕೇಂದ್ರಕ್ಕೆ ಪ್ರಸ್ತಾವನೆ ಸಲ್ಲಿಸಿ. ನಾನು ಮಾತಾಡಿಕೊಳ್ಳುತ್ತೇನೆ ಎಂದು ಮನವಿ ಮಾಡಿದರು.

ಸಿಎಂ ಪರವಾಗಿ ಸಭಾನಾಯಕ ಭೋಸರಾಜು ಉತ್ತರ ನೀಡಿ, ರಾಜ್ಯದಲ್ಲಿನ ಗಂಗಾಮತ ಮತ್ತು ಅದರ ಉಪ ಜಾತಿಗಳ (ಕೋಲಿ, ಕಬ್ಬಲಿಗೆ, ಬೆಸ್ತ, ಅಂಬಿಗ ಮತ್ತು ಬಾರ್ಕಿ ಒಳಗೊಂಡಂತೆ) ರಾಜ್ಯದ ಪರಿಶಿಷ್ಟ ಪಂಗಡದ ಪಟ್ಟಿಗೆ ಸೇರಿಸಲು ಕನ್ನಡ ವಿಶ್ವವಿದ್ಯಾಲಯ ಹಂಪಿ ಇವರ ಮೂಲಕ ಕುಲಶಾಸ್ತ್ರೀಯ ಅಧ್ಯಯನ ಕೈಗೊಂಡು ವರದಿ ಪಡೆದು ಸಲ್ಲಿಸಲು ಆದೇಶಿಸಲಾಗಿದೆ. ಸರಕಾರದ ಆದೇಶದನ್ವಯ ಗಂಗಾಮತ ಮತ್ತು ಅದರ ಉಪ ಜಾತಿಗಳ ಕುಲಶಾಸ್ತ್ರೀಯ ಅಧ್ಯಯನವನ್ನು ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಮೂಲಕ ಕೈಗೊಂಡು ಅಂತಿಮ ವರದಿಯನ್ನು 2014ರ ಫೆ.17 ರಂದು ಮೈಸೂ ರಿನಲ್ಲಿರುವ ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋ ಧನಾ ಸಂಸ್ಥೆ ಮೂಲಕ ಸರಕಾರಕ್ಕೆ ಸಲ್ಲಿಸಲಾಗಿತ್ತು ಎಂದರು.

ಸದನದ ಬಾವಿಗಿಳಿದು ಪ್ರತಿಭಟಿಸಿದ ತಳವಾರ್ ಸಾಬಣ್ಣ

ಕೋಲಿ, ಕಬ್ಬಲಿಗ, ಬೆಸ್ತ, ಅಂಬಿಗ ಮತ್ತು ಬಾರ್ಕಿ ಸಮುದಾಯವನ್ನ ಪರಿಶಿಷ್ಠ ಪಂಗಡಕ್ಕೆ ಸೇರಿಸಬೇಕೆಂಬ ಪ್ರಸ್ತಾವನೆ ವೇಳೆ ವಿಧಾನ ಪರಿಷತ್ ಸದಸ್ಯ ತಳವಾರ್ ಸಾಬಣ್ಣ ಅವರು ಸಭಾಪತಿ ಬಸವರಾಜ ಹೊರಟ್ಟಿ ಅವರ ವಿರುದ್ಧ ಅಸಮಾಧಾನಗೊಂಡು ಸದನದ ಬಾವಿಗಿಳಿದು ಕೆಲ ಕ್ಷಣ ಪ್ರತಿಭಟನೆ ನಡೆಸಿದರು. ಗಮನ ಸೆಳೆಯುವ ಸೂಚನೆ ವೇಳೆ ಮಾತನಾಡಿದ ತಳವಾರ್ ಸಾಬಣ್ಣ, ನಮೂದಿಸಲಾಗಿರುವ ಐದು ಸಮುದಾಯಗಳನ್ನ ಎಸ್‌ಟಿ ಪಟ್ಟಿಗೆ ಸೇರಿಸಬೇಕೆಂದು ಒತ್ತಾಯಿಸಿ 30 ವರ್ಷಗಳಿಂದ ಹೋರಾಟ ನಡೆಸಲಾಗುತ್ತಿದೆ. ಹಲವು ಬಾರಿ ರಾಜ್ಯದಿಂದ ಕೇಂದ್ರಕ್ಕೆ ಶಿಫಾರಸು ಪ್ರಸ್ತಾವನೆ ಸಲ್ಲಿಸಿದ್ದರೂ 2023ರಲ್ಲಿ ಕೇಂದ್ರ ಸರಕಾರವು ಗಂಗಾಮತ ಹಾಗೂ ಪರ್ಯಾಯ ಪದಗಳ ಜಾತಿಸೂಚಕವಲ್ಲ, ಜನರಿಕ್ ಪದಗಳಾಗಿವೆ. ಹೀಗಾಗಿ ಎಸ್‌ಟಿ ಸೇರಿಸಲು ಸಾಧ್ಯವಿಲ್ಲ ಎಂದು ಶಿಫಾರಸನ್ನು ರದ್ದುಗೊಳಿಸಿತ್ತು ಎಂದರು. ಇದಕ್ಕೆ ಧ್ವನಿಗೂಡಿಸಿದ ಸದಸ್ಯ ತಿಪ್ಪಣ್ಣ ಕಮಕನೂರು ಕೋಲಿ, ಕಬ್ಬಲಿಗ, ಅಂಬಿಗ, ಬೆಸ್ತ ಹಾಗೂ ಬಾರ್ಕಿ ಸಮುದಾಯಗಳನ್ನ ಎಸ್‌ಟಿ ಪಟ್ಟಿಗೆ ಸೇರಿಸುವಂತೆ ರಾಜ್ಯ ಸರಕಾರವು ಕೇಂದ್ರಕ್ಕೆ ಮತ್ತೆ ಶಿಫಾರಸು ಕಳುಹಿಸಬೇಕೆಂದು ಮನವಿ ಮಾಡಿದರು. ಈ ವೇಳೆ ತಳವಾರ್ ಸಾಬಣ್ಣ ಮಾತನಾಡಲು ಮುಂದಾಗುತ್ತಿದ್ದಂತೆ ಆಕ್ಷೇಪಿಸಿದ ಬಸವರಾಜ ಹೊರಟ್ಟಿ ಗಮನ ಸೆಳೆಯುವ ಸೂಚನೆ ಇದಾಗಿದೆ ಭಾಷಣ ಮಾಡಬೇಡಿ ಎಂದರು. ತೃಪ್ತರಾಗದ ತಳವಾರ್, ಮಾತನಾಡಲು ಅವಕಾಶ ನೀಡುವಂತೆ ಸದನದ ಬಾವಿಗಿಳಿದು ಆಗ್ರಹಿಸಿದರು. ಈ ವೇಳೆ ಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಒಂದೆರಡು ನಿಮಿಷ ಮಾತನಾಡಲು ಅವಕಾಶ ನೀಡುವಂತೆ ಮನವಿ ಮಾಡಿದರು. ಬಳಿಕ ಸಭಾಪತಿಗಳು ಚುಟುಕಾಗಿ ಮಾತನಾಡುವಂತೆ ಸೂಚಿಸಿದರು.

ವರದಿ ಬಂದ ತಕ್ಷಣ ಸರಕಾರಕ್ಕೆ ಮಾಹಿತಿ:

ಅಂತಿಮವಾಗಿ, ಕೇಂದ್ರ ರಿಜಿಸ್ಟ್ರಾರ್ ಜನರಲ್ ಆಫ್ ಇಂಡಿಯಾವು 2023ರ ಅಕ್ಟೋಬರ್ 30 ರಂದು ಪತ್ರದಲ್ಲಿ ಪ್ರಸ್ತಾಪಿಸಿರುವ ಅಂಶಗಳ ಬಗ್ಗೆ ಪರಿಶೀಲಿಸಿ ಮತ್ತೊಮ್ಮೆ ಸೂಕ್ತ ಸಮರ್ಥನೆ/ಸ್ಪಷ್ಟೀಕರಣ/ ದಾಖಲಾತಿಗಳೊಂದಿಗೆ ವರದಿ ಸಲ್ಲಿಸುವಂತೆ ಹಂಪಿಯ ಕನ್ನಡ ವಿವಿ ಕುಲಸಚಿವರಿಗೆ ಕೋರಲಾಗಿತ್ತು. ಕುಲಸಚಿವರಿಂದ ವರದಿ ಬಂದ ತಕ್ಷಣ ಸರಕಾರಕ್ಕೆ ಮಾಹಿತಿಯನ್ನು ಸಲ್ಲಿಸಲಾಗುವುದು. ಕೋಲಿ, ಕಬ್ಬಲಿಗ, ಅಂಬಿಗ, ಬೆಸ್ತ ಜಾತಿಗಳನ್ನು ಈಗಾಗಲೇ ಕರ್ನಾಟಕದ ಪರಿಶಿಷ್ಟ ವಂಗಡದ ಪಟ್ಟಿಯಲ್ಲಿರುವ ಜಾತಿಗಳಾದ ಟೋಕರೆ ಕೋಲಿ, ಕೋಯಾ ಕೋಲಿಡೋರೆ, ಕೋಲ್ಕಾ ಜಾತಿಗಳ ಪರ್ಯಾಯ ಪದಗಳೆಂದು ಪರಿಗಣಿಸಲು ಹೊಸದಾಗಿ ಕುಲಶಾಸ್ತ್ರೀಯ ಅಧ್ಯಯನವನ್ನು ಕೈಗೊಳ್ಳಲು ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯಿಂದ 2026ರ ಫೆ.19 ರಂದು ಪ್ರಸ್ತಾವನೆ ಸ್ವೀಕೃತವಾಗಿದ್ದು, ಸರಕಾರದ ಹಂತದಲ್ಲಿ ಪರಿಶೀಲಿಸಲಾಗುತ್ತಿದೆ ಎಂದರು.

ಭಾವಿ ಮುಖ್ಯಮಂತ್ರಿ ಡಿಕೆ ಮನಸು ಮಾಡಲಿ

ಬೆಂಗಳೂರು: ಎತ್ತಿನಹೊಳೆ ಕಾಮಗಾರಿಯಿಂದಾಗಿ ನನ್ನ ಕ್ಷೇತ್ರದ (ಬೇಲೂರು) ರಸ್ತೆ ಸಂಪರ್ಕ ಹಾಳಾಗಿದ್ದು, ಭಾವಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಮಸ್ಯೆಯನ್ನು ನಿವಾರಿಸಲು ಮನಸು ಮಾಡಬೇಕು ಎಂದು ಬಿಜೆಪಿಯ ಎಚ್.ಕೆ.ಸುರೇಶ್ ಮನವಿ ಮಾಡಿದ ಪ್ರಸಂಗ ನಡೆಯಿತು. ವಿಧಾನಸಭೆಯಲ್ಲಿ ತಮ್ಮ ಬೇಡಿಕೆ ಮುಂದಿಟ್ಟ ಸುರೇಶ್, ₹500 ಕೋಟಿ ಕೇಳಿದ್ದಕ್ಕೆ ₹50 ಕೋಟಿ ಬರೆದಿದ್ದಾರೆ ಭಾವಿ ಮುಖ್ಯಮಂತ್ರಿಗಳು ನೋಡ್ರಪ್ಪ... ಎಂದು ನಮ್ಮ ಜನರಿಗೆ ಹೇಳ್ತೇನೆ ಎಂದರು.

ಅದಕ್ಕೆ ಶಿವಕುಮಾರ್, ಎತ್ತಿನಹೊಳೆ ಯೋಜನೆಗಾಗಿ ಸಕಲೇಶಪುರ ಮತ್ತು ಬೇಲೂರು ವಿಧಾನಸಭಾ ಕ್ಷೇತ್ರಕ್ಕೆ ಅನುದಾನ ಬಿಡುಗಡೆ ಮಾಡಿದ್ದೇವೆ. ಈಗ ರಾಷ್ಟ್ರೀಯ ವನ್ಯಜೀವಿ ಮಂಡಳಿಯು ಎತ್ತಿನಹೊಳೆ ಯೋಜನೆಗೆ ಇದ್ದ ತಡೆಯನ್ನು ನಿವಾರಿಸಿ, ಅರಣ್ಯ ಭೂಮಿ ಬಳಕೆಗೆ ಅನುಮತಿ ನೀಡಿದೆ ಎಂಬ ಮಾಹಿತಿಯಿದೆ. ಈ ಯೋಜನೆಯನ್ನು ಮುಂದುವರಿಸಬೇಕು. ಅದರ ವ್ಯಾಪ್ತಿಯ ಕ್ಷೇತ್ರಗಳ ಸಮಸ್ಯೆಗಳಿಗೂ ಅನುದಾನ ನೀಡಲಾಗುವುದು ಎಂದು ಭರವಸೆ ನೀಡಿದರು.

ಸ್ಪಂದನ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರಾದ ಎಮ್.ಶಿವರಾಜು ಅವರು ಕುರುಬರಹಳ್ಳಿ ಸರಕಾರಿ ಹೈಸ್ಕೂಲ್‌ಗೆ ಭೇಟಿ ನೀಡಿ ಮಕ್ಕಳ ಜತೆಯಲ್ಲಿ ಮುಕ್ತ ಸಂವಾದ ನಡೆಸಿದರು.

ಕುಡ್ಲಿ ಅಕ್ಷೋಭ್ಯ ತೀರ್ಥ ಪೀಠಾಧಿಪತಿ ಶ್ರೀ ರಾಘವಿಜಯ ತೀರ್ಥ ಸ್ವಾಮೀಜಿ ಅವರು ಮಂತ್ರಾಲಯಕ್ಕೆ ಭೇಟಿ ನೀಡಿದರು. ಈ ವೇಳೆ ಶ್ರೀ ಸುಬುಧೇಂದ್ರ ತೀರ್ಥ ಶ್ರೀ ಗಳು ಅವರನ್ನು ಆತ್ಮೀಯವಾಗಿ ಸ್ವಾಗತಿಸಿದರು.

ಸಂಪುಟ ಪುನಾರಚನೆ ಮತ್ತೆ ಮುನ್ನೆಲೆಗೆ, ಸಚಿವರ ಮೇಲೂ ಆಕ್ರೋಶ ಸಾಧ್ಯತೆ

ಆಕಾಂಕ್ಷಿಗಳ ಅಸಮಾಧಾನ ಸಭೆ, ಪಕ್ಷಕ್ಕೆ ಪೀಕಲಾಟ

ಶಿವಕುಮಾರ್ ಬೆಳ್ಳಿತಟ್ಟೆ ಬೆಂಗಳೂರು

ಬಹುತೇಕ ಮೂಲೆಗೆ ಸೇರಿದೆ ಎನ್ನಲಾಗಿದ್ದ ರಾಜ್ಯ ಸಚಿವ ಸಂಪುಟ ಪುನಾರಚನೆ ವಿಚಾರ ಮತ್ತೆ ಮುನ್ನೆಲೆಗೆ ಬರುತ್ತಿದೆ.

ಪದೇ ಪದೆ ಚರ್ಚೆಗೆ ಬಂದು ನಾಯಕತ್ವ ಬದಲಾವಣೆ ಚರ್ಚೆಯಲ್ಲಿ ಕೊಚ್ಚಿ ಹೋಗುತ್ತಿರುವ ಸಂಪುಟ ಪುನಾರಚನೆ ವಿಚಾರ ಈ ಬಾರಿ ಕೊಂಚ ಗಂಭೀರ ಸ್ವರೂಪ ಪಡೆದುಕೊಂಡರೂ ಅಚ್ಚರಿ ಎನ್ನಲಾಗುತ್ತಿದೆ. ಕಾರಣ ಈ ಬಾರಿ ಸಂಪುಟ ಪುನಾರಚನೆ ವಿಚಾರವನ್ನು ಕೈಗೆತ್ತಿಕೊಳ್ಳುತ್ತಿರುವವರು ನಿವೃತ್ತಿ ಅಂಚಿನಲ್ಲಿರುವ ಹಿರಿಯ ಶಾಸಕರಲ್ಲ, ಯಾವುದೇ ಸಮುದಾಯಕ್ಕೆ ಸೇರಿದ ಶಾಸಕರಲ್ಲ, ಹಾಗಂತ ಹೊಸದಾಗಿ ಆರಿಸಿ ಬಂದಿರುವ ಶಾಸಕರೂ ಅಲ್ಲ. ಬದಲಾಗಿ ನಾಲ್ಕೈದು ಬಾರಿ ಆಯ್ಕೆಯಾಗಿ ಈತನಕ ಒಮ್ಮೆಯೂ ಮಂತ್ರಿ ಸ್ಥಾನವನ್ನೇ ಪಡೆಯಲಾಗದ ಅಥವಾ ಕೈ ತಪ್ಪಿರುವ ಹಿರಿಯ ಶಾಸಕರು. ಹೀಗೆ 30ಕ್ಕೂ ಹೆಚ್ಚು ಮಂದಿ ಶಾಸಕರು ಅಪಾರ ಚರ್ಚೆ, ಪ್ರಯತ್ನಗಳ ನಂತರ ಬೇಸತ್ತು ಯಾವುದೇ ಜಾತಿ, ಧರ್ಮ, ಪ್ರಾದೇಶಿಕತೆಯನ್ನು ಪಕ್ಕಕ್ಕಿಟ್ಟು ಒಂದಾಗಿ ಸೇರಿ ಸಭೆ ನಡೆಸಲಿದ್ದಾರೆ.

ಮಾರ್ಚ್ 11ರ ಸಂಜೆ 7 ಗಂಟೆಗೆ ಖಾಸಗಿ ಹೊಟೇಲ್‌ನಲ್ಲಿ ಸಭೆ ನಡೆಯಲಿದ್ದು, ಇದಕ್ಕೆ ಕಾಂಗ್ರೆಸ್‌ನ ಅನೇಕ ಹಿರಿಯ ನಾಯಕರು, ವಿಧಾನ ಪರಿಷತ್ ಸದಸ್ಯರು ಮತ್ತು ಮುಖಂಡರ ಬೆಂಬಲವೂ ಇದೆ ಎನ್ನಲಾಗಿದೆ. ಅಂದಹಾಗೆ ನಾಯಕತ್ವ ಬದಲಾವಣೆ ಕುರಿತ ನಿತ್ಯ ಸುದ್ದಿಗಳ ಬಿಸಿ ಚರ್ಚೆಗಳ ನಡೆವೆಯೇ ಹಿರಿಯ ಶಾಸಕರು ಸಭೆ ಸೇರಿ ಸಂಪುಟ ಪುನಾರಚನೆ ಬಗ್ಗೆ ಚರ್ಚಿಸುತ್ತಿರುವುದು ಹೆಚ್ಚು ಮಹತ್ವ ಪಡೆದುಕೊಂಡಿದ್ದು, ವಿಧಾನಮಂಡಲ ಅಧಿವೇಶನ ಸಂದರ್ಭದಲ್ಲಿ ಹೆಚ್ಚು ಚರ್ಚೆಗೆ ಗ್ರಾಸವಾಗಲಿದೆ.

ವಿಶೇಷವೆಂದರೆ ಈ ಶಾಸಕರು ಸಭೆ ನಡೆಸುವ ಮುನ್ನ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಭೇಟಿ ಮಾಡಿ ತಮ್ಮ ಬೇಡಿಕೆಗಳನ್ನು ಸಲ್ಲಿಸಿದ್ದಾರೆ. ಹಾಗೆಯೇ ಸಭೆ ನಡೆಸಲು ಅನುಮತಿಯನ್ನೂ ಪಡೆದಿದ್ದಾರೆ. ಈ ಸಭೆಯ ನಂತರ ಶಾಸಕರು ಮತ್ತೆ ಮುಖ್ಯಮಂತ್ರಿ ಹಾಗೂ ಉಪ ಮುಖ್ಯಮಂತ್ರಿ ಅವರನ್ನು ಭೇಟಿ ಮಾಡಿ ಸಂಪುಟಕ್ಕೆ ತಮ್ಮನ್ನು ಸೇರಿಸಿಕೊಳ್ಳಬೇಕೆನ್ನುವ ಬೇಡಿಕೆ ಸಲ್ಲಿಸಲಿದ್ದಾರೆ. ನಂತರ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ್ ಖರ್ಗೆ ಅವರನ್ನು ಭೇಟಿ ಮಾಡಿ ತಮ್ಮ ಆಕಾಂಕ್ಷೆಯನ್ನು

ಮನವರಿಕೆ ಮಾಡಿಕೊಡಲಿದ್ದಾರೆ ಎನ್ನಲಾಗಿದೆ.

ಈ ವಿಚಾರದ ಬಗ್ಗೆ ಜಾಗೃತರಾಗಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಸ್ತುತ ನಡೆಯುತ್ತಿರುವ ಬಜೆಟ್ ಅಧಿವೇಶನದ ನಡುವೆ ಅಥವಾ ನಂತರ ಪಕ್ಷದ ಹೈಕಮಾಂಡ್ ಭೇಟಿ ಮಾಡಿ ಸಂಪುಟ ಪುನಾರಚನೆ ಬಗ್ಗೆ ಚರ್ಚಿಸಿ ಒಪ್ಪಿಗೆ ಪಡೆಯುವ ಸಾಧ್ಯತೆ ಇದೆ ಎಂದು ಅವರ ಆಪ್ತ ಮೂಲಗಳು ತಿಳಿಸಿವೆ. ಇದರ ಮಧ್ಯೆ ನಾಯಕತ್ವ ಬದಲಾವಣೆಗೆ ಒತ್ತಡ ಹಾಕುತ್ತಿರುವ ಕಾಂಗ್ರೆಸ್‌ನ ಮತ್ತೊಂದು ಶಾಸಕರ ಬಣ, ಸದ್ಯಕ್ಕೆ ನಾಯಕತ್ವ ಬದಲಾವಣೆ ನಂತರ ಸಂಪುಟ ಪುನಾರಚನೆ ಮಾಡಿ ಎನ್ನುವ ಬೇಡಿಕೆ ಸಲ್ಲಿಸಿರುವುದರಿಂದ ಹೈಕಮಾಂಡ್ ಈ ಬಾರಿ ಯಾವ ರೀತಿ ನಿರ್ಧಾರ ಕೈಗೊಳ್ಳಲಿದೆ ಎನ್ನುವುದು ಕುತೂಹಲ ಕೆರಳಿಸಿದೆ.

ಶಾಸಕರು ಮಾತ್ರವಲ್ಲ, ಇವರೂ ಬರುತ್ತಾರೆ

ಆಳಂದ ಕ್ಷೇತ್ರದ ಶಾಸಕರೂ ಹಾಗೂ ಹಿರಿಯರೂ ಆದ ಬಿ.ಆರ್.ಪಾಟೀಲ್, ಅಥಣಿಯ ಲಕ್ಷ್ಮಣ ಸವದಿ, ರಾಮದುರ್ಗ ಕ್ಷೇತ್ರದ ಅಶೋಕ್ ಪಟ್ಟಣ, ಮಾಲೂರಿನ ಕೆ.ವೈ.ನಂಜೇಗೌಡ, ಬಂಗಾರಪೇಟೆಯ ನಾರಾಯಣ ಸ್ವಾಮಿ, ಕೊಪ್ಪಳದ ರಾಘವೇಂದ್ರ ಹಿಟ್ನಾಳ, ರಮೇಶ್ ಬಂಡೀಸಿದ್ದೇಗೌಡ, ಬಾಗೇಪಲ್ಲಿಯ ಸುಬ್ಬಾರೆಡ್ಡಿ, ಸಾಗರದ ಬೇಳೂರು ಗೋಪಾಲಕೃಷ್ಣ, ಮಳವಳ್ಳಿಯ ಪಿ.ಎಂ.ನರೇಂದ್ರ ಸ್ವಾಮಿ, ಮಾಗಡಿ ಬಾಲಕೃಷ್ಣ, ಚಳ್ಳಕೆರೆ ರಘುಮೂರ್ತಿ, ಅರಸೀಕೆರೆ ಶಿವಲಿಂಗೇಗೌಡ, ತಿಪಟೂರು ಷಡಕ್ಷರಿ, ಶಿರಾ ಟಿ.ಬಿ.ಜಯಚಂದ್ರ, ಹಾವೇರಿ ಜಿಲ್ಲೆಯ ಬ್ಯಾಡಗಿ ಬಸವರಾಜ ನೀಲಪ್ಪ ಶಿವಣ್ಣನವರ್, ಮೊಳಕಾಲ್ಮೂರಿನ ಎನ್.ವೈ. ಗೋಪಾಲಕೃಷ್ಣ, ಭದ್ರಾವತಿಯ ಬಿ.ಕೆ.ಸಂಗೇಮೇಶ್ ಸೇರಿದಂತೆ ಅನೇಕ ಶಾಸಕರು ಭಾಗವಹಿಸಲಿದ್ದಾರೆ. ಇವರ ಜತೆ ಈ ಹಿಂದೆ ಸಚಿವರಾಗಿದ್ದ ಶಿರಾದ ಟಿ.ಬಿ.ಚಯಚಂದ್ರ ಹಾಗೂ ಹಿರಿಯ ನಾಯಕ ಬಿ.ಕೆ. ಹರಿಪ್ರಸಾದ್ ಸೇರಿದಂತೆ ಅನೇಕರು ಭಾಗವಹಿಸಿ ಬೆಂಬಲ ನೀಡುವ ಸಂಭವ ಕಾಣುತ್ತಿದೆ.

ಯಾವ ಮಂತ್ರಿ ಮೇಲೆ ಮುನಿಸು? ಏಕೆ?

ಮುಂದಿನ ಬಾರಿ ಚುನಾವಣೆಯಲ್ಲಿ ಸ್ಪರ್ಧಿಸುವುದು ಬೇಡ ಎನ್ನುವ ಚಿಂತನೆಯಲ್ಲಿರುವ ಹಾಗೂ ಒಂದು ರೀತಿ ರಾಜಕೀಯ ಅಳಿವಿನಂಚಿನಲ್ಲಿರುವ ಸುಮಾರು 15 ಹಿರಿಯ ಶಾಸಕರು ಸಂಪುಟ ಪುನಾರಚನೆಗಾಗಿ ಪಕ್ಷದ ಹೈಕಮಾಂಡ್ ಕದ ತಟ್ಟಿ ವಿಫಲವಾಗಿದ್ದರು. ನಂತರ ಇತ್ತೀಚೆಗೆ 30ಕ್ಕೂ ಹೆಚ್ಚು ಹೊಸದಾಗಿ ಆರಿಸಿ ಬಂದಿರುವ ಶಾಸಕರು ಸಂಪುಟ ಪುನಾರಚನೆ ಮಾಡಬೇಕು. ಅದರಲ್ಲಿ ಕನಿಷ್ಠ ನಾಲ್ಕು ಮಂದಿಗೆ ಅವಕಾಶ ನೀಡಬೇಕೆಂದು ಒತ್ತಾಯಿಸಿದ್ದರು. ಇದಾದ ನಂತರ ಈಗ 3ಕ್ಕಿಂತ ಹೆಚ್ಚು ಬಾರಿ ಆಯ್ಕೆಯಾಗಿರುವ ಕಾಂಗ್ರೆಸ್‌ನ ಹಿರಿಯ ಶಾಸಕರು ಸಭೆ ನಡೆಸಿ ಸಂಪುಟ ಪುನಾರಚನೆ ಆಗಲೇಬೇಕೆಂದು ಪಟ್ಟು ಹಿಡಿಯಲಿದ್ದಾರೆ. ನಾಯಕತ್ವ ಬದಲಾವಣೆ ಯಾವಾಗಲಾದರೂ ಮಾಡಿ, ಯಾರಾದರೂ ನಾಯಕರಾಗಲಿ, ಆದರೆ ನಮಗೆ ಮಾತ್ರ ಸಂಪುಟದಲ್ಲಿ ಅವಕಾಶ ಕಲ್ಪಿಸಿ ಎಂದು ಆಗ್ರಹಿಸಲಿದ್ದಾರೆ ಎಂದು ತಿಳಿದುಬಂದಿದೆ. ಇದೇ ವೇಳೆ ಶಾಸಕರು ಸಭೆಯಲ್ಲಿ ವಿವಿಧ ಇಲಾಖೆಗಳ ಮಂತ್ರಿಗಳ ಮೇಲೆ ದೂರುಗಳನ್ನು ಸಲ್ಲಿಸಿ ಚರ್ಚಿಸುವ ಸಾಧ್ಯತೆ ಇದೆ. ಅದರಲ್ಲೂ ವಿಶೇಷವಾಗಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಸಣ್ಣ ನೀರಾವರಿ ಇಲಾಖೆ, ಗೃಹ ಇಲಾಖೆ, ವಸತಿ ಇಲಾಖೆ, ಉನ್ನತ ಶಿಕ್ಷಣ ಇಲಾಖೆ ಹಾಗೂ ತೋಟಗಾರಿಕೆ ಸೇರಿದಂತೆ ಅನೇಕ ಇಲಾಖೆ ಮಂತ್ರಿಗಳ ಅಸಹಕಾರ ಮತ್ತು ಸ್ಪಂದನೆ ಇಲ್ಲದಿರುವ ಬಗ್ಗೆಯೂ ಸಭೆಯಲ್ಲಿ ಚರ್ಚಿಸುವ ಸಾಧ್ಯತೆ ಇದೆ ಎಂದು ಸಭೆಯಲ್ಲಿ ಭಾಗವಹಿಸಲಿರುವ ಶಾಸಕರು ಹೇಳಿದ್ದಾರೆ.

1110 ಕಿ.ಮೀಟರ್ ರಸ್ತೆ ಅಭಿವೃದ್ಧಿಗೆ ಕ್ರಮ

ವಿಧಾನಸಭೆ: ರಾಜ್ಯದಲ್ಲಿ ಶೈಕ್ಷಣಿಕ ಮತ್ತು ಔದ್ಯೋಗಿಕ ವಲಯಗಳಿಗೆ ಸಂಪರ್ಕ ಕಲ್ಪಿಸಿ ಆರ್ಥಿಕ ಅಭಿವೃದ್ಧಿ ಚಟುವಟಿಕೆಗಳಿಗೆ ಬೆಂಬಲ ನೀಡುವಂತಹ ಪ್ರಗತಿಪಥ ಯೋಜನೆಗೆ ಒಂದುವರೆ ತಿಂಗಳ ಒಳಗಾಗಿ ಟೆಂಡರ್ ಕರೆದು 1110 ಕಿ.ಮೀ ಉದ್ದದ ರಸ್ತೆಯನ್ನು ಒಂದುವರೆ ವರ್ಷಗಳ ಒಳಗಾಗಿ ಅಭಿವೃದ್ಧಿಪಡಿಸುವುದಾಗಿ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ ಖರ್ಗೆ ತಿಳಿಸಿದರು.

ಪ್ರಶ್ನೋತ್ತರದ ಅವಧಿಯಲ್ಲಿ ಅರಸೀಕೆರೆ ಕ್ಷೇತ್ರದ ಶಾಸಕ ಕೆ.ಎಂ.ಶಿವಲಿಂಗೇಗೌಡ ಅವರು ಪ್ರಶ್ನೆ ಕೇಳಿ ಪ್ರಗತಿಪಥ ಉತ್ತಮ ಯೋಜನೆಯಾಗಿದೆ. ಆದರೆ ಎಡಿಬಿ ಸಂಸ್ಥೆಯ ನಿಯಮಾವಳಿ ಗಳಿಂದಾಗಿ ವಿಳಂಬವಾಗುತ್ತಿದೆ ಎಂದರು. ಈ ವೇಳೆ ಬಿಜೆಪಿಯ ಶಾಸಕ ವಿ ಸುನಿಲ್ ಕುಮಾರ್ ಪ್ರಗತಿಪಥ ಯೋಜನೆಗಳ ಬಗ್ಗೆ ಮೂರು ವರ್ಷಗಳಿಂದಲೂ ಕೇಳುತ್ತಿದ್ದೇವೆ . ನಿಧಾನ ಪಥ ಎಂದು ಹೆಸರು ಬದಲಾವಣೆ ಮಾಡಿ ಎಂದರು.

ಇದಕ್ಕೆ ಉತ್ತರಿಸಿದ ಸಚಿವ ಪ್ರಿಯಾಂಕ ಖರ್ಗೆ, ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆ ಜನಸಂಖ್ಯೆ ಆಧಾರಿತವಾಗಿ ಮಂಜೂರಾತಿ ಮಂಜೂರಾಗುತ್ತದೆ. ರಾಜ್ಯಕ್ಕೆ 50 ರಸ್ತೆಗಳು ಸಿಗುವುದಿಲ್ಲ. ಈ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಮಾಡಿ ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆಯ ಮಾದರಿಯಲ್ಲೇ ಅದಕ್ಕಿಂತಲೂ ಉತ್ತಮವಾದ ರಸ್ತೆಗಳನ್ನು ನಿರ್ಮಿಸಲು ಪ್ರಗತಿಪತ ಯೋಜನೆ ರೂಪಿಸಲಾಗಿದೆ. 5180 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಒಟ್ಟು 7110 ಕಿಲೋಮೀಟರ್ ರಸ್ತೆ ಅಭಿವೃದ್ಧಿಯನ್ನು ಕೈಗೆತ್ತಿಕೊಳ್ಳಲಾಗುತ್ತಿದೆ ಆದರೆ ಸಾಲದ ರೂಪದಲ್ಲಿ 3242 ಕೋಟಿ ರೂಪಾಯಿಗಳ ಆರ್ಥಿಕ ನೆರವು ನೀಡುವ ಏಷಿಯನ್ ಡೆವಲಪ್ಮೆಂಟ್ ಬ್ಯಾಂಕ್ ಹಲವಾರು ತಕರಾರು ತೆಗೆದಿದೆ. ಮೀಸಲು ಅರಣ್ಯ ಪ್ರದೇಶದಲ್ಲಿನ ರಸ್ತೆಗಳನ್ನು ಕೈಗೆತ್ತಿಕೊಳ್ಳಬಾರದು. ಆರ್ಥಿಕ ಸೂಕ್ಷ್ಮ ವಲಯದ ರಸ್ತೆಗಳನ್ನು ಕೈಬಿಡಬೇಕು ಎಂದು ತಕರಾರು ತೆಗೆದಿದೆ ಎಂದರು.

ರಾಜ್ಯ ಸರಕಾರ ಪ್ರಗತಿಪಥ ಯೋಜನೆಗಾಗಿ 1443 ಕೋಟಿ ರು. ಖರ್ಚು ಮಾಡುತ್ತಿದೆ. ರಸ್ತೆಗಳ ನಿರ್ವಹಣೆಗಾಗಿ 54 ಕೋಟಿ ಮೀಸಲಿಡಲಾಗಿದೆ. 1353 ರಸ್ತೆಗಳನ್ನು ವಿಧಾನಸಭಾ ಕ್ಷೇತ್ರವಾರು ಹಂಚಿಕೆ ಮಾಡಲಾಗಿದೆ. ಈ ಕುರಿತ ಪ್ರಸ್ತಾವನೆಗಳನ್ನು ವಿಸ್ತೃತ ಯೋಜನಾ ವರದಿಯೊಂದಿಗೆ ಸಲ್ಲಿಸಲಾಗಿದೆ. 793 ಪ್ರಸ್ತಾವನೆಗಳಿಗೆ ಎಡಿಬಿ ಆಕ್ಷೇಪಣೆ ಸಲ್ಲಿಸಿದೆ. 999 ರಸ್ತೆಗಳ ವಿಸ್ತೃತ ಯೋಜನಾ ವರದಿಗಳ ಪೈಕಿ 253 ಕೆಲಸಗಳಿಗೆ ಮುಂದಿನ ಒಂದುವರೆ ತಿಂಗಳ ಒಳಗಾಗಿ ಟೆಂಡರ್ ಆರಂಭಿಸಲಾಗುವುದು.

-ಪ್ರಿಯಾಂಕ್ ಖರ್ಗೆ, ಸಚಿವ

ಗ್ರಾಪಂ ಸಿಬ್ಬಂದಿ ವೇತನ ಪರಿಷ್ಕರಣೆಗೆ ಕ್ರಮ

ಗ್ರಾಮ ಪಂಚಾಯಿತಿ ಸಿಬ್ಬಂದಿಗಳ ವೇತನ ಪರಿಷ್ಕರಣೆಗೆ ಆರ್ಥಿಕ ಇಲಾಖೆಯ ಜೊತೆ ಚರ್ಚೆ ನಡೆಸಿ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ ಖರ್ಗೆ ಭರವಸೆ ನೀಡಿದರು.

ವಿಧಾನಸಭೆಯ ಪ್ರಶ್ನೋತ್ತರದ ಅವಧಿಯಲ್ಲಿ ಶೃಂಗೇರಿ ಕ್ಷೇತ್ರದ ಶಾಸಕ ಟಿಡಿ ರಾಜೇಗೌಡ ಪ್ರಶ್ನೆ ಕೇಳಿ, ಬಯಲು ಸೀಮೆ ಗ್ರಾಮ ಪಂಚಾಯಿತಿಗಳಲ್ಲಿರುವ ಸಿಬ್ಬಂದಿಗಳು 30 ರಿಂದ 40 ಸಾವಿರ ರೂಪಾಯಿಗಳ ವರೆಗೂ ವೇತನ ಪಡೆಯುತ್ತಿದ್ದಾರೆ. ಆದರೆ ಮಲೆನಾಡು ಭಾಗದ ಸಿಬ್ಬಂದಿಗಳಿಗೆ 18 ರಿಂದ 20 ಸಾವಿರ ರೂಪಾಯಿ ಮಾತ್ರ ಸಿಗುತ್ತಿದೆ, ರಾಜ್ಯದ್ಯಂತ ಏಕರೂಪ ವೇತನ ವ್ಯವಸ್ಥೆ ಜಾರಿಗೊಳಿಸಬೇಕು ಎಂದು ಆಗ್ರಹಿಸಿದ್ದರು.

ಸಚಿವ ಪ್ರಿಯಾಂಕ ಖರ್ಗೆ ಉತ್ತರ ನೀಡಿ, ಮಲೆನಾಡು ಭಾಗಕಷ್ಟೆ ಅಲ್ಲ ರಾಜ್ಯಾದ್ಯಂತ ಗ್ರಾಮ ಪಂಚಾಯತಿಯ ಬಿಲ್ ಕಲೆಕ್ಟರ್, ನೀರು ಗಂಟಿಗಳು ಹಾಗೂ ಸಹಾಯಕರಿಗೆ ಕನಿಷ್ಠ ವೇತನ ಜಾರಿಗೊಳಿಸಬೇಕು ಎಂದು ಬೇಡಿಕೆ ಇದೆ. ಈ ಮೊದಲು 2022 ರಲ್ಲಿ ಕನಿಷ್ಠ ವೇತನ ಜಾರಿಗೊಳಿಸಲಾಗಿದೆ. ಕಾರ್ಮಿಕ ಇಲಾಖೆ ಕನಿಷ್ಠ ವೇತನ ಮಿತಿಯನ್ನು ಪರಿಷ್ಕರಣೆ ಮಾಡಿ 2025 ಏಪ್ರಿಲ್ 11ರಂದು ಕರಡು ಅಧಿಸೂಚನೆ ಹೊರಡಿಸಿದೆ. ಅಂತಿಮ ಅಧಿಸೂಚನೆ ಜಾರಿಯಾದರೆ ಅದನ್ನು ಗ್ರಾಮ ಪಂಚಾಯಿತಿಗಳಲ್ಲಿ ಅಳವಡಿಸಿಕೊಳ್ಳಲಾಗುವುದು. ವೇತನ ಪರಿಷ್ಕರಣೆಗಾಗಿ ರಾಜ್ಯ ಆರ್ಥಿಕ ಇಲಾಖೆಗೆ 2024 ಫೆಬ್ರವರಿ 22 ಮತ್ತು 2025 ಆಗಸ್ಟ್ 7ರಂದು ಎರಡು ಬಾರಿ ಪ್ರಸ್ತಾವನೆ ಕಳುಹಿಸಿದ್ದೇವೆ. ಖಾಲಿಯಾಗಿರುವ ಹುದ್ದೆಗಳಿಗೆ ಸ್ಥಳೀಯವಾಗಿ ಜಿಲ್ಲಾ ಪಂಚಾಯಿತಿ ಗಳಿಂದಲೇ ನೇಮಕಾತಿ ಮಾಡಿಕೊಳ್ಳಲು ಅವಕಾಶವಿದೆ ಎಂದು ತಿಳಿದರು.

ಪ್ರಗತಿಪಥ 2024ರಲ್ಲಿ 2027ರ ವೇಳೆಗೆ ಪೂರ್ಣಗೊಳಿಸಲಾಗುವುದು ಇದು ದೇಶದಲ್ಲಿ ಅತಿ ದೊಡ್ಡದಾದ ರಸ್ತೆ ಸಂಪರ್ಕ ಜಾಲವಾಗಲಿದೆ ಎಂದರು. ಸಭಾಧ್ಯಕ್ಷ ಯು.ಟಿ.ಖಾದರ್ ಕೆಲವು ರಸ್ತೆಗಳಿಗೆ ಪ್ರಗತಿಪಥ ಯೋಜನೆ ಅಡಿ ಅಭಿವೃದ್ಧಿ ಸಾಧ್ಯವಾಗದೇ ಇದ್ದರೆ ಕನಿಷ್ಠ ದುರಸ್ತಿಗಾದರು ಹಣ ಬಿಡುಗಡೆ ಮಾಡಿ ಕಡ್ಡಾಯವಾಗಿ ಏಳು ಮೀಟರ್ ಅಗಲ ಇರಬೇಕು ಎಂಬ ನಿಯಮ ಸಡಿಲ ಮಾಡಿ. ಕರಾವಳಿ ಮಲೆನಾಡು ಭಾಗದಲ್ಲಿ ಅಗಲದ ರಸ್ತೆ ವಿಸ್ತೀರ್ಣ ದೊರೆಯುವುದು ಕಷ್ಟ ಎಂದರು.

ಸಮಾಚಾರ ಸಣ್ಣದಲ್ಲ

ಜೈಶಂಕರ್-ಸೆರ್ಗೆಯ್ ತೈಲ ಬಿಕ್ಕಟ್ಟು ಚರ್ಚೆ

ದೆಹಲಿ: ಪಶ್ಚಿಮ ಏಷ್ಯಾ ಸಂಘರ್ಷ ಇಂಧನ ಪೂರೈಕೆಯನ್ನು ಅಸ್ಥಿರಗೊಳಿಸುತ್ತಿರುವುದರಿಂದ ವಿದೇಶಾಂಗ ಸಚಿವ ಎಸ್. ಜೈಶಂಕರ್ ಬುಧವಾರ ರಷ್ಯಾ



ವಿದೇಶಾಂಗ ಸಚಿವ ಸೆರ್ಗೆಯ್ ಲಾವ್ರೊವ್ ಮತ್ತು ಯುರೋಪಿಯನ್ ಒಕ್ಕೂಟದ ವಿದೇಶಾಂಗ ನೀತಿ ಮುಖ್ಯಸ್ಥೆ ಕಾಜಾ ಕಲ್ಲಾಸ್ ಅವರೊಂದಿಗೆ ಮಾತನಾಡಿ, ತೈಲ ಬಿಕ್ಕಟ್ಟಿನ ಪರಿಣಾಮವನ್ನು ನಿಭಾಯಿಸಲು ಸಹಕಾರ ಕೋರಿದ್ದಾರೆ. ಪರ್ಷಿಯನ್ ಕೊಲ್ಲಿ ಮತ್ತು ಓಮನ್ ಕೊಲ್ಲಿ ನಡುವಿನ ಕಿರಿದಾದ ಹಡಗು ಮಾರ್ಗವಾದ ಹಾರ್ಮುಜ್ ಜಲಸಂಧಿಯನ್ನು ಇರಾನ್ ನಿರ್ಬಂಧಿಸಿದ ನಂತರ ಜಾಗತಿಕ ತೈಲ ಮತ್ತು ಅನಿಲ ಬೆಲೆಗಳು ಏರಿಕೆಯಾಗಿವೆ. ಇದು ಜಾಗತಿಕ ತೈಲ ಮತ್ತು ಎಲ್‌ಎನ್‌ಜಿ (ದ್ರವೀಕೃತ ನೈಸರ್ಗಿಕ ಅನಿಲ) ಸರಿಸುಮಾರು 20 ಪ್ರತಿಶತವನ್ನು ನಿರ್ವಹಿಸುತ್ತದೆ. ಪಶ್ಚಿಮ ಏಷ್ಯಾ ಸಂಘರ್ಷ ಮತ್ತು ಅದರ ಪರಿಣಾಮಗಳ ಕುರಿತು ಯುರೋಪಿಯನ್ ಒಕ್ಕೂಟದ ವಿದೇಶಾಂಗ ವ್ಯವಹಾರ ಮತ್ತು ಭದ್ರತಾ ನೀತಿಯ ಉನ್ನತ ಪ್ರತಿನಿಧಿ ಕಲ್ಲಾಸ್ ಅವರೊಂದಿಗೆ ಉಪಯುಕ್ತ ಚರ್ಚೆ ನಡೆಸಿರುವುದಾಗಿ ವಿದೇಶಾಂಗ ಸಚಿವರು ಹೇಳಿದ್ದಾರೆ.

ರೈಲಿನೊಳಗೆ ಊಟ ಸ್ಥಗಿತ ಸಾಧ್ಯತೆ

ದೆಹಲಿ: ದೇಶಾದ್ಯಂತ ಕಂಡುಬರುತ್ತಿರುವ ಎಲ್‌ಪಿಜಿ ಸಿಲಿಂಡರ್‌ಗಳ ಕೊರತೆಯು ಈಗ ರೈಲುಗಳ ಊಟದ ವ್ಯವಸ್ಥೆಯ ಮೇಲೆ ನೇರ ಪರಿಣಾಮ ಬೀರಿದೆ. ದೂರದ ಪ್ರಯಾಣ ಮಾಡುವ ಜನರಿಗೆ ಬಿಸಿ ಬಿಸಿ ಊಟ ನೀಡುತ್ತಿದ್ದ ರೈಲ್ವೆ ಅಡುಗೆಕೋಣೆಗಳು ಈಗ ಅನಿಲದ ಅಭಾವದಿಂದಾಗಿ ಸಂಕಷ್ಟಕ್ಕೆ ಸಿಲುಕಿವೆ. ರೈಲ್ವೆ ಅಧಿಕಾರಿಗಳ ಪ್ರಕಾರ ಎಲ್‌ಪಿಜಿ ಕೊರತೆಯು ರೈಲ್ವೆ ಬೇಸ್ ಕಿಚನ್‌ಗಳ ಮೇಲೆ ನೇರ ಪರಿಣಾಮ ಬೀರುತ್ತಿದೆ. ದೂರದ ಪ್ರಯಾಣದ ರೈಲುಗಳಿಗೆ ಬೇಕಾದ ಆಹಾರವನ್ನು ಇಂತಹ ಬೇಸ್ ಕಿಚನ್‌ಗಳಲ್ಲಿ ತಯಾರಿಸಿ ನಂತರ ಪ್ಯಾಂಟ್ರಿ ಕಾರ್‌ಗಳಿಗೆ ಲೋಡ್ ಮಾಡಲಾಗುತ್ತದೆ. ನಂತರ ಪ್ಯಾಂಟ್ರಿಕಾರ್‌ಗಳಲ್ಲಿ ಆಹಾರವನ್ನು ಬಿಸಿ ಮಾಡುವ ಮತ್ತು ವಿತರಿಸುವ ಕೆಲಸ ಮಾತ್ರ ನಡೆಯುತ್ತದೆ. ಈಗ ಆಹಾರ ತಯಾರಿಸುವ ಕೇಂದ್ರಗಳಲ್ಲೇ ಅನಿಲದ ಕೊರತೆ ಇರುವುದರಿಂದ ಊಟ ತಯಾರಿಕೆಗೆ ದೊಡ್ಡ ಅಡ್ಡಿ ಉಂಟಾಗಿದೆ. ಒಂದು ವೇಳೆ ಪರಿಸ್ಥಿತಿ ಹೀಗೇ ಮುಂದುವರಿದರೆ ಟಿಕೆಟ್ ಬುಕ್ ಮಾಡುವಾಗಲೇ ಊಟಕ್ಕೆ ಹಣ ಪಾವತಿಸಿದ ಪ್ರಯಾಣಿಕರಿಗೆ ರೈಲ್ವೆ ಇಲಾಖೆಯು ಆ ಹಣವನ್ನು ಮರುಪಾವತಿಸುವ ಸಾಧ್ಯತೆಯೂ ಇದೆ.

ತಿರುಪತಿ ದರ್ಶನ: ಟಿಟಿಡಿ ಸೂಚನೆ

ತಿರುಪತಿ: ತಿರುಮಲ ತಿಮ್ಮಪ್ಪನ ದರ್ಶನಕ್ಕೆ ಆಗಮಿಸುವ 300 ರುಪಾಯಿ ಪ್ರತ್ಯೇಕ ದರ್ಶನ, ಸ್ಲಾಟೆಡ್ ಸರ್ವದರ್ಶನ ಟೋಕನ್ ಇರುವ ಭಕ್ತರು ನಿಗದಿ ಪಡಿಸಿದ ಸಮಯಕ್ಕೆ ಆಗಮಿಸಿದರೆ ಮಾತ್ರ ಅನುಮತಿ ನೀಡಲಾಗುತ್ತದೆ ಎಂದು ತಿರುಮಲ ತಿರುಪತಿ ದೇವಸ್ಥಾನ (ಟಿಟಿಡಿ) ಸ್ಪಷ್ಟಪಡಿಸಿದೆ. ದರ್ಶನಕ್ಕಾಗಿ ನಿಗದಿತ ಅವಧಿಗೂ ಮುನ್ನ ಆಗಮಿಸಿ ಭಕ್ತರು ಸಮಸ್ಯೆ ಎದುರಿಸಬೇಡಿ ಎಂದು ಅದು ಮನವಿ ಮಾಡಿದೆ. ಭಕ್ತರಿಗೆ ಆರಾಮದಾಯಕ ದರ್ಶನ ಕಲ್ಪಿಸಲು ತೆಗೆದುಕೊಂಡ ಈ ನಿರ್ಧಾರವನ್ನು ಸೋಮವಾರದಿಂದ ಕಟ್ಟುನಿಟ್ಟಾಗಿ ಜಾರಿಗೆ ತರಲಾಗುವುದು ಎಂದು ಟಿಟಿಡಿ ಪ್ರಕಟಣೆಯಲ್ಲಿ ತಿಳಿಸಿದೆ. ಭಕ್ತರು ತಮಗೆ ನಿಗದಿ ಪಡಿಸಿರುವ ಸಮಯಕ್ಕೆ ಮುನ್ನ ಕ್ಯೂ ಲೈನ್ ಬಳಿ ಆಗಮಿಸಿ ಸಮಸ್ಯೆ ಎದುರಿಸಬೇಡಿ ಎಂದು ಟಿಟಿಡಿ ಮನವಿ ಮಾಡಿದ್ದು, ಭಕ್ತರು ಸಮಯ ಪಾಲನೆ ಮಾಡದಿದ್ದರೆ ಟಿಟಿಡಿ ಸಿಬ್ಬಂದಿಗೂ ಇದರಿಂದ ಸಮಸ್ಯೆ ಆಗುತ್ತದೆ. ಭಕ್ತರು ಹಾಗೂ ಸಿಬ್ಬಂದಿ ಇಬ್ಬರೂ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ ಎಂದು ಟಿಟಿಡಿ ಸೂಚನೆ ನೀಡಿದೆ.

ರಸ್ತೆಗುಂಡಿ: ಬ್ರೈನ್‌ಡೆಡ್ ಆಗಿದ್ದ ಮಹಿಳೆಗೆ ಜೀವ

ಲಖನೌ: ಉತ್ತರ ಪ್ರದೇಶದಲ್ಲಿ ರಸ್ತೆಗುಂಡಿಯಿಂದ ಮಹಿಳೆಯೊಬ್ಬರು ಬದುಕುಳಿದ ಪವಾಡ ಸುದ್ದಿ ದೇಶದ ಗಮನ ಸೆಳೆದಿದೆ. ಉತ್ತರ ಪ್ರದೇಶದ 50 ವರ್ಷದ ವಿನೀತಾ ಶುಕ್ಲಾ ಎಂಬ ಮಹಿಳೆ ಗಂಭೀರ ಆರೋಗ್ಯ ಸಮಸ್ಯೆಯಿಂದ ಮೆದುಳು ನಿಷ್ಕ್ರಿಯಕ್ಕೀಡಾಗಿದ್ದರು. ಅವರನ್ನು ಮೀರತ್ ನಗರ ಆಸ್ಪತ್ರೆಗೆ ದಾಖಲಿಸಿದ್ದಾಗ ವೈದ್ಯರು ಪರೀಕ್ಷೆ ನಡೆಸಿ 'ಬ್ರೈನ್ ಡೆಡ್' ಎಂದು ವರದಿ ಕೊಟ್ಟಿದ್ದರು. ಪತಿ ಕುಲ್ದೀಪ್ ಕುಮಾರ್ ಶುಕ್ಲಾ ಪತ್ನಿಯನ್ನು ಅಂಬುಲೆನ್ಸ್‌ನಲ್ಲಿ ಮನೆಗೆ ಕರೆದೊಯ್ಯುತ್ತಿದ್ದ ವೇಳೆ, ಬರೇಲಿ-ಹರಿದ್ವಾರ ರಾಷ್ಟ್ರೀಯ ಹೆದ್ದಾರಿ 74ರಲ್ಲಿ ರಸ್ತೆಯಲ್ಲಿದ್ದ ದೊಡ್ಡ ಗುಂಡಿಗೆ ಇಳಿದಿದೆ. ಈ ವೇಳೆ ಕೋಮಾದಲ್ಲಿದ್ದ ಆಕೆಯ ದೇಹದಲ್ಲಿ ಚಲನೆ ಕಾಣಿಸಿಕೊಂಡಿದೆ. ತಕ್ಷಣ ಆಕೆಯನ್ನು ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾಗಿದ್ದು ಸಾವಿನ ಅಂಚಿನಲ್ಲಿದ್ದ ವಿನೀತಾ ಈಗ ಸಂಪೂರ್ಣವಾಗಿ ಚೇತರಿಸಿಕೊಂಡಿದ್ದಾರೆ.

ವಿಶ್ವವಾಣಿ ಕ್ಲಬ್ ಹೌಸ್
12.03.2026
ಸಂಜೆ: 06.55 ರಿಂದ 08.05 ರವರೆಗೆ

ಗುರುವಾರದ ಅತಿಥಿ
ಡಾ ಮಲ್ಲಿಕಾರ್ಜುನ ಡಂಬಳ
ವಿಷಯ
ವ್ಯಾಕ್ಸೀನ್‌ಗಳು ಮತ್ತು ಆಯುರ್ವೇದ
vishwavani.news

ಮಧ್ಯಪ್ರಾಚ್ಯ ಯುದ್ಧ | ಬಂದರುಗಳಲ್ಲಿ ಸಿಲುಕಿದ ಭಾರತದ 4 ಲಕ್ಷ ಟನ್ ಬಾಸುಮತಿ ಅಕ್ಕಿ | ಕೆ.ಜಿ.ಗೆ 10 ರು. ಇಳಿಕೆ

ಬಾಸುಮತಿ ಅಕ್ಕಿ ರಫ್ತು ಕುಸಿತ, ಬೆಲೆ ಇಳಿಕೆ

ಹೂವಪ್ಪ ಐ ಹೆಚ್ ಬೆಂಗಳೂರು

ಅಮೆರಿಕ-ಇರಾನ್-ಇಸ್ರೇಲ್ ಯುದ್ಧದ ಪರಿಣಾಮವು ಭಾರತಕ್ಕೂ ಭಾರೀ ಹೊಡೆತವನ್ನೇ ನೀಡುತ್ತಿದೆ. ಈಗಾಗಲೇ ಗ್ಯಾಸ್ ಸಿಲಿಂಡರ್ ಬೆಲೆ ಏರಿಕೆಯಾಗುತ್ತಿದ್ದು, ತೈಲ ಬೆಲೆಯೂ ಸದ್ಯದಲ್ಲೇ ಏರಿಕೆಯಾಗುವ ಸಾಧ್ಯತೆ ಇದೆ ಎಂದು ಹೇಳಲಾಗುತ್ತಿದೆ.

ಇದೀಗ ಬಾಸ್ಮತಿ ಅಕ್ಕಿ ರಫ್ತು ವಿಶೇಷವಾಗಿ ತೀವ್ರವಾಗಿ ಪರಿಣಾಮ ಬೀರಿದೆ, ಯುದ್ಧ ಪ್ರಾರಂಭವಾದಾಗಿನಿಂದ ಅಕ್ಕಿಗೆ ಬೇಡಿಕೆ ಕುಸಿದಿದೆ. ಹಡಗು ಕಂಪನಿಗಳು ಯುದ್ಧ ಅಪಾಯದ ಹಿನ್ನೆಲೆಯಲ್ಲಿ ಹೆಚ್ಚುವರಿ ಸುರಕ್ಷತಾ ಶುಲ್ಕ ವಿಧಿಸಿ ಸಾಗಣೆ ಮಾರ್ಗಗಳನ್ನು ಬದಲಾಯಿಸಿರುವುದು ರಫ್ತು ವ್ಯಾಪಾರಕ್ಕೆ ಮತ್ತಷ್ಟು ಹೊಡೆತ ನೀಡಿದೆ.

ಹೀಗಾಗಿ ಕಳೆದ ವಾರ 1121 ತಳಿಯ ಬಾಸ್ಮತಿ ಅಕ್ಕಿಯ ದೇಶೀಯ ಬೆಲೆ ಕೆ.ಜಿಗೆ 85 ರು.ಗಳಿಂದ 75 ರು.ಗಳಿಗೆ ಇಳಿದಿದೆ, ಆದರೆ 1509 ಮತ್ತು 1718 ತಳಿಗಳು ಕೆ.ಜಿಗೆ 70 ರು.ಗಳಿಂದ 60 ರು.ಗಳಿಗೆ ಇಳಿದಿವೆ. ಮಧ್ಯಪ್ರಾಚ್ಯ ಮಾರುಕಟ್ಟೆಗಳು ಬಹುತೇಕ ಸ್ಥಗಿತಗೊಂಡಿರುವುದರಿಂದ, ಕಳೆದ ಕೆಲವು ದಿನಗಳಿಂದ ಅವು ಭಾರೀ ಸಂಕಷ್ಟ ಎದುರಿಸುತ್ತಿದೆ.

ದೆಹಲಿ ಮಾರುಕಟ್ಟೆಯಿಂದ ಮಧ್ಯಪ್ರಾಚ್ಯ ಮಾರುಕಟ್ಟೆಗಳಿಗೆ ಅಕ್ಕಿ ಪೂರೈಕೆ ಸ್ಥಗಿತಗೊಂಡಿದೆ. ಇದರ ಪರಿಣಾಮವಾಗಿ ಅಕ್ಕಿ ಬೆಲೆಗಳು ಕಡಿಮೆಯಾಗಲು ಪ್ರಾರಂಭಿಸಿವೆ ಎಂದು ದೆಹಲಿ ಧಾನ್ಯ ವ್ಯಾಪಾರಿಗಳ ಸಂಘದ ಅಧ್ಯಕ್ಷ ನರೇಶ್ ಗುಪ್ತಾ ಹೇಳಿದ್ದಾರೆ. ಬಾಸ್ಮತಿ ಅಕ್ಕಿಯನ್ನು ಇರಾನ್‌ಗೆ ಮಾತ್ರವಲ್ಲದೆ ಇರಾಕ್, ಬಹ್ರೇನ್, ಕುವೈತ್ ಮತ್ತು ಕತಾರ್ ಸೇರಿದಂತೆ ಹಲವಾರು ಮಧ್ಯಪ್ರಾಚ್ಯ ದೇಶಗಳಿಗೂ ರಫ್ತು ಮಾಡಲಾಗುತ್ತದೆ. ಯುದ್ಧದಿಂದಾಗಿ ಈ ದೇಶಗಳಿಗೆ ಕಳಿಸಿರುವ ಅಕ್ಕಿಯು ದಾರಿಯಲ್ಲಿರುವ ಹಡಗುಗಳಲ್ಲಿ ಸಿಲುಕಿಕೊಂಡಿವೆ, ಪೂರೈಕೆ ಸಂಪೂರ್ಣವಾಗಿ ನಿಂತಿದೆ. ಹಾಗಾಗಿ ಈಗ ಅಲ್ಲಿನ ಮಧ್ಯಪ್ರಾಚ್ಯ ಮಾರುಕಟ್ಟೆ ಕುಸಿದಿದೆ.

ಯುದ್ಧದಿಂದಾಗಿ,ಮಧ್ಯಪ್ರಾಚ್ಯ ದೇಶಗಳಿಗೆ ಬಾಸುಮತಿ ಅಕ್ಕಿ ಸಾಗಣೆಗಳು ಬಂದರುಗಳಲ್ಲಿ ಸಿಲುಕಿಕೊಂಡಿವೆ, ಪೂರೈಕೆಯನ್ನು ತೀವ್ರವಾಗಿ ಅಡ್ಡಿಪಡಿಸಲಾಗಿದೆ. ಈ ಹಿನ್ನೆಲೆಯಲ್ಲಿ ಬಾಸುಮತಿ ಅಕ್ಕಿ ಕೆ.ಜಿಗೆ 8-10 ರು. ಇಳಿಕೆಯಾಗಿದೆ ಯುದ್ಧ ಮುಂದುವರಿದರೆ ಮತ್ತಷ್ಟು ಇಳಿಕೆ ಸಾಧ್ಯತೆ ಇದೆ.
-ರಾಧೇಶ್ಯಾಮ್ ಗರ್ಗ್, ಅಧ್ಯಕ್ಷ, ರೈಸ್ ಆಗ್ರೋ ಇಂಡಿಯಾ

ರಾಜ್ಯವಾರು	ಬಾಸ್ಮತಿ ಅಕ್ಕಿ ಉತ್ಪಾದನೆ (ಅಂದಾಜು)
ರಾಜ್ಯ	ಉತ್ಪಾದನೆ (ಮೆಟ್ರಿಕ್ ಟನ್)
ಪಂಜಾಬ್	ಸುಮಾರು 38.4 ಲಕ್ಷ ಟನ್
ಹರಿಯಾಣ	ಸುಮಾರು 36.7 ಲಕ್ಷ ಟನ್
ಉತ್ತರ ಪ್ರದೇಶ	ಸುಮಾರು 20.5 ಲಕ್ಷ ಟನ್
ಉತ್ತರಾಖಂಡ	ಸುಮಾರು 0.8 ಲಕ್ಷ ಟನ್
ಜಮ್ಮು ಮತ್ತು ಕಾಶ್ಮೀರ	ಸುಮಾರು 0.16 ಲಕ್ಷ ಟನ್
ಹಿಮಾಚಲ ಪ್ರದೇಶ	ಸುಮಾರು 0.08 ಲಕ್ಷ ಟನ್

ಬಾಸುಮತಿ ಹೆಚ್ಚು ಉತ್ಪತ್ತಿಯಾಗುವ ಹರಿಯಾಣ, ಪಂಜಾಬ್ ಮಾರುಕಟ್ಟೆಯಲ್ಲಿ ಕ್ವಿಂಟಲ್‌ಗೆ ಸ್ಟೀಮ್ ಮಧ್ಯಮ ದರ್ಜೆ ಅಕ್ಕಿ ಸಗಟು ದರ 9,000ರಿಂದ 8,000 ರು.ಗೆ ಇಳಿಕೆಯಾಗಿದ್ದರೆ, ಇನ್ನು ರಾ ರೈಸ್ ಉತ್ತಮ ದರ್ಜೆ 12,000ರಿಂದ 11,000 ರು.ಗೆ ಇಳಿಕೆಯಾಗಿದೆ, ಅಂದರೆ ಕೆ.ಜಿಗೆ 10 ರು.ನಷ್ಟು ಇಳಿಕೆಯಾಗಿದೆ. ಇನ್ನು ಅತೀ ಉತ್ತಮ ಬ್ರಾಂಡೆಡ್ ಬಾಸುಮತಿ ಅಕ್ಕಿ 13,000-14,000 ರು.ವರೆಗೆ ಮಾರಾಟವಾಗುತ್ತಿದೆ ಎಂದು ಅಕ್ಕಿ ವ್ಯಾಪಾರಿಗಳು ಹೇಳುತ್ತಾರೆ.

ಸಿಲುಕಿರುವ 4 ಲಕ್ಷ ಟನ್ ಅಕ್ಕಿ: ಸುಮಾರು 60 ಸಾವಿರ ಟನ್ ಬಾಸ್ಮತಿ ಅಕ್ಕಿ ಸಮುದ್ರ ಸಾಗಣೆಯ ಮಧ್ಯದಲ್ಲೇ ಸಿಲುಕಿಕೊಂಡಿದೆ. ಇನ್ನೊಂದು ಕಡೆ ಸುಮಾರು 4 ಲಕ್ಷ ಟನ್ ಬಾಸ್ಮತಿ ಅಕ್ಕಿ ವಿವಿಧ ಸ್ಥಳಗಳಲ್ಲಿ ಸಿಲುಕಿಕೊಂಡಿದೆ, ಕೆಲವು ಬಂದರುಗಳಲ್ಲಿ ಸಿಲುಕಿಕೊಂಡಿವೆ ಮತ್ತು ಇನ್ನೂ ಬಹುತೇಕ ಅಕ್ಕಿ ಗೋದಾಮುಗಳಲ್ಲಿ ದಾಸ್ತಾನಿದೆ ಎಂದು ರಫ್ತು ವಲಯಗಳು ತಿಳಿಸಿವೆ. ಇದರಿಂದಾಗಿ ಗಿರಣಿಗಾರರು ಹಾಗೂ ರೈತರು ಆರ್ಥಿಕ ಸಂಕಷ್ಟ ಎದುರಿಸುವಂತಾಗಿದೆ.

ಮಧ್ಯಪ್ರಾಚ್ಯವು ಪ್ರಮುಖ ರಫ್ತಿನಲ್ಲಿ ಪಾಲು: ಭಾರತವು ವಿಶ್ವದಲ್ಲಿಯೇ ಪ್ರಮುಖ ಬಾಸ್ಮತಿ ಅಕ್ಕಿ ರಫ್ತುದಾರ ರಾಷ್ಟ್ರವಾಗಿದೆ, ವಿಶೇಷವಾಗಿ ಮಧ್ಯಪ್ರಾಚ್ಯದ ದೇಶಗಳಿಗೆ ಭಾರತದಿಂದ ದೊಡ್ಡ ಪ್ರಮಾಣದಲ್ಲಿ ಅಕ್ಕಿ ರಫ್ತಾಗುತ್ತಿತ್ತು. ಭಾರತದ ಒಟ್ಟು ಬಾಸ್ಮತಿ ರಫ್ತಿನಲ್ಲಿ ಸುಮಾರು 50 ಶೇಕಡಾ ಪಾಲು ಇರಾನ್, ಸೌದಿ ಅರೇಬಿಯಾ, ಇರಾಕ್, ಯುನೈಟೆಡ್ ಅರಬ್ ಎಮಿರೇಟ್ಸ್ ಮತ್ತು ಯೆಮೆನ್ ದೇಶಗಳಿಗೆ ಸೇರಿತ್ತು. ಬಾಸ್ಮತಿ ಅಕ್ಕಿ ರಫ್ತಿನಲ್ಲಿ ಭಾರತ ಅಗ್ರಮಾನ್ಯ ದೇಶ. ಜಾಗತಿಕವಾಗಿ ಅಂದಾಜು ಶೇ. 75 ರಷ್ಟು ಬಾಸ್ಮತಿ ಅಕ್ಕಿ ರಫ್ತು ಭಾರತದಿಂದ ನಡೆಯುತ್ತದೆ.

ಭಾರತದ ಪ್ರಮುಖ ಬಾಸ್ಮತಿ ಅಕ್ಕಿ ಉತ್ಪಾದಕರು ಪಂಜಾಬ್ ಮತ್ತು ಹರಿಯಾಣದಲ್ಲಿದ್ದಾರೆ. ಭಾರತದ ಒಟ್ಟು ಬಾಸ್ಮತಿ ರಫ್ತಿನಲ್ಲಿ ಗಲ್ಫ್ ರಾಷ್ಟ್ರಗಳು ಗಮನಾರ್ಹ ಪಾಲನ್ನು ಹೊಂದಿವೆ. ಬಾಸ್ಮತಿ ಅಕ್ಕಿ ರಫ್ತಿನಲ್ಲಿ ಇರಾನ್ ಮಾತ್ರ ಸುಮಾರು ಶೇಕಡಾ 25ರಷ್ಟಿದೆ. 2024-25ರ ಆರ್ಥಿಕ ವರ್ಷದಲ್ಲಿ ಭಾರತವು ಸುಮಾರು ರು.6,374 ಕೋಟಿ ಮೌಲ್ಯದ ಬಾಸ್ಮತಿ ಅಕ್ಕಿಯನ್ನು ಇರಾನ್‌ಗೆ ರಫ್ತು ಮಾಡಿದೆ.

ಹೊಸ ಪಾವತಿ ಮತ್ತು ಸಾಗಣೆ ಸವಾಲು: ದೆಹಲಿಯ ಬವಾನ್ ಆಹಾರ ಸಂಸ್ಕರಣಾ ಘಟಕದ ಅಧ್ಯಕ್ಷ ದೀಪಕ್ ಗೋಯಲ್, ಇತ್ತೀಚೆಗೆ ದುಬೈನಲ್ಲಿ ನಡೆದ ಆಹಾರ ಪ್ರದರ್ಶನದಿಂದ ಹೆಚ್ಚಿನ ಸಂಖ್ಯೆಯ ಅಕ್ಕಿ ರಫ್ತು ಆರ್ಡರ್‌ಗಳನ್ನು ಸ್ವೀಕರಿಸಿದ್ದೇವೆ ಮತ್ತು ಈ ವರ್ಷ ಹೆಚ್ಚಿದ ವ್ಯವಹಾರವನ್ನು ನಿರೀಕ್ಷಿಸುತ್ತಿದ್ದೇವೆ ಎಂದು ಹೇಳಿದ್ದಾರೆ. ಆದಾಗ್ಯೂ, ಯುದ್ಧವು ಪರಿಸ್ಥಿತಿಯನ್ನು ಬದಲಾಯಿಸಿದೆ. ಅಮೆರಿಕ ನಿರ್ಬಂಧಗಳು ಮತ್ತು ಉದ್ವಿಗ್ನತೆಯಿಂದಾಗಿ ಇರಾನಿನ ಖರೀದಿದಾರರಿಂದ ಪಾವತಿಗಳನ್ನು ಸ್ವೀಕರಿಸುವ ಬಗ್ಗೆ ಅನಿಶ್ಚಿತತೆ ಹೆಚ್ಚಾಗಿದೆ, ಇದಲ್ಲದೆ ಹಡಗುಗಳಿಗೆ ವಿಮೆ ಪಡೆಯುವುದು ಕಷ್ಟಕರವಾಗಿದೆ, ಆ ಕಾರಣಕ್ಕಾಗಿ ಬಾಸ್ಮತಿ ಅಕ್ಕಿ ಸಾಗಣೆಯನ್ನು ನಿಲ್ಲಿಸಲಾಗಿದೆ.

2023-24ರಲ್ಲಿ ಸುಮಾರು 52.43 ಲಕ್ಷ ಟನ್ ರಫ್ತು ಆಗಿತ್ತು. ಪ್ರತೀ ವರ್ಷ ಭಾರತದಿಂದ ಸರಾಸರಿ ಸುಮಾರು 5565 ಲಕ್ಷ ಟನ್ (5.56.5 ಮಿಲಿಯನ್ ಟನ್) ಬಾಸುಮತಿ ಅಕ್ಕಿ ವಿದೇಶಗಳಿಗೆ ರಫ್ತು ಆಗುತ್ತದೆ. ಭಾರತ 2025-26ರ ಆರ್ಥಿಕ ವರ್ಷದ ಏಪ್ರಿಲ್-ನವೆಂಬರ್ ಅವಧಿಯಲ್ಲಿ ಇರಾನ್‌ಗೆ ಅಮೆರಿಕನ್ 468.10 ಮಿಲಿಯನ್ ಮೌಲ್ಯದ ಬಾಸ್ಮತಿ ಅಕ್ಕಿಯನ್ನು ರಫ್ತು ಮಾಡಿತು. ಒಟ್ಟು 5.99 ಲಕ್ಷ ಟನ್‌ಗಳು ಎಂದು ವ್ಯಾಪಾರ ದತ್ತಾಂಶಗಳು ತೋರಿಸಿವೆ.

ದೆಹಲಿಯಲ್ಲಿ 4ನೇ ರಾಷ್ಟ್ರೀಯ ಕೃಷಿ ಪರಿಸರ ತಂತ್ರಜ್ಞಾನ ಶೃಂಗಸಭೆ | ಸಚಿವ ಪ್ರಲ್ಹಾದ್ ಜೋಶಿ ಭಾಗಿ

ಪಿಎಂ ಕುಸುಮ್-2 ಜಾರಿಗೆ ಚಿಂತನೆ

ದೆಹಲಿ: ಸೌರ ವಿದ್ಯುತ್ ಮೂಲಕ ರೈತರ ಸಬಲೀಕರಣಕ್ಕಾಗಿ ಕೃಷಿ ಪಿವಿ ನಿಯೋಜನೆ ಉತ್ತೇಜಿಸಲು ಕೇಂದ್ರ ಸರಕಾರ ಪಿಎಂ-ಕುಸುಮ್ 2.0 ಯೋಜನೆ ಜಾರಿಗೊಳಿಸಲು ಚಿಂತನೆ ನಡೆಸುತ್ತಿದೆ ಎಂದು ಕೇಂದ್ರ ಹೊಸ ಮತ್ತು ನವೀಕರಿಸಬಹುದಾದ ಇಂಧನ ಸಚಿವ ಪ್ರಲ್ಹಾದ್ ಜೋಶಿ ಹೇಳಿದರು.

ದೆಹಲಿಯಲ್ಲಿ ನಡೆದ 4ನೇ ರಾಷ್ಟ್ರೀಯ ಕೃಷಿ ಪರಿಸರ ತಂತ್ರಜ್ಞಾನ ಶೃಂಗಸಭೆ ಉದ್ದೇಶಿಸಿ ಮಾತನಾಡಿದ ಅವರು, ಇದು 10 ಗಿಗಾ ವ್ಯಾಟ್ ಕೃಷಿ ಪಿ.ವಿ ಘಟಕ ಒಳಗೊಂಡಿರುತ್ತದೆ, ಅಲ್ಲದೆ ರೈತರು ಒಂದೇ ಭೂಮಿಯಲ್ಲಿ ಬೆಳೆ ಜತೆಗೆ ವಿದ್ಯುತ್ ಉತ್ಪಾದಿಸಲು ಅನುವು ಮಾಡಿಕೊಡುತ್ತದೆ ಎಂದರು. ಪಿಎಂ ಕುಸುಮ್ 2.0 ಗ್ರಾಮೀಣ ಭಾರತದಲ್ಲಿ ವಿಕೇಂದ್ರೀಕೃತ ನವೀಕರಿಸಬಹುದಾದ ಇಂಧನ ಉತ್ಪಾದನೆಗೆ ಹೊಸ ಮಾದರಿ ಸೃಷ್ಟಿಸುತ್ತದೆ, ಆ ಮೂಲಕ ಗ್ರಾಮೀಣ ಆರ್ಥಿಕತೆ ಉತ್ತೇಜನ ಮತ್ತು ರೈತರ ಆದಾಯ ಹೆಚ್ಚಿಸುವಲ್ಲಿ ಪ್ರಮುಖ ಪಾತ್ರ ವಹಿಸಲಿದೆ ಎಂದರು.

10 ಲಕ್ಷಕ್ಕೂ ಅಧಿಕ ಸೌರ ಪಂಪ್: ಪಿಎಂ-ಕುಸುಮ್ 2.0 ಯೋಜನೆಯಡಿ ಈಗಾಗಲೇ 10 ಲಕ್ಷಕ್ಕೂ ಹೆಚ್ಚು ಸೌರ ಕೃಷಿ ಪಂಪ್‌ಗಳನ್ನು ಸ್ಥಾಪಿಸಲಾಗಿದೆ ಮತ್ತು ದೇಶಾದ್ಯಂತ 13 ಲಕ್ಷಕ್ಕೂ ಹೆಚ್ಚು ಗ್ರಿಡ್-ಸಂಪರ್ಕಿತ ಕೃಷಿ ಪಂಪ್‌ಗಳನ್ನು ಸೌರೀಕರಣಗೊಳಿಸಲಾಗಿದೆ. ಇದರಿಂದಾಗಿ ರೈತರು ಇಂದು ಅನ್ನದಾತ ಮಾತ್ರವಲ್ಲ ಊರ್ಜದಾತ (ಇಂಧನ ಪೂರೈಕೆದಾರರು) ಆಗಲೂ ಸಹ ಕೇಂದ್ರ ಸರಕಾರವು ಅನುವು ಮಾಡಿಕೊಡುತ್ತಿದೆ ಎಂದು ಹೇಳಿದರು.

ನವೀಕರಿಸಬಹುದಾದ ಇಂಧನ ಹೆಚ್ಚಿನ ಕೃಷಿ ಭೂಮಿ ಮತ್ತು ಮನೆಗಳನ್ನು ತಲುಪುತ್ತಿದೆ. ನೀರಾವರಿ ವೆಚ್ಚವನ್ನು ಕಡಿಮೆ ಮಾಡುವುದರ ಜತೆಗೆ ಕೃಷಿ ಉತ್ಪಾದಕತೆಯನ್ನೂ ಸುಧಾರಿಸಿ, ವಿಶ್ವಾಸಾರ್ಹ ರೀತಿಯಲ್ಲಿ ವಿದ್ಯುತ್ ಪಡೆಯಲು ಸಹಾಯ ಮಾಡುತ್ತಿದೆ ಎಂದೂ ಪ್ರಲ್ಹಾದ್ ಜೋಶಿ ಹೇಳಿದರು.

ಸೌರಶಕ್ತಿ ಆರ್ಥಿಕತೆಯ ರೂಪಾಂತರ

ಸೌರಶಕ್ತಿ ಉತ್ಪಾದನೆ ಮತ್ತು ಬಳಕೆ ಕೇವಲ ಇಂಧನ ಪರಿವರ್ತನೆಯಲ್ಲ, ಗ್ರಾಮೀಣ ಆರ್ಥಿಕತೆಯ ರೂಪಾಂತರವೂ ಆಗಿದೆ. ಕೃಷಿಯಲ್ಲಿ ಸೌರ ಶಕ್ತಿ ಬಳಕೆ ರೈತರಿಗೆ ಡೀಸೆಲ್ ಮೇಲಿನ ಅವಲಂಬನೆ ಹಾಗೂ ಕೃಷಿ ವೆಚ್ಚವನ್ನು ಕಡಿಮೆ ಮಾಡುತ್ತದೆ. ಡೀಸೆಲ್‌ನಿಂದ ನೀರಾವರಿ ಗೋಧಿಗೆ ಎಕರೆಗೆ ಸುಮಾರು 6,790 ರುಪಾಯಿ ಮತ್ತು ಹತ್ತಿಯಂತಹ ಬೆಳೆಗಳಿಗೆ ಎಕರೆಗೆ 8,000 ರುಪಾಯಿಗಿಂತ ಹೆಚ್ಚು ವೆಚ್ಚವಾಗಬಹುದು. ಆದರೆ ಸೌರ ಪಂಪ್ ಬಳಕೆಯಿಂದ ಎಕರೆಗೆ 5,000 ರುಪಾಯಿಯಿಂದ 6,500 ರುಪಾಯಿವರೆಗೆ ಉಳಿತಾಯ ಸಾಧ್ಯ ಮತ್ತು ಇಂಗಾಲ ಹೊರಸೂಸುವಿಕೆಯನ್ನು ಕಡಿಮೆ ಮಾಡುತ್ತದೆ ಎಂದು ಪ್ರಲ್ಹಾದ್ ಜೋಶಿ ಪ್ರತಿಪಾದಿಸಿದರು.

ಮಹಡಿಯಿಂದ ಬಿದ್ದು ಮೆದುಳಿಗೆ ಗಾಯ | 13 ವರ್ಷ ಕೋಮಾದಲ್ಲಿದ್ದ ಯುವಕ

ಹರೀಶ್ ದಯಾಮರಣಕ್ಕೆ ಸುಪ್ರೀಂ ಅನುಮತಿ

ಗಾಜಿಯಾಬಾದ್: 13 ವರ್ಷಗಳ ಹಿಂದೆ ಮಹಡಿಯಿಂದ ಬಿದ್ದು ಮೆದುಳಿಗೆ ತೀವ್ರ ಗಾಯಗಳಾಗಿ ಕೋಮಾದಲ್ಲಿದ್ದ ಉತ್ತರಪ್ರದೇಶದ ಗಾಜಿಯಾಬಾದ್‌ನ 32 ವರ್ಷದ ಹರೀಶ್ ರಾಣಾ ಅವರಿಗೆ ಸುಪ್ರೀಂ ಕೋರ್ಟ್ ದಯಾ ಮರಣಕ್ಕೆ ಅನುಮತಿ ನೀಡಿದೆ.

2018ರ ಸುಪ್ರೀಂ ಕೋರ್ಟ್ ತೀರ್ಪಿನ ಹಲವಾರು ಅಂಶಗಳನ್ನು ಸ್ಪಷ್ಟಪಡಿಸಿದ ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದಿವಾಲಾ ಮತ್ತು ಕೆ.ವಿ. ವಿಶ್ವನಾಥನ್ ಅವರ ಪೀಠವು ಈ ತೀರ್ಪು ನೀಡಿದೆ. ಅಂತಹ ಸಂದರ್ಭಗಳಲ್ಲಿ ಪ್ರಮುಖ ಪ್ರಶ್ನೆ ಎದುರಾಗುವುದು ಸಾವು ರೋಗಿಯ ಹಿತಾಸಕ್ತಿಯಲ್ಲಿದೆಯೇ ಎಂಬುದು ಅಲ್ಲ, ಆದರೆ ಜೀವ ಉಳಿಸುವ ಚಿಕಿತ್ಸೆಯನ್ನು ಮುಂದುವರಿಸುವುದು ರೋಗಿಯ ಹಿತಾಸಕ್ತಿಯನ್ನು ಪೂರೈಸುತ್ತದೆಯೇ ಎಂಬುದಾಗಿ ಅಭಿಪ್ರಾಯಪಟ್ಟಿರುವ ಪೀಠ, ರಾಣಾ ಅವರ ಪೋಷಕರು ವೈದ್ಯಕೀಯ ಬೆಂಬಲವನ್ನು ಹಿಂಪಡೆಯಲು ಅನುಮತಿ ನೀಡಿತು.

ವೈದ್ಯಕೀಯವಾಗಿ ನೀಡಲಾಗುವ ಪೌಷ್ಠಿಕಾಂಶವು ವೈದ್ಯಕೀಯ ಚಿಕಿತ್ಸೆಯ ಒಂದು ರೂಪವಾಗಿ ಅರ್ಹತೆ ಪಡೆಯುತ್ತದೆ ಎಂದು ನ್ಯಾಯಾಲಯವು ಸ್ಪಷ್ಟಪಡಿಸಿದೆ. ರೋಗಿಯನ್ನು ಪರೀಕ್ಷಿಸುವ ವೈದ್ಯಕೀಯ ಮಂಡಳಿಗಳು ಚೇತರಿಕೆಯ ನಿರೀಕ್ಷೆ ಅರ್ಥಪೂರ್ಣವಲ್ಲ ಎಂದು ತೀರ್ಮಾನಿಸಿದರೆ ಹಾಗೂ ಶಿಫಾರಸು ಮಾಡಿದರೆ ಮಾತ್ರ ಅಂತಹ ಮೆಡಿಕಲ್ ಸಪೋರ್ಟ್ ಹಿಂಪಡೆಯಬಹುದು ಎಂದು ಅದು ಹೇಳಿದೆ.

ತೀರ್ಪನ್ನು ಓದಿದ ಪೀಠವು, ನ್ಯಾಯಾಲಯದ ಮುಂದೆ ಸಲ್ಲಿಸಲಾದ ವೈದ್ಯಕೀಯ ವರದಿಗಳು ಕಳೆದ 13 ವರ್ಷಗಳಿಂದ ಅವನ ಸ್ಥಿತಿಯಲ್ಲಿ ಯಾವುದೇ ಸುಧಾರಣೆಯನ್ನು ತೋರಿಸಲಿಲ್ಲ ಮತ್ತು ಅವನು ಬದುಕುಳಿಯಲು ಇತರರ ಮೇಲೆ ಸಂಪೂರ್ಣವಾಗಿ ಅವಲಂಬಿತನಾಗಿದ್ದಾನೆ ಎಂಬುದನ್ನು ಸೂಚಿಸಿದೆ.



ದುರ್ಘಟನೆಯ ಹಿನ್ನೆಲೆ

ಚಂಡೀಗಢ ವಿಶ್ವವಿದ್ಯಾಲಯದಲ್ಲಿ ಸಿವಿಲ್ ಎಂಜಿನಿಯರಿಂಗ್ ಪದವಿ ಪಡೆಯುತ್ತಿದ್ದ ರಾಣಾ, 2013, ಆಗಸ್ಟ್ 20ರಂದು ತಮ್ಮ ಪಿ.ಜಿ ವಸತಿಗೃಹದ ನಾಲ್ಕನೇ ಮಹಡಿಯ ಬಾಲ್ಕನಿಯಿಂದ ಬಿದ್ದು ತಲೆಗೆ ಗಾಯಗಳಾಗಿ ಅಂಗವೈಕಲ್ಯಕ್ಕೆ ಒಳಗಾಗಿದ್ದರು. ಅಂದಿನಿಂದ ಅವರು ಉಸಿರಾಟಕ್ಕಾಗಿ ಟ್ರಾಕಿಯೊಸ್ಟೊಮಿ ಟ್ಯೂಬ್ ಮತ್ತು ಪೋಷಣೆಗಾಗಿ ಗ್ಯಾಸ್ಟ್ರೋಸ್ಟೊಮಿ ಟ್ಯೂಬ್ ಅನ್ನು ಅವಲಂಬಿಸಿದ್ದಾರೆ.

ಬಿಟ್ ಕಾಯಿನ್ ಹಗರಣ: ವರ್ಷ್ನೆ ಸೆರೆ

ದೆಹಲಿ: 20 ಸಾವಿರ ಕೋಟಿ ಮೌಲ್ಯದ ಬಿಟ್ ಕಾಯಿನ್ ಹಗರಣಕ್ಕೆ ಸಂಬಂಧಿಸಿದಂತೆ ಡಾರ್ವಿನ್ ಲ್ಯಾಬ್‌ನ ಸಹ ಸಂಸ್ಥಾಪಕ ಆಯುಷ್ ವರ್ಷ್ನೆ ಅವರನ್ನು ಸಿಬಿಐ ಅಧಿಕಾರಿಗಳು ಬುಧವಾರ ಬಂಧಿಸಿದ್ದಾರೆ. ಆಯುಷ್ ಅವರು ವಿದೇಶಕ್ಕೆ ಪರಾರಿಯಾಗುವ ಸಾಧ್ಯತೆ ಇದ್ದ ಕಾರಣದಿಂದ ಸಿಬಿಐ ಅಧಿಕಾರಿಗಳು ಸೋಮವಾರ ಲುಕ್ ಔಟ್ ನೋಟಿಸ್ ಜಾರಿ ಮಾಡಿದ್ದರು.

ಮುಂಬೈ ವಿಮಾನ ನಿಲ್ದಾಣದಲ್ಲಿ ಅಧಿಕೃತವಾಗಿ ಬಂಧಿಸಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಜನರಿಗೆ ವಂಚಿಸಿದ ಗೇಯ್ನ್ ಬಿಟ್ ಕಾಯಿನ್ ಸಂಸ್ಥೆಗೆ ಡಿಜಿಟಲ್ ವಿನ್ಯಾಸ ಹಾಗೂ ಮೂಲಸೌಕರ್ಯವನ್ನು ಡಾರ್ವಿನ್ ಲ್ಯಾಬ್ ಸಂಸ್ಥೆಯು ಅಭಿವೃದ್ಧಿಪಡಿಸಿತ್ತು. ಗೇಯ್ನ್ ಕಂಪನಿಯು ಕಾರ್ಯಾಚರಣೆಗೂ ಬೆನ್ನೆಲುಬಾಗಿ ನಿಂತಿದೆ ಎಂದು ಸಿಬಿಐ ಅಧಿಕಾರಿಗಳು ತಿಳಿಸಿದ್ದಾರೆ. ಡಾರ್ವಿನ್ ಲ್ಯಾಬ್‌ನ ಸಹ ಸಂಸ್ಥಾಪಕರಾದ ಆಯುಷ್ ವರ್ಷ್ನೆ, ಸಾಹಿಲ್ ಬಗ್ಲಾ ಹಾಗೂ ವಯೋಮಿ ಎಐ ಸಂಸ್ಥೆಯ ಸಂಸ್ಥಾಪಕ ಹಾಗೂ ಮುಖ್ಯ ಹಣಕಾಸು ಅಧಿಕಾರಿ ನಿಕುಂಜ್ ಜೈನ್ ಅವರು ಕ್ರಿಪ್ಟೊಕರೆನ್ಸಿ ಟೋಕನ್ ಹಾಗೂ ಅದರ ಸಂಬಂಧಿತ ಎಆರ್‌ಸಿ-20 ಸ್ಮಾರ್ಟ್‌ನ ವಿನ್ಯಾಸ, ಅಭಿವೃದ್ಧಿಯಲ್ಲಿ ಭಾಗಿಯಾಗಿರುವುದು ತನಿಖೆಯಲ್ಲಿ ಕಂಡುಬಂದಿತ್ತು ಎಂದು ಸಿಬಿಐ ತಿಳಿಸಿದೆ.

ಡಿಎಂಕೆ ವಿರುದ್ಧ ಮೋದಿ ವಾಗ್ದಾಳಿ

ತಿರುಚಿರಾಪಳ್ಳಿ: ಕೇವಲ ಒಂದು ಕುಟುಂಬದ ಏಳಿಗೆಗಾಗಿ ಶ್ರಮಿಸುವ ಸರಕಾರ ರಾಜ್ಯದಲ್ಲಿರಬೇಕು ಎಂಬುದು ತಮಿಳುನಾಡು ಜನರ ಬಯಕೆಯಲ್ಲ, ರಾಜ್ಯದ ಪ್ರತಿಯೊಂದು ಕುಟುಂಬಕ್ಕಾಗಿ ಶ್ರಮಿಸುವ ಸರಕಾರವನ್ನು ಅವರು ಬಯಸುತ್ತಿದ್ದಾರೆ ಎಂದು ಪ್ರಧಾನಿ ನರೇಂದ್ರ ಮೋದಿ ಬುಧವಾರ ಹೇಳಿದರು. ಎನ್‌ಡಿಎ ವತಿಯಿಂದ ಇಲ್ಲಿ ಹಮ್ಮಿಕೊಂಡಿದ್ದ ಬೃಹತ್ ರ‍್ಯಾಲಿಯಲ್ಲಿ ಮಾತನಾಡಿದ ಅವರು, ಎನ್‌ಡಿಎದಿಂದ ಮಾತ್ರ ರಾಜ್ಯದಲ್ಲಿ ಬದಲಾವಣೆ ತರಲು ಸಾಧ್ಯ ಎಂಬುದು ರಾಜ್ಯದ ಜನರಿಗೆ ಗೊತ್ತಾಗಿದೆ ಎಂದರು. ವಿಧಾನಸಭಾ ಚುನಾವಣೆ ಸಮೀಪಿಸುತ್ತಿರುವ ಈ ವೇಳೆ ಮೋದಿ ಅವರು ಜನವರಿ 23ರಿಂದ ರಾಜ್ಯಕ್ಕೆ ನೀಡುತ್ತಿರುವ ಮೂರನೇ ಭೇಟಿ ಇದಾಗಿದೆ. ಡಿಎಂಕೆ ಆಡಳಿತದಲ್ಲಿ ಪ್ರತಿಯೊಂದು ಕೆಲಸದ ಆರಂಭ ಹಾಗೂ ಮುಕ್ತಾಯ ಒಂದು ಕುಟುಂಬದಿಂದಲೇ ಆಗುತ್ತದೆ. 2021ರಲ್ಲಿ ಜನರು ಡಿಎಂಕೆಗೆ ಅಧಿಕಾರ ನೀಡಿದರು. ಅಧಿಕಾರಕ್ಕೇರಿದ ಬಳಿಕ ಡಿಎಂಕೆ ತನ್ನ ಹೊಣೆಗಾರಿಕೆ ನಿಭಾಯಿಸುವ ಬದಲು ಜನಾದೇಶಕ್ಕೆ ದ್ರೋಹ ಬಗೆಯಿತು ಎಂದು ವಾಗ್ದಾಳಿ ನಡೆಸಿದರು.



ತಿ.ನರಸೀಪುರದಲ್ಲಿನ ರೇಷ್ಮೆ ನೂಲು ತೆಗೆಯುವ ಘಟಕದ ಆವರಣದಲ್ಲಿ ಕ್ರೀಡಾಂಗಣ ನಿರ್ಮಾಣದ ಯೋಜನೆ ಇಲ್ಲ

ದೂರವಾದ ಮೈಸೂರು ರೇಷ್ಮೆ ಸೀರೆ ಉದ್ಯಮ ಆತಂಕ

ಕೆ.ಜೆ. ಲೋಕೇಶ್ ಬಾಬು ಮೈಸೂರು

ಭೌಗೋಳಿಕವಾಗಿ ಖ್ಯಾತಿಯುಳ್ಳ ಮೈಸೂರು ರೇಷ್ಮೆ ಎಂಬ ಶತಮಾನದ ಉದ್ಯಮಕ್ಕೇ ಕೊಡಲಿಯೇಟು ನೀಡುವ ಮಾಫಿಯಾ ಕರಾಮತ್ತು ಬಂದೊದಗಿದರೂ, ಇದೀಗ ಆ ಚಿಂತೆ ಸ್ವಲ್ಪ ಮಟ್ಟಿಗೆ ದೂರವಾದಂತಿದೆ. ಚೀನಿ ರೇಷ್ಮೆಯ ಮಾರುಕಟ್ಟೆ ವಿಸ್ತರಣೆಗಾಗಿ ತೆರೆಮರೆಯಲ್ಲಿ ನಡೆಯುತ್ತಿರುವ ಕುತಂತ್ರದ ಭಾಗವಾಗಿ ಕಾಣದ ಕೈಗಳು ಕೆಲಸ ಮಾಡಿರುವ ಪರಿಣಾಮವಾಗಿಯೇ ತಿ.ನರಸೀಪುರದಲ್ಲಿನ ರೇಷ್ಮೆ ನೂಲು ತೆಗೆಯುವ ಘಟಕದ ಆವರಣದಲ್ಲಿ ಕ್ರೀಡಾಂಗಣ ನಿರ್ಮಾಣವೆಂಬ ಬೃಹನ್ನಾಟಕ ಮುನ್ನೆಲೆಗೆ ಬಂದಿತ್ತು. ಆದರೆ ಅದೃಷ್ಟವಶಾತ್ ಮೈಸೂರಿಗರು ಮೈಮರೆಯಲಿಲ್ಲ, ಸತತ ಹೋರಾಟ ನಡೆಸಿದರು. ಅದರ ಪರಿಣಾಮವಾಗಿ ಸರಕಾರವೇ ಈಗ ನಡೆಯುತ್ತಿರುವ ವಿಧಾನಸಭಾ ಅಧಿವೇಶನದಲ್ಲಿ ಕ್ರೀಡಾಂಗಣ ಯೋಜನೆ ಅನುಷ್ಠಾನ ಇಲ್ಲ ಎಂದು ಘೋಷಿಸಿತು. ಇದು ಮೈಸೂರಿಗರ ಪಾಲಿಗೆ ಒಂದು ಐತಿಹಾಸಿಕ ಜಯವೇ ಸರಿ.

ಆದರೆ ರಾಜ್ಯ ಸರಕಾರ ಅಧಿವೇಶನದಲ್ಲಿ ತನ್ನ ನಿಲುವು ಘೋಷಿಸಿದೆ ಎಂದ ಮಾತ್ರಕ್ಕೆ ಮೈಮರೆಯುವಂತಿಲ್ಲ ಎಂಬುದು ಹೋರಾಟಗಾರರಿಗೆ ತಿಳಿಯದ ವಿಚಾರವೇನಲ್ಲ. ಆದಕಾರಣ ಹೋರಾಟವನ್ನೂ ಸದಾಕಾಲವೂ ಜೀವಂತವಾಗಿರಿಸುವುದರ ಬಗ್ಗೆ ಚಿಂತನೆ ನಡೆದಿದೆ, ಏಕೆಂದರೆ ಇದರ ಹಿಂದಿರುವುದು ವಿದೇಶಿ ವ್ಯವಹಾರ ಎಂಬುವುದು ಬಟ್ಟಾಬಯಲಾಗಿದೆ, ಆದರೆ ಅದಕ್ಕೆ ಬೆಂಬಲವಾಗಿ ನಿಂತಿರುವುದು ಉದ್ಯಮಿಗಳ ಹೆಸರಿನ ಭೂಗತಲೋಕ ಎಂಬುವುದೂ ಖಾತ್ರಿಯಾಗಿದೆ.

ಮೈಸೂರು ರೇಷ್ಮೆ ಹೆಸರಿನಲ್ಲಿ ಮೈಸೂರಿನಲ್ಲಿ ಕುತಂತ್ರಿಗಳ ದೊಡ್ಡ ಜಾಲವೊಂದು ಕೆಲಸ ಮಾಡುತ್ತಿದೆ. ಅದರ ಪರಿಣಾವೇ ಮೈಸೂರಿನ ಕೆಲ ಖಾಸಗಿ ಸೀರೆ ಮಳಿಗೆಗಳ ಮೇಲೆ ಕೆಎಸ್‌ಐಸಿ ಪದ ಬಳಕೆಯ ದುರುಪಯೋಗ ಆಗಿದೆ. ಮೈಸೂರು ರೇಷ್ಮೆ ಸೀರೆ ಮಾದರಿ ಹೋಲುವ ಚೀನಾ ರೇಷ್ಮೆ ಸೀರೆಗಳನ್ನೇ ಮೈಸೂರು ರೇಷ್ಮೆ ಸೀರೆ ಎಂದು ರಾಜಾರೋಷವಾಗಿ ಮಾರಾಟ ಮಾಡಲಾಗುತ್ತಿದೆ, ಆದರೆ ಇದನ್ನು ಪ್ರಶ್ನಿಸಬೇಕಾದ ಮಂದಿ ಜಾಣಕುರುಡರಾಗಿರುವುದು ನಿಜಕ್ಕೂ ಕಳವಳಕಾರಿ ಸಂಗತಿ. ಶತಮಾನದ ಇತಿಹಾಸ ಹೊಂದಿರುವ ಕೆಎಸ್‌ಐಸಿ ಅನ್ನು ದಿನಕಳೆದಂತೆ ಇತಿಹಾಸದ ಪುಟಗಳಲ್ಲಿ ಸೇರಿಸಲು ನಾಮುಂದು, ತಾಮುಂದು ಎಂಬ ಒಂದಷ್ಟು ಮಂದಿಯ ನಡುವೆ ಪೈಪೋಟಿ ನಡೆದಿದೆ, ಹಾಗಾಗಿ ಅಂತವರ ಪಾಲಿಗೆ ಈ ಒಂದು ಖ್ಯಾತ ಉದ್ಯಮ ಬೇಡವಾಗಿದೆ.

ಇದೆಲ್ಲದರ ಪರಿಣಾಮವೇ 114 ವರ್ಷಗಳ ಇತಿಹಾಸ ಹೊಂದಿರುವ, ಬೇಡಿಕೆಗೆ ಅನುಗುಣವಾಗಿ ಗುಣಮಟ್ಟದ ರೇಷ್ಮೆ ನೂಲು ಪೂರೈಸುತ್ತಾ ಬಂದಿರುವ ಈ ರೇಷ್ಮೆ ನೂಲು ತಯಾರಿಕಾ ಘಟಕಕ್ಕೆ ಅಂತವರ ಪಾಲಿಗೆ ಕಂಟಕವಾಗಿ ಪರಿಣಮಿಸಿದೆ. ತಿ.ನರಸೀಪುರದ ರೇಷ್ಮೆ ನೂಲು ತಯಾರಿಕಾ ಘಟಕ 13.11 ಎಕರೆ ವಿಸ್ತೀರ್ಣ ಹೊಂದಿದ್ದು, ಅದರಲ್ಲಿ ಆರು ಎಕರೆ ಜಾಗದಲ್ಲಿ ನೂಲು ತಯಾರಿಕಾ ಘಟಕದ ಕಟ್ಟಡವಿದೆ. ಇನ್ನು ಉಳಿದ 7 ಎಕರೆ ಜಾಗದಲ್ಲಿ ತಾಲೂಕು ಕ್ರೀಡಾಂಗಣ ನಿರ್ಮಾಣಕ್ಕೆ 5.08 ಎಕರೆಯನ್ನು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸುಪರ್ದಿಗೆ ನೀಡಲಾಗಿದ್ದು, ಇದು ನೂಲು ತಯಾರಿಕಾ ಘಟಕ ಮುಚ್ಚುವ ಹುನ್ನಾರದ ಒಂದು ಭಾಗವಾಗಿದೆ ಎಂಬ ಆರೋಪ ಕೇಳಿಬಂದಿತ್ತು. ಇದೇ ವೇಳೆ ಇದರ ಹಿಂದಿನ ಒಳಸುಳಿ ಅರಿತ ಹೋರಾಟಗಾರರು ಪಟ್ಟುಬಿಡದೆ ನಡೆಸಿದ ಹೋರಾಟ ಯಶಸ್ವಿಯಾಯಿತು. ಇಲ್ಲವಾದರೆ ದಿನಕಳೆದಂತೆ ಇಡೀ ಘಟಕವನ್ನೇ ನೆಲಸಮ ಮಾಡುವ ಹುನ್ನಾರ ನಡೆದಿತ್ತು ಎಂಬುದರ ಬಗ್ಗೆ ಮೈಸೂರಿನ ರೇಷ್ಮೆ ಸೀರೆ ಉದ್ಯಮ ವಲಯದಲ್ಲಿ ಚರ್ಚೆ ನಡೆದಿದೆ.

ಕಾರ್ಖಾನೆಯ ವಾರ್ಷಿಕ ಆದಾಯ 118 ಕೋಟಿ ರು.

ಕಾರ್ಖಾನೆಯಲ್ಲಿ ನಿತ್ಯ 210 ಕೆ.ಜಿ. ನೂಲು ತೆಗೆಯಲಾಗುತ್ತಿದೆ. ಜತೆಗೆ 26ರಿಂದ 28 ಗಟ್ಟಿ ಕಚ್ಚಾ ರೇಷ್ಮೆ ನೂಲು ತಯಾರಿಸಲಾಗುತ್ತಿದೆ. ಇದರಿಂದ ಮೈಸೂರು ರೇಷ್ಮೆ ಕಾರ್ಖಾನೆಯಲ್ಲಿ 1451 ಮೀಟರ್ ರೇಷ್ಮೆ ಸೀರೆ (350) ತಯಾರಾದರೆ, ಚನ್ನಪಟ್ಟಣ ಕಾರ್ಖಾನೆಯಲ್ಲಿ 120 ಸೀರೆಗಳು ತಯಾರಾಗುತ್ತವೆ. ಕಾರ್ಖಾನೆ ವಾರ್ಷಿಕ 118 ಕೋಟಿ ರು. ನಿವ್ವಳ ಆದಾಯ ಹೊಂದಿದ್ದು, 2018-19 ಮತ್ತು 2019-20ರಲ್ಲಿ ಮುಖ್ಯಮಂತ್ರಿ ಸ್ವರ್ಣ ಪದಕ ಪಡೆದಿದೆ. ಕಾರ್ಖಾನೆಯು ಗುಣಮಟ್ಟದ ರೇಷ್ಮೆ ನೂಲನ್ನು ಉತ್ಪಾದಿಸಿ ಮೈಸೂರು ಹಾಗೂ ಚನ್ನಪಟ್ಟಣ ನೇಯ್ಗೆ ಘಟಕಗಳಿಗೆ ಪೂರೈಕೆ ಮಾಡುತ್ತಿದೆ. ಜಿಯಾಲಾಜಿಕಲ್ ಇಂಡಿಕೇಷನ್ ಸ್ಥಾನಮಾನ ಪಡೆದಿರುವ ಮೈಸೂರು ರೇಷ್ಮೆ ಸೀರೆಗಳ ಉತ್ಪಾದನೆಗಾಗಿ ಈ ನೂಲಿಗೆ ಭಾರಿ ಬೇಡಿಕೆ ಇದೆ. ನಿತ್ಯ ಕಾರ್ಖಾನೆಯಲ್ಲಿ ನೂಲು ತೆಗೆಯಲು ಕೊಳ್ಳೇಗಾಲ ರೇಷ್ಮೆ ಮಾರುಕಟ್ಟೆಯಿಂದ 1200 ಕೆ.ಜಿ., ಶಿಡ್ಲಘಟ್ಟದಿಂದ 1000 ಕೆ.ಜಿ. ಹಾಗೂ ರಾಮನಗರ ಮಾರುಕಟ್ಟೆಯಿಂದ 1200 ಕೆ.ಜಿ. ಗೂಡು ಖರೀದಿಸಲಾಗುತ್ತಿದೆ.

ಮೈಸೂರು ರೇಷ್ಮೆ ಸೀರೆಗೆ ಅಭಾವ

ಮೈಸೂರು ರೇಷ್ಮೆ ಸೀರೆ ಎಂಬುದು ಬಹುತೇಕ ಮಹಿಳೆಯರ ಪಾಲಿನ ಸ್ವರ್ಗ ಅಚ್ಚುಮೆಚ್ಚಿನ ಉಡುಗೊರೆ ಎನ್ನಬಹುದು. ಮಾರುಕಟ್ಟೆಯಲ್ಲಿ ಎಷ್ಟೆಲ್ಲಾ ಬಗೆಯ ಸೀರೆಗಳಿದ್ದರೂ ಒಂದು ಮೈಸೂರ್ ಸಿಲ್ಕ್ ಸೀರೆಯನ್ನು ಖರೀದಿಸಿಯೇ ತೀರಬೇಕೆಂಬ ಬಯಕೆ ಕರ್ನಾಟಕದ ಮಹಿಳೆಯರಲ್ಲಿ ಸಾಮಾನ್ಯವಾಗಿದೆ. ಮಾರುಕಟ್ಟೆ ಪರಿಸ್ಥಿತಿ ಹಾಗೂ ಮನಸ್ಥಿತಿ ಹೀಗಿದ್ದರೂ ಅಗತ್ಯ ಬೇಡಿಕೆ ಪೂರೈಸುವಲ್ಲಿ ಕೆಎಸ್‌ಐಸಿ ವಿಫಲವಾಗಿದೆ. ಮಾರುಕಟ್ಟೆ ವಿಸ್ತರಣೆಯ ಸವಾಲೇ ಎದುರಾಗದ ಹೊತ್ತಿನಲ್ಲಿ ಕನಿಷ್ಠ ಬೇಡಿಕೆಯನ್ನೂ ಪೂರೈಸದ ಸ್ಥಿತಿಗೆ ಇಂದು ಕೆಎಸ್‌ಐಸಿ ಬಂದು ನಿಂತಿದೆ. ನಿತ್ಯ ತಯಾರಾಗುವ ಬೆರಳೆಣಿಕೆಯಷ್ಟು ಸೀರೆ ಮರುದಿನದ ಕೆಲವೇ ನಿಮಿಷಗಳ ಅಂತರದಲ್ಲಿ ಖಾಲಿ ಆಗುತ್ತಿವೆ. ಸೀರೆಗಾಗಿ ಗಂಟೆಗಟ್ಟಲೆ ಸರತಿ ಸಾಲಿನಲ್ಲಿ ನಿಲ್ಲುವಷ್ಟು ಬೇಡಿಕೆ ಮೈಸೂರು ರೇಷ್ಮೆ ಸೀರೆಗಿದ್ದರೂ, ನೀಡದಷ್ಟು ಅಸಹಾಯಕತೆ ಕೆಎಸ್‌ಐಸಿಗೆ ಬಂದೊದಗಿದೆ, ಹಾಗಾಗಿ ಇದರ ಹಿಂದಿನ ಮರ್ಮ ಮಾತ್ರ ನಿಗೂಢವಾಗಿದೆ.

ಘಟಕದ ಹಿನ್ನೆಲೆ: ನೂಲು ತೆಗೆಯುವ ಕಾರ್ಖಾನೆಯನ್ನು 1912ರಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಸ್ಥಾಪಿಸಿದರು. ಕಾರ್ಖಾನೆಯು ಒಟ್ಟು 12.32 ಎಕರೆ ಜಾಗವನ್ನು ಹೊಂದಿದ್ದು, ಸುಂದರ ಪರಿಸರದಲ್ಲಿದೆ. ಕಾರ್ಖಾನೆ ಆವರಣದಲ್ಲಿ 834 ಮರಗಳಿದ್ದು, ಪಟ್ಟಣಕ್ಕೂ ಆರೋಗ್ಯಕರ ವಾತಾವರಣ ನೀಡಿವೆ. 114 ವರ್ಷಗಳಿಂದ ಬೇಡಿಕೆಗೆ ಅನುಗುಣವಾಗಿ ಗುಣಮಟ್ಟದ ರೇಷ್ಮೆ ನೂಲು ಪೂರೈಸುತ್ತಾ ಘಟಕ ನಡೆದುಕೊಂಡು ಬಂದಿದೆ.

ಶತಮಾನಕ್ಕೂ ಮಿಗಿಲಾದ ಇತಿಹಾಸ ಹೊಂದಿರುವ ಈ ರೇಷ್ಮೆ ನೂಲು ತಯಾರಿಕಾ ಘಟಕದ ಮೇಲೆ ಹಲವಾರು ದಿನ ಕರಿನೆರಳು ಮೂಡಿತ್ತು. ಆದರೆ ಸರಕಾರವೇ ಈ ಕುರಿತಾಗಿ ಪ್ರಸಕ್ತ ನಡೆಯುತ್ತಿರುವ ಅಧಿವೇಶನದ ಸಂದರ್ಭದಲ್ಲೇ ತನ್ನ ಸ್ಪಷ್ಟ ನಿಲುವನ್ನು ತಳೆದಿದ್ದ ಕಾರಣ ಮೈಸೂರು ರೇಷ್ಮೆ ಸೀರೆ ಅಭಿಮಾನಿಗಳಲ್ಲಿದ್ದ ಕಾರ್ಮೋಡ ಕರಗಿದಂತಾಯಿತು.

ವಿಶ್ವವಾಣಿ 12-03-2026 ಗುರುವಾರ @vishwavaninews

ಆರಾಮ

ಅನುದಿನವೂ ವಿರಾಮಕ್ಕೆ ಒಂದು ನೆಪ

ಚಿತ್ರವಿಹಾರ

ಆನ್‌ಲೈನ್ ಯುಗದಲ್ಲೂ ಗೋಕರ್ಣದಲ್ಲಿ ವಿಶೇಷ ತರಕಾರಿ ಲೋಕ

● ಮೋಹನ್ ಭಟ್

ಗೋಕರ್ಣದಲ್ಲಿ ತರಕಾರಿಯನ್ನು ಪ್ರತಿನಿತ್ಯ ಬೆಳಿಗ್ಗೆ ಮನೆಬಾಗಿಲಿಗೆ ತಂದು ಮಾರುವ ತನ್ನಿಂದ ತಾನೆ ಹುಟ್ಟಿಕೊಂಡ ವ್ಯವಸ್ಥೆ ನೂರಾರು ವರ್ಷಗಳಿಂದ ನಡೆದುಕೊಂಡು ಬಂದಿದೆ. ಆಧುನಿಕ ಯುಗದಲ್ಲಿ ಕೊರಿಯರ್, ಆನ್‌ಲೈನ್ ಖರೀದಿ, ಮುಂತಾದವುಗಳು ಇವೆ. ಇದರಲ್ಲಿ ಎಲ್ಲ ವಸ್ತುಗಳನ್ನು ಮನೆಬಾಗಿಲಿಗೆ ತಂದು ನೀಡುವುದು ಒಂದು ವ್ಯವಸ್ಥೆಯಡಿ ನಡೆಯುತ್ತಿದೆ. ಆದರೆ ಗೋಕಣ ದಲ್ಲಿ ತಾವು ಬೆಳೆದ ತರಕಾರಿಯನ್ನು ಮಹಿಳೆಯರು ಗ್ರಾಮಾಂತರ ಪ್ರದೇಶದಿಂದ ಹೊತ್ತು ಮನೆಬಾಗಿಲಿಗೆ ತಂದು ನೀಡಿ ಹಣವನ್ನು ಪಡೆದು ಹೋಗುತ್ತಾರೆ. ಇಲ್ಲಿ ಬೆಳೆಯುವ ತರಕಾರಿಗೆ ಸಾವಯವ ಗೊಬ್ಬರನ್ನು ಉಪಯೋಗಿಸಿ ಬೆಳೆಯುತ್ತಾರೆ ಎಂಬುದು ಕೂಡ ಪ್ರಮುಖವಾದುದು.

ಗೋಕರ್ಣದ ಸುತ್ತಲೂ ಹಳ್ಳಿಗಳಲ್ಲಿ ಕೇವಲ ತರಕಾರಿ ಅಲ್ಲ, ಇತರ ಬೆಳೆಗಳನ್ನು ಬೆಳೆದು ಆಹಾರಕ್ಕಾಗಿ ಉಪಯೋಗಿಸತ್ತಾರೆ. ತರಕಾರಿಯಲ್ಲಿ ಬಿಳಿಬೆಂಡೆ, ಸವತೆ, ಚವಳಿ, ಹಾಲು ಗುಂಬಳ, ನುಗ್ಗಿ, ಬದನೆಕಾಯಿ ವಿವಿಧ ರೀತಿಯ ಸೊಪ್ಪುಗಳು, ಗಡ್ಡೆಗೆಣಸು ಇವು ಪ್ರಮುಖವಾದುದು. ತರಕಾರಿಯ ಹರಾಜು: ಹಳ್ಳಿಗಳಲ್ಲಿ ಬೆಳೆದ ತರಕಾರಿಗಳು ನಸುಕಿನ ಎರಡರಿಂದ ಮೂರು ಗಂಟೆಯ ಒಳಗೆ ಹರಾಜಾಗುವುದು. ನೆರೆಯ ಜಿಲ್ಲೆಗಳಿಂದಲೂ ಬರುವ ವ್ಯಾಪಾರಿಗಳು ಖರೀದಿಸುತ್ತಾರೆ ಎಂಬುದು ಗಮನಾರ್ಹವಾದುದು.

ಜಿಲ್ಲೆಯ ವಿವಿಧೆಡೆ ನಡೆಯುವ ಸಂತೆಗಳಿಗೆ ಗೋಕರ್ಣದ ತರಕಾರಿಯನ್ನು ಕೇವಲ ಪುರುಷರಷ್ಟೇ ಅಲ್ಲ ಮಹಿಳೆಯರೂ ತೆಗೆದು ಕೊಂಡು ಹೋಗುತ್ತಾರೆ. ಬಂದ ಹಣವನ್ನು ತರಕಾರಿ ಬೆಳೆಯಲು ವಿನಿಯೋಗಿಸುತ್ತಾರೆ. ಸಂತೆಗೆ ಮಾರಾಟ ಮಾಡುವುದರ ಜೊತೆಗೆ ಹೊಲದಲ್ಲಿ ಕೆಲಸಮಾಡಲು ಪುರುಷರೊಂದಿಗೆ ಮಹಿಳೆಯರು ಕೂಡ ಶ್ರಮಿಸುತ್ತಾರೆ. ಗೋಕರ್ಣಕ್ಕೆ ಆಗಮಿಸುವ ಪ್ರವಾಸಿಗಳ ಸಂಖ್ಯೆಯು ಹಿಂದಿಗಿಂತ ಹೆಚ್ಚಾದರೂ ತಮ್ಮ ಮೂಲ ಕಸುಬನ್ನು ಬಿಡದ ಇವರು ಭಾಷೆ ಬರದಿದ್ದರೂ ವಿದೇಶಿಯರೊಂದಿಗೆ, ಪ್ರವಾಸಿಗರೊಂದಿಗೆ ಮಾತಾಡಿ ಸಂಜ್ಞೆಗಳನ್ನು ಉಪಯೋಗಿಸಿ ಸಂಪರ್ಕಿಸಿ ವ್ಯಾಪಾರ ಮಾಡುವುದು ಇವರ ಕೌಶಲವಾಗಿದೆ. ಗೋಕರ್ಣಕ್ಕೆ ಪ್ರವಾಸಕ್ಕೆಂದು ಆಗಮಿಸಿ, ನೆಲೆಸಿದವರು ಅಥವಾ ಮತ್ತೆಮತ್ತೆ ಬರುವ ವಿದೇಶಿಯರು ಗೋಕರ್ಣದ ಬದುಕಿಗೆ ಮಾರು ಹೋಗಿದ್ದಾರೆ ಎಂಬುದು ಅತಿಶಯೋಕ್ತಿಯಲ್ಲ . ಇಲ್ಲಿಯ ಆಹಾರ ಪದ್ಧತಿಯನ್ನು ಅವರೂ ಬಳಸಿಕೊಂಡಿದ್ದಾರೆ. ಕೆಲವರು ತಾವು ಬರೆದ ಕೃತಿಗಳಲ್ಲಿ ಇದನ್ನು ಉಲ್ಲೇಖಿಸಿದ್ದಾರೆ.

ಪುರಾಣ ಪ್ರಸಿದ್ಧ ಗೋಕರ್ಣ ದಶಕದಿಂದೀಚೆ ಯಾತ್ರಾಸ್ಥಳದೊಂದಿಗೆ ಇಲ್ಲಿಯ ಸುಂದರ ಕಡಲ ಕಿನಾರೆಗಳಿಂದಾಗಿ ಪ್ರಸಿದ್ಧ ಪ್ರವಾಸಿ ತಾಣವಾಗಿ ಬೆಳೆದಿದೆ. ಮೊದಲೆಲ್ಲ ಶಿವರಾತ್ರಿ ಹಾಗೂ ಇತರ ದಿನಗಳಲ್ಲಿ ಯಾತ್ರಿಕರು ಕಾಲ್ನಡಿಗೆಯಲ್ಲಿ, ರಾಜ್ಯ ಸಾರಿಗೆ ಸಂಸ್ಥೆ ಏರ್ಪಡಿಸಿದ್ದ ವಿಶೇಷ ಬಸ್‌ಗಳಲ್ಲಿ ಆಗಮಿಸಿ ಪೂಜೆ ಸಲ್ಲಿಸುತ್ತಿದ್ದರು. ಆದರೀಗ ಬಹುವಿಧದ ಸಾರಿಗೆ ವ್ಯವಸ್ಥೆಯಿಂದಾಗಿ ಗೋಕರ್ಣಕ್ಕೆ ವರ್ಷವಿಡೀ ಜನರು ಆಗಮಿಸುವುದರಿಂದಾಗಿ ವಿವಿಧ ರೀತಿಯ ಹೊಟೇಲ್‌ಗಳು, ರೆಸಾರ್ಟ್, ಹೋಮ್ ಸ್ಟೇಗಳು ಬೆಳೆದಿವೆ. ಗೋಕರ್ಣ ಒಂದೆಡೆ ಸಾಂಪ್ರದಾಯಿಕತೆಗೆ, ಸರಳತೆಗೆ ಬದ್ಧವಾಗಿದೆ. ಇನ್ನೊಂದೆಡೆ ಆಧುನಿಕತೆಗೆ ಒಗ್ಗಿಕೊಂಡಿರುವ ಪ್ರವಾಸಿಗರ ಆಗಮನ, ಅವರ ಬೇಡಿಕೆಗಳಿಗೆ ತಕ್ಕಂತೆ ಬೆಳೆದ ಪ್ರವಾಸೋದ್ಯಮ ಕೂಡ ತನ್ನದೇ ಇತಿಮಿತಿಯಲ್ಲಿ ಬೆಳೆದಿದೆ.

ಮಾರ್ಚ್ 13ರಂದು ವಿಶ್ವ ನಿದ್ರಾ ದಿನ. ಸರಿಯಾದ, ಸ್ವಸ್ಥವಾದ ನಿದ್ರೆಯಿಂದ ಮನುಷ್ಯನ ದೈಹಿಕ, ಮಾನಸಿಕ ಆರೋಗ್ಯ ವೃದ್ಧಿಯಾಗುತ್ತದೆ ಎಂಬುದನ್ನು ಅರಿತ ವೈದ್ಯರು, ಆ ವಿಚಾರವನ್ನು ಪ್ರಚುರಪಡಿಸಲು ಅದಕ್ಕೆಂದೇ ಒಂದು ದಿನ ನಿಗದಿಪಡಿಸಿದರು. ಈ ಹಿನ್ನೆಲೆಯಲ್ಲಿ ಪ್ರಸ್ತುತ ಈ ಲೇಖನ.

ನಿದ್ರೆಯೇ ಶಾಂತಿ, ನಿದ್ರೆಯೇ ತಪಸ್ಸು, ನಿದ್ರೆಯೇ ದಿವ್ಯೌಷಧ

● ಮಲ್ಲಪ್ಪ ಸಿ. ಖೊದ್ನಾಪೂರ (ತಿಕೋಟಾ)

ಥಾಮಸ್ ಡೆಕ್ಕರ್ ಅವರು, ''Sleep is the golden chain that ties health and our bodies together ' ಎಂದು ಹೇಳಿದ್ದಾರೆ. ನಿದ್ರೆಯು ನಮ್ಮ ಜೀವನದ ಒಂದು ಮುಖ್ಯವಾದ ಕ್ರಿಯೆ. ಪ್ರತಿಯೊಬ್ಬರೂ ಆರೋಗ್ಯವಂತರಾಗಿರಲು ದಿನಕ್ಕೆ ಕನಿಷ್ಠ 7 ಗಂಟೆಗಳ ನಿದ್ರೆ ಮಾಡಲೇಬೇಕು. ನಿದ್ರೆ ಎಂಬುದು ಉತ್ತಮ ಆರೋಗ್ಯಕ್ಕೊಂದು ಆಧಾರಸ್ತಂಭ. ಅದಕ್ಕಾಗಿ ಮನುಷ್ಯನ ಮಾನಸಿಕ, ದೈಹಿಕ, ಬೌದ್ಧಿಕ ಮತ್ತು ಭಾವನಾತ್ಮಕವಾಗಿ ಸದೃಢ ಮತ್ತು ಸಮತೋಲಿತ ಆರೋಗ್ಯ ಮತ್ತು ಸ್ವಾಸ್ಥ್ಯವನ್ನು ಹೊಂದಲು ನಿದ್ರೆಯು ಅತಿ ಅವಶ್ಯಕ. ಒಂದು ವೇಳೆ ನಿದ್ರಾ ಭಂಗವಾದರೆ ಅಥವಾ ನಿಗದಿತವಾಗಿ ನಿದ್ರೆಯು ಆಗದೇ ಇದ್ದರೆ ಆರೋಗ್ಯದಲ್ಲಿ ಏರುಪೇರುಗಳಾಗಿ ಅದು ನೇರವಾಗಿ ದೈಹಿಕ ಸುಸ್ತು, ಅನಾಯಾಸ, ದಣಿವು ಮತ್ತು ಅನಾರೋಗ್ಯಕ್ಕೆ ಕಾರಣವಾಗುತ್ತದೆ.

ಈ ದಿನದ ಆಚರಣೆಯ ಉದ್ದೇಶ ಜಾಗತಿಕವಾಗಿ ಜನರಲ್ಲಿ ಆರೋಗ್ಯಕರವಾದ ಮತ್ತು ಸ್ವಾಸ್ಥ್ಯದ ಬಗೆಗೆ ಮತ್ತು ನಿದ್ರಾಹೀನತೆಯಿಂದ ಎದುರಾಗುವ ಅನಾರೋಗ್ಯ ಮತ್ತು ದೈಹಿಕ ಸಮಸ್ಯೆಗಳ ಕುರಿತು ಜಾಗೃತಿ ತರುವುದೇ ಆಗಿದೆ. ವಿಶ್ವ ನಿದ್ರಾ ಸಮಾಜವು ನಿದ್ರೆಯು ಜನರ ಆರೋಗ್ಯದ ಮೇಲೆ ಬೀರುವ ಪರಿಣಾಮ ಮತ್ತು ನಿದ್ರಾ ಸಮಸ್ಯೆಯಿಂದ ತಲೆದೋರುವ ದೈಹಿಕ ಸಮಸ್ಯೆಗಳಿಂದ ಜನರನ್ನು ರಕ್ಷಿಸಲು ಮತ್ತು ಸಮಾಜದಲ್ಲಿ ಉತ್ತಮ ಆರೋಗ್ಯ ಮತ್ತು ಸ್ವಾಸ್ಥ್ಯವನ್ನು ತರಲು ಮಹೋನ್ನತವಾದ ಉದ್ದೇಶದಿಂದ ಈ ದಿನವನ್ನು ಆಚರಿಲಾಗುತ್ತಿದೆ. ಹೀಗಾಗಿ ಪ್ರತಿವರ್ಷ ಮಾರ್ಚ್ 13ರಂದು ಜಗತ್ತಿನಾದ್ಯಂತ ವಿಶ್ವ ನಿದ್ರಾ ದಿನವನ್ನು ಆಚರಿಸಲಾಗುತ್ತಿದೆ.

ಆಚರಣೆಯ ಇತಿಹಾಸ: ಜಗತ್ತಿನಲ್ಲಿ 1987ರಲ್ಲಿ ಪ್ರಪ್ರಥಮ ಬಾರಿಗೆ ಆಯೋಜಿಸಿದ ವಿಶ್ವ ನಿದ್ರಾ ದಿನದ ಅಧ್ಯಕ್ಷತೆಯನ್ನು ಡಾ.ಪಾರ್ರಾ, ಇಟಲಿ ವಿಶ್ವವಿದ್ಯಾಲಯಮತ್ತು ಡಾ.ಅಂಟಾನಿಯೋ ಕುಲೆಬ್ರಾಸ್, ದಿ ಸ್ಲೀಪ್ ಸೆಂಟರ್, ನ್ಯೂಯಾರ್ಕ್ ಅವರು ವಹಿಸಿದ್ದರು. ಪ್ರಾರಂಭದಲ್ಲಿ ಜಗತ್ತಿನಲ್ಲಿ ಆರೋಗ್ಯ ಹಿತರಕ್ಷಣಾ ಸೇವೆ ಸಲ್ಲಿಸುವ ವೈದ್ಯರ ಗುಂಪು ಹಾಗೂ ವೈದ್ಯಕೀಯ ಸಮುದಾಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಸದಸ್ಯರು ಮಾನವನ ಜೀವನದಲ್ಲಿ ನಿದ್ರೆ, ಆರೋಗ್ಯಕರವಾದ ನಿದ್ರಾ ಅವಧಿ, ಮತ್ತು ನಿದ್ರೆ ಮಾಡುವುದರಿಂದ ತಡೆಗಟ್ಟಬಹುದಾದ ದೈಹಿಕ ಮತ್ತು ಅನಾರೋಗ್ಯ ಸಮಸ್ಯೆಗಳು ಮತ್ತು ರೋಗ-ರುಜಿನ ಮತ್ತು ಕಾಯಿಲೆಗಳ ಬಗೆಗೆ ಜನರಲ್ಲಿ ತಿಳಿವಳಿಕೆ ನೀಡಲಾಯಿತು. ಅಮೇರಿಕ ದೇಶದಲ್ಲಿ ವರ್ಲ್ಡ್ ಹೆಲ್ತ್ ಸೊಸೈಟಿಯು ಈ ದಿನದ ಆಚರಣೆಗೆ ನಾಂದಿ ಹಾಡಿತು. ಜನರಲ್ಲಿ ಉತ್ತಮ ನಿದ್ರೆಯ ಜತೆಗೆ ಒಳ್ಳೆಯ ಹವ್ಯಾಸಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವಂತೆ ಹಾಗೂ ಆರೋಗ್ಯಕರವಾದ ಜೀವನಕ್ಕಾಗಿ ಇರಬೇಕಾದ ಹತ್ತು ಸೂತ್ರಗಳನ್ನು ತಿಳಿಸಿಕೊಡಲಾಗುತ್ತಿದೆ. ಉತ್ತಮ ಆರೋಗ್ಯಪೂರ್ಣ ನಿದ್ರೆಯ ಮಹತ್ವ: ಅದರಲ್ಲಿ ಮುಖ್ಯವಾಗಿ ಆರೋಗ್ಯಯುತವಾದ ನಿದ್ರೆಗಾಗಿ ಸಮಯ ನಿಗದಿಪಡಿಸುವುದು, ಹಗಲಿನ ಅವಧಿಯಲ್ಲಿ 45 ನಿಮಿಷಕ್ಕಿಂತ ಹೆಚ್ಚು ಗಂಟೆ ನಿದ್ರೆ ಮಾಡಬಾರದು, ಅಹಿತಕರವಾದ ಚಟ ಮತ್ತು ಹವ್ಯಾಸಗಳನ್ನು ತ್ಯಜಿಸುವುದು, ಮಲಗುವ ಆರು ಗಂಟೆಗಳ ಮುನ್ನ ಕಾಫಿ, ಚಹಾ, ಸೋಡಾ ಪಾನೀಯ ಮತ್ತು ಚಾಕಲೇಟ್‌ನಂತಹ ಪದಾರ್ಥಗಳ ಬಳಕೆ ಮಾಡಕೂಡದು, ಪ್ರತಿದಿನವು ತಪ್ಪದೇ ಮುಂಜಾನೆ ಎದ್ದ ನಂತರ ಯೋಗ, ಧ್ಯಾನ ಮತ್ತು ವ್ಯಾಯಾಮ ಮಾಡುವುದು ಇವೇ ಮೊದಲಾದ ಆರೋಗ್ಯಕರವಾದ ಸೂತ್ರಗಳ ಬಗೆಗೆ ತಿಳಿಸಿಕೊಡುವುದೇ ಈ ದಿನದ ಪ್ರಮುಖ ಉದ್ದೇಶವಾಗಿದೆ.

2026ನೇಯ ವರ್ಷದ ಘೋಷವಾಕ್ಯ: ''ಚೆನ್ನಾಗಿ ಮಲಗಿ, ಆರೋಗ್ಯಯುತವಾಗಿ ಬದುಕಿ'' ಎನ್ನುವ ಧ್ಯೇಯವಾಕ್ಯದೊಂದಿಗೆ ಉತ್ತಮ ಗುಣಮಟ್ಟದ ನಿದ್ರೆಯನ್ನು ಮಾಡುವುದರ ಮೂಲಕ ಹೇಗೆ ನಮ್ಮ ದೈಹಿಕ, ಮಾನಸಿಕ, ಬೌದ್ಧಿಕ ಮತ್ತು ಭಾವನಾತ್ಮಕವಾಗಿ ಉತ್ತಮ ಆರೋಗ್ಯವನ್ನು ಹೊಂದಬಹುದು. ನಿದ್ರೆ ಭಾವನಾತ್ಮಕ ಬುದ್ಧಿಮತ್ತೆಗೆ ಅತಿ ಅವಶ್ಯಕವಾಗಿದೆ. ಆರೋಗ್ಯಕರ ನಿದ್ರೆಯಿಂದ ದೈಹಿಕ-ಮಾನಸಿಕ ಸಾಮರ್ಥ್ಯ ಪ್ರವರ್ಧಿಸಬಹುದು, ಕಾರ್ಯತತ್ಪರತೆ ಮತ್ತು ಸರ್ವಾಂಗೀಣ ಆರೋಗ್ಯಕ್ಕಾಗಿ ನಿದ್ರೆಯು ಹೇಗೆ ಪೂರಕವಾಗಬಲ್ಲದು ಎಂಬುದರ ಮಹತ್ವ ತಿಳಿಸುತ್ತದೆ.

ಆದ್ದರಿಂದ ಸಮಯೋಚಿತ ನಿದ್ರೆಯು ಮನುಷ್ಯನಿಗೆ ಉತ್ತಮ ಆರೋಗ್ಯ ಸಂಪತ್ತು ಮತ್ತು ಬೌದ್ಧಿಕ ಶಕ್ತಿ-ಸಾಮರ್ಥ್ಯವನ್ನು ವೃದ್ಧಿಸುತ್ತದೆ ಹಾಗೂ ಉತ್ತಮ ಆರೋಗ್ಯಪೂರ್ಣ ನಿದ್ರೆಯು ಒಂದು ಮಾನಸಿಕ ಆರೋಗ್ಯಕ್ಕೆ ದಿವ್ಯೌಷಧಿ ಇದ್ದಂತೆ ಎಂಬುದು ವೈಜ್ಞಾನಿಕವಾಗಿ ಸಾಬೀತಾಗಿದೆ. ನಾವೆಲ್ಲರೂ ನಿದ್ರೆಯೇ ಆರೋಗ್ಯದ ಗುಟ್ಟು ಎಂಬುದನ್ನು ಅರಿತು ಸರಿಯಾದ ಮತ್ತು ಸಮಯೋಚಿತ ನಿದ್ರೆ ಮಾಡುವುದರ ಮೂಲಕ ಆರೋಗ್ಯಕವಾದ ಜೀವನವನ್ನು ಕಾಪಾಡಿಕೊಳ್ಳಬೇಕು. ಈ ದಿನದ ಆಚರಣೆಯ ಮೂಲಕ ನಾವು-ನಿವೆಲ್ಲರೂ ಅರಿತು ನಮ್ಮೆಲ್ಲರಲ್ಲಿ ಉತ್ತಮ ನಿದ್ರೆಯನ್ನು ತಂದು ಆರೋಗ್ಯದಲ್ಲಿ ಸಮೃದ್ಧಿ, ಸದೃಢತೆ ಮತ್ತು ಉತ್ತಮ ಜೀವನಕ್ಕೆ ಪ್ರೇರಣೆಯಾಗುತ್ತದೆ ಎಂಬುದೇ ನನ್ನ ಆಶಯವಾಗಿದೆ.

ಗುಜರಾತ್‌ನಲ್ಲಿ ಕಿವಿಗೆ ಬಿದ್ದ ಕನ್ನಡದ ಅಮೃತಸ್ಪರ್ಶ

● ಮೊಹಮ್ಮದ್ ಅಜರುದ್ದೀನ್ ಅಕ್ಕಿಹೆಬ್ಬಾಳು

ಗುಜರಾತ್‌ನ ಬರೋಡಾ ನಗರದ ಸಮೀಪವಿರುವ ಮಂಜುಸಾರ್ ಗ್ರಾಮದಲ್ಲಿ ನಾನು ಕಳೆದ ಆ ದಿನಗಳು ಹೋರಾಟ ಮತ್ತು ಕಲಿಕೆಯ ಅದ್ಭುತ ಸಮ್ಮಿಶ್ರಣವಾಗಿದ್ದವು. ಪ್ರತಿ ದಿನ ಬೆಳಿಗ್ಗೆ ಎದ್ದು ಕಂಪನಿಗೆ ಹೋಗುವುದು, ಅಲ್ಲಿನ ಯಂತ್ರಗಳ ಸದ್ದಿನ ನಡುವೆ ನನ್ನ ದೈನಂದಿನ ಜವಾಬ್ದಾರಿಗಳನ್ನು ನಿಭಾಯಿಸುವುದು ನನ್ನ ಕಾಯಕವಾಗಿತ್ತು. ನನ್ನ ಕೆಲಸ ಮುಗಿಸಿಕೊಂಡು ಸಂಜೆ ದಣಿವಿನಿಂದ ಪಿಜಿಗೆ ಬಂದ ಕೂಡಲೇ, ಕಚೇರಿಯ ಉಡುಪುಗಳನ್ನು ಕಳಚಿ ನಿತ್ಯದ ಸಾಧಾರಣ ಬಟ್ಟೆಗಳನ್ನು ಧರಿಸುವುದು ನನಗೆ ಅಭ್ಯಾಸವಾಗಿತ್ತು. ಒಂದು ದಿನ ಹೀಗೆ ಕೆಲಸ ಮುಗಿಸಿ ಬಂದವನು, ಮನೆಯವರೊಂದಿಗೆ ಮಾತನಾಡೋಣವೆಂದು ರೂಮಿನ ಹೊರಗೆ ಬಂದು ನಿಂತಾಗ, ಅಲ್ಲಿ ಕೇಳಿಸಿದ ಆ ಒಂದು ಕನ್ನಡದ ಧ್ವನಿ ನನ್ನ ಬದುಕಿನ ಮರೆಯಲಾಗದ ಘಟನೆಗೆ ನಾಂದಿಯಾಯಿತು.

ಗುಜರಾತ್‌ನ ಆ ಮೂಲೆಯಲ್ಲಿ ಸತತವಾಗಿ ಹಿಂದಿ ಮತ್ತು ಗುಜರಾತಿ ಭಾಷೆಗಳ ನಡುವೆ ಬದುಕುತ್ತಿದ್ದ ನನಗೆ, ಇದ್ದಕ್ಕಿದ್ದಂತೆ ಕಿವಿಗೆ ಬಿದ್ದ ಆ ಕನ್ನಡದ ಮಾತು ಅಮೃತದಂತೆ ಭಾಸವಾಯಿತು. ಆ ಧ್ವನಿಯನ್ನು ಹಿಂಬಾಲಿಸಿದಾಗ ಅಲ್ಲಿ ಮೈಸೂರಿನ ಮೂಲದ ವ್ಯಕ್ತಿಯೊಬ್ಬರು ಫೋನಿನಲ್ಲಿ ಮಾತನಾಡುತ್ತಿದ್ದರು. ಅವರು ಮಾತು ಮುಗಿಸುವವರೆಗೂ ನಾನು ಕಾತರದಿಂದ ಕಾಯುತ್ತಾ ನಿಂತಿದ್ದೆ. ಅವರು ಫೋನ್ ಇಟ್ಟ ತಕ್ಷಣವೇ ನಾನು ಓಡಿ ಹೋಗಿ ಅವರನ್ನು ಮಾತನಾಡಿಸಿದೆ. ಆ ಹೊಸ ಫ್ಯಾಕ್ಟರಿಯಲ್ಲಿ ಎಲೆಕ್ಟ್ರಿಕಲ್ ಕೆಲಸಕ್ಕಾಗಿ ಬಂದಿದ್ದ ಅವರು, ಈಗಾಗಲೇ ಮೂರು ತಿಂಗಳು ಅಲ್ಲಿ ಕಳೆದಿದ್ದರು. ನಾನಿರುವ ಕಡೆ ನಮ್ಮ ಭಾಷೆಯವರೇ ಸಿಕ್ಕಾಗ ಮನಸ್ಸು ಹಗುರವಾಗಿ, ನಾನು ಅವರ ಮುಂದೆ ನನ್ನ ಮನದಾಳದ ಮಾತುಗಳನ್ನು ಹಂಚಿಕೊಂಡೆ.

ನಾನು ಅವರಿಗೆ ವಿವರಿಸಿದೆ-ನೋಡಿ ಅಣ್ಣ, ನಾನು ಇಲ್ಲಿ ಕೇವಲ ಕೆಲಸಕ್ಕಾಗಿ ಬಂದಿಲ್ಲ, ಸಾಫ್ಟ್‌ವೇರ್ ಮತ್ತು ಹೊಸ ತಾಂತ್ರಿಕ ಕೌಶಲ್ಯಗಳನ್ನು ಕಲಿಯಬೇಕೆಂಬ ಹಂಬಲದಿಂದ ಇಷ್ಟು ದೂರ ಬಂದಿದ್ದೇನೆ. ನಿತ್ಯ ಕಂಪನಿಯಲ್ಲಿ ಮೆಷಿನ್ ಕೆಲಸಗಳ ನಡುವೆ ನಾನು ನನ್ನ ಕೌಶಲ್ಯವನ್ನು ಹೇಗೆ ವೃದ್ಧಿಸಿಕೊಳ್ಳುತ್ತಿದ್ದೇನೆ ಎಂದು ನನ್ನ ಹೋರಾಟದ ಕಥೆಯನ್ನು ಹೇಳಿದೆ. ನನ್ನ ಮಾತುಗಳನ್ನು ತಾಳ್ಮೆಯಿಂದ ಕೇಳಿಸಿಕೊಂಡ ಅವರು, ಮಂದಹಾಸದಿಂದ ಹೀಗೆ ಹೇಳಿದರು: ನೋಡು ತಮ್ಮ, ನೀನು ಈ ವಯಸ್ಸಿನಲ್ಲೇ ಇಷ್ಟು ದೂರ ಬಂದು ಇಲ್ಲಿ ಅನುಭವ ಪಡೆಯುತ್ತಿರುವುದು ನಿಜಕ್ಕೂ ಹೆಮ್ಮೆಯ ವಿಷಯ. ಧೃತಿಗೆಡಬೇಡ, ಈ ಮಂಜುಸಾರ್‌ನಲ್ಲಿ ನೀನು ಪಡೆಯುವ ಈ ವೃತ್ತಿಪರ ಅನುಭವವೇ ನಿನಗೆ ಶ್ರೀರಕ್ಷೆ. ಇಲ್ಲಿ ನೀನು ಸರಿಯಾಗಿ ಕೆಲಸ ಕಲಿತರೆ, ಮುಂದೆ ನಮ್ಮ ಬೆಂಗಳೂರು ನಗರದಲ್ಲಿ ನಿನಗೆ ಖಂಡಿತವಾಗಿಯೂ ಉತ್ತಮ ಕೆಲಸ ಸಿಗುತ್ತದೆ. ಅಲ್ಲಿ ನಿನ್ನಂತಹ ಕೌಶಲ್ಯವುಳ್ಳವರಿಗೆ ಬಹಳ ಬೇಡಿಕೆಯಿದೆ. ಅವರ ಆ ಮಾತುಗಳು ನನ್ನಲ್ಲಿ ಹೊಸ ಆತ್ಮವಿಶ್ವಾಸವನ್ನು ತುಂಬಿದವು.

ಕೇವಲ ಆ ಮೈಸೂರಿನ ವ್ಯಕ್ತಿ ಮಾತ್ರವಲ್ಲ, ನನ್ನ ಕಂಪನಿಯಲ್ಲಿಯೂ ಇಂತಹ ಸುಂದರ ಕ್ಷಣಗಳು ಎದುರಾಗುತ್ತಿದ್ದವು. ಕಂಪನಿಯ ಸಿಎನ್‌ಸಿ ಮೆಷಿನ್‌ಗಳ ಸರ್ವಿಸ್ ಮಾಡಲು ಬೆಂಗಳೂರಿನಿಂದ ಅಥವಾ ಕರ್ನಾಟಕದ ಇತರ ಭಾಗಗಳಿಂದ ಜನರು ಬರುತ್ತಿದ್ದರು. ಅವರು ಬಂದಾಗ ಸುಮಾರು ಎರಡರಿಂದ ಮೂರು ವಾರಗಳ ಕಾಲ ಇಲ್ಲೇ ಉಳಿದುಕೊಳ್ಳುತ್ತಿದ್ದರು. ಆ ಸಮಯದಲ್ಲಿ ಅವರೊಂದಿಗೆ ನನ್ನ ಮಾತೃಭಾಷೆಯಲ್ಲಿ ಮಾತನಾಡುತ್ತಾ, ನನ್ನ ಕೆಲಸದ ಬಗ್ಗೆ ಚರ್ಚಿಸುತ್ತಾ ಕಾಲ ಕಳೆಯುವುದು ನನಗೆ ತಾಯ್ನಾಡಿನಲ್ಲೇ ಇದ್ದೇನೋ ಎಂಬ ಭಾವನೆ ಮೂಡಿಸುತ್ತಿತ್ತು. ಮಂಜುಸಾರ್‌ನ ಆ ಕರಾಳ ಭಾನುವಾರದ ಹಸಿವಿನ ನೋವಿನ ನಡುವೆಯೂ, ಇಂತಹ ಕನ್ನಡದ ಬಾಂಧವ್ಯಗಳು ನನ್ನನ್ನು ಮಾನಸಿಕವಾಗಿ ಗಟ್ಟಿಗೊಳಿಸಿದವು. ರಾಜ್ಯ ಬೇರೆಯಿರಬಹುದು, ನಾವು ಇರುವ ಪರಿಸ್ಥಿತಿ ಕಠಿಣವಿರಬಹುದು, ಆದರೆ 'ನಮ್ಮವರು' ನೀಡುವ ಒಂದು ಸಣ್ಣ ಸಲಹೆ ಮತ್ತು ಪ್ರೋತ್ಸಾಹ ನಮ್ಮ ಬದುಕಿನ ಹಾದಿಯನ್ನೇ ಬದಲಿಸಬಲ್ಲದು ಎಂಬುದು ನನಗೆ ಅಂದು ಮನವರಿಕೆಯಾಯಿತು.

ಬಾಲ್ಯವನ್ನು ಕಿತ್ತೆಸೆವ ಗಾಂಭೀರ್ಯ: ಹೀಗೇಕೆ ಆಗುತ್ತಿದ್ದಾರೆ ಮಕ್ಕಳು?

● ಕಾರ್ತಿಕ್ ಕೃಷ್ಣ

ಇತ್ತೀಚಿನ ದಿನಗಳಲ್ಲಿ ಮಕ್ಕಳು ಬಹಳ ಬೇಗ ಮೆಚೂರ್ ಆಗಿಬಿಡುತ್ತಾರೆ, ಅವರಲ್ಲಿ ಮುಗ್ಧತೆ ಇಲ್ಲ ಎಂಬ ಮಾತುಗಳನ್ನು ನಾವು ಪದೇಪದೇ ಕೇಳುತ್ತಿರುತ್ತೇವೆ. ಕೆಲವು ಮಕ್ಕಳನ್ನು ನೋಡಿದಾಗ ಅದು ನಿಜವೆನಿಸುತ್ತದೆ. ಕ್ಯೂಟ್ ಆಗಿ ಆಡಿಕೊಂಡಿರಬೇಕಾದ ವಯಸ್ಸಿನಲ್ಲಿ, ಮಂಗಾಟಗಳನ್ನು ಬಿಟ್ಟು ದೊಡ್ಡ ಮನುಷ್ಯರಂತೆ ಶಿಸ್ತಿನಿಂದ ಒಂದೆಡೆ ನಿಲ್ಲುವುದು, ಅಪ್ಪ-ಅಮ್ಮನ ಅಂಕುಶಕ್ಕೆ ಸಿಲುಕಿ ಪಳಗಿದ ಆನೆಗಳಂತೆ ವರ್ತಿಸುವುದನ್ನು ನೋಡಲು 'ಪಬ್ಲಿಕ್ ಡಿಸೆನ್ಸಿ' ಎನಿಸಬಹುದು. ಆದರೆ, ಮಗುವಿನ ಒಳಗಿನ ಸಹಜ ಹಂಬಲಗಳ ಮೇಲೆ ಇದು ಎಂತಹ ಪರಿಣಾಮ ಬೀರಬಹುದು ಎಂಬುದು ಯೋಚಿಸಬೇಕಾದ ವಿಷಯ.

ಮಕ್ಕಳೆಂದರೆ ಓಡಬೇಕು, ಜಿಗಿಯಬೇಕು, ಕುಣಿದಾಡಬೇಕು, ಪ್ರಶ್ನೆ ಮಾಡಬೇಕು ಮತ್ತು ಅನ್ವೇಷಿಸಬೇಕು. ಆಗಲೇ ಅವರ ಬಾಲ್ಯ ಸಂಪನ್ನವಾಗುವುದು ಮತ್ತು ಸಮಗ್ರ ಬೆಳವಣಿಗೆ ಸಾಧ್ಯವಾಗುವುದು. ನಾನು ಚೈಲ್ಡ್ ಸೈಕಾಲಜಿ ಓದಿದವನಲ್ಲ; ಕಳೆದ ಮೂರು ವರ್ಷಗಳಿಂದ ಮಗಳನ್ನು ಬೆಳೆಸಿದ ಅನುಭವದಿಂದ ಈ ಮಾತುಗಳನ್ನು ಬರೆಯುತ್ತಿದ್ದೇನೆ.

1. ತಾಳ್ಮೆಯೆಂಬ ಅಮೃತ: ಮಗು ಏನನ್ನೋ ಚಿತ್ರಿಸುತ್ತದೆ, ಅದನ್ನು ಸಂಭ್ರಮದಿಂದ ತಂದು ನಿಮಗೆ ತೋರಿಸುತ್ತದೆ. ನೀವು ಭೇಷ್ ಎನ್ನುತ್ತೀರಿ. ಮಗು ಮತ್ತೇನೋ ಬರೆದು ತರುತ್ತದೆ, ಆಗಲೂ ಮೆಚ್ಚುತ್ತೀರಿ. ಹೀಗೆ ಐದಾರು ಬಾರಿ ಮಗು ನಿಮ್ಮ ಬಳಿ ಬಂದಾಗ ನಿಮ್ಮ ತಾಳ್ಮೆ ಕೆಡಬಹುದು. ಅಂತಹ ಸಂದರ್ಭದಲ್ಲಿ ಪ್ರತಿಕ್ರಿಯೆ ನೀಡದೆ ಮೌನವಾಗಿ ಕೂರಬೇಡಿ. ಬದಲಿಗೆ ಇನ್ನೊಂದಿಷ್ಟು ತಾಳ್ಮೆ ಒಟ್ಟುಗೂಡಿಸಿ ಭೇಷ್ ಎನ್ನಿ. ಒಂದು ವೇಳೆ ಅಸಾಧ್ಯವೆನಿಸಿದರೆ, ಬೇರೆ ಏನಾದರೂ ಆಟವಾಡಲು ಪ್ರೀತಿಯಿಂದ ಹೇಳಿ. ನಾವು ನೀಡುವ ಅಸಡ್ಡೆಯ ಪ್ರತಿಕ್ರಿಯೆ ಮಗುವಿನ ಮನಸ್ಸಿನಲ್ಲಿ ನನ್ನ ವಿಚಾರಗಳು ಅಪ್ಪ-ಅಮ್ಮನಿಗೆ ಇಷ್ಟವಿಲ್ಲವೇನೋ ಎಂಬ ಭಾವನೆ ಮೂಡಿಸಿ, ಅವರು ತಮ್ಮದೇ ಆದ ಒಂಟಿ ಲೋಕವನ್ನು ಸೃಷ್ಟಿಸಿಕೊಳ್ಳುವಂತೆ ಮಾಡಬಹುದು.
2. ಮಗುವಿನೊಂದಿಗೆ ಮಗುವಾಗಿ: ಮಗು ಏನಾದರೂ ನಟಿಸುತ್ತದೆ; ಉದಾಹರಣೆಗೆ ಕೋತಿಯಂತೆ 'ಕಿರ್ರ್' ಎನ್ನುತ್ತದೆ ಅಂದುಕೊಳ್ಳಿ. ನೀವು ಎಷ್ಟೇ ಕೆಲಸದ ಒತ್ತಡದಲ್ಲಿದ್ದರೂ, ಮಗುವಿನೆಡೆಗೆ ತಿರುಗಿ ನೀವೂ ಒಂದು ಕ್ಷಣ 'ಗುರ್ರ್' ಎನ್ನಿ! ಅವರ ಲೋಕಕ್ಕೆ ಇಳಿದು ಮಕ್ಕಳೊಂದಿಗೆ ಮಕ್ಕಳಾದಾಗ ಸಿಗುವ ಆಪ್ತತೆಯೇ ಬೇರೆ.
3. ಸಮಾಜದ ಚೌಕಟ್ಟು ವರ್ಸಸ್ ಮಗುವಿನ ಸಂಭ್ರಮ: ಕೆಲ ವಾರಗಳ ಹಿಂದೆ ಮನೆಯಲ್ಲಿ ಮದುವೆಯಿತ್ತು. ನನ್ನ ಮಗಳು ಅನ್ವೇಷಣಾಪ್ರಿಯೆ. ಅವಳ ಕಾಲಿಗೆ ಟ್ರ್ಯಾಕಿಂಗ್ ಡಿವೈಸ್ ಕಟ್ಟಿದರೆ ಖಂಡಿತ ದಿನಕ್ಕೆ 10 ಕಿ.ಮೀ ಓಡಿರುತ್ತಾಳೆ ಎಂದು ನಾವೇ ಮಾತನಾಡಿಕೊಳ್ಳುತ್ತಿರುತ್ತೇವೆ. ಅಂದು ಗ್ರೂಪ್ ಫೋಟೋ ತೆಗೆಸಿಕೊಳ್ಳುವಾಗ ಅವಳು ಅಲ್ಲಿಂದ ಓಡಿದಳು. ಪಕ್ಕದಲ್ಲಿದ್ದವರಿಗೆ ಸಿಟ್ಟು ಬಂತು, ಇವಳನ್ನು ಹಿಡಿದುಕೊಳ್ಳಿ ಎಂಬಂತೆ ಇರುಸು-ಮುರಿಸಿನಿಂದ ನೋಡಿದರು. ನಾನು ಅವಳನ್ನು ಗದರದೆ ನಿಧಾನವಾಗಿ ಕರೆದು ಬೇರೆಡೆ ಆಡಲು ಬಿಟ್ಟೆ. ಫೋಟೋದ ಒಂದು 'ಪೋಸ್' ಅಥವಾ ಗಿಮಿಕ್ ಆಗಿ ಮಗುವಿನ ಸಹಜ ಉತ್ಸಾಹಕ್ಕೆ ತೊಂದರೆ ಕೊಡುವುದು ನನಗೆ ಇಷ್ಟವಿರಲಿಲ್ಲ. ಹಾಗೆಯೇ ಮಗುವಿನಿಂದ ಇತರರಿಗೆ ತೊಂದರೆಯಾಗದಂತೆ ನೋಡಿಕೊಳ್ಳುವುದು ನಮ್ಮ ಜವಾಬ್ದಾರಿಯೂ ಹೌದು.
4. ಸಮಯದ ಹೂಡಿಕೆ: ಐದು ವರ್ಷದೊಳಗಿನ ಮಕ್ಕಳನ್ನು ಕರೆದುಕೊಂಡು ಯಾವುದಾದರೂ ಸಮಾರಂಭಕ್ಕೆ ಹೋದಾಗ, ಪೋಷಕರಲ್ಲಿ ಒಬ್ಬರು ತಮ್ಮ ಪೂರ್ಣ ಸಮಯವನ್ನು ಮಗುವಿಗಾಗಿ ಮೀಸಲಿಡಬೇಕು. ಹರಟೆ, ಫೋಟೋಗಳಿಗಿಂತ ಮಗುವಿನ ಅಗತ್ಯಗಳೇ ಮುಖ್ಯ. ಮಗುವಿನ ಕೈಗೆ ಫೋನ್ ಕೊಟ್ಟು ಅವರನ್ನು ಒಂದು ಮೂಲೆಯಲ್ಲಿ ಕೂರಿಸುವ ಬದಲು, ಅವರನ್ನು ಅವರಾಗಿರಲು ಬಿಡಿ. ಅವರ ಜಗತ್ತನ್ನು ನಾವು ಗೌರವಿಸಿದರೆ ಮಾತ್ರ ಅವರು ಸುಂದರವಾಗಿ ಬೆಳೆಯಲು ಸಾಧ್ಯ.

ಕೊನೆಯದಾಗಿ, ನಾವು ಮಕ್ಕಳಿಗೆ ನೀಡಬಹುದಾದ ಅತ್ಯಂತ ಬೆಲೆಬಾಳುವ ಉಡುಗೊರೆ ಎಂದರೆ ಅದು ನಮ್ಮ 'ಸಮಯ' ಮತ್ತು 'ತಾಳ್ಮೆ'. ಬಾಲ್ಯ ಎಂಬುದು ಒಮ್ಮೆ ಮಾತ್ರ ಬರುವ ವಸಂತ. ಅದನ್ನು ಸಮಾಜದ ನಿಯಮಗಳಿಗೋ ಅಥವಾ ನಮ್ಮ ಅನುಕೂಲಕ್ಕೋ ಅಡವಿಡದಿರೋಣ. ಮಕ್ಕಳ ಕುತೂಹಲದ ಕಣ್ಣುಗಳಿಗೆ ಪ್ರೋತ್ಸಾಹದ ಬೆಳಕಾಗೋಣ. ನೆನಪಿಡಿ, ಪಳಗಿದ ಆನೆಗಿಂತ ಕಾಡಿನ ಓಟದ ಜಿಂಕೆಯಲ್ಲೇ ಜೀವಂತಿಕೆ ಹೆಚ್ಚು. ನಮ್ಮ ಮಕ್ಕಳು ಜೀವಂತಿಕೆಯ ಚಿಲುಮೆಗಳಾಗಿ ಬೆಳೆಯಲಿ.

ಪದಬಂಧ

● ಸಿ.ರವಿಶಂಕರ ಶಾಸ್ತ್ರಿ, ದಂಬೆ

1	■	2		3		4	■	5
6			■		■	7		
	■	■	■		■	■	■	
8		9		■	10	11		
■	■		■	■	■		■	■
12				■	13			14
	■	■	■	15	■	■	■	
16		17	■		■	18		
	■	19					■	

ಎಡದಿಂದ ಬಲಕ್ಕೆ

2. ಕೊನೆಗೆ ಅಲಕ್ಷಿಸು ಅಥವಾ ತಿರಸ್ಕರಿಸು (5)
6. ಕೆಸರು ಅಥವಾ ಕೊಚ್ಚೆ (3)
7. ಮನವಿಟ್ಟು ಕೇಳಿ, ಲಿಖಿತವಾಗಿ ಸಲ್ಲಿಸಿದ ಬೇಡಿಕೆ ಇದು (3)
8. ಕೊನೆಗೆ ಕೈಹಿಡಿದು ಬಂದಿರುವ ಚಂದ್ರ (4)
10. ಶಕ್ತಿ ಹಾಕಿ ಒತ್ತಾಯ ಮಾಡು (4)
12. ಈ ಪರಿಯ ನಿಪುಣ (4)
13. ಜನರ ಗುಂಪು, ಸಮೂಹ (4)
16. ವಿಷಯವೊಂದರಲ್ಲಿ ಮಗ್ನ (3)
18. ತಿರುಗಿ ಬಂದಿರುವ ಭಯ (3)
19. ಮರವನ್ನು ಕೊರೆಯುವಂಥ ಒಂದು ಜಾತಿಯ ಪಕ್ಷಿ (5)

ಮೇಲಿಂದ ಕೆಳಕ್ಕೆ

1. ಲಪಟಾಯಿಸು, ನುಂಗು (4)
2. ಅನಿವಾರ್ಯವಾಗಿ ತೆಗೆದುಕೊಂಡ ಸಾಲ (2)
3. ಬಿಡುವಾದಾಗ ಕೊಟ್ಟವಾಯಿದೆ (3)
4. ಮತ್ತೊಂದು ಹೂವು (2)
5. ರಥ ತರಲು ಅವಿ ನಡೆಸಿದ ಹೋರಾಟ ನಿರಂತರವಾದುದು (4)
9. ಸುಲಭವಾಗಿ ತುಕ್ಕು ಹಿಡಿಯುವ ವಸ್ತು (3)
11. ಕುದುರೆಗೆ ಹಾಕಿದ ಕಡಿವಾಣ (3)
12. ಇರುವ ಗುಂಪನ್ನು ಬಿಟ್ಟು ಮತ್ತೊಂದಕ್ಕೆ ಸೇರುವುದು (4)
14. ಹಾಡು, ಕುಣಿತ ಎಲ್ಲವೂ ಇರುವ ಕರಾವಳಿಯ ಪ್ರಸಿದ್ಧವಾದ ಕಲಾಪ್ರಕಾರ (4)
15. ಕಾಂತಿಯೂ ಆಗಬಲ್ಲ ಬೆಡಗು (3)
17. ಸಾವಿನ ದೇವತೆ (2)
18. ಹಕ್ಕಿಯ ರೆಕ್ಕೆ ತಲೆಕೆಳಗಾಗಿದೆ (2)

ಸರಿಯುತ್ತರಗಳು

[illegible]

ರಾಜನ ಅಜ್ಞಾನ ತೊಲಗಿಸಿತು ಜಡಭರತನ ಮೌನದಲ್ಲಿ ಅಡಗಿದ ಮಹಾಜ್ಞಾನ



ಒಂದೊಳ್ಳೆ ಮಾತು

ರೂಪಾ ಗುರುರಾಜ್

Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ಪ್ರಾಚೀನ ಕಾಲದಲ್ಲಿ ಒಬ್ಬ ಬ್ರಾಹ್ಮಣ ನಿದ್ದನು. ಅವನಿಗೆ ತನ್ನ ಮಗ ಭರತನು ಮಹಾನ್ ವಿದ್ವಾಂಸನಾಗಿ, ವೇದ-ಶಾಸ್ತ್ರಗಳಲ್ಲಿ ಪ್ರವೀಣನಾಗಿ ಸಮಾಜದಲ್ಲಿ ಗೌರವಿಸಲ್ಪಡಬೇಕು ಎಂಬ ಆಸೆಯಿತ್ತು. ಆದರೆ ಭರತನ ನಡವಳಿಕೆಯೇ ವಿಭಿನ್ನವಾಗಿತ್ತು. ತಂದೆ ಎಷ್ಟು ಪ್ರಯತ್ನಿಸಿದರೂ ಭರತನಿಗೆ ಒಂದೂ ಶ್ಲೋಕ ಕಂಠಪಾಠವಾಗುತ್ತಿರಲಿಲ್ಲ. ತಂದೆ ಅವನನ್ನು ಬುದ್ಧಿಮಾಂದ್ಯ ಎಂದು ತಿಳಿದು ಕೈಬಿಟ್ಟರು. ತಂದೆ-ತಾಯಿಯ ಮರಣದ ನಂತರ ಅಣ್ಣಂದಿರು ಮತ್ತು ಅತ್ತಿಗೆಯರು ಅವನನ್ನು ಮನೆಯ ಆಳಿಗಿಂತ ಕಡೆಯಾಗಿ ನಡೆಸಿಕೊಂಡರು. ಅವನಿಗೆ ಜಡಭರತ ಎಂದು ಹೆಸರಿಟ್ಟರು.

ಜಡಭರತನಿಗೆ ಮರ್ಯಾದೆ-ಅವಮಾನಗಳ ಹಂಗಿರಲಿಲ್ಲ. ಅವನು ಮೌನವಾಗಿ ತನಗೆ ಸಿಕ್ಕಿದ್ದನ್ನು ತಿಂದು, ಎಲ್ಲಿ ಜಾಗ ಸಿಗುತ್ತದೋ ಅಲ್ಲಿ ಮಲಗುತ್ತಿದ್ದನು. ಅವನಿಗೆ ಸುಖ-ದುಃಖಗಳೆರಡೂ ಒಂದೇ ಆಗಿದ್ದವು. ಮನೆಯವರು ಅವನನ್ನು ಹೊಲ ಕಾಯುವ ಕೆಲಸಕ್ಕೆ ಹಚ್ಚಿದರು. ಅವನು ಹಗಲು-ರಾತ್ರಿ ಮೌನವಾಗಿ ಹೊಲದ ಬದಿಯಲ್ಲಿ ಕುಳಿತು ಪ್ರಕೃತಿಯನ್ನು ಸವಿಯುತ್ತಾ, ತನ್ನೊಳಗಿನ ಪರಮಾತ್ಮನಲ್ಲಿ ಲೀನನಾಗಿದ್ದನು.

ಒಂದು ದಿನ ಸಿಂಧು ದೇಶದ ರಾಜ ರಾಹುಗಣನು ತತ್ವಜ್ಞಾನದ ಹಸಿವಿನಿಂದ ಪಲ್ಲಕ್ಕಿಯಲ್ಲಿ ಕುಳಿತು ಕಪಿಲ ಮುನಿಗಳ ಆಶ್ರಮಕ್ಕೆ ತೆರಳುತ್ತಿದ್ದನು. ಹಾದಿಯಲ್ಲಿ ಪಲ್ಲಕ್ಕಿ ಹೊರುವ ಒಬ್ಬ ಆಳು ದಣಿವಿನಿಂದ ಕುಸಿದು ಬಿದ್ದನು. ತಕ್ಷಣ ರಾಜನ ಸೈನಿಕರು ಹೊಲದಲ್ಲಿ ಕುಳಿತಿದ್ದ ಸದೃಢ ಕಾಯದ ಜಡಭರತನನ್ನು ಕಂಡು, ಆತನನ್ನು ಬಲವಂತವಾಗಿ ಪಲ್ಲಕ್ಕಿ ಹೊರಲು ಕರೆತಂದರು. ಜಡಭರತನು ಯಾವುದೇ ಪ್ರತಿರೋಧವಿಲ್ಲದೆ ಪಲ್ಲಕ್ಕಿ ಹೊತ್ತನು. ಆದರೆ ಅವನು ನಡೆಯುವ ರೀತಿ ವಿಚಿತ್ರವಾಗಿತ್ತು. ನೆಲದ ಮೇಲಿರುವ ಸಣ್ಣ ಇರುವೆಗಳಿಗೂ ತನ್ನಿಂದ ನೋವಾಗಬಾರದೆಂದು ಅವನು ಪ್ರತಿ ಹೆಜ್ಜೆಯನ್ನೂ ಜಾಗರೂಕತೆಯಿಂದ ಇಡುತ್ತಿದ್ದನು. ಇದರಿಂದ ಪಲ್ಲಕ್ಕಿ ಅಲುಗಾಡಿ ಒಳಗೆ ಕುಳಿತಿದ್ದ ರಾಜನಿಗೆ ತೊಂದರೆಯಾಯಿತು. ರಾಜ ಕೋಪದಿಂದ, ಎಲೈ ಮೂರ್ಖನೇ, ನೀನು ಬದುಕಿದ್ದರೂ ಸತ್ತಂತೆ ಇದ್ದೀಯಾ! ನಿನಗೆ ಸರಿಯಾಗಿ ನಡೆಯಲೂ ಬರುವುದಿಲ್ಲವೇ? ಸುಧಾರಿಸಿಕೊಳ್ಳದಿದ್ದರೆ ನಿನಗೆ ಕಠಿಣ ಶಿಕ್ಷೆ ವಿಧಿಸುತ್ತೇನೆ ಎಂದು ಗದರಿಸಿದನು.

ಅಲ್ಲಿಯವರೆಗೆ ಮೌನವಾಗಿದ್ದ ಜಡಭರತ ಮಂದಹಾಸ ಬೀರುತ್ತಾ ಮಹಾನ್ ತತ್ವಜ್ಞಾನಿಯಂತೆ ಮಾತನಾಡಿದ ರಾಜನೇ, ಬಲಶಾಲಿ ಅಥವಾ ಅಶಕ್ತ ಎಂಬುದು ಈ ಮಣ್ಣಿನ ದೇಹಕ್ಕೆ ಸಂಬಂಧಿಸಿದ್ದು. ನೀನು ಶಿಕ್ಷಿಸುವ ಬಗ್ಗೆ ಮಾತನಾಡುತ್ತಿರುವುದು ಈ ನಶ್ವರ ದೇಹವನ್ನೇ ಹೊರತು ನನ್ನನ್ನಲ್ಲ. ನಾನು ಈ ದೇಹವಲ್ಲ, ಬದಲಾಗಿ ಅವಿನಾಶಿಯಾದ ಆತ್ಮ. ಹೊರುವವನು ಯಾರು? ಹೊರಿಸುವವನು ಯಾರು? ಎಲ್ಲವೂ ಆ ಪರಮಾತ್ಮನ ಮಾಯೆಯಷ್ಟೇ. ಈ ದೇಹದ ಮೇಲಿನ ಮೋಹವೇ ಅಜ್ಞಾನಕ್ಕೆ ಕಾರಣ. ಈ ಮಾತುಗಳನ್ನು ಕೇಳಿದ ರಾಜ ರಾಹುಗಣನಿಗೆ ವಿದ್ಯುತ್ ಸಂಚಾರವಾದಂತಾಯಿತು. ಈತ ಸಾಮಾನ್ಯ ಮನುಷ್ಯನಲ್ಲ ಎಂದು ಅರಿತ ರಾಜ ತಕ್ಷಣ ಪಲ್ಲಕ್ಕಿಯಿಂದ ಕೆಳಗಿಳಿದು ಜಡಭರತನ ಪಾದಗಳಿಗೆ ಬಿದ್ದನು. ಮಹಾತ್ಮರೇ, ನೀವು ಯಾರು? ದಯವಿಟ್ಟು ನನ್ನನ್ನು ಕ್ಷಮಿಸಿ, ನನಗೆ ಜ್ಞಾನದ ಹಾದಿ ತೋರಿಸಿ ಎಂದು ಬೇಡಿಕೊಂಡನು.

ಜಡಭರತ ತನ್ನ ಪೂರ್ವಜನ್ಮದ ಕಥೆಯನ್ನು ವಿವರಿಸುತ್ತಾ ರಾಜನೇ, ಹಿಂದಿನ ಜನ್ಮದಲ್ಲಿ ನಾನು ಭರತ ಎಂಬ ಚಕ್ರವರ್ತಿಯಾಗಿದ್ದೆ. ಎಲ್ಲವನ್ನೂ ತ್ಯಜಿಸಿ ತಪಸ್ಸಿಗೆ ಕುಳಿತಾಗ, ನದಿಯಲ್ಲಿ ಕೊಚ್ಚಿ ಹೋಗುತ್ತಿದ್ದ ಒಂದು ಜಿಂಕೆಯ ಮರಿಯನ್ನು ರಕ್ಷಿಸಿದೆ. ಕಾಲಕ್ರಮೇಣ ಆ ಜಿಂಕೆಯ ಮೇಲೆ ನನಗೆ ಅತೀವ ಮೋಹವಾಯಿತು. ಸಾವಿನ ಕ್ಷಣದಲ್ಲಿ ದೇವರ ಬದಲು ಆ ಜಿಂಕೆಯನ್ನೇ ನೆನೆದ ಕಾರಣ, ಮುಂದಿನ ಜನ್ಮದಲ್ಲಿ ಜಿಂಕೆಯಾಗಿ ಹುಟ್ಟಿದೆ. ಆದರೆ ಪೂರ್ವಜನ್ಮದ ಸ್ಮೃತಿಯಿದ್ದ ಕಾರಣ, ಈ ಜನ್ಮದಲ್ಲಿ ನಾನು ಯಾವುದಕ್ಕೂ ಅಂಟಿಕೊಳ್ಳದೆ 'ಜಡ'ನಂತೆ ನಟಿಸುತ್ತಿದ್ದೇನೆ ಎಂದ.

ಜಡಭರತನು ಮಾತು ಮುಂದುವರಿಸುತ್ತಾ ನಾವು ಧರಿಸಿರುವ ಬಟ್ಟೆಯಂತೆ ಈ ದೇಹ ಬದಲಾಗುತ್ತದೆ, ಆದರೆ ಆತ್ಮ ಶಾಶ್ವತ. ರಾಜ-ಪ್ರಜೆ, ಶ್ರೀಮಂತ-ಬಡವ ಎಂಬ ಭೇದಗಳು ಕೇವಲ ಲೌಕಿಕ. ಎಲ್ಲರಲ್ಲೂ ಇರುವ ಚೈತನ್ಯ ಒಂದೇ ಅದನ್ನು ಗಮನಿಸು. ಒಂದು ಸಣ್ಣ ಪ್ರಾಣಿಯ ಮೇಲಿನ ಮೋಹವೂ ನಮ್ಮನ್ನು ಜನ್ಮ-ಮೃತ್ಯುವಿನ ಸುಳಿಯಲ್ಲಿ ಸಿಲುಕಿಸುತ್ತದೆ. ಆದ್ದರಿಂದ ನಿರ್ಮೋಹಿಯಾಗಿರುವುದೇ ನಿಜವಾದ ಮುಕ್ತಿ ಎಂದು ಉಪದೇಶ ಮಾಡಿದ. ಜಡಭರತನ ಜ್ಞಾನದ ಬೆಳಕಿನಿಂದ ರಾಜ ರಾಹುಗಣನ ಅಹಂಕಾರ ಕರಗಿಹೋಯಿತು. ಆದ್ದರಿಂದಲೇ ಯಾರನ್ನೂ ಬಾಹ್ಯ ರೂಪದಿಂದ ಅಳೆಯಬೇಡಿ. ನಾವು ಇಂದು ಉಪೇಕ್ಷೆ ಮಾಡಿದವರೇ ನಾಳೆ ನಮ್ಮ ಮುಂದೆ ಹೆಮ್ಮರವಾಗಿ ಬೆಳೆದು ನಮಗೆ ನೆರಳು ನೀಡಬಹುದು. ಎಲ್ಲಕ್ಕಿಂತ ಮಿಗಿಲಾದದ್ದು ಜ್ಞಾನ ಮತ್ತು ಸಂಸ್ಕಾರ ಅದನ್ನು ಗೌರವಿಸುವ ಗುಣ ಬೆಳೆಸಿಕೊಳ್ಳೋಣ.

ನೀವೂ ಬರೆಯಬಹುದು | ನಮ್ಮ ವಿಳಾಸ: ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098 | e-mail: vishwavanimagazine@gmail.com

ಸಮಾಚಾರ ಸಣ್ಣದಲ್ಲ

ಕಿವೀಸ್ ತಂಡದಿಂದ 8 ಮಂದಿಗೆ ಕೊಕ್

ವೆಲ್ಲಿಂಗ್‌ಟನ್: ದಕ್ಷಿಣ ಆಫ್ರಿಕಾ ವಿರುದ್ಧದ ಸರಣಿಗಾಗಿ ನ್ಯೂಜಿಲೆಂಡ್ ತಂಡವನ್ನು ಪ್ರಕಟಿಸಲಾಗಿದ್ದು, ಈ ತಂಡದಲ್ಲಿ ಹಲವು ಪ್ರಮುಖ ಆಟಗಾರರು ಅವಕಾಶ ನೀಡಿಲ್ಲ. ಟಿ20 ವಿಶ್ವಕಪ್‌ನಲ್ಲಿ ಕಣಕ್ಕಿಳಿದಿದ್ದ 8 ಆಟಗಾರರು ಈ ಸರಣಿಯಿಂದ ಹೊರಗುಳಿದಿದ್ದಾರೆ. ನಾಯಕ ಮಿಚೆಲ್ ಸ್ಯಾಂಟ್ನರ್ ಮೂರು ಪಂದ್ಯಗಳಲ್ಲಿ ಮಾತ್ರ ಕಣಕ್ಕಿಳಿಯಲಿದ್ದಾರೆ. ಇನ್ನುಳಿದ ಎರಡು ಪಂದ್ಯಗಳಲ್ಲಿ ವಿಕೆಟ್ ಕೀಪರ್ ಬ್ಯಾಟರ್ ಟಾಮ್ ಲ್ಯಾಥಮ್ ತಂಡವನ್ನು ಮುನ್ನಡೆಸಲಿದ್ದಾರೆ. ಹಾಗೆಯೇ ಮೂವರು ಹೊಸ ಆಟಗಾರರಿಗೆ ಅವಕಾಶ ನೀಡಲಾಗಿದೆ. ಅದರಂತೆ ಸೌತ್ ಆಫ್ರಿಕಾ ವಿರುದ್ಧದ ಸರಣಿಗೆ ನ್ಯೂಜಿಲೆಂಡ್ ತಂಡ ಹೀಗಿದೆ: ಮಿಚೆಲ್ ಸ್ಯಾಂಟ್ನರ್ (ನಾಯಕ), ಕ್ಯಾಟೀನ್ ಕ್ಲಾರ್ಕ್, ಜೋಶ್ ಕ್ಲಾರ್ಕ್ಸನ್, ಡೇನ್ ಕ್ಲೀವರ್ (ಕೀಪರ್), ಡೆವೊನ್ ಕಾನ್ವೇ (ಕೀಪರ್), ಲಾಕಿ ಫರ್ಗುಸನ್, ಜ್ಯಾಕ್ ಫೌಲ್ಕ್ಸ್, ಬೆವೊನ್ ಜೇಕಬ್ಸ್, ಕೈಲ್ ಜೇಮಿಸನ್, ನಿಕ್ ಕೆಲ್ಲಿ, ಟಾಮ್ ಲ್ಯಾಥಮ್, ಜೇಡೆನ್ ಲೆನಾಕ್ಸ್, ಕೋಲ್ ಮೆಕ್‌ಕೊನಿ, ಜಿಮ್ಮಿ ನೀಶಮ್, ಟಿಮ್ ರಾಬಿನ್ಸನ್, ಬೆನ್ ಸಿಯರ್ಸ್, ನಾಥನ್ ಸ್ಮಿತ್, ಇಶ್ ಸೋಧಿ.

ಏಕದಿನ ಶ್ರೇಯಾಂಕ ಸ್ಮೃತಿ ಮತ್ತೆ ನಂ.1

ದುಬೈ: ನೂತನ ಮಹಿಳಾ ಏಕದಿನ ಬ್ಯಾಟಿಂಗ್ ಶ್ರೇಯಾಂಕದಲ್ಲಿ ಭಾರತದ ಆರಂಭಿಕ ಬ್ಯಾಟರ್ ಸ್ಮೃತಿ ಮಂಧಾನಾ ಅಗ್ರಸ್ಥಾನವನ್ನು ಉಳಿಸಿಕೊಂಡಿದ್ದಾರೆ. ಮಂಧಾನಾ ಅವರೊಂದಿಗೆ ನಾಯಕಿ ಹರ್ಮನ್‌ಪ್ರೀತ್ ಕೌರ್ ಎಂಟನೇ ಸ್ಥಾನದಲ್ಲಿ ಸ್ಥಿರವಾಗಿ ಉಳಿದರು. ಆಸ್ಟ್ರೇಲಿಯಾ ವಿರುದ್ಧದ ಮೂರು ಪಂದ್ಯಗಳ ಏಕದಿನ ಸರಣಿಯಲ್ಲಿ ವಿಫಲರಾಗಿದ್ದ ಜೆಮಿಮಾ ರೊಡ್ರಿಗಸ್ 12ನೇ ಸ್ಥಾನಕ್ಕೆ ಕುಸಿದರು. ಜಿಂಬಾಬ್ವೆ ವಿರುದ್ಧದ ಮೂರು ಪಂದ್ಯಗಳ ಏಕದಿನ ಸರಣಿಯಲ್ಲಿ ಅಮೋಘ ಆಲ್‌ರೌಂಡರ್ ಪ್ರದರ್ಶನ ತೋರಿದ ನ್ಯೂಜಿಲೆಂಡ್ ನಾಯಕಿ ಅಮೆಲೀ ಕೆರ್ ಬೌಲರ್‌ಗಳ ಪಟ್ಟಿಯಲ್ಲಿ ಐದು ಸ್ಥಾನಗಳ ಜಿಗಿತವನ್ನು ಕಂಡು 11ನೇ ಸ್ಥಾನಕ್ಕೆ ತಲುಪಿದರಲ್ಲದೆ, ಆಲ್‌ರೌಂಡರ್‌ಗಳ ಪಟ್ಟಿಯಲ್ಲಿ ಒಂದು ಸ್ಥಾನ ಏರಿಕೆಯಾಗಿ ಐದನೇ ಸ್ಥಾನಕ್ಕೆ ತಲುಪಿದರು. ಶ್ರೀಲಂಕಾ ವಿರುದ್ಧ ವೆಸ್ಟ್ ಇಂಡೀಸ್‌ನ ಮೂರು ಪಂದ್ಯಗಳ ಸರಣಿ ಮುಗಿದ ನಂತರ ಮತ್ತು ಇಂಗ್ಲೆಂಡ್ ಮತ್ತು ವೇಲ್ಸ್ ಆಯೋಜಿಸಿರುವ ಐಸಿಸಿ ಮಹಿಳಾ ಟಿ20 ವಿಶ್ವಕಪ್ ಆರಂಭವಾಗಿ ಮೂರು ತಿಂಗಳಿಗಿಂತ ಕಡಿಮೆ ಸಮಯ ಉಳಿದಿರುವ ನಂತರ, ಇತ್ತೀಚಿನ ಟಿ20 ಶ್ರೇಯಾಂಕದಲ್ಲಿ ಹಲವು ಬದಲಾವಣೆಗಳಿವೆ.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಮತ್ತೆ ಕ್ರಿಕೆಟ್ ರಂಗು | ಇದೇ 28ರಿಂದ ಮೊದಲ ಹಂತದ ಐಪಿಎಲ್ ಪಂದ್ಯಗಳು

ಬೆಂಗಳೂರಲ್ಲಿ ಆರ್‌ಸಿಬಿಯ ಐಪಿಎಲ್ ಪಂದ್ಯಕ್ಕೆ ದಿನಗಣನೆ

ದೆಹಲಿ: ಹಲವು ಗೊಂದಲಗಳ ಮಧ್ಯೆ ತಡವಾಗಿದ್ದ ಐಪಿಎಲ್‌ನ ಈ ಆವೃತ್ತಿಯ ಮೊದಲ ಹಂತದ ವೇಳಾಪಟ್ಟಿಯನ್ನು ಬಿಸಿಸಿಐ ಅಧಿಕೃತವಾಗಿ ಪ್ರಕಟಿಸಿದೆ. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಮಾರ್ಚ್ 28ರಂದು ನಡೆಯಲಿರುವ ಈ ಆವೃತ್ತಿಯ ಉದ್ಘಾಟನಾ ಪಂದ್ಯದಲ್ಲಿ ಆರ್‌ಸಿಬಿ ತಂಡವು ಸನ್‌ರೈಸರ್ಸ್ ಹೈದರಾಬಾದ್ ತಂಡವನ್ನು ಎದುರಿಸಲಿದೆ.

ಐದು ಬಾರಿಯ ಚಾಂಪಿಯನ್ ಮುಂಬೈ ಇಂಡಿಯನ್ಸ್ ತಂಡವು ಮಾರ್ಚ್ 29ರಂದು ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ ಕೋಲ್ಕತ್ತಾ ನೈಟ್ ರೈಡರ್ಸ್ ವಿರುದ್ಧದ ಪಂದ್ಯದೊಂದಿಗೆ ಅಭಿಯಾನವನ್ನು ಆರಂಭಿಸಲಿದೆ. ಎಂಎಸ್ ಧೋನಿ ನಾಯಕತ್ವದ ಚೆನ್ನೈ ಸೂಪರ್ ಕಿಂಗ್ಸ್ ತಂಡವು ಗುವಾಹಟಿಯಲ್ಲಿ ರಾಜಸ್ಥಾನ ರಾಯಲ್ಸ್ ವಿರುದ್ಧ ಮಾರ್ಚ್ 30ರಂದು ಸೆಣಸಲಿದೆ.



ಮೊದಲ ಹಂತದ ವೇಳಾಪಟ್ಟಿಯಲ್ಲಿ ಪ್ರತಿ ಯೊಂದು ತಂಡಕ್ಕೂ ತಲಾ 4 ಪಂದ್ಯಗಳನ್ನು ನಿಗದಿಪಡಿಸಲಾಗಿದೆ. ಶೀಘ್ರದಲ್ಲೇ 2ನೇ ಪಟ್ಟಿಯೂ ಬಿಡುಗಡೆಯಾಗುವ ಸಾಧ್ಯತೆ ಇದೆ.

ಬೆಂಗಳೂರು ಪಂದ್ಯಗಳು: ಆರ್‌ಸಿಬಿ ತಂಡವು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಉದ್ಘಾಟನಾ ಪಂದ್ಯದ ಬಳಿಕ ಏಪ್ರಿಲ್ 5ರಂದು ಬೆಂಗಳೂರಿನಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ ಸೆಣಸಲಿದೆ. ಬಳಿಕ ಏಪ್ರಿಲ್ 10ರಂದು ಗುವಾಹಟಿಯಲ್ಲಿ ರಾಜಸ್ಥಾನ ರಾಯಲ್ಸ್ ತಂಡವನ್ನು ಎದುರಿಸಲಿದೆ. ಏಪ್ರಿಲ್ 12ರಂದು ಮುಂಬೈನಲ್ಲಿ ಮುಂಬೈ ಇಂಡಿಯನ್ಸ್ ವಿರುದ್ಧ ಪಂದ್ಯವನ್ನು ಆಡಲಿದೆ. ಈ ಮೊದಲ ಹಂತದಲ್ಲಿ ರಾಯಲ್ ಚಾಲೆಂಜರ್ಸ್ ತಂಡವು 2 ಪಂದ್ಯವನ್ನು ತವರಿನಲ್ಲಿ ಮತ್ತು 2 ಪಂದ್ಯಗಳನ್ನು ಬೇರೆಡೆ ಆಡಲಿದೆ.

ಐಪಿಎಲ್: ಮೊದಲ ಹಂತದ ವೇಳಾಪಟ್ಟಿ

ಪಂದ್ಯ	ದಿನಾಂಕ	ತಾಣ
ಆರ್‌ಸಿಬಿ-ಹೈದರಾಬಾದ್	ಮಾ.28	ಬೆಂಗಳೂರು
ಮುಂಬೈ-ಕೋಲ್ಕತ್ತಾ	ಮಾ.29	ಮುಂಬೈ
ರಾಜಸ್ಥಾನ್-ಚೆನ್ನೈ	ಮಾ.30	ಗುವಾಹಟಿ
ಪಂಜಾಬ್-ಗುಜರಾತ್	ಮಾ.31	ಮುಲ್ಲನ್‌ಪುರ
ಲಖನೌ-ಡೆಲ್ಲಿ	ಏ.1	ಲಖನೌ
ಕೋಲ್ಕತ್ತಾ-ಹೈದರಾಬಾದ್	ಏ.2	ಕೋಲ್ಕತ್ತಾ
ಚೆನ್ನೈ-ಪಂಜಾಬ್	ಏ.3	ಚೆನ್ನೈ
ಡೆಲ್ಲಿ-ಮುಂಬೈ	ಏ.4	ದೆಹಲಿ
ಗುಜರಾತ್-ರಾಜಸ್ಥಾನ್	ಏ.4	ಅಹಮದಾಬಾದ್
ಹೈದರಾಬಾದ್-ಲಖನೌ	ಏ.5	ಹೈದರಾಬಾದ್
ಆರ್‌ಸಿಬಿ-ಚೆನ್ನೈ	ಏ.5	ಬೆಂಗಳೂರು
ಕೋಲ್ಕತ್ತಾ-ಪಂಜಾಬ್	ಏ.6	ಕೋಲ್ಕತ್ತಾ
ರಾಜಸ್ಥಾನ್-ಮುಂಬೈ	ಏ.7	ಗುವಾಹಟಿ
ಡೆಲ್ಲಿ-ಗುಜರಾತ್	ಏ.8	ದೆಹಲಿ
ಕೋಲ್ಕತ್ತಾ-ಲಖನೌ	ಏ.9	ಕೋಲ್ಕತ್ತಾ
ಆರ್‌ಸಿಬಿ-ರಾಜಸ್ಥಾನ್	ಏ.10	ಗುವಾಹಟಿ
ಪಂಜಾಬ್-ಹೈದರಾಬಾದ್	ಏ.11	ಮುಲ್ಲನ್ಪುರ
ಚೆನ್ನೈ-ಡೆಲ್ಲಿ	ಏ.11	ಚೆನ್ನೈ
ಲಖನೌ-ಗುಜರಾತ್	ಏ.12	ಲಖನೌ
ಆರ್‌ಸಿಬಿ-ಮುಂಬೈ	ಏ.12	ಮುಂಬೈ

ಮುಂಬರುವ ಏಕದಿನ ವಿಶ್ವಕಪ್‌ನತ್ತ ಭಾರತದ ವೇಗದ ಬೌಲರ್ ಜಸ್ಪ್ರೀತ್ ಬುಮ್ರಾ ಒಲವು

ದೀರ್ಘ ವಿಶ್ರಾಂತಿಯತ್ತ ಬುಮ್ರಾ ಚಿತ್ತ

ದೆಹಲಿ: ಟೀಮ್ ಇಂಡಿಯಾ ವೇಗಿ ಜಸ್ಪ್ರೀತ್ ಬುಮ್ರಾ ಅಂತಾರಾಷ್ಟ್ರೀಯ ಟಿ20 ಕ್ರಿಕೆಟ್‌ನಿಂದ ಸರಿಸುಮಾರು 18 ತಿಂಗಳ ಕಾಲ ವಿಶ್ರಾಂತಿ ತೆಗೆದುಕೊಳ್ಳಲಿದ್ದಾರೆ ಎಂದು ವರದಿಯಾಗಿದೆ. ಮುಂಬರುವ ಏಕದಿನ ವಿಶ್ವಕಪ್‌ಗಾಗಿ ಈ ನಿರ್ಧಾರ ತೆಗೆದುಕೊಳ್ಳುತ್ತಿದ್ದು ಈ ಮೂಲಕ ತಮ್ಮ ಕಾರ್ಯನಿರ್ವಹಣೆಯ ಹೊರೆಯನ್ನು ಸರಿದೂಗಿಸಲು ನಿರ್ಧರಿಸಿದ್ದಾರೆ. ಆ ಕಾರಣಕ್ಕಾಗಿ ಭಾರತ ತಂಡದ ಮುಂಬರುವ ದ್ವಿಪಕ್ಷೀಯ ಟಿ20 ಸರಣಿಗಳಿಂದ ಹೊರಗುಳಿಯಲಿದ್ದಾರೆ.

ಭಾನುವಾರ ಮುಗಿದ ಟಿ20 ವಿಶ್ವಕಪ್‌ನ ಎಲ್ಲಾ ಪಂದ್ಯಗಳಲ್ಲಿ ಭಾಗವಹಿಸಲೆಂದೇ ಬುಮ್ರಾ 2024ರ ಟಿ20 ವಿಶ್ವಕಪ್ ಬಳಿಕ ಸತತ ಟಿ20 ಪಂದ್ಯಗಳನ್ನಾಡಿದ್ದಾರೆ. ಇದೀಗ ಭಾರತ ತಂಡವು ಚಾಂಪಿಯನ್ ಪಟ್ಟ ಅಲಂಕರಿಸಿರುವ ಕಾರಣ ಟೀಮ್ ಇಂಡಿಯಾದ ಮುಂದಿನ ಗುರಿ 2027ರ ಏಕದಿನ ವಿಶ್ವಕಪ್ ಚಾಂಪಿಯನ್ ಆಗುವುದಾಗಿದೆ. ದಕ್ಷಿಣ ಆಫ್ರಿಕಾ, ನಮೀಬಿಯಾ ಹಾಗೂ ಜಿಂಬಾಬ್ವೆ ಜಂಟಿಯಾಗಿ ಆಯೋಜಿಸಲಿರುವ 2027ರ ಏಕದಿನ ವಿಶ್ವಕಪ್‌ಗೆ ಸಿದ್ಧರಾಗಲು ಜಸ್ಪ್ರೀತ್ ಬುಮ್ರಾ ಟೆಸ್ಟ್ ಮತ್ತು ಏಕದಿನ ಪಂದ್ಯಗಳಿಗೆ ಹೆಚ್ಚಿನ ಆದ್ಯತೆ ನೀಡಲು ನಿರ್ಧರಿಸಿದ್ದಾರೆ.

ಒಲಿಂಪಿಕ್ಸ್‌ನಲ್ಲಿ ಕಣಕ್ಕೆ: ಪ್ರಸ್ತುತ ಮಾಹಿತಿ ಪ್ರಕಾರ, ಬುಮ್ರಾ ಮುಂದಿನ 18 ತಿಂಗಳುಗಳ ಕಾಲ ಭಾರತದ ಪರ ದ್ವಿಪಕ್ಷೀಯ ಟಿ20 ಸರಣಿಗಳನ್ನು ಆಡುವುದಿಲ್ಲ, ಆದರೆ 2028ರ ಲಾಸ್ ಏಂಜಲೀಸ್ ಒಲಿಂಪಿಕ್ಸ್‌ನ ಕ್ರಿಕೆಟ್ ಟೂರ್ನಿಯಲ್ಲಿ ಆಡುವ ಆಸಕ್ತಿಯನ್ನು

ವ್ಯಕ್ತಪಡಿಸಿದ್ದಾರೆ. ಹೀಗಾಗಿ ಮುಂಬರುವ ಒಲಿಂಪಿಕ್ಸ್‌ನ ಭಾರತ ಕ್ರಿಕೆಟ್ ತಂಡದಲ್ಲಿ ಬುಮ್ರಾ ಸ್ಥಾನ ಪಡೆಯುವುದು ಖಚಿತವಾಗಿದೆ.

ಭಾರತ ಟಿ20 ತಂಡದಿಂದ 18 ತಿಂಗಳುಗಳಷ್ಟು ಕಾಲ ಹೊರಗುಳಿದರೂ ಬುಮ್ರಾ ಟಿ20 ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ನಿವೃತ್ತಿ ಘೋಷಿಸುತ್ತಿಲ್ಲ, ಬದಲಿಗೆ ಕೇವಲ ತಮ್ಮ ಫಿಟ್ನೆಸ್ ಕಾಪಾಡಿಕೊಳ್ಳಲು ಈ ವಿರಾಮ ಪಡೆಯುತ್ತಿದ್ದಾರೆ ಎಂದು ಸ್ಪಷ್ಟಪಡಿಸಲಾಗಿದೆ.

ಐಪಿಎಲ್‌ನಲ್ಲಿವ ಬುಮ್ರಾ ಕಣಕ್ಕೆ: ಟಿ20 ಅಂತಾರಾಷ್ಟ್ರೀಯ ಕ್ರಿಕೆಟ್‌ನಿಂದ ಹೊರಗುಳಿದರೂ ಜಸ್ಪ್ರೀತ್ ಬುಮ್ರಾ ಇದೇ ತಿಂಗಳು ಆರಂಭವಾಗಲಿರುವ ಐಪಿಎಲ್‌ನಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಸದ್ಯ ಮುಂಬೈ ಇಂಡಿಯನ್ಸ್ ತಂಡದಲ್ಲಿರುವ ಬುಮ್ರಾ ಈ ಬಾರಿಯ ಐಪಿಎಲ್ ಟೂರ್ನಿಯಲ್ಲೂ ಕಣಕ್ಕಿಳಿಯುವುದಂತೂ ಖಚಿತವಾಗಿದೆ.

2024ರಿಂದ ವಿಶ್ವ ಕ್ರಿಕೆಟ್‌ನಲ್ಲಿ ಭಾರತದ ಕ್ರಿಕೆಟ್ ಆಟಗಾರರ ಮುಂದುವರಿದ ಪ್ರಾಬಲ್ಯ

23 ತಿಂಗಳಲ್ಲಿ ಭಾರತಕ್ಕೆ 7 ಐಸಿಸಿ ಟ್ರೋಫಿ

ದೆಹಲಿ: ಕಳೆದ 23 ತಿಂಗಳುಗಳಲ್ಲಿ ಏಳು ಐಸಿಸಿ ಟ್ರೋಫಿಗಳನ್ನು ಗೆಲ್ಲುವ ಮೂಲಕ, ಭಾರತ ಕ್ರಿಕೆಟ್ ತಂಡವು ವಿಶ್ವ ಕ್ರಿಕೆಟ್‌ನಲ್ಲಿ ತನ್ನ ಪ್ರಾಬಲ್ಯವನ್ನು ಮುಂದುವರಿಸಿದೆ.

ಭಾರತ ಕ್ರಿಕೆಟ್‌ನ ಈ ಐತಿಹಾಸಿಕ ಯುಗವು 2024ರಲ್ಲಿ ರೋಹಿತ್ ಶರ್ಮಾ ನಾಯಕತ್ವದಲ್ಲಿ 2024ರ ಟಿ20 ವಿಶ್ವಕಪ್ ಗೆದ್ದ ನಂತರ ಪ್ರಾರಂಭವಾಯಿತು. 2025 ಕೂಡ ಭಾರತದ ಪಾಲಿಗೆ ಸುವರ್ಣ ಯುಗ ಎಂದೆನಿಸಿತು. ನಾಲ್ಕು ಐಸಿಸಿ ಟೂರ್ನಿಗಳಲ್ಲಿ ಗೆಲುವು ಸಾಧಿಸಿತು, ಇದರಲ್ಲಿ ಭಾರತೀಯ ಪುರುಷರ ತಂಡವು ಯುಎಇಯಲ್ಲಿ ನಡೆದಿದ್ದ 2025ರ ಚಾಂಪಿಯನ್ಸ್ ಟ್ರೋಫಿ ಕೂಡಾ ಒಂದಾಗಿದೆ.

2025ರಲ್ಲಿ ಭಾರತೀಯ ಮಹಿಳಾ ತಂಡವು ಅಂಡರ್-19 ತಂಡವು ಟಿ20 ವಿಶ್ವಕಪ್ ಗೆದ್ದಿತು ಮತ್ತು ನಂತರ ಭಾರತೀಯ ಹಿರಿಯ ಮಹಿಳಾ ತಂಡವು 2025ರ ಮಹಿಳಾ ಏಕದಿನ ವಿಶ್ವಕಪ್ ಗೆಲ್ಲುವ ಮೂಲಕ ದೇಶಕ್ಕೆ ಹೆಮ್ಮೆ ತಂದಿತು. ಅದು ಮಹಿಳಾ ತಂಡದ ಚೊಚ್ಚಲ ವಿಶ್ವಕಪ್ ಗೆಲುವಾಗಿತ್ತು. ಅದಲ್ಲದೆ ಭಾರತವು ಈ ವರ್ಷ ಅಂಧ ಮಹಿಳಾ ವಿಶ್ವಕಪ್ ಅನ್ನು ಸಹ ಗೆದ್ದುಕೊಳ್ಳುವ ಮೂಲಕ ಪ್ರತಿಯೊಂದು ಹಂತದಲ್ಲೂ ಪ್ರತಿಭೆ ಇದೆ ಎಂಬುದನ್ನು ಜಗತ್ತಿಗೆ ಸಾರಿತು.

ಈ ವರ್ಷವೂ ಭಾರತ ಕ್ರಿಕೆಟ್ ತಂಡ 2026ರ ವಿಶ್ವಕಪ್ ಸೇರಿದಂತೆ ಎರಡು ವಿಶ್ವಕಪ್‌ಗಳನ್ನು ಗೆದ್ದುಕೊಂಡಿದೆ. ಈ ವರ್ಷದ ಆರಂಭದಲ್ಲಿ ಭಾರತೀಯ ಯುವ ತಂಡವು 2026ರ ಅಂಡರ್-19 ವಿಶ್ವಕಪ್ ಅನ್ನು ಗೆದ್ದುಕೊಂಡಿತು. ಅದರ ನಂತರ ಭಾರತದ ಹಿರಿಯ ಪುರುಷರ ತಂಡ ಟಿ20 ಕ್ರಿಕೆಟ್ ಗೆದ್ದು ಇತಿಹಾಸ ನಿರ್ಮಿಸಿತು. ಈ ಸಾಧನೆಗಳು ಭಾರತವನ್ನು ಇಂದು ವಿಶ್ವ ಕ್ರಿಕೆಟ್‌ನಲ್ಲಿ ಅತ್ಯಂತ ಶಕ್ತಿಶಾಲಿ ದೇಶವನ್ನಾಗಿ ಮಾಡಿವೆ.

ಸಲಾರ್‌ನಲ್ಲಿ ಕನ್ನಡಿಗರ ದಂಡು

ಪ್ರಶಾಂತ್ ನೀಲ್ ನಿರ್ದೇಶನದ ಸಲಾರ್ ಮೊದಲ ಭಾಗ ಭರ್ಜರಿ ಯಶಸ್ಸು ಪಡೆಯಿತು. ಆ್ಯಕ್ಷನ್, ಥ್ರಿಲ್ಲರ್ ಜಾನರ್‌ನ ಈ ಚಿತ್ರ ಉತ್ತಮ ಗಳಿಕೆಯನ್ನು ಕಂಡಿತ್ತು. ಹೊಂಬಾಳೆ ಫಿಲಂಸ್‌ನಲ್ಲಿ ಅದ್ದೂರಿಯಾಗಿ ಮೂಡಿಬಂದಿತ್ತು. ಪ್ರಭಾಸ್ ನಾಯಕನಾಗಿ ನಟಿಸಿದ್ದು, ಮಲೆಯಾಳಂ ಖ್ಯಾತ ನಟ ಪೃಥ್ವಿರಾಜ್ ಸುಕುಮಾರನ್, ಜಗಪತಿ ಬಾಬು ಸೇರಿದಂತೆ ದೊಡ್ಡ ತಾರಾಬಳಗವೇ ಚಿತ್ರದಲ್ಲಿತ್ತು. ಕನ್ನಡದ ನಿರ್ದೇಶಕರು, ನಿರ್ಮಾಣ ಸಂಸ್ಥೆಯಿಂದ ಸಲಾರ್ ನಿರ್ಮಾಣವಾಗಿದೆ ಎಂಬುದು ಹೆಮ್ಮೆಯ ವಿಷಯವಾಗಿದೆ. ಅಂತೆಯೇ ಸಲಾರ್‌ನಲ್ಲಿ ಕನ್ನಡದ ಕಲಾವಿದರ ದೊಡ್ಡ ಬಳಗವೇ ಇದೆ. ಹಿರಿಯ ನಟ ದೇವರಾಜ್ ಚಿತ್ರದಲ್ಲಿ ವಿಭಿನ್ನ ಪಾತ್ರದಲ್ಲಿ ನಟಿಸಿದ್ದಾರೆ. ಅಂತೆಯೇ ನಟ ಪ್ರಮೋದ್, ಪೃಥ್ವಿರಾಜ್ ಸಹೋದರನ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ನವೀನ್ ಶಂಕರ್, ಪುರೋಹಿತ್ ಪಾತ್ರದಲ್ಲಿ ಡಾನ್ ಆಗಿ ಅಬ್ಬರಿಸಲಿದ್ದಾರೆ. ಭಜರಂಗಿ ಲೋಕಿ ಇಲ್ಲಿಯೂ ಖಳನಾಗಿ ಕಂಗೊಳಿಸಲಿದ್ದಾರೆ. ಮಧು ಗುರು ಸ್ವಾಮಿ, ಗರುಡ ರಾಮ್ ಕೂಡ ಖಳನಾಯಕರಾಗಿಯೇ ಕಾಣಿಸಿಕೊಳ್ಳಲಿದ್ದಾರೆ. ಇದರ ಜತೆಗೆ ಸಲಾರ್ 2ನಲ್ಲಿ ಇನ್ನೂ ಒಂದಷ್ಟು ಕನ್ನಡದ ಕಲಾವಿದರು ಅಭಿನಯಿಸಲಿದ್ದಾರೆ. ಕನ್ನಡದ ನಟರ ಪಾತ್ರಗಳಿಗೆ ಹೆಚ್ಚಿನ ಪ್ರಾಮುಖ್ಯತೆಯೂ ಇರಲಿದೆ.

ಅದ್ದೂರಿ ಕ್ಲೈಮ್ಯಾಕ್ಸ್ ಸಲಾರ್ ಮೊದಲ ಭಾಗದ ಕ್ಲೈಮ್ಯಾಕ್ಸ್ ರೋಚಕವಾಗಿ ಮೂಡಿಬಂದಿತ್ತು. ಅಂತೆಯೇ ಸಲಾರ್ ಎರಡನೇ ಭಾಗದ ಕ್ಲೈಮ್ಯಾಕ್ಸ್ ದೃಶ್ಯ ಕೂಡ ಇನ್ನೂ ಅದ್ದೂರಿಯಾಗಿ ಮೂಡಿಬರಲಿದೆ. ಈ ಬಾರಿ ಸಮುದ್ರದ ಮೇಲೆ ಸಾಹಸ ಸನ್ನಿವೇಶಗಳನ್ನು ಚಿತ್ರೀಕರಿಸಿಕೊಳ್ಳಲು ಚಿತ್ರತಂಡ ಪ್ಲಾನ್ ಮಾಡಿದೆ ಎಂದು ಹೇಳಲಾಗುತ್ತಿದೆ.

ವರ್ಷಾಂತ್ಯಕ್ಕೆ ಶೂಟಿಂಗ್ ಆರಂಭ

ನಿರ್ದೇಶಕ ಪ್ರಶಾಂತ್ ನೀಲ್ ಸದ್ಯ ಡ್ರ್ಯಾಗನ್ ಸಿನಿಮಾದ ಶೂಟಿಂಗ್‌ನಲ್ಲಿ ಬ್ಯುಸಿಯಾಗಿದ್ದಾರೆ. ಜೂ.ಎನ್‌ಟಿಆರ್ ನಾಯಕನಾಗಿ ನಟಿಸುತ್ತಿರುವ ಈ ಚಿತ್ರದ ಚಿತ್ರೀಕರಣ ಭರದಿಂದ ಸಾಗುತ್ತಿದೆ. ಅಕ್ಟೋಬರ್ ಅಥವಾ ನವೆಂಬರ್‌ನಲ್ಲಿ ಡ್ರ್ಯಾಗನ್ ಶೂಟಿಂಗ್ ಮುಕ್ತಾಯವಾಗಲಿದೆ. ಆ ಬಳಿಕ ನೀಲ್ ಮತ್ತೆ ಸಲಾರ್ ತಂಡ ಸೇರಲಿದ್ದಾರೆ. ಇತ್ತ ಪ್ರಭಾಸ್, ಸ್ಪಿರಿಟ್ ಚಿತ್ರದಲ್ಲಿ ಅಭಿನಯಿಸುತ್ತಿದ್ದು ಸ್ಪಿರಿಟ್ ಶೂಟಿಂಗ್ ಮುಗಿಸಿ ಸಲಾರ್ ತಂಡವನ್ನು ಸೇರಿಕೊಳ್ಳಲಿದ್ದಾರೆ. ಹಾಗಾಗಿ ನವೆಂಬರ್‌ನಲ್ಲಿ ಸಲಾರ್ 2 ಶೂಟಿಂಗ್ ಆರಂಭವಾಗಲಿದೆ. ಖಾನ್ ಸಾರ್ ಸಾಮ್ರಾಜ್ಯದ ರೋಚಕ ಸ್ಟೋರಿ ತೆರೆಯಲ್ಲಿ ಸಾಗಲಿದೆ.

ಸಂಬಂಧಗಳ ಬೆಸೆವ ದರ್ಜಿ

ಕನ್ನಡ ಚಿತ್ರರಂಗದಲ್ಲಿ ಮತ್ತೊಂದು ಕಾದಂಬರಿ ಆಧಾರಿತ ಸಿನಿಮಾ ಸದ್ದಿಲ್ಲದೆ ತೆರೆಗೆ ಸಿದ್ಧವಾಗಿದೆ. ದರ್ಜಿ ಶೀರ್ಷಿಕೆಯ ಈ ಸಿನಿಮಾ ಹೊಸತನವನ್ನು ಹೊತ್ತು ಬರುತ್ತಿದೆ. ಮೂರು ತಲೆಮಾರಿನ ಕಥೆಯ ಈ ಚಿತ್ರದಲ್ಲಿ ಸಂಬಂಧಗಳ ಸಂಕಥನವಿದೆ. ಈ ಹಿಂದೆ ಕಿರುತೆರೆಯಲ್ಲಿ ಕುಸುಮಾಂಜಲಿ, ಯುಗಾದಿ, ಮಂದಾರ.. ಹೀಗೆ ಹಲವು ಪ್ರಸಿದ್ಧ ಧಾರಾವಾಹಿಗಳನ್ನು ನಿರ್ದೇಶಿಸಿರುವ ಶ್ರೀನಗರ ಚಂದ್ರು ಈ ಚಿತ್ರಕ್ಕೆ ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ಆ ಮೂಲಕ ಚಂದನವನದಲ್ಲಿಯೂ ಛಾಪು ಮೂಡಿಸಲು ಸಿದ್ಧವಾಗಿದ್ದಾರೆ. ನಿರ್ದೇಶಕ ಚಂದ್ರು, ದರ್ಜಿ ಚಿತ್ರದ ಕುರಿತಂತೆ ವಿ.ಸಿನಿಮಾಸ್‌ನೊಂದಿಗೆ ಮಾತನಾಡಿದ್ದಾರೆ.

ಮೂರು ತಲೆಮಾರಿನ ಕಥೆ

ದರ್ಜಿ ಶೀರ್ಷಿಕೆ ಕೇಳಿದಾಕ್ಷಣ ಇದು ಟೈಲರ್ ವೃತ್ತಿಯಲ್ಲಿ ತೊಡಗಿಸಿಕೊಂಡಿರುವ ವ್ಯಕ್ತಿಯ ಕುರಿತ ಕಥೆಯನ್ನು ಒಳಗೊಂಡಿದೆ ಅನ್ನಿಸುತ್ತದೆ. ಅದಕ್ಕೆ ತಕ್ಕಂತೆ ಇಲ್ಲಿ ಹರಿದ ಬಟ್ಟೆಗಳನ್ನು ಹೊಲಿಯಲಾಗುತ್ತದೆ ಎಂಬ ಅಡಿಬರಹವೂ ಇದೆ. ಹರಿದ ಬಟ್ಟೆಯ ಜತೆಗೆ ಒಡೆದ ಮನಸುಗಳನ್ನು ಬೆಸೆಯುವುದು ಹೇಗೆ ಎಂಬ ಸಾರವೂ ನಮ್ಮ ಚಿತ್ರದಲ್ಲಿ ಅಡಕವಾಗಿದೆ. ಬಿ. ಶಿವಾನಂದ್ ವಿರಚಿತ ಕಥೆ ಆಧರಿಸಿ ದರ್ಜಿ ಮೂಡಿಬರುತ್ತಿದೆ. ಇಲ್ಲಿ ಮೂರು ತಲೆಮಾರಿನ ಸ್ಟೋರಿಯಿದೆ, ಅದು ಎಲ್ಲರ ಮನಸನ್ನು ಸೆಳೆಯುತ್ತದೆ ಎನ್ನುತ್ತಾರೆ ನಿರ್ದೇಶಕರು.

ಬಾಂಧವ್ಯಗಳ ಬಂಧ

ದರ್ಜಿ ಮನಸುಗಳನ್ನು ಬೆಸೆವ ಕಥೆಯನ್ನು ಹೊತ್ತು ಸಾಗುತ್ತದೆ. ಆಧುನಿಕ ಕಾಲಘಟ್ಟದಲ್ಲಿ ಸಂಬಂಧಗಳು ಹೇಗೆ ಮರೆಯಾಗುತ್ತಿವೆ. ಯಾಕೆ ಯುವ ಸಮೂಹಕ್ಕೆ ಸಂಬಂಧಗಳ ಬಗ್ಗೆ ಅರ್ಥವಾಗುತ್ತಿಲ್ಲ, ನಮ್ಮ ಸಂಬಂಧಗಳು ಗಟ್ಟಿಯಾಗುವುದು ಹೇಗೆ ಎಂಬುದನ್ನು ಚಿತ್ರದಲ್ಲಿ ಹೇಳುವ ಪ್ರಯತ್ನ ಮಾಡಲಾಗಿದೆ. ಕಿರುತೆರೆಯಲ್ಲಿ ಪ್ರಸಿದ್ಧಿ ಪಡೆದಿರುವ ಮೈಕೊ ಮಂಜುನಾಥ್ ನಾಯಕನಾಗಿ ನಟಿಸಿದ್ದು, ಉಳಿದಂತೆ ಮಹಾದೇವ್, ಚೇತನ್ ಪ್ರಮುಖ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದಾರೆ. ಜತೆಗೆ ಹಲವು ರಂಗಭೂಮಿ ಪ್ರತಿಭೆಗಳು ಚಿತ್ರದಲ್ಲಿ ಅಭಿನಯಿಸಿದ್ದಾರೆ.

> "ಇಂದು ಮರೆಯಾಗುತ್ತಿರುವ ಸಂಬಂಧಗಳನ್ನು ಹೊಸೆಯುವುದು ಹೇಗೆ ಎಂಬುದನ್ನು ದರ್ಜಿ ಚಿತ್ರದ ಮೂಲಕ ಹೇಳುವ ಪ್ರಯತ್ನ ಮಾಡಲಾಗಿದೆ. ಇದು ಎಲ್ಲರಿಗೂ ಕನೆಕ್ಟ್ ಆಗುವ ಚಿತ್ರವಾಗಿದ್ದು, ಸಿನಿಮಾ ನೋಡುತ್ತಿದ್ದರೆ ನಾವು ಕಳೆದುಕೊಂಡ ಸಂಬಂಧಗಳನ್ನು ಮತ್ತೆ ಹೊಸೆಯಬೇಕು ಎಂದು ಮನಸಾಗುತ್ತದೆ. ಗ್ರಾಮೀಣ ಹಿನ್ನೆಲೆಯಲ್ಲಿ ಚಿತ್ರದ ಕಥೆ ಸಾಗುತ್ತದೆ."

ಏಪ್ರಿಲ್‌ನಲ್ಲಿ ಅಟ್ಲೀ-ಅರ್ಜುನ್ ಚಿತ್ರದ ಟೈಟಲ್

ಅಲ್ಲು ಅರ್ಜುನ್, ಪುಷ್ಪ 2 ಬಳಿಕ ಅಟ್ಲೀ ನಿರ್ದೇಶನದ ಸಿನಿಮಾದಲ್ಲಿ ನಟಿಸುತ್ತಿದ್ದಾರೆ. ಅಟ್ಲೀ ಸಿನಿಮಾಗಳು ಎಂದರೆ ಕುತೂಹಲ ಇದ್ದೇ ಇರುತ್ತದೆ. ಅಂತೆಯೇ ಈ ಸಿನಿಮಾದ ಬಗ್ಗೆಯೂ ಅಪಾರ ನಿರೀಕ್ಷೆ ಇದೆ. ಇನ್ನು ಅಲ್ಲು ಅರ್ಜುನ್ ನಾಯಕನಾಗಿ ನಟಿಸುತ್ತಿದ್ದಾರೆ ಎಂದ ಮೇಲೆ ಆ ಸಿನಿಮಾ ಬಗ್ಗೆ ಅಪಾರ ನಿರೀಕ್ಷೆ ಇರುವುದು ಸಹಜ. ಅಟ್ಲೀ ನಿರ್ದೇಶನದ ಈ ಹಿಂದಿನ ಸಿನಿಮಾಗಳಿಗಿಂತಲೂ ಈ ಚಿತ್ರ ಬಲು ವಿಶೇಷವಾಗಿದೆ. ಹಾಗಾಗಿ ಈ ಸಿನಿಮಾದ ಶೀರ್ಷಿಕೆ ಏನು ಎಂದು ತಿಳಿಯಲು ಸಿನಿಪ್ರಿಯರು ಕುತೂಹಲದಿಂದ ಕಾದು ಕುಳಿತ್ತಿದ್ದಾರೆ. ಹೀಗಿರುವಾಗಲೇ ಚಿತ್ರತಂಡ ಸಿನಿಪ್ರಿಯರಿಗೆ ಸಿಹಿಸುದ್ದಿ ನೀಡಿದೆ. ಅಟ್ಲೀ-ಅರ್ಜುನ್ ಕಾಂಬಿನೇಷನ್‌ನಲ್ಲಿ ಮೂಡಿಬರುತ್ತಿರುವ ಚಿತ್ರದ ಟೈಟಲ್ ಅನ್ನು ಏಪ್ರಿಲ್ 8 ರಂದು ರಿಲೀಸ್ ಮಾಡಲು ಸಿದ್ಧತೆ ನಡೆಸಿದೆ. ಅಂದು ಅಲ್ಲು ಅರ್ಜುನ್ ಹುಟ್ಟುಹಬ್ಬ, ಹಾಗಾಗಿ ಈ ಬಾರಿಯ ಬರ್ತ್‌ಡೇಗೆ ಚಿತ್ರತಂಡ ಹೊಸ ಚಿತ್ರದ ಟೈಟಲ್ ಉಡುಗೊರೆಯಾಗಿ ನೀಡುತ್ತಿದೆ. ಈ ಚಿತ್ರದಲ್ಲಿ ಗ್ರಾಫಿಕ್ಸ್, ವಿಎಫ್‌ಎಕ್ಸ್‌ಗೆ ಹೆಚ್ಚಿನ ಒತ್ತು ನೀಡಲಾಗಿದ್ದು, ಅಮೇರಿಕಾದಲ್ಲಿ ತಾಂತ್ರಿಕ ಕೆಲಸಗಳು ನಡೆಯುತ್ತಿವೆ. ಇದನ್ನು ಗಮನಿಸಿದರೆ ಚಿತ್ರದಲ್ಲಿ ಭರ್ಜರಿ ಆ್ಯಕ್ಷನ್ ಕೂಡ ಇದೆ ಎಂಬುದು ತಿಳಿಯುತ್ತದೆ. ಅಲ್ಲುಗೆ ಜತೆಯಾಗಿ ದೀಪಿಕಾ ಪಡುಕೋಣೆ ನಟಿಸುತ್ತಿದ್ದಾರೆ. ರಶ್ಮಿಕಾ, ಮೃಣಾಲ್ ಠಾಕೂರ್, ಜಾನ್ವಿ ಕಪೂರ್ ಹೀಗೆ ದೊಡ್ಡ ತಾರಾಬಳಗವೇ ಚಿತ್ರದಲ್ಲಿದೆ. ಈ ಚಿತ್ರ ಮುಂದಿನ ವರ್ಷದ ಡಿಸೆಂಬರ್‌ನಲ್ಲಿ ತೆರೆಗೆ ಬರುವ ನಿರೀಕ್ಷೆ ಇದೆ.



ಕಿರುತೆರೆಯಲಿ ದಾದಾಗಿರಿ

ಬೆಂಗಾಲಿ ಬಿಗ್‌ಬಾಸ್‌ಗೆ ಗಂಗೂಲಿ

ಕ್ರಿಕೆಟ್ ಜಗತ್ತಿನಲ್ಲಿ ದಾದಾ ಎಂದೇ ಪ್ರಸಿದ್ಧಿ ಪಡೆದಿರುವ ಸೌರವ್ ಗಂಗೂಲಿ ಈಗ ಕಿರುತೆರೆಗೆ ಪಾದಾರ್ಪಣೆ ಮಾಡುತ್ತಿದ್ದಾರೆ. ಹಾಗಂತ ಗಂಗೂಲಿ ಧಾರಾವಾಹಿಗಳಲ್ಲಿ ನಟಿಸುತ್ತಿಲ್ಲ. ಬದಲಾಗಿ, ರಿಯಾಲಿಟಿ ಶೋ ಕೊಡಲಿದ್ದಾರೆ. ಇದನ್ನು ಕೇಳಿ ಅವರ ಅಭಿಮಾನಿಗಳಲ್ಲಿ ಸಂತಸ ಮನೆ ಮಾಡಿದೆ. ಕ್ರಿಕೆಟ್ ಮೈದಾನದಲ್ಲಿ ಕಂಡ ಗಂಗೂಲಿಯನ್ನು ಈಗ ಕಿರುತೆರೆಯ ರಿಯಾಲಿಟಿ ಶೋ ಮೂಲಕವೂ ಕಣ್ತುಂಬಿಕೊಳ್ಳಬಹುದಾಗಿದೆ. ಹೌದು, ಬಿಗ್‌ಬಾಸ್ ರಿಯಾಲಿಟಿ ಶೋ ಕನ್ನಡ, ಹಿಂದಿ, ತೆಲುಗು, ತಮಿಳು, ಮಲೆಯಾಳಂ ಹೀಗೆ ಹಲವು ಭಾಷೆಗಳಲ್ಲಿ ಪ್ರಸಾರವಾಗುತ್ತಿದೆ. ಅಂತೆಯೇ ಈಗ ಬೆಂಗಾಲಿಯಲ್ಲಿಯೂ ಬಿಗ್‌ಬಾಸ್ ಮತ್ತೆ ಆರಂಭವಾಗುತ್ತಿದ್ದು, ಸೌರವ್ ಗಂಗೂಲಿ ಈ ಕಾರ್ಯಕ್ರಮದ ಸಾರಥ್ಯ ವಹಿಸಿಕೊಂಡಿದ್ದಾರೆ.

ಹಾಗಂತ ಬೆಂಗಾಲಿ ಭಾಷೆಯಲ್ಲಿ ಬಿಗ್‌ಬಾಸ್ ಪ್ರಸಾರ ಆರಂಭಿಸುತ್ತಿರುವುದು ಇದೇ ಮೊದಲಲ್ಲ. ಹದಿಮೂರು ವರ್ಷಗಳ ಹಿಂದೆಯೇ ಬಿಗ್‌ಬಾಸ್ ಆರಂಭವಾಗಿತ್ತು. ಆದರೆ ಅಷ್ಟಾಗಿ ಜನಪ್ರಿಯತೆ ಪಡೆದಿರಲಿಲ್ಲ. 2013ರಲ್ಲಿ ಬೆಂಗಾಲಿಯ ಬಿಗ್‌ಬಾಸ್‌ನ ಮೊದಲ ಸೀಸನ್ ಅನ್ನು ಖ್ಯಾತ ನಟ ಮಿಥುನ್ ಚಕ್ರವರ್ತಿ ನಿರೂಪಣೆ ಮಾಡಿದ್ದರು. ಆದರೆ ಮತ್ತೆ ಮೂರು ವರ್ಷ ಬಿಗ್‌ಬಾಸ್ ಪ್ರಸಾರವಾಗಲಿಲ್ಲ. ಪುನಃ 2016ರಲ್ಲಿ ಬಿಗ್‌ಬಾಸ್ ಮತ್ತೆ ಆರಂಭವಾಯಿತು. ಬೆಂಗಾಲಿ ನಟ ಜೀತ್ ಎರಡನೇ ಸೀಸನ್‌ನ ಸಾರಥ್ಯ ವಹಿಸಿಕೊಂಡಿದ್ದರು. ಬಳಿಕ ಅದ್ಯಾಕೋ ಬಿಗ್‌ಬಾಸ್‌ಗೆ ಗ್ರಹಣ ಹಿಡಿದು ಸ್ಥಗಿತಗೊಂಡಿತ್ತು. ಈಗ ಬಿಗ್‌ಬಾಸ್ ಮರಳಿ ಆರಂಭವಾಗುತ್ತಿದ್ದು, ಈ ಬಾರಿ ಸೌರವ್ ಗಂಗೂಲಿ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ. ಸೆಪ್ಟೆಂಬರ್ ವೇಳೆಗೆ ಬೆಂಗಾಲಿ ಬಿಗ್‌ಬಾಸ್ ಆರಂಭವಾಗಲಿದ್ದು ವಾರಾಂತ್ಯದಲ್ಲಿ ಗಂಗೂಲಿ ಸ್ಪರ್ಧಿಗಳೊಂದಿಗೆ ಮಾತುಕತೆ ನಡೆಸಲಿದ್ದಾರೆ. ವೀಕೆಂಡ್‌ನಲ್ಲಿ ನಟ ನಟಿಯರ ಜತೆಗೆ ಕ್ರಿಕೆಟಿಗರೂ ಕೂಡ ಬಿಗ್‌ಬಾಸ್ ವೇದಿಕೆಗೆ ಬರಲಿದ್ದಾರೆ ಎಂಬ ನಿರೀಕ್ಷೆಯೂ ಇದೆ. ಕನ್ನಡದಲ್ಲಿ ಕಿಚ್ಚ ಸುದೀಪ್ ಬಿಗ್‌ಬಾಸ್ ನಡೆಸಿಕೊಡುತ್ತಿದ್ದು, ಹಿಂದಿಯಲ್ಲಿ ಸಲ್ಮಾನ್ ಖಾನ್, ತಮಿಳಿನಲ್ಲಿ ವಿಜಯ್ ಸೇತುಪತಿ, ಮಲೆಯಾಳಂನಲ್ಲಿ ಮೋಹನ್‌ಲಾಲ್, ತೆಲುಗು ಬಿಗ್‌ಬಾಸ್ ಶೋ ಅನ್ನು ನಾಗಾರ್ಜುನ ನಡೆಸಿಕೊಡುತ್ತಿದ್ದಾರೆ. ಈಗ ಈ ಸಾಲಿಗೆ ಸೌರವ್ ಗಂಗೂಲಿ ಸೇರ್ಪಡೆಯಾಗಿದ್ದಾರೆ.